# ಮಂಗಳೂರು ವಿಶ್ವವಿದ್ಯಾನಿಲಯ

**ದೂರ ಶಿಕ್ಷಣ ಕೇಂದ್ರ, ಮಂಗಳಗಂಗೋತ್ರಿ – 574 199**

## ಕೋರ್ಸ್ – 5

# ಜ್ಞಾನಶಿಸ್ತುಗಳು ಮತ್ತು ಶಾಲಾ ವಿಷಯಗಳನ್ನು ಅರ್ಥೈಸಿಕೊಳ್ಳುವಿಕೆ

## (ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರೀಯ ಅಧ್ಯಯನ)

## ಬ್ಲಾಕ್ಸ್ 1 ಮತ್ತು 2

## ಬಿ.ಎಡ್. ಪದವಿ ಕಾರ್ಯಕ್ರಮ

**(ಮುಕ್ತ ಮತ್ತು ದೂರ ಕಲಿಕೆ)**

## ಪ್ರಥಮ ವರ್ಷ ಬಿ. ಎಡ್.

**ಪ್ರಕಾಶಕರು**

**ಮಂಗಳೂರು ವಿಶ್ವವಿದ್ಯಾನಿಲಯ**

**ಮಂಗಳಗಂಗೋತ್ರಿ – 574 199**

**Understanding, Disciplines and School Subjects:** Self learning Material for B.Ed. Degree Programme (Open and Distance Learning) of First Year prepared by Dr. Flosy D Souza, Dr. Nagappa Shahapur, and Dr. Shashikala A., translated by Prof. B.M. Chandrashekar, Dr Lakshmi Naryana Bhatta, Dr Meenakshi Ramachandra and Dr. Shashikala A. and Published by The Mangalore University, Mangalagangothri - 574 199, Karnataka.

**Year 2018-19**

**Developed by:**
**The Director,**
**Centre for Distance Education, Mangalore University,**
**Mangalagangothri - 574 199, Karnataka.**

**Course Co-ordinator**
**Dr. Chidananda A.L., B.Ed. (ODL) Programme,**
**Centre for Distance Education, Mangalore University,**
**Mangalagangothri - 574 199, Karnataka.**

Printed at Datacon Technologies, #31/10, Left of Magadi Main Road,
Behind Saraswathi Convention Centre, Bangalore - 560 079, Bangalore.

© The Registrar, Mangalore University
DTP at: Sagar Offset Printers, Alake , Mangalore

**ಜ್ಞಾನಶಿಸ್ತುಗಳು ಮತ್ತು ಶಾಲಾ ವಿಷಯಗಳನ್ನು ಅರ್ಥೈಸಿಕೊಳ್ಳುವಿಕೆ : ಪ್ರಥಮ ವರ್ಷದ ಬಿ.ಎಡ್. (ಮುಕ್ತ ಮತ್ತು ದೂರ ಕಲಿಕೆ) (ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರೀಯ ಅಧ್ಯಯನ) ಪದವಿ ಕಾರ್ಯಕ್ರಮದ ಸ್ವ ಕಲಿಕಾ ಅಧ್ಯಯನ ಸಾಮಗ್ರಿ**

**ರಚನಕಾರರು** : ಡಾ. ಫ್ಲಾಸಿ ಡಿ ಸೋಜ, ಡಾ. ನಾಗಪ್ಪ ಶಾಹಪೂರ್, ಮತ್ತು ಡಾ. ಶಶಿಕಲ ಎ.
**ಅನುವಾದಕರು** : ಪ್ರೊ. ಬಿ.ಎಂ. ಚಂದ್ರಶೇಖರ್, ಡಾ ಲಕ್ಷ್ಮೀ ನಾರಾಯಣಭಟ್ಟ, ಡಾ ಮೀನಾಕ್ಷಿ ರಾಮಚಂದ್ರ ಮತ್ತು ಡಾ. ಶಶಿಕಲ ಎ.

**ಪ್ರಕಾಶಕರು** : ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಲಯ ಮಂಗಳಗಂಗೋತ್ರಿ – 574 199, ಕರ್ನಾಟಕ
**ವರ್ಷ** : 2018–19
**ಬಿ ಹಕ್ಕುಗಳು** : ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ
**ಸಿದ್ಧಪಡಿಸಿದವರು:** **ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ,** ಮಂಗಳಗಂಗೋತ್ರಿ 574 199, ಕರ್ನಾಟಕ

**ಕೋರ್ಸ್ ಸಂಯೋಜಕರು :** **ಡಾ. ಚಿದಾನಂದ ಎ.ಎಲ್.** ಬಿ.ಎಡ್. (ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮ, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಲಯ, ಮಂಗಳಗಂಗೋತ್ರಿ 574 199, ಕರ್ನಾಟಕ

**ಡಿ.ಟಿ.ಪಿ.** : ಸಾಗರ್ ಆಫ್‌ಸೆಟ್ ಪ್ರಿಂಟರ್ಸ್, ಅಳಕೆ, ಮಂಗಳೂರು
**ಮೊಬೈಲ್** : 9480228399
**ಮುದ್ರಕರು** : ಡಾಟಾಕಾನ್ ಟೆಕ್ನಾಲಜೀಸ್, # 31/10, ಮಾಗಡಿ ಮುಖ್ಯರಸ್ತೆ ಎಡಭಾಗ, ಸರಸ್ವತಿ ಕನ್ವೆನ್ಷನ್ ಸೆಂಟರ್ ಹಿಂಭಾಗ, ಬೆಂಗಳೂರು – 560 079

**(ಖಾಸಗಿ ಪ್ರಸಾರಕ್ಕಾಗಿ ಮಾತ್ರ)**

## ಕೋರ್ಸ್ - 5

# ಜ್ಞಾನಶಿಸ್ತುಗಳು ಮತ್ತು ಶಾಲಾ ವಿಷಯಗಳನ್ನು ಅರ್ಥೈಸಿಕೊಳ್ಳುವಿಕೆ
# (ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರೀಯ ಅಧ್ಯಯನ)
# ಬ್ಲಾಕ್ಸ್ 1 ಮತ್ತು 2

---


**ಕುಲಸಚಿವರು** **ಪ್ರಕಾಶಕರು**

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ–574 199


---


| | | | |
|---|---|---|---|
| **ಡಾ. ನಾಗಪ್ಪ ಶಾಹಪೂರ್** | : | **ಬ್ಲಾಕ್–1: ಘಟಕ–1, 2 ಮತ್ತು 3** | **ಕೋರ್ಸ್ ಲೇಖಕರು** |
| **ಡಾ. ಶಶಿಕಲ ಎ.** | : | **ಬ್ಲಾಕ್–1: ಘಟಕ–4, 5 ಮತ್ತು 6** | |
| | : | **ಬ್ಲಾಕ್–2: ಘಟಕ–6** | |
| **ಡಾ. ಫ್ಲಾಸಿ ಡಿ ಸೋಜ** | : | **ಬ್ಲಾಕ್–2: ಘಟಕ–1,2,3,4 ಮತ್ತು 5** | |
| **ಡಾ. ಬಿ.ಎಂ. ಚಂದ್ರಶೇಖರ್** | : | **ಬ್ಲಾಕ್–1: ಘಟಕ – 1,2,3,4 ಮತ್ತು 5** | **ಕೋರ್ಸ್ ಅನುವಾದಕರು** |
| **ಡಾ. ಶಶಿಕಲ ಎ.** | : | **ಬ್ಲಾಕ್–1: ಘಟಕ–6 ಮತ್ತು ಬ್ಲಾಕ್–2: ಘಟಕ 6** | |
| **ಡಾ. ಮೀನಾಕ್ಷಿ ರಾಮಚಂದ್ರ** | : | **ಬ್ಲಾಕ್–2: ಘಟಕ – 1,2,4,ಮತ್ತು 5** | |
| **ಡಾ. ಲಕ್ಷ್ಮೀನಾರಾಯಣ ಭಟ್ಟ** | : | **ಬ್ಲಾಕ್–2: ಘಟಕ – 3** | |

---

**ಡಾ. ಶಶಿಕಲ ಎ.** : **ಕೋರ್ಸ್ ಪರಿಶೀಲಕರು**

ಸಲಹೆಗಾರರರು

ಬಿ.ಎಡ್. ದೂರ ಶಿಕ್ಷಣ ಕಾರ್ಯಕ್ರಮ

(ಮುಕ್ತ ಮತ್ತು ದೂರ ಕಲಿಕೆ)

ದೂರ ಶಿಕ್ಷಣ ಕೇಂದ್ರ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ –574 199

---

**ಡಾ. ಚಿದಾನಂದ ಎ.ಎಲ್.** **ಸಂಪಾದನ ಸಹಾಯಕರು**


---

## ವಿಷಯ ಸೂಚಿ

**ಕೋರ್ಸಿನ ಪಕ್ಷಿನೋಟ**


**ಬ್ಲಾಕ್–1 : ಜ್ಞಾನಶಿಸ್ತುಗಳು ಮತ್ತು ಶಾಲಾ ವಿಷಯಗಳಿಗೆ ಪೀಠಿಕೆ**

ಘಟಕ–1 : ಶಾಲಾ ವಿಷಯ, ಜ್ಞಾನಶಿಸ್ತುಗಳು ಮತ್ತು ಶೈಕ್ಷಣಿಕ ಶಿಸ್ತುಗಳು – ಈ ಪರಿಕಲ್ಪನೆಗಳ ಅರ್ಥ, ವ್ಯಾಖ್ಯೆಗಳು 1

ಘಟಕ–2 : ಶಾಲಾ ವಿಷಯ ಮತ್ತು ಶೈಕ್ಷಣಿಕ ಶಿಸ್ತುಗಳ ನಡುವಿನ ಸಂಬಂಧ ಮತ್ತು ವ್ಯತ್ಯಾಸಗಳು 14

ಘಟಕ–3 : ಶಾಲಾ ಶಿಕ್ಷಣದ ಗುರಿಗಳು 20

ಘಟಕ–4 : ಶೈಕ್ಷಣಿಕ ವಿಷಯಗಳ ಉಗಮ ಮತ್ತು ಶಾಲಾ ಪಠ್ಯವಿಷಯಗಳ ರೂಪಣ 38

ಘಟಕ–5 : ಶಾಲಾ ಪಠ್ಯವಿಷಯಗಳ ಪ್ರಾಧಾನ್ಯತೆ 51

ಘಟಕ–6 : ಶಾಲಾ ವಿಷಯಗಳ ಸ್ವರೂಪ ಮತ್ತು ಅವುಗಳಲ್ಲಿ ಅಡಕವಾಗಿರುವ ವಿಷಯಗಳು 63

**ಬ್ಲಾಕ್–2 : ಜ್ಞಾನಶಿಸ್ತುಗಳ ವರ್ಗೀಕರಣ ಮತ್ತು ಜ್ಞಾನಶಿಸ್ತುವ್ಯಾಪಿ ಬೋಧನೆ**

ಘಟಕ–1 : ಜ್ಞಾನಶಿಸ್ತುಗಳ ವರ್ಗೀಕರಣ 71

ಘಟಕ–2 : ಅಂತರ್ಶಿಸ್ತೀಯ ಮತ್ತು ಬಹುಶಿಸ್ತೀಯ ಬೋಧನೆ ಮತ್ತು ಕಲಿಕೆ 81

ಘಟಕ–3 : ಶಾಲಾ ಪಠ್ಯಕ್ರಮದಲ್ಲಿ ಮಾನವಿಕ ಮತು ಸಮಾಜ ವಿಜ್ಞಾನ ವಿಷಯಗಳು 97

ಘಟಕ–4 : ಪಠ್ಯಕ್ರಮದಲ್ಲಿ ನೈಸರ್ಗಿಕ ವಿಜ್ಞಾನ 106

ಘಟಕ–5 : ಗಣಿತ ಮತ್ತು ಪಠ್ಯಕ್ರಮ 120

ಘಟಕ–6 : ಸಾಮಾಜಿಕ ನ್ಯಾಯ ಮತ್ತು ಶಾಲಾ ವಿಷಯಗಳು 132

## ಕೋರ್ಸಿನ ಪಕ್ಷಿನೋಟ

ಈ ಕೋರ್ಸು ಶಾಲಾ ಪಠ್ಯಕ್ರಮದಲ್ಲಿ ಜ್ಞಾನಶಿಸ್ತು ಆಧರಿತ ಜ್ಞಾನದ ಸ್ವರೂಪ ಮತ್ತು ಪಾತ್ರಗಳನ್ನು ಕುರಿತು ಆಲೋಚಿಸಲು ನಿಮ್ಮನ್ನು ಸಮರ್ಥರಾಗಿಸುತ್ತದೆ. ಕಾಲಕ್ರಮದಲ್ಲಿ ಈ ಶಿಸ್ತುಗಳಲ್ಲಾಗಿರುವ ಪಲ್ಲಟಗಳನ್ನು ಅರಿತುಕೊಳ್ಳಲು ಸಹಾಯಮಾಡುತ್ತದೆ. ಈ ಕೋರ್ಸಿನ ಮೂಲಕ ನೀವು ಜ್ಞಾನಶಿಸ್ತುಗಳು ಮತ್ತು ಶಾಲಾ ವಿಷಯಗಳು ಯಾವುದೋ ಒಂದು ಕಾಲದಲ್ಲಿ ಯಾರೋ ಕೊಟ್ಟುದಾಗಲೀ ಸೃಷ್ಟಿಸಿದುದಾಗಲೀ ಅಲ್ಲ; ಅವು ನಮ್ಮ ಐತಿಹಾಸಿಕ ಮತ್ತು ಭೌಗೋಳಿಕ ಸನ್ನಿವೇಶಗಳ ಪರಿಣಾಮಗಳು, ಇವು ಕಳೆದ ಎರಡು ಶತಮಾನಗಳಲ್ಲಿನ ಸಾಮಾಜಿಕ, ರಾಜಕೀಯ ಮತ್ತು ಬೌದ್ಧಿಕ ಸನ್ನಿವೇಶಗಳ ಫಲ, ಇವುಗಳು ನಿರಂತರವಾಗಿ ಮರು ವ್ಯಾಖ್ಯಾನ ಮತ್ತು ಮರು ಸೃಷ್ಟಿಯ ಪ್ರಕ್ರಿಯೆಗೆ ಒಳಗಾಗುತ್ತಿರುತ್ತವೆ ಎಂಬುದನ್ನೂ ತಿಳಿಯುತ್ತೀರಿ. ಸಾಮಾಜಿಕ ನ್ಯಾಯದ ಕಾಳಜಿಯ ಹಿನ್ನೆಲೆಯಲ್ಲಿ ಇವು ಮರುವ್ಯಾಖ್ಯೆಗೆ ಒಳಗಾಗುತ್ತವೆ ಎಂಬುದು ನಿಮ್ಮ ಗಮನಕ್ಕೆ ಬರುತ್ತದೆ.

ಈ ಕೋರ್ಸು ಶಾಲೆಯ ವಿವಿಧ ವಿಷಯಗಳ ಒಳವಿಷಯಗಳು, ಪ್ರಕ್ರಿಯೆಗಳು, ಸಂಘಟನಾ ಉಪಕ್ರಮಗಳನ್ನೂ ಪರಿಚಯಿಸುತ್ತದೆ. ಅಧ್ಯಾಪಕರು ಶಾಲಾ ವಿಷಯವನ್ನು ತಿಳಿಯಬೇಕಾದರೆ, ಆ ವಿಷಯಕ್ಕೆ ಸಂಬಂಧಿಸಿದ ಸಿದ್ಧಾಂತಗಳನ್ನೂ ತಿಳಿದುಕೊಳ್ಳಬೇಕು ಎಂಬ ಗ್ರಹಿಕೆಯ ಆಧಾರದ ಮೇಲೆ ಈ ವಿಷಯಗಳನ್ನು ಪರಿಚಯಿಸಲಾಗಿದೆ. ಪ್ರತಿ ವಿಷಯದಲ್ಲಿ ಒಳ ವಿಷಯಗಳನ್ನು ಯಾವ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ, ಹೇಗೆ ಸಂಘಟಿಸಲಾಗಿದೆ, ಅದನ್ನು ಮಕ್ಕಳಿಗೆ ಹೇಗೆ ಹೇಳಿಕೊಡಬೇಕು, ಮಕ್ಕಳು ಈ ಜ್ಞಾನವನ್ನು ಕಟ್ಟಿಕೊಡಲು ಹೇಗೆ ಸಹಾಯಮಾಡಬೇಕು ಎಂಬ ಅಂಶಗಳನ್ನು ಸಾಂದರ್ಭಿಕವಾಗಿ ವಿಚಾರಮಾಡಲಾಗಿದೆ.

ಪ್ರತಿ ಶಾಲಾ ವಿಷಯದ ಪ್ರಕ್ರಿಯೆಗಳ ಪರಿಚಯ ಮಾಡಿಕೊಳ್ಳುವುದರಿಂದ ಆಯಾ ವಿಷಯಗಳನ್ನು ಹೇಗೆ ಬೋಧಿಸಬೇಕೆಂಬುದು ತಿಳಿಯುತ್ತದೆ. ಇದರಿಂದಾಗಿ ವಿವಿಧ ವಿಷಯಗಳ ಪ್ರಕ್ರಿಯೆಗಳಿಗೂ ಬೋಧನಾ ವಿಧಾನಗಳಿಗೂ ಅವಿನಾಭಾವವಾದ ಸಂಬಂಧವಿದೆ ಎಂಬ ಅಂಶ ಸ್ಪಷ್ಟವಾಗುತ್ತದೆ. ಶಾಲಾ ಪಠ್ಯಕ್ರಮದಲ್ಲಿ ಕೆಲವು ವಿಷಯಗಳು ಏಕೆ ಒಂದು ಕಾಲದಲ್ಲಿ ಇದ್ದವು, ಮತ್ತೊಂದು ಕಾಲದಲ್ಲಿ ಇರಲಿಲ್ಲ ಎಂಬುದೂ ನಿಮಗೆ ಈ ಕೋರ್ಸಿನಿಂದ ಅರ್ಥವಾಗುತ್ತದೆ. ಶಾಲಾ ವಿಷಯಗಳನ್ನು ಇಂದು ಇರುವಂತೆ ನಿರೂಪಿಸಿರುವುದರಲ್ಲಿನ ಮಿತಿಗಳೇನು ಇದು ಅಗತ್ಯವಾದ ಎಲ್ಲ ರೀತಿಯ ಅರಿವನ್ನು ಅಥವಾ ಜ್ಞಾನವನ್ನು ಒಳಗೊಂಡಿದೆಯೇ ಎಂಬುದನ್ನು ನೀವು ವಿಶ್ಲೇಷಿಸಬೇಕಾಗಿದೆ. ಇವುಗಳನ್ನು ಬೋಧಿಸುವಾಗಿನ ನಿಮ್ಮ ಗಮನದಲ್ಲಿ ಆಗಬೇಕಾದ ಪಲ್ಲಟಗಳ ಕುರಿತೂ ನೀವು ವಿಚಾರಮಾಡುವಿರಿ.

ಮೇಲೆ ಹೇಳಿರುವ ಎಲ್ಲ ಅಂಶಗಳನ್ನೂ ಪ್ರಸ್ತುತ ಕಲಿಕಾ ಸಾಮಗ್ರಿಯಲ್ಲಿ ಎರಡು ಬ್ಲಾಕ್‌ಗಳಲ್ಲಿ ಚರ್ಚಿಸಲಾಗಿದೆ. ಜ್ಞಾನಶಿಸ್ತುಗಳು, ಶಾಲಾ ವಿಷಯಗಳು, ಶೈಕ್ಷಣಿಕ ಶಿಸ್ತುಗಳು ಇವುಗಳ ಪರಿಕಲ್ಪನೆ, ನಡುವಿನ ಸಂಬಂಧಗಳು, ವ್ಯತ್ಯಾಸಗಳು, ಶಾಲೆಯ ಗುರಿಗಳು, ಜ್ಞಾನಶಿಸ್ತುಗಳ ಉಗಮ, ಶಾಲಾ ವಿಷಯಗಳು ಬೆಳಕಿಗೆ ಬಂದ ಬಗೆ ಇವುಗಳನ್ನು ಮೊದಲನೇ ಬ್ಲಾಕ್‌ನಲ್ಲಿ ಗಮನಿಸಲಾಗಿದೆ. ಜ್ಞಾನಶಿಸ್ತುಗಳ ವರ್ಗೀಕರಣ, ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಬೋಧನಾ ಮತ್ತು ಕಲಿಕಾ ಉಪಕ್ರಮಗಳು, ವಿಜ್ಞಾನ, ಸಮಾಜವಿಜ್ಞಾನ, ಗಣಿತ ಮುಂತಾಗಿ ಶಾಲಾ ವಿಷಯಗಳ ಪರಿಕಲ್ಪನೆ, ಸ್ವರೂಪ ಮತ್ತು ಪಠ್ಯಕ್ರಮದ ಅಂಶಗಳು, ಈ ಶಾಲಾ ವಿಷಯಗಳ ಮೂಲಕ ಸಾಮಾಜಿಕ ಮೌಲ್ಯಗಳನ್ನು ಬೆಳೆಸುವ ಮಾರ್ಗೋಪಾಯಗಳು ಇವುಗಳನ್ನು ಎರಡನೇ ಬ್ಲಾಕ್‌ನಲ್ಲಿ ವಿಚಾರಮಾಡಲಾಗಿದೆ.

ಈ ಕೋರ್ಸಿನಲ್ಲಿ ನಿರೂಪಿಸಲಾಗಿರುವ ಮತ್ತು ಚರ್ಚಿಸಲಾಗಿರುವ ವಿಷಯಗಳನ್ನು ಸಮರ್ಪಕವಾಗಿ ತಿಳಿದುಕೊಳ್ಳಿ. ಆ ಮೂಲಕ ತರಗತಿ ಅಧ್ಯಾಪಕರಿಗೆ ಅಗತ್ಯವಾದ ಜ್ಞಾನ ಮತ್ತು ಸಾಮರ್ಥ್ಯಗಳನ್ನು ಗಳಿಸಿ ಉತ್ತಮ ಶಿಕ್ಷಕರಾಗಿ ಸೇವೆ ಸಲ್ಲಿಸಿ.

# ಬ್ಲಾಕ್ 1 : ಜ್ಞಾನಶಿಸ್ತುಗಳು ಮತ್ತು ಶಾಲಾ ವಿಷಯಗಳಿಗೆ ಪೀಠಿಕೆ

## ಘಟಕ 1 : ಶಾಲಾ ವಿಷಯ, ಜ್ಞಾನಶಿಸ್ತುಗಳು ಮತ್ತು ಶೈಕ್ಷಣಿಕ ಶಿಸ್ತುಗಳು – ಈ ಪರಿಕಲ್ಪನೆಗಳ ಅರ್ಥ, ವ್ಯಾಖ್ಯೆಗಳು

### ಘಟಕದ ರಚನೆ


1.1.1. ಕಲಿಕೆಯ ಉದ್ದೇಶಗಳು

1.1.2. ಪೀಠಿಕೆ

1.1.3. ಕಲಿಕೆಯ ಮೂಲಾಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.1.3.1. ಶಾಲಾ ಪಠ್ಯವಿಷಯದ ಪರಿಕಲ್ಪನೆ ಮತ್ತು ಅರ್ಥ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1.1.3.2. ಜ್ಞಾನಶಿಸ್ತುಗಳ ಪರಿಕಲ್ಪನೆ ಮತ್ತು ಅರ್ಥ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

1.1.3.3. ಶೈಕ್ಷಣಿಕ ಜ್ಞಾನಶಿಸ್ತುಗಳ ಪರಿಕಲ್ಪನೆ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

1.1.4. ಸಾರಾಂಶಿಸೋಣ

1.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ'– 1, 2 ಮತ್ತು 3 – ಉತ್ತರಗಳು

1.1.6. ಘಟಕಾಂತ್ಯ ಅಭ್ಯಾಸಗಳು

1.1.7. ಪರಾಮರ್ಶನ ಸೂಚಿ


### 1.1.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶಾಲಾ ಪಠ್ಯವಿಷಯಗಳ ಪರಿಕಲ್ಪನೆ ಮತ್ತು ಅರ್ಥಗಳನ್ನು ವಿವರಿಸುವರು;
- ಜ್ಞಾನಶಿಸ್ತುಗಳ ಪರಿಕಲ್ಪನೆ ಮತ್ತು ಅರ್ಥಗಳನ್ನು ವಿವರಿಸುವರು; ಮತ್ತು
- ಶೈಕ್ಷಣಿಕ ಜ್ಞಾನಶಿಸ್ತುಗಳ ಪರಿಕಲ್ಪನೆ ಮತ್ತು ಅರ್ಥಗಳನ್ನು ವಿವರಿಸುವರು.

### 1.1.2. ಪೀಠಿಕೆ

ನೀವು ವಿವಿಧ ಶಾಲಾ ಪಠ್ಯವಿಷಯಗಳಾದ ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಗಣಿತ ಇತ್ಯಾದಿಗಳೊಂದಿಗೆ ಪರಿಚಿತರಾಗಿದ್ದೀರಿ. ಈ ಪಠ್ಯವಿಷಯಗಳು ವಿಭಿನ್ನ ಜ್ಞಾನಶಿಸ್ತುಗಳಿಗೆ ಸಂಬಂಧಿಸಿವೆ ಎಂದೂ ನೀವು ತಿಳಿದಿರುವಿರಿ. ನಾವು ಈ ಪಠ್ಯವಿಷಯಗಳನ್ನು ಹೇಗೆ ಬೋಧಿಸುತ್ತೇವೆ ಎಂದು ನೀವು ಗಮನಿಸಿದ್ದರೆ, ಈ ಪ್ರತಿಯೊಂದು ವಿಷಯಗಳನ್ನು ಬೇರೆ ಬೇರೆ ರೀತಿಯಲ್ಲಿ ಬೋಧಿಸುತ್ತೇವೆ ಎಂದು ನಿಮಗೆ ಗೊತ್ತಾಗುತ್ತದೆ. ನೀವು ಈಗಾಗಲೇ

ಇದನ್ನು ಗಮನಿಸಿಯೇ ಇರಬಹುದು. ವಿಜ್ಞಾನವನ್ನು ಸಮಾಜ ವಿಜ್ಞಾನವನ್ನು ಬೋಧಿಸುವ ರೀತಿಯಲ್ಲಿ ಬೋಧಿಸುವುದಿಲ್ಲ. ಇದು ಏಕೆ ಹೀಗೆ? ಇದಕ್ಕೆ ಕಾರಣ ಪ್ರತಿಯೊಂದು ಜ್ಞಾನಶಿಸ್ತಿನ ಸ್ವಭಾವ ಬೇರೆ ಬೇರೆಯಾಗಿದ್ದು ತತ್ಪರಿಣಾಮವಾಗಿ ಪ್ರತಿಯೊಂದು ವಿಷಯಕ್ಕೂ ಬೇರೆ ಬೇರೆ ತೆರನಾದ ವಿಧಿವಿಧಾನಗಳ ಅಥವಾ ಉಪಪ್ರಮಗಳ ಅಗತ್ಯವಿರುವುದು. ಆದ್ದರಿಂದ ಪ್ರತಿಯೊಂದು ಶಾಸ್ತ್ರಕ್ಕೂ ತಕ್ಕುದಾದ ವಿಧಿವಿಧಾನಗಳನ್ನು ಅಳವಡಿಸಿಕೊಳ್ಳುವ ಸಲುವಾಗಿ ಆಯಾ ಜ್ಞಾನಶಿಸ್ತಿನ ಸ್ವಭಾವವೇನು ಎಂದು ಪ್ರತಿಯೊಬ್ಬ ಶಿಕ್ಷಕ ಅರ್ಥಮಾಡಿಕೊಳ್ಳುವುದು ಅತ್ಯವಶ್ಯಕವಾಗುವುದು. ಪ್ರತ್ಯೇಕ ಶಾಸ್ತ್ರದ ಸ್ವಭಾವ ಅರ್ಥಮಾಡಿಕೊಳ್ಳುವುದಕ್ಕೆ ಮುಂಚೆ "ಜ್ಞಾನಶಿಸ್ತು" ಮತ್ತು ಇದಕ್ಕೆ ಸಂಬಂಧಿಸಿದ ಪರಿಕಲ್ಪನೆಯಾದ ಶೈಕ್ಷಣಿಕ ಜ್ಞಾನಶಿಸ್ತಿನ ಹಾಗೂ ಶಾಲಾ ಪಠ್ಯವಿಷಯಗಳ ಅರ್ಥವನ್ನು ತಿಳಿದುಕೊಳ್ಳುವುದು ಮುಖ್ಯವಾಗುತ್ತದೆ. ಈ ಘಟಕದಲ್ಲಿ ನಾವು ಈಗ ಈ ಪರಿಕಲ್ಪನೆಗಳ ಅರ್ಥ ಮತ್ತು ಅವುಗಳ ನಡುವಿನ ಸಂಬಂಧಗಳನ್ನು ಅರ್ಥಮಾಡಿಕೊಳ್ಳೋಣ.

## 1.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.1.3.1 ಶಾಲಾ ಪಠ್ಯವಿಷಯದ ಅರ್ಥ ಮತ್ತು ಪರಿಕಲ್ಪನೆ

#### ಶಾಲಾ ಪಠ್ಯವಿಷಯಗಳ ಅರ್ಥ

**ಅಭ್ಯಾಸ 1 :** ನೀವು ನಿಮ್ಮ ಶಾಲೆಗಳಲ್ಲಿ ವಿವಿಧ ಪಠ್ಯವಿಷಯಗಳನ್ನು ಬೋಧಿಸುತ್ತಾ ಬಂದಿದ್ದೀರಿ, ಈ ಅನುಭವದ ಆಧಾರದಲ್ಲಿ 'ಶಾಲಾ ವಿಷಯಗಳು' ಎಂಬ ಪರಿಕಲ್ಪನೆಯನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿರಿ.

ಶಾಲೆ, ಕಾಲೇಜು ಅಥವಾ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಬೋಧಿಸಲಾಗುವ ಅಥವಾ ಸಂಶೋಧಿಸಲಾಗುವ ವಿಷಯ ಅಥವಾ ಅಧ್ಯಯನ ಕ್ಷೇತ್ರಕ್ಕೆ ಮತ್ತು ಜ್ಞಾನ ಶಾಖೆಗೆ ಶಾಲಾ ಪಠ್ಯವಿಷಯ ಎನ್ನುವರು.

ಶಾಲೆಗಳಲ್ಲಿ ಅಧ್ಯಯನ ಮಾಡುವ ಜ್ಞಾನಕ್ಷೇತ್ರಕ್ಕೆ ಶಾಲಾ ಪಠ್ಯವಿಷಯ ಎನ್ನವರು. ಇದನ್ನು ನಾವು ಕಲಿಕೆಯ ಒಂದು ಉಪಕರಣ ಎಂದು ಇಲ್ಲವೇ ನಮಗೆ ಕಲಿಯಲು ಬೇಕಾದ ನಿರ್ಣಾಯಕ ಅಂಶವೆಂದು ಪರಿಗಣಿಸಬಹುದು. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಕಲಿಕೆಯನ್ನು ವಿವಿಧ ಭಾಗಗಳನ್ನಾಗಿ ವಿಭಜಿಸಬಹುದಾದ ಭಾಗಗಳೇ ಪಠ್ಯವಿಷಯಗಳು. ಕಲಿಕಾರ್ಥಿಯು ತಾನು ವಿಶೇಷ ಜ್ಞಾನವನ್ನು ಪಡೆಯಲು ಆಯ್ಕೆ ಮಾಡಿಕೊಂಡಿರುವ ಜ್ಞಾನಕ್ಷೇತ್ರವೇ ಪಠ್ಯವಿಷಯ.

ಕೆಲವೊಮ್ಮೆ ಇದನ್ನು 'ಶಾಸ್ತ್ರ' ಎಂಬ ಪದಕ್ಕೆ ಸಮನಾರ್ಥಕವಾಗಿಯೂ ಬಳಸಬಹುದಾಗಿದೆಯಲ್ಲದೆ, ನಿರ್ದಿಷ್ಟ ಶೈಲಿಯಲ್ಲಿ ಅಧ್ಯಯನ ಮಾಡಬೇಕಾದ ಕಲಿಕೆಯ ನಿರ್ದಿಷ್ಟ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವ ವ್ಯವಸ್ಥಿತ ಬೋಧನೆಯೆಂದೂ ಹೇಳಬಹುದಾಗಿದೆ. ಸ್ವಯಂ ವಾಸ್ತವೀಕರಣ, ವೈಯಕ್ತಿಕ ವಿಕಾಸ ಮತ್ತು ವೈಯಕ್ತಿಕ ಸ್ವಾತಂತ್ರ್ಯ ಮುಂತಾದುವುಗಳ ಅನ್ವೇಷಣೆಗೆ ನೆರವಾಗಬಲ್ಲ ನೈಜವೂ ಉಪಯುಕ್ತವೂ ಆದ ಅನುಭವಗಳನ್ನು

ವಿದ್ಯಾರ್ಥಿಗಳಿಗೆ ಒದಗಿಸಲು ಶಾಲಾ ಪಠ್ಯವಿಷಯವನ್ನು ರೂಪಿಸಲಾಗುತ್ತದೆ ಎಂದು ಮಾನವತಾವಾದಿ ಶಿಕ್ಷಣಶಾಸ್ತ್ರಜ್ಞರು ಪ್ರತಿಪಾದಿಸುತ್ತಾರೆ. ಆದ್ದರಿಂದ ಶಾಲಾ ಪಠ್ಯವಿಷಯಗಳನ್ನು ಪ್ರತ್ಯೇಕ ವಿದ್ಯಾರ್ಥಿಯ ಆಸಕ್ತಿ, ಅಭಿವೃತ್ತಿ ಮತ್ತು ವಿಕಾಸದ ಹಂತಗಳಿಗೆ ಅನುಗುಣವಾಗಿ ರೂಪಿಸಬೇಕಲ್ಲದೆ, ಅವುಗಳ ವಸ್ತು ವಿಷಯಗಳನ್ನು ವೈಯಕ್ತಿಕ ಅನುಭವಗಳು, ಮಾನವ ಚಟುವಟಿಕೆಗಳು ಮತ್ತು ಸಮುಯದಾಯಗಳು, ಸಂಸ್ಕೃತಿಗಳು ಮತ್ತು ತಿಳಿವು ಇವೇ ಮುಂತಾದ ವಿಸ್ತೃತವ್ಯಾಪ್ತಿಯ ಮೂಲಗಳಿಂದ ತೆಗೆದುಕೊಳ್ಳಬೇಕು. ಜ್ಞಾನಶಿಸ್ತೀಯ ಅರಿವು ಶಾಲಾ ಪಠ್ಯವಿಷಯಗಳನ್ನು ರೂಪಿಸಲು ಉಪಯುಕ್ತವಾಗಿರಬಹುದು ಅಥವಾ ಇಲ್ಲದಿರಬಹುದು. ಸಾಮಾಜಿಕ ಉತ್ಕೃಷ್ಟತೆಯ ದೃಷ್ಟಿಯಿಂದ ಭವಿಷ್ಯದ ಪ್ರಜೆಗಳನ್ನು ಅಗತ್ಯವಾದ ಜ್ಞಾನ ಕೌಶಲ್ಯಗಳು ಮತ್ತು ಬಂಡವಾಳಗಳಿಂದ ಸಜ್ಜುಗೊಳಿಸುವುದರ ಮುಂಖಾಂತರ ಆರ್ಥಿಕ ಮತ್ತು ಸಾಮಾಜಿಕ ದಕ್ಷತೆಗಳನ್ನು ಪರಿಪಾಲಿಸಿ ಹೆಚ್ಚಿಸುವ ಪ್ರಮುಖ ಉದ್ದೇಶದ ಸಲುವಾಗಿ ಶಾಲಾ ಪಠ್ಯವಿಷಯಗಳನ್ನು ರೂಪಿಸಲಾಗುತ್ತಿದೆ. ಆದ್ದರಿಂದ, ಇತರ ವಿಷಯಗಳಿಗೆ ಸಂಬಂಧಿಸಿದಂತೆ ಶಾಲಾ ಪಠ್ಯವಿಷಯಗಳು ಕಸುಬು, ವೃತ್ತಿ ಮತ್ತು ಉದ್ಯೋಗಗಳಿಗೆ ಸಂಬಂಧಿಸಿದಂತೆ ಇರಬೇಕಾಗಿದೆ. ಹೀಗಾಗಿ ವಿಶೇಷ ಮತ್ತು ಆನ್ವಯಿಕ ಕ್ಷೇತ್ರಗಳು (ಉದಾ: ಎಂಜನಿಯರಿಂಗ್, ಅಕೌಂಟಿಂಗ್ ಮತ್ತು ಮಾರ್ಕೆಟಿಂಗ್) ಶಾಲಾ ವಿಷಯಗಳನ್ನು ರೂಪಿಸಲು ಮೂಲಭೂತ ಆಕರಗಳಾಗಿವೆ. ವಿಮೋಚನೆ ಮತ್ತು ಸಾಮಾಜಿಕ ಮಾಧ್ಯಮಗಳಿಗೆ ಕಾರಣವಾಗುವ ಅರ್ಥಪೂರ್ಣ ಕಲಿಕಾ ಅನುಭವಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ರೀತಿಯಲ್ಲಿಯೂ ಶಾಲಾ ಪಠ್ಯವಿಷಯಗಳನ್ನು ರೂಪಿಸಲಾಗುತ್ತದೆ. ಶಾಲಾ ಪಠ್ಯವಿಷಯಗಳ ರೂಪಣವು ವ್ಯಕ್ತಿಗಳು ತಮ್ಮದೇ ಆದ ವಿಶ್ಲೇಷಣೆ ದೃಷ್ಟಿಕೋನ ಮತ್ತು ಕ್ರಿಯೆಗಳನ್ನು ಪುನರ್ ಸಂರಚಿಸಿಕೊಳ್ಳಲು ನೆರವಾಗಬೇಕೆಂಬ ಉದ್ದೇಶದೊಂದಿಗಿನ ಸಾಮಾಜಿಕ ವಸ್ತುಗಳ, ಸಾಮಾಜಿಕ ವಿವಾದಾಂಶಗಳ ಮತ್ತು ಭವಿಷ್ಯದ ಪರೀಕ್ಷಣೆಯನ್ನು ಅವಲಂಬಿಸಿದೆ. ಮಾನವತಾವಾದಿ ಶಿಕ್ಷಣಶಾಸ್ತ್ರಜ್ಞರಂತೆಯೇ ಸಾಮಾಜಿಕ ಪುನರ್ ಸಂರಚನಾ ಶಾಸ್ತ್ರಜ್ಞರು ಶಾಲಾ ಪಠ್ಯವಿಷಯಗಳು ತಮ್ಮ ವಸ್ತುಗಳನ್ನು ವಿಸ್ತೃತ ಮೂಲಗಳಿಂದ ಪಡೆದುಕೊಳ್ಳುತ್ತವೆ ಎಂದು ಅಭಿಪ್ರಾಯ ಪಡುತ್ತಾರೆ.

## ಶಾಲಾ ಪಠ್ಯವಿಷಯದ ವ್ಯಾಖ್ಯಾನ

ಕಾಲಿಕಾರ್ಥಿಗೆ ಒದಗಿಸಲಾಗುವ ಜ್ಞಾನಶಾಖೆಯನ್ನು ಅಥವಾ ಜ್ಞಾನ ಸಂಗ್ರಹವನ್ನು ಶಾಲಾ ಪಠ್ಯವಿಷಯ ಎಂದು ವ್ಯಾಖ್ಯಾನಿಸಬಹುದು. ಜೋಗಿ ಡೆಂಗ್‌ರವರ ಪ್ರಕಾರ ಬೋಧನೆ ಮತ್ತು ಕಲಿಕೆಗಾಗಿ ಸಾಂಸ್ಥಿಕವಾಗಿ ನಿರ್ದಿಷ್ಟಗೊಂಡ ಜ್ಞಾನ ಮತ್ತು ಪ್ರಯೋಗಗಳ ಕ್ಷೇತ್ರಗಳನ್ನು ಒಳಗೊಂಡ ಶಾಲಾ ಪಠ್ಯಕ್ರಮದ ಒಳಗಿರುವ ಕಲಿಕಾ ಕ್ಷೇತ್ರಕ್ಕೆ ಶಾಲಾ ಪಠ್ಯವಿಷಯ ಎನ್ನುವರು.

ಒಂದು ಶಾಲಾ ಪಠ್ಯವಿಷಯವು ಪಠ್ಯಕ್ರಮ ವಸ್ತು, ಬೋಧನೆ ಮತ್ತು ಕಲಿಕಾ ಚಟುವಟಿಕೆಗಳಿಗೆ ಒಂದು ಅರ್ಥವನ್ನು, ರೂಪವನ್ನು ಕೊಡುವ ಚೌಕಟ್ಟನ್ನು ಒಳಗೊಂಡಿರುತ್ತದೆ. (ಕರ್ಮೋನ್, 2007).

"ಶಾಲೆಯಲ್ಲಿ ಅಧ್ಯಯನ ಮಾಡಲಾಗುವ ಜ್ಞಾನಕ್ಷೇತ್ರಕ್ಕೆ" ಶಾಲಾ ಪಠ್ಯವಿಷಯ ಎನ್ನವರು (ಬ್ರಿಟಾನಿಕಾ ಎನ್‌ಸೈಕ್ಲೊಪೀಡಿಯ).

"ಬೋಧನೆ ಮತ್ತು ಕಲಿಕೆಗಾಗಿ ಸಾಂಸ್ಥಿಕವಾಗಿ ನಿರ್ದಿಷ್ಟಗೊಂಡ ಜ್ಞಾನ ಮತ್ತು ಪ್ರಯೋಗಗಳ ಕ್ಷೇತ್ರಗಳನ್ನು ಒಳಗೊಂಡ ಶಾಲಾ ಪಠ್ಯಕ್ರಮದ ಒಳಗಿರುವ ಕಲಿಕಾ ಕ್ಷೇತ್ರಕ್ಕೆ ಶಾಲಾ ಪಠ್ಯವಿಷಯ ಎನ್ನುವರು" (ಡೆಂಗ್ ಜೆಡ್ 2013).

ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಶೈಕ್ಷಣಿಕ ವಾಸ್ತವಿಕತೆಗಳಿಗೆ ಮತ್ತು ಆವಶ್ಯಕತೆಗಳಿಗೆ ಪ್ರತಿಕ್ರಿಯೆಯ ರೂಪದಲ್ಲಿ ಮೂಡಿದ ಮಾನವೀಯ ಸಂರಚನೆಗಳೇ ಶಾಲಾ ಪಠ್ಯವಿಷಯಗಳು.

"ಬೋಧಪ್ರದ ಗುರಿಯನ್ನಿಟ್ಟುಕೊಂಡು ಶೈಕ್ಷಣಿಕ ಕಲ್ಪನಾ ಶಕ್ತಿಯ ನೆರವಿನಿಂದ ಮತ್ತು ಅದರ ಮೂಲಕ ಒಂದು ಉದ್ದೇಶವನ್ನಿಟ್ಟುಕೊಂಡು ವಿನ್ಯಾಸಗೊಳಿಸಿದ ಅಪೂರ್ವ ಶೈಕ್ಷಣಿಕ ಪ್ರಯತ್ನಗಳೇ ಶಾಲಾ ಪಠ್ಯವಿಷಯಗಳು" (ಡೆಂಗ್ ಮತ್ತು ಲ್ಯೂಕ್, 2008,).

ಬೋಧನೆ ಮತ್ತು ಕಲಿಕೆಗಾಗಿ ಸಾಂಸ್ಥಿಕವಾಗಿ ನಿರ್ದಿಷ್ಟಗೊಂಡ ಜ್ಞಾನ ಮತ್ತು ಪ್ರಯೋಗಗಳ ಕ್ಷೇತ್ರಗಳನ್ನು ಒಳಗೊಂಡ ಶಾಲಾ ಪಠ್ಯಕ್ರಮದ ಒಳಗಿರುವ ಕಲಿಕಾ ಕ್ಷೇತ್ರಕ್ಕೆ ಶಾಲಾ ಪಠ್ಯವಿಷಯ ಎನ್ನುವರು".

ಶಾಲಾ ಪಠ್ಯವಿಷಯಗಳು ಗಣಿತ, ಇತಿಹಾಸ, ಭೂಗೋಳಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಅರ್ಥಶಾಸ್ತ್ರ ಇವೇ ಮುಂತಾದ ಸಾಂಪ್ರದಾಯಿಕ ಶೈಕ್ಷಣಿಕ ವಿಷಯಗಳಾಗಿರಬಹುದು. ಗಣಿತ, ರಸಾಯನಶಾಸ್ತ್ರ, ಭೂಗೋಳಶಾಸ್ತ್ರ, ಇತಿಹಾಸ ಮತ್ತು ಅರ್ಥಶಾಸ್ತ್ರಗಳಂತಹ ಶೈಕ್ಷಣಿಕ ಶಾಲಾ ಪಠ್ಯವಿಷಯಗಳನ್ನು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಬೋಧಿಸಲೇಬೇಕು. ಈ ಶೈಕ್ಷಣಿಕ ವಿಷಯಗಳ ವಸ್ತುವನ್ನು ತರಗತಿಯ ಬೋಧನೆಗೆ ಸೂಕ್ತವಾಗಿರುವಂತೆ ಶಿಕ್ಷಕರು ಅಳವಡಿಸಿ ರೂಪಾಂತರಿಸಬೇಕಾದ ಅಗತ್ಯವಿದೆ. ಶಾಲಾ ಪಠ್ಯವಿಷಯಗಳ ಸಂರಚನೆಯು ಜ್ಞಾನದ ವಿಷಯವಸ್ತು ಮತ್ತು ಕೌಶಲ್ಯಗಳ ಆಯ್ಕೆ ಮತ್ತು ಜೋಡಣೆಯನ್ನು ಒಳಗೊಳ್ಳುತ್ತದೆ ಹಾಗೂ ಆ ವಿಷಯ ವಸ್ತುಗಳು ಶಾಲೆ ಮತ್ತು ತರಗತಿಯ ಪ್ರಯೋಗಕ್ಕೆ ಯೋಗ್ಯವಾಗುವಂತೆ ರೂಪಾಂತರವಾಗುತ್ತವೆ. ಶಾಲಾ ಪಠ್ಯವಿಷಯಗಳ ರಚನೆಯು ಸಮಾಜದ ನಿರೀಕ್ಷೆಗಳಿಗೆ ಮತ್ತು ಬೋಧನೆಯ ಚಟುವಟಿಕೆಗಳಿಗೆ ಅನುಗುಣವಾಗಿರುತ್ತದೆ. ಪಠ್ಯವಿಷಯಗಳ ಬಗೆಗೆ ಮಾತನಾಡುವಾಗ ಸಂಶೋಧನೆಗೆ ಹೆಚ್ಚಿನ ಗಮನವನ್ನೇನೂ ಕೊಡುವುದಿಲ್ಲ.

## ಶಾಲಾ ಪಠ್ಯವಿಷಯಗಳ ಸ್ವರೂಪ

ಗ್ರಾಸ್‌ಮನ್ ಮತ್ತು ಸ್ಟೊಡೊಸ್ಕಿ(1995) ಶಾಲಾ ಪಠ್ಯವಿಷಯಗಳ ಮೂರು ಗುಣಲಕ್ಷಣಗಳನ್ನು ವ್ಯಾಖ್ಯಾನಿಸುತ್ತಾರೆ. ಅವು ಹೀಗಿವೆ;

1. ಶಾಲಾ ಪಠ್ಯವಿಷಯಗಳಿಗೆ ಶಾಲೆಯಲ್ಲಿ ಮತ್ತು ಹೆಚ್ಚಿನ ಸಮುದಾಯದಲ್ಲಿ ಇರುವ ಮಾನ್ಯತೆಯಲ್ಲಿ ವ್ಯತ್ಯಾಸವಿರುತ್ತದೆ. ಕೈಕೆಲಸ, ಶಾರೀರಿಕ ಶಿಕ್ಷಣಗಳನ್ನು ವಿಜ್ಞಾನ ಮತ್ತು ಗಣಿತಗಳಿಗಿಂತ ಕೆಳದರ್ಜೆಯವುಗಳು ಎಂದು ಪರಿಗಣಿಸಲಾಗುತ್ತದೆ.

2. ಹೊಸ ಕಲಿಕೆಗೆ ಮುಂದುವರೆಯುವ ಮುನ್ನ ಕೆಲವು ನಿರ್ದಿಷ್ಟ ಜ್ಞಾನ ಮತ್ತು ಕೌಶಲ್ಯಗಳನ್ನು ಕಲಿಯುವುದು ಮುಖ್ಯವೆಂದು ತೋರುವ ಶಾಲಾ ಪಠ್ಯವಿಷಯಗಳಲ್ಲಿ ಅನುಕ್ರಮತೆ ಮುಖ್ಯ ಎಂದು ಪರಿಗಣಿಸಲಾಗುತ್ತದೆ. ಉದಾಹರಣೆಗೆ ಭಿನ್ನರಾಶಿಯನ್ನು ಕಲಿಸುವ ಮುನ್ನ ಸಂಕಲನ, ವ್ಯವಕಲನ, ಗುಣಾಕಾರ, ಭಾಗಕಾರ ಮುಂತಾದ ಮೂಲಭೂತ ಲೆಕ್ಕಾಚಾರಗಳನ್ನು ಕಲಿಸಲಾಗುತ್ತದೆ.

3. ಪಠ್ಯವಿಷಯಗಳಲ್ಲಿ ಒಳಗೊಂಡಿರುವ ವಿಸ್ತೃತವಾಗಿರಬಹುದಾದ ಅಥವಾ ಮಿತಿಯುಳ್ಳದಾಗಿರಬಹುದಾದ ವಿವಿಧ ಶಾಸ್ತ್ರೀಯ ಕ್ಷೇತ್ರಗಳು ವಿಷಯದ ವ್ಯಾಪ್ತಿಯಲ್ಲಿ ಬರುತ್ತವೆ. ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರಗಳನ್ನು ಒಳಗೊಳ್ಳುವ ವಿಶಾಲ ಅಧಾರವನ್ನುಳ್ಳ ಭೌತಿಕ ವಿಜ್ಞಾನ ಇದಕ್ಕೆ ಒಂದು ಉದಾಹರಣೆ. ಸಮಾಜ ವಿಜ್ಞಾನವು ಇತಿಹಾಸ, ಭೂಗೋಳಶಾಸ್ತ್ರ, ಅರ್ಥಸಾಸ್ತ್ರ ಮತ್ತು ಪೌರನೀತಿಗಳನ್ನು ಒಳಗೊಳ್ಳುತ್ತದೆ.

ಈಗ ನಾವು ಮೇಲಿನ ವ್ಯಾಖ್ಯಾನಗಳನ್ನು ವಿಶ್ಲೇಷಿಸೋಣ ಮತ್ತು ಶಾಲಾ ಪಠ್ಯವಿಷಯಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳೋಣ:

- ಒಂದು ಶಾಲಾ ಪಠ್ಯವಿಷಯವನ್ನು ಕಲಿಕೆಯ ಒಂದು ಉಪಕರಣವೆಂದು ಕರೆಯುತ್ತಾರೆ.

- ಶಾಲಾ ಪಠ್ಯವಿಷಯವು ನಾವು ಕಲಿಯುವುದಕ್ಕೆ ಬೇಕಾದ ನಿರ್ಣಾಯಕ ಅಂಶವಾಗಿ ಕೆಲಸಮಾಡುತ್ತದೆ.
- ಶಾಲಾ ಪಠ್ಯವಿಷಯವನ್ನು 'ಜ್ಞಾನಶಾಸ್ತ್ರೀಯ' ವಿಷಯಗಳಿಗೆ ಸಂಬಂಧಿಸಿದಂತೆ ಬಳಸಲಾಗುತ್ತದೆ.
- ಶಾಲಾ ಪಠ್ಯವಿಷಯ ಎಂದರೆ ಕಲಿಕೆಯ ಒಂದು ನಿರ್ದಿಷ್ಟ ಕ್ಷೇತ್ರ.
- ಶಾಲಾ ಪಠ್ಯವಿಷಯಕ್ಕೆ ಒಂದು ನಿರ್ದಿಷ್ಟ ಕಲಿಕೆಯ ವಿಧಿವಿಧಾನವಿರುತ್ತದೆ.
- ಶಾಲಾ ಪಠ್ಯವಿಷಯವು ವಿದ್ಯಾರ್ಥಿಗಳಿಗೆ ನೈಜವಾದ ಉಪಯುಕ್ತ ಅನುಭವಗಳನ್ನು ಕೊಡುವ ಗುರಿಯನ್ನು ಹೊಂದಿದೆ.
- ಶಾಲಾ ಪಠ್ಯವಿಷಯವು ಸ್ವಯಂ ವಾಸ್ತವೀಕರಣ, ವೈಯಕ್ತಿಕ ವಿಕಾಸ ಮತ್ತು ವೈಯಕ್ತಿಕ ಸ್ವಾತಂತ್ರ್ಯಗಳಿಗೆ ಕೊಡುಗೆ ನೀಡುತ್ತದೆ.
- ಶಾಲಾ ಪಠ್ಯವಿಷಯವನ್ನು ವಿದ್ಯಾರ್ಥಿಗಳ ಅಗತ್ಯಕ್ಕೆ ತಕ್ಕಂತೆ ರೂಪಿಸಬೇಕಾಗುತ್ತದೆ.
- ಶಾಲಾ ಪಠ್ಯವಿಷಯವು ವಿಸ್ತೃತ ಮೂಲಗಳಿಂದ ವಿಷಯವಸ್ತುವನ್ನು ತೆಗೆದುಕೊಳ್ಳುತ್ತದೆ.
- ಶಾಲಾ ಪಠ್ಯವಿಷಯವನ್ನು ಸಾಮಾಜಿಕ ದಕ್ಷತೆಯ ಉತ್ಕೃಷ್ಟತೆಯ ದೃಷ್ಟಿಯಿಂದ ಸಂರಚಿಸಲಾಗುತ್ತದೆ.
- ಶಾಲಾ ಪಠ್ಯವಿಷಯವು ಸಾಮಾಜಿಕ ಉತ್ಪಾದಕತ್ವವನ್ನು ಪರಿಪಾಲಿಸಿ ಹೆಚ್ಚಿಸುವ ಗುರಿಗಳನ್ನು ಹೊಂದಿದೆ.
- ಶಾಲಾ ಪಠ್ಯವಿಷಯವು ಕಸುಬು, ವೃತ್ತಿ ಮತ್ತು ಉದ್ಯೋಗಗಳ ಅಗತ್ಯಗಳಿಗೆ ಸಂಬಂಧಿಸಿರುತ್ತದೆ.
- ಶಾಲಾ ಪಠ್ಯವಿಷಯವು ಶಾಲಾ ಪಠ್ಯಕ್ರಮದ ಒಳಗಿರುವ ಒಂದು ಕಲಿಕೆಯ ಕ್ಷೇತ್ರ.
- ಶಾಲಾ ಪಠ್ಯವಿಷಯವು ಜ್ಞಾನದ ವಸ್ತುವಿನ ಆಯ್ಕೆ ಮತ್ತು ವ್ಯವಸ್ಥೆ, ಕೌಶಲ್ಯಗಳು ಮತ್ತು ಆ ವಿಷಯ ವಸ್ತುವಿನ ರೂಪಾಂತರಣ  ಇವುಗಳನ್ನು ಒಳಗೊಳ್ಳುತ್ತದೆ.

ಹೀಗೆ ಶಾಲಾ ಪಠ್ಯವಿಷಯ ಎಂಬುದು ಸಾಂಸ್ಥಿಕ ಆಯ್ಕೆ, ಸಂಯೋಜನೆ, ಮತ್ತು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಪಠ್ಯಕ್ರಮ ಮತ್ತು ಶಿಕ್ಷಣ ವಿಧಾನಗಳಿಗೆ ಅನುಗುಣವಾಗಿ ವಸ್ತುವನ್ನು ರೂಪಿಸುವಿಕೆ – ಇವೆಲ್ಲದರ ಫಲಸ್ವರೂಪವೇ ಆಗಿದೆ. ಒಂದು ಶಾಲಾ ಪಠ್ಯವಿಷಯವು ಪಠ್ಯಕ್ರಮದ ವಿಷಯವಸ್ತು, ಬೋಧನೆ ಮತ್ತು ಕಲಿಕಾ ಚಟುವಟಿಕೆಗಳಿಗೆ ಒಂದು ಅರ್ಥ ಮತ್ತು ರೂಪವನ್ನು ಕೊಡುವ ಸಂಯೋಜನೆಯ ಚೌಕಟ್ಟನ್ನು ಒಳಗೊಳ್ಳುತ್ತದೆ. ಶಾಲಾ ಪಠ್ಯವಿಷಯಗಳು ವೈಶಿಷ್ಟ್ಯವುಳ್ಳ ಉದ್ದೇಶಕ್ಕಾಗಿ ರಚಿಸಿದ ಪ್ರಯತ್ನವಾಗಿದ್ದು ವಿಭಿನ್ನ ಸಾಮಾಜಿಕ ಸಾಂಸ್ಕೃತಿಕ ಮತ್ತು ರಾಜಕೀಯ ಬೇಡಿಕೆಗಳು ಮತ್ತು ಸವಾಲುಗಳಿಗೆ ಪ್ರತಿಕ್ರಿಯೆ ರೂಪದಲ್ಲಿ ಮತ್ತು ಬೋಧಪ್ರದ ಗುರಿಸಾಧನೆಗಾಗಿ ರಚಿಸಿದವುಗಳಾಗಿವೆ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1. ಪಠ್ಯವಿಷಯ ಎಂಬುದನ್ನು ವ್ಯಾಖ್ಯಾನಿಸಿ.
2. ಶಾಲಾ ಪಠ್ಯವಿಷಯದ ಪರಿಕಲ್ಪನೆ ಮತ್ತು ಅರ್ಥವನ್ನು ವಿವರಿಸಿ.

## 1.1.3.2. ಜ್ಞಾನಶಿಸ್ತಿನ ಪರಿಕಲ್ಪನೆ

ನಾವು ಶಿಸ್ತು ಎಂಬ ಪದವನ್ನು ಉಲ್ಲೇಖಿಸುತ್ತಿರುವುದು ಶೈಕ್ಷಣಿಕ ದೃಷ್ಟಿಯುಳ್ಳ ಜಿಜ್ಞಾಸೆಯ ಸಂಬಂಧವಾಗಿ. ಇದನ್ನು ಶಾಲಾಶಿಸ್ತು ಎಂದು ತಿಳಿದು ಗೊಂದಲಕ್ಕೀಡಾಗಬಾರದು. ಇಂಗ್ಲಿಷ್‌ನ ಡಿಸಿಪ್ಲಿನ್(Discipline) ಎಂಬ

ಪದ ಕನ್ನಡದ 'ಶಿಸ್ತು' ಎಂಬ ಪದದ ಅರ್ಥವನ್ನು ಕೊಡುತ್ತದೆ. ಸ್ಕೂಲ್ ಡಿಸಿಪ್ಲಿನ್ (Discipline) ಎಂಬ ಇಂಗ್ಲಿಷ್ ಪದಗುಚ್ಛ ಕನ್ನಡದ "ಶಾಲಾ ಶಿಸ್ತು" ಎಂಬ ಅರ್ಥ ಕೊಡುತ್ತದೆ. ಈ ಕಾರಣದಿಂದ ಈ ವಿವರಣೆ ಕೊಡಲಾಗಿದೆ. ಇಂಗ್ಲಿಷಿನ 'Discipline' ಪದಕ್ಕೆ ಸಂವಾದಿಯಾಗಿ ಈಗಾಗಲೇ ಜ್ಞಾನಶಿಸ್ತು ಎಂಬ ಪದವನ್ನು ಬಳಸಲಾಗುತ್ತಿರುವುದರಿಂದ ಅದೇ ಪದವನ್ನು ಇಲ್ಲಿಯೂ ಬಳಸಲಾಗಿದೆ. ಶಾಲೆಯಲ್ಲಿ ಮುಂದುವರೆಯುತ್ತಿರುವ ಶೈಕ್ಷಣಿಕ ಚಟುವಟಿಕೆಗಳಿಗೆ ಅಥವಾ ಶಿಕ್ಷಕರಿಂದ ಇಲ್ಲವೆ ಶಾಲಾ ವ್ಯವಸ್ಥೆಯಿಂದ ರೂಪಿಸಲಾದ ನಿಯಮಗಳಿಗೆ ವಿದ್ಯಾರ್ಥಿ ಅಥವಾ ವಿದ್ಯಾರ್ಥಿಗಳ ಗುಂಪಿನ ವರ್ತನೆಯಿಂದ ಭಂಗ ಉಂಟಾದಾಗ ಶಾಲಾ ವ್ಯವಸ್ಥೆಯೊಳಗಿರುವ ಶಿಕ್ಷಕರು ಆ ವಿದ್ಯಾರ್ಥಿ ಅಥವಾ ವಿದ್ಯಾರ್ಥಿ ಗುಂಪಿನ ಮೇಲೆ ತೆಗೆದುಕೊಳ್ಳುವ ಕ್ರಮಕ್ಕೆ ಶಾಲಾ ಶಿಸ್ತು ಎನ್ನುವರು. ಈ ಸಂದರ್ಭದಲ್ಲಿ ನಾವು ಅಂತಹ ಶಿಸ್ತಿನ ಬಗ್ಗೆ ಮಾತನಾಡುತ್ತಿಲ್ಲ. ಇದು ಒಂದು ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದೆ. ಈ ಪದದ ಮೂಲ ಯಾವುದೆಂದು ನಿಖರವಾಗಿ ತಿಳಿದಿಲ್ಲ. ಜ್ಞಾನಶಿಸ್ತು ಎಂಬ ಪದವನ್ನು ಒಮ್ಮೆಗೆ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಬಳಸಬಹುದು ಮತ್ತು ಈ ಪದದ ಹಲವು ಅರ್ಥಗಳನ್ನು ಪರೀಕ್ಷಿಸುವುದು ಇಲ್ಲಿ ಆವಶ್ಯಕವಾಗುತ್ತದೆ.

ಇಂಗ್ಲಿಷಿನ 'Discipline' ಎಂಬ ಪದಕ್ಕೆ ಬದಲಾಗಿ ಶಾಸ್ತ್ರ ಎಂಬ ಪದವನ್ನೂ ಬಳಸಬಹುದು. 'ಶಾಸ್ತ್ರ' ಎಂಬ ಪದದ ವ್ಯುತ್ಪತ್ತಿ ಹೇಗೆ ಆಗಿದೆ ಎಂದು ನಾವೀಗ ಪರೀಕ್ಷಿಸೋಣ. 'ಶಾಸ್ತ್ರ' ಎಂಬ ಪದ ಸಂಸ್ಕೃತದ ಧಾತು "ಶಾಸ್" ಎಂಬುದರಿಂದ ಬಂದಿದೆ. ಸಂಸ್ಕೃತದ "ಶಾಸ್" ಧಾತುವಿಗೆ ಬೋಧಿಸು, ಮಾಹಿತಿಕೊಡು, ಶಾಸನಮಾಡು, ಸರಿಪಡಿಸು(ತಿದ್ದು), ಸಲಹೆಕೊಡು ಎಂಬ ಅರ್ಥಗಳಿವೆ. ಇಂಗ್ಲಿಷ್‌ನಲ್ಲಿ 'ಶಾಸ್ತ್ರ' ಎಂಬುದಕ್ಕೆ ಡಿಸಿಪ್ಲಿನ್(Discipline) ಎಂಬ ಪದವಿದೆ. ಈ "ಡಿಸಿಪ್ಲಿನ್" ಎಂಬ ಪದಕ್ಕೆ ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟು "ಕಲಿಕೆಯ ಅಥವಾ ಜ್ಞಾನದ ಒಂದು ಶಾಖೆ" ಎಂಬ ಅರ್ಥವನ್ನು ಕೊಡುತ್ತದೆ. ಕಲಿಕೆಯ ಸಂಯೋಜನೆ ಮತ್ತು ಹೊಸ ಜ್ಞಾನದ ಉತ್ಪಾದನೆ ಈ "ಶಾಸ್ತ್ರ" ಎಂಬ ಪದ ಅಥವಾ ಇಂಗ್ಲಿಷ್‌ನ ಡಿಸಿಪ್ಲಿನ್ ಎಂಬ ಪದ ತಾಂತ್ರಿಕ ಶಬ್ದವಾಗಿದೆ. ಲ್ಯಾಟಿನ್ ಭಾಷೆಯಲ್ಲಿ ಡಿಸಿಪ್ಲಿನ್(Discipline) ಎಂದರೆ 'ಬೋಧನೆ, ಕಲಿಕೆ ಮತ್ತು ಶಿಕ್ಷಣ' ಎಂದರ್ಥವಾಗುತ್ತದೆ. ಇಂಗ್ಲಿಷ್ ಭಾಷೆಯ ಹಳೆಯ ಆವೃತ್ತಿಯ ನಿಘಂಟು "ಜ್ಞಾನ ಶಾಖೆ ಅಥವಾ ಅಧ್ಯಯನ ಕ್ಷೇತ್ರ" ಎಂದು ಹೇಳುತ್ತದೆ.

ಆರ್ಥರ್‌ಡಿರ್ಕ್ಸ್ ಹೀಗೆ ಹೇಳುತ್ತಾನೆ. "ಶೈಕ್ಷಣಿಕ ದೃಷ್ಟಿಯಿಂದ ನೋಡುವುದಾದರೆ "ಜ್ಞಾನಶಿಸ್ತು" ಎಂಬುದು ಒಂದು ನಿರ್ದಿಷ್ಟ ವರ್ಗದ ಅನುಭವಗಳ, ವಿಧಾನಗಳ ಮತ್ತು ಅವುಗಳಲ್ಲಿನ ಸತ್ಯಾನ್ವೇಷಣಾ ರೀತಿಗಳಿಗೆ ಸಂಬಂಧಿಸಿದುದಾಗಿದೆ. ಈ ಸತ್ಯಾನ್ವೇಷಣೆಯ ಕುರಿತು ಮಾಹಿತಿಕೊಡುವ ಮೂಲಭೂತ ಸಿದ್ಧಾಂತ ಮತ್ತು ವಾಸ್ತವಾಂಶಗಳಿವೆ(ಇದನ್ನು ಒಂದು ವಾದ ಎಂದೂ ಕರೆಯಬಹುದು) ಆದರೆ, ಇಲ್ಲಿ ನಿಮಗೆ ಮುಖ್ಯವಾಗಿರುವುದು ಅನ್ವೇಷಣೆ".

ಮೋತಿ ನಿಸ್ಸಾನಿ (1997) ಅವರ ಪ್ರಕಾರ, ತನ್ನದೇ ಆದ ವಿಶ್ಲೇಷಜ್ಞರ ಸಮುದಾಯವನ್ನು ಹೊಂದಿರುವ ಸ್ವ ಸಂಪೂರ್ಣವೂ, ಪ್ರತ್ಯೇಕ ತೌಲನಿಕವಾದ ಮಾನವೀಯ ಅನುಭವದ ಪ್ರಭಾವಕ್ಷೇತ್ರವೂ ಆಗಿರುವುದೇ ಜ್ಞಾನಶಿಸ್ತು ಎಂದು ವ್ಯಾಖ್ಯಾನಿಸಬಹುದು.

ಪಿ. ಚೌಡ್ರ್ಯ, (2004) ಅವರ ಮಾತಿನಲ್ಲಿ ಹೇಳುವುದಾದರೆ, ಒಂದು ಜ್ಞಾನಶಿಸ್ತು ಎಂಬುದು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಅಂಗೀಕೃತವಾದ ಹೆಸರನ್ನು ಹೊಂದಿರುತ್ತದೆ (ಉದಾಹರಣೆಗೆ ಇದನ್ನು ನಾವು ಗ್ರಂಥಾಲಯದ ವರ್ಗೀಕೃತ ಗ್ರಂಥಸೂಚಿಯಲ್ಲಿ ನೋಡಬಹುದು). ಒಂದು ಜ್ಞಾನಶಿಸ್ತು ಎಂಬುದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಶೋಧನಾ ಜಾಲಗಳಿಂದ, ವಿಶ್ವವಿದ್ಯಾನಿಲಯಗಳ ವಿಭಾಗಗಳಿಂದ, 'ಜ್ಞಾನಶಿಸ್ತಿನ ಬಂಡವಾಳ' ಎಂದು ಕರೆಯಬಹುದಾದುದನ್ನು ಉತ್ಪಾದಿಸುವ, ಪ್ರಮಾಣೀಕರಿಸುವ, ಪುರಸ್ಕರಿಸುವ, ಸಮರ್ಥಿಸುವುದಾಗಿದ್ದು ಸಂಶೋಧನಾ ಸಂಸ್ಥೆಗಳು ಮತ್ತು ವೈಜ್ಞಾನಿಕ ನಿಯತಕಾಲಿಕೆಗಳಿಂದ ದಾಖಲಿಸಿ ಸಮರ್ಥಿಸಲಾಗಿರುತ್ತದೆ. ಜ್ಞಾನಶಿಸ್ತು ಎಂಬುದು

ನಿರ್ದಿಷ್ಟವೂ ಅಪೂರ್ಣವೂ ಆಗಿದ್ದು, ಶೈಕ್ಷಣಿಕ ಮತ್ತು ಸಾಮಾಜಿಕ ಶೈಲಿಗಳ ಗುಣಲಕ್ಷಣಗಳನ್ನು ಹೊಂದಿರುತ್ತದೆ.

ಜ್ಞಾನಶಿಸ್ತುಗಳನ್ನು ಉಪಶಿಸ್ತುಗಳನ್ನಾಗಿ, ಉಪ ಉಪಶಿಸ್ತುಗಳನ್ನಾಗಿ ವಿಭಜಿಸಬಹುದು. ಈ ವಿಭಜನೆ ಗ್ರಂಥಾಲಯ, ಒಂದು ಶಾಲಾ ಕಾರ್ಯಕ್ರಮ ಅಥವಾ ಉನ್ನತ ಶಿಕ್ಷಣ ಸಂಸ್ಥೆಗಳ ಸಂಯೋಜನೆಗೆ ಸುಗಮ ಮಾರ್ಗವಾಗಿದೆ.

ಜಾನ್ ವಾಲ್ಡನ್ (1963) ಹೀಗೆ ಹೇಳುತ್ತಾನೆ – "ನನ್ನ ಪ್ರಕಾರ ಜ್ಞಾನಶಿಸ್ತು ಎಂದರೆ ಉದ್ದೇಶ ಪೂರ್ವಕವಾಗಿ, ವ್ಯವಸ್ಥಿತವಾಗಿ ಬೋಧಿಸಲು ಸಾಧ್ಯವಾಗುವಂತೆ ವ್ಯವಸ್ಥಿತ ಕ್ರಮದಲ್ಲಿರಿಸಿದ ಪರಿಕಲ್ಪನೆಗಳು, ವಾಸ್ತವಾಂಶಗಳು ಮತ್ತು ಸಿದ್ಧಾಂತಗಳಿಂದ ಕೂಡಿದ ವಿಷಯ ವಸ್ತುವಿನ ಸಂಗ್ರಹ". ಈತನ ಪ್ರಕಾರ ಜ್ಞಾನಶಿಸ್ತು ಎಂದರೆ ಬೋಧಿಸಲು ಸಾಧ್ಯವಾಗುವಂತಹ ವಿಷಯವಸ್ತುವಿನ ಸಂಗ್ರಹ. ಆದಾಗ್ಯೂ, ವಾಲ್ಡನ್‌ನ ಪರಿಭಾಷೆ ಬೋಧಸಾದ್ಯವಾದ ಲಕ್ಷಣವುಳ್ಳ ಯಾವುದೇ ಜ್ಞಾನರಾಶಿಯನ್ನು ಜ್ಞಾನಶಿಸ್ತು ಎಂದು ಪರಿಗಣಿಸುವುದರಿಂದ ಈ ಪರಿಭಾಷೆ ಜ್ಞಾನಶಿಸ್ತು ಎಂಬುದನ್ನು ಸಮಗ್ರ ರೂಪದಲ್ಲಿ ವ್ಯಾಖ್ಯಾನಿಸುವುದಿಲ್ಲ. ಆದಾಗ್ಯೂ ವಿವಿಧ ಮಟ್ಟಗಳಲ್ಲಿ ಬೋಧಿಸಲಾಗುವ ಅನೇಕ ವಿಷಯಗಳಿದ್ದರೂ ಅವುಗಳು ಜ್ಞಾನಶಿಸ್ತುಗಳೆಂದು ಅಂಗೀಕೃತವಾಗಿಲ್ಲ.

ಜಾನಿಸ್ ಬೇಯರ್ ಮತ್ತು ಥಾಮಸ್ ಲೋಧಾಲ್ (1976) ಜ್ಞಾನಶಿಸ್ತೀಯ ಕ್ಷೇತ್ರಗಳನ್ನು ಹೀಗೆ ವ್ಯಾಖ್ಯಾನಿಸುತ್ತಾರೆ: "ಬೋಧಕ ಸಿಬ್ಬಂದಿಗಳಿಗೆ ತರಬೇತಿ ಕೊಡಲು ಮತ್ತು ಸಮಾಜೀಕರಿಸಲು ಸಾಧ್ಯವಾಗುವ ಬೋಧನೆ, ಸಂಶೋಧನೆ ಹಾಗೂ ಆಡಳಿತಾತ್ಮಕ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗುವ ಸಂಶೋಧನಾತ್ಮಕ ಮತ್ತು ಶೈಕ್ಷಣಿಕ ಉತ್ಪನ್ನವನ್ನು ಕೊಡಲು ಸಾಧ್ಯವಾಗುವ ಒಂದು ಜ್ಞಾನ ಸಂರಚನೆಯನ್ನು ಜ್ಞಾನಶಿಸ್ತೀಯ ಕ್ಷೇತ್ರಗಳು ಒದಗಿಸುತ್ತವೆ ಎಂದು ವ್ಯಾಖ್ಯಾನಿಸಬಹುದು. ಜ್ಞಾನಶಿಸ್ತೀಯ ಸಮುದಾಯಗಳು ವಿಷಯ ವಸ್ತುವಿನ ಸುತ್ತ ಮತ್ತು ತತ್ಸಂಬಂಧಿತ ಸಮಸ್ಯೆಗಳ ಸುತ್ತ ಪ್ರೋತ್ಸಾಹಕಗಳನ್ನು ಮತ್ತು ಸಹಕಾರಗಳನ್ನು ಸ್ಥಾಪಿಸುತ್ತವೆ. ಸಾಧಾರಣವಾಗಿ ಸಾಂಸ್ಥಿಕ ಕಾರ್ಯ ಘಟಕಗಳಂತಿರುವ ವಿಭಾಗಗಳು ಮತ್ತು ಶಾಲೆಗಳು ಹೊಂದಿರುವ ಗುರಿಗಳಿಗೆ ಸಮಾನವಾಗಿರುವಂತಹ ಗುರಿಗಳನ್ನೇ ಜ್ಞಾನಶಿಸ್ತುಗಳು ಹೊಂದಿರುತ್ತವೆ. ಎಂ.ಎಸ್. ಯಾದವ್ ಮತ್ತು ಟಿ.ಕೆ.ಎಸ್. ಲಕ್ಷ್ಮಿ (1995) ಇವರುಗಳ ಪ್ರಕಾರ ತನ್ನ ಅಂತಸ್ಸತ್ವ ಮತ್ತು ವಿಧಾನಶಾಸ್ತ್ರಗಳಲ್ಲಿ ಒಂದು ನಿಶ್ಚಿತವಾದ ವಿಶೇಷ ಲಕ್ಷಣವನ್ನು ವ್ಯಕ್ತಪಡಿಸುವ ಕಾರಣದಿಂದ ಗುರುತಿಸಲ್ಪಟ್ಟ ನಿರ್ದಿಷ್ಟ ಅಧ್ಯಯನ ಕ್ಷೇತ್ರಕ್ಕೆ ಜ್ಞಾನಶಾಖೆಗೆ ಜ್ಞಾನಶಿಸ್ತು ಎನ್ನಬಹುದು. ನಾವು ಗಮನಹರಿಸಿದ ವಿದ್ಯಮಾನದ ಉತ್ತಮ ತಿಳಿವಳಿಕೆಯನ್ನು ಸಂಪಾದಿಸುವ ಸಲುವಾಗಿ ಒಂದು ನಿರ್ದಿಷ್ಟ ದೃಷ್ಟಿಯಿಂದ ಜ್ಞಾನಾಧಾರದ ಉದ್ದೇಶಪೂರ್ವಕ ಪೃಥಕ್ಕರಣವನ್ನು ಜ್ಞಾನಶಿಸ್ತು ಎನ್ನಬಹುದು. ಇವರ ಪ್ರಕಾರ, ಪರಿಸರದ ಮಾನವೀಯ ಅರಿವಿನ ಒಟ್ಟು ಮೊತ್ತವನ್ನು ಜ್ಞಾನಾಧಾರವು ಪ್ರತಿನಿಧಿಸುತ್ತದೆ. ಜ್ಞಾನಶಿಸ್ತುಗಳು ಈ ಜ್ಞಾನಾಧಾರದಿಂದ ವ್ಯುತ್ಪನ್ನಗೊಳ್ಳುತ್ತಿವೆ. ಆದರೆ ಅವುಗಳ ಮತ್ತಷ್ಟು ವಿಶ್ಲೇಷಜ್ಞತೆ, ವೈವಿಧ್ಯತೆ ಮತ್ತು ಪೃಥಕ್ಕರಣಗಳಿಂದಾಗಿ, ಗುರುತಿಸಲು ಸಾಧ್ಯವಾಗುವ ಅಂತಸ್ಸಾರ ಮತ್ತು ವಿಧಾನಶಾಸ್ತ್ರಗಳ ಪೃಥಕ್ಕೃತ ರೂಪಗಳಾಗಿ ಸೂತ್ರೀಕರಿಸಲ್ಪಡುತ್ತವೆ.

ಹತ್ತೊಂಬತ್ತನೇ ಶತಮಾನದ ಶಬ್ದಭಂಡಾರದಿಂದ ಜ್ಞಾನಶಿಸ್ತು ಎಂಬುದಕ್ಕೆ ಸಮಾನಾರ್ಥಕವಾದ ಇಂಗ್ಲಿಷ್ ಭಾಷೆಯ "ಡಿಸಿಪ್ಲಿನ್" (Discipline) ಎಂಬಪದ ಬಂದಿದೆ. ಇದನ್ನು ಜ್ಞಾನ ಸಂವಹನೆಗೆ ಅಗತ್ಯವಾದ ಬೋಧನೆಯ ಒಂದು ಶಾಖೆ ಎಂದೂ ಶೈಕ್ಷಣಿಕ ಆಡಳಿತದ ಸುರಚಿತ ನಕ್ಷೆ ಎಂದೂ ಪರಿಗಣಿಸಲಾಗುತ್ತಿದೆ.

ಇದುವರೆಗೆ ನಾವು ಪ್ರಸ್ತುತ ಪಡಿಸಿದ ಮತ್ತು ವಿವಿಧ ಶಾಸ್ತ್ರಗಳೊಂದಿಗೆ ನಮಗಿರುವ ಅನುಭವಗಳ ಹಿನ್ನೆಲೆಯಲ್ಲಿ ಜ್ಞಾನಶಿಸ್ತಿನ ಸ್ವರೂಪವೇನೆಂದು ನಿಷ್ಕರ್ಷಿಸೋಣ:

ಜ್ಞಾನಶಿಸ್ತು ಎಂಬುದು–

- ಒಂದು ಕ್ರಮವನ್ನು ಸೂಚಿಸುತ್ತದೆ.
- ಕಲಿಕೆಗೆ ಸಂಬಂಧಿಸಿದೆ.
- ಕಲಿಕೆಗಾಗಿ ಒಂದು ಕ್ರಮವನ್ನು ನಿಶ್ಚಯ ಮಾಡುವುದಕ್ಕೆ ಸಂಬಂಧಿಸಿದೆ.
- ಕಲಿಕೆಯ ಉದ್ದೇಶದಿಂದ ಒಂದು ವ್ಯವಸ್ಥೆಯನ್ನು ರೂಪಿಸುವುದಾಗಿದೆ.
- ಬೋಧನೆಯನ್ನು ವ್ಯವಸ್ಥಿತಗೊಳಿಸಲು ಮಾಡಿದ ಪ್ರಯತ್ನಗಳನ್ನು ಒಳಗೊಂಡಿರುತ್ತದೆ.
- ಕಲಿಕೆಯನ್ನು ವ್ಯವಸ್ಥಿತಗೊಳಿಸಲು ಕೈಗೊಂಡ ಪ್ರಯತ್ನಗಳನ್ನು ಒಳಗೊಂಡಿರುತ್ತವೆ.
- ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗಳಿಗೆ ಸಂಬಂಧಿಸಿದೆ.
- ಜ್ಞಾನವ್ಯವಸ್ಥೆಯ ಪ್ರಕ್ರಿಯೆಗೆ ಸಂಬಂಧಿಸಿದೆ.
- ಜ್ಞಾನದ ಸಂಸ್ಕರಣೆಗೆ ಸಂಬಂಧಿಸಿದೆ.
- ಈಗಾಗಲೇ ಅಸ್ತಿತ್ವದಲ್ಲಿರುವ ಜ್ಞಾನವನ್ನು ವ್ಯವಸ್ಥಿತಗೊಳಿಸುವ ಮೂಲಕ ಮತ್ತಷ್ಟು ಜ್ಞಾನದ ನಿಗಮನವನ್ನು ಒಳಗೊಂಡಿದೆ.
- ಮೂಲಭೂತವಾಗಿ ಕಲಿಕೆಯ ಪ್ರಕ್ರಿಯೆಗೆ ತತ್ಪರಿಣಾಮವಾಗಿ ಶಿಕ್ಷಣಕ್ಕೆ ಸಂಬಂಧಿಸಿದೆ.
- ಕಲಿಕಾರ್ಥಿ ಮತ್ತು ಶಿಕ್ಷಕರಿಗೆ, ಪರಿಣತರಿಗೆ, ವಿಶೇಷಜ್ಞರಿಗೆ ಸಂಬಂಧಿಸಿದೆ.
- ನವೀನ ಜ್ಞಾನನಿರ್ಮಾಣಕ್ಕೆ ಸಂಬಂಧಿಸಿದೆ.
- ಜ್ಞಾನವರ್ಧನೆ ಮತ್ತು ಜ್ಞಾನವಿಸ್ತರಣೆ ಎಂದು ಧ್ವನಿತವಾಗುತ್ತದೆ.
- ಜ್ಞಾನವೆಂಬುದು ಅಂತಿಮವಲ್ಲ ಎಂದು ಸೂಚಿಸುತ್ತದೆ.
- ವರ್ಗೀಕರಣ ಪ್ರಕ್ರಿಯೆಯನ್ನು ಒಳಗೊಂಡಿದೆ.
- ವಿಶೇಷ ಜ್ಞಾನದ ಸಂಗ್ರಹವಾಗಿದೆ.
- ಸಿದ್ಧಾಂತಗಳು ಮತ್ತು ಪರಿಕಲ್ಪನೆಗಳನ್ನು ಒಳಗೊಂಡಿದೆ.
- ನಿರ್ದಿಷ್ಟವಾದ ಪಾರಿಭಾಷಿಕ ಶಬ್ದಗಳನ್ನು ಹೊಂದಿದೆ.
- ಸಂಶೋಧನೆಗೆ ಒಂದು ನಿಶ್ಚಿತ ವಿಷಯವನ್ನು ಒಳಗೊಂಡಿರುತ್ತದೆ.
- ನಿಶ್ಚಿತವಾದ ಸಂಶೋಧನೆಯ ವಿಧಾನಶಾಸ್ತ್ರವನ್ನು ಹೊಂದಿದೆ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2

ಸರಿಯಾದ ಹೇಳಿಕೆಯನ್ನು '✓' ಸಂಕೇತದಿಂದ ಗುರುತಿಸಿ.

1. ಕ್ರಮ ಅಥವಾ ವ್ಯವಸ್ಥೆ ಜ್ಞಾನಶಿಸ್ತಿನ ಒಂದು ಅನಿವಾರ್ಯ ಅಂಗವಲ್ಲ.
2. ಜ್ಞಾನಶಿಸ್ತು ಕಲಿಕೆಗೆ ಸಂಬಂಧಿಸಿದೆ.

3. ಜ್ಞಾನಶಿಸ್ತು ಕಲಿಕೆಗಾಗಿ ಒಂದು ಕ್ರಮವನ್ನು ರೂಪಿಸುವಿಕೆಗೆ ಸಂಬಂಧಿಸಿದೆ.

4. ಜ್ಞಾನಶಿಸ್ತು ತಿಳಿಯುವ ಉದ್ದೇಶದಿಂದ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಸಂಬಂಧಿಸಿದೆ.

5. ಜ್ಞಾನಶಿಸ್ತು ಶಾಲಾ ಚಟುವಟಿಕೆಗಳನ್ನು ಯೋಜನಾಬದ್ಧಗೊಳಿಸುವ ಕೆಲವು ಪ್ರಯತ್ನಗಳನ್ನು ಒಳಗೊಂಡಿದೆ.

6. ಜ್ಞಾನಶಿಸ್ತು ಕಲಿಕೆಯನ್ನು ವ್ಯವಸ್ಥಿತಗೊಳಿಸುವ ಕೆಲವು ಪ್ರಯತ್ನಗಳನ್ನು ಒಳಗೊಂಡಿದೆ.

7. ಜ್ಞಾನಶಿಸ್ತು ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗಳಿಗೆ ಸಂಬಂಧಿಸಿದೆ.

## 1.1.3.3. ಶೈಕ್ಷಣಿಕ ಜ್ಞಾನಶಿಸ್ತುಗಳು–ಅರ್ಥ ಮತ್ತು ಸ್ವರೂಪ

ನಾವೀಗ 'ಶೈಕ್ಷಣಿಕ ಜ್ಞಾನಶಿಸ್ತು' ಎಂಬ ಪದದ ಅರ್ಥವನ್ನು ಅರಿಯೋಣ. ನೀವು ವಿಜ್ಞಾನ, ಮಾನವಿಕ ಶಾಸ್ತ್ರಗಳು, ಕಲೆ ಮುಂತಾದ ವಿವಿಧ ಶೈಕ್ಷಣಿಕ ಜ್ಞಾನಶಿಸ್ತುಗಳ ಬಗೆಗೆ ಕೇಳಿರುವಿರಿ. ಈ ವಿಷಯಗಳನ್ನು ಕುರಿತ ನಿಮ್ಮ ಅನುಭವಗಳನ್ನು ನೆನೆಪಿಸಿಕೊಂಡು ಶೈಕ್ಷಣಿಕ ಜ್ಞಾನಶಿಸ್ತುಗಳ ಅರ್ಥವೇನು ಎಂದು ಗುರುತಿಸುವ ಯತ್ನ ಮಾಡಿ.

"ಶೈಕ್ಷಣಿಕ ಜ್ಞಾನಶಿಸ್ತು" ಎಂಬ ಪದ ನಿಶ್ಚಿತವಾಗಿ ಮೇಲೆ ಚರ್ಚಿಸಿದ ಶಾಲಾ ವಿಷಯಗಳ ಹಲವು ಮೂಲಾಂಶಗಳನ್ನು ಒಳಗೊಂಡಿದೆ. ಅದೇ ಸಮಯದಲ್ಲಿ ಈ ಪದವು ಕಲಿಕೆಯ ಸಂಘಟನೆ ಮತ್ತು ವ್ಯವಸ್ಥಿತ ಜ್ಞಾನ ಉತ್ಪಾದನೆಗಳಿಗೂ ಒಂದು ತಾಂತ್ರಿಕ ಪದವಾಗಿ ಪರಿಣಮಿಸಿದೆ. ಸಾಧಾರಣವಾಗಿ ಬೋಧಿ ಸಲಾಗುವ ವಿಷಯಗಳೊಂದಿಗೆ ಜ್ಞಾನಶಿಸ್ತುಗಳನ್ನು ಗುರುತಿಸಲಾಗುತ್ತದೆಯಾದರೂ ವಿಶ್ವವಿದ್ಯಾನಿಲಯಗಳಲ್ಲಿ ಬೋಧಿಸಲಾಗುವ ಪ್ರತಿಯೊಂದು ವಿಷಯವನ್ನು "ಜ್ಞಾನಶಿಸ್ತು" ಎಂದು ಕರೆಯಲಾಗದು. "ಜ್ಞಾನಶಿಸ್ತು" ಎಂಬುದಕ್ಕೆ ಕೇವಲ ಶೈಕ್ಷಣಿಕ ಸನ್ನಿವೇಶದಲ್ಲಿ ಬೋಧಿಸಲ್ಪಡುವ ವಿಷಯ ಎಂದಷ್ಟೇ ಅಲ್ಲದೆ ಇನ್ನೂ ಅನೇಕ ಲಕ್ಷಣಗಳಿವೆ.

### ಶೈಕ್ಷಣಿಕ ಜ್ಞಾನಶಿಸ್ತುಗಳ ಲಕ್ಷಣಗಳು:

ಒಂದು ವಿಷಯವು ಪ್ರತ್ಯೇಕ ಜ್ಞಾನಶಿಸ್ತು ಎಂಬುದನ್ನು ಸೂಚಿಸಲು ನಿರ್ಣಾಯಕ ಅಂಶಗಳ ಲಕ್ಷಣಗಳ ಪಟ್ಟಿಯೇ ಇದೆ. ಅವು ಇಂತಿವೆ:

- ಜ್ಞಾನಶಿಸ್ತುಗಳ ಸಂಶೋಧನೆಗೆ ಒಂದು ವಿಷಯವಿರುತ್ತದೆ (ಉದಾ: ಕಾನೂನು, ಸಮಾಜ, ರಾಜಕೀಯ) ಆದಾಗ್ಯೂ ಈ ಸಂಶೋಧನೆಯ ವಿಷಯ ಮತ್ತೊಂದು ಜ್ಞಾನಶಿಸ್ತಿನಲ್ಲಿಯೂ ತನ್ನ ಸಹಭಾಗಿತ್ವವನ್ನು ಹೊಂದಿರಬಹುದು.

- ಜ್ಞಾನಶಿಸ್ತುಗಳು ತಮ್ಮ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ವಿಶೇಷ ಜ್ಞಾನದ ಸಂಗ್ರಹಿತ ರಾಶಿಯನ್ನು ಹೊಂದಿದ್ದು ಇದು ಆಯಾ ಜ್ಞಾನಶಿಸ್ತಿಗೆ ನಿರ್ದಿಷ್ಟವಾಗಿರುವುದಲ್ಲದೆ ಸಾಮಾನ್ಯವಾಗಿ ಮತ್ತೊಂದು ಜ್ಞಾನಶಿಸ್ತಿನ ಭಾಗವಾಗಿ ಕಂಡುಬರುವುದಿಲ್ಲ.

- ಜ್ಞಾನಶಿಸ್ತುಗಳು ತಮ್ಮ ಸಂಶೋಧನಾ ವಿಷಯಗಳಿಗೆ ಹೊಂದಿಕೆಯಾಗುವಂತಹ ಸುಸ್ಪಷ್ಟವಾದ ಪಾರಿಭಾಷಿಕ ಅಥವಾ ತಾಂತ್ರಿಕ ಶಬ್ದಗಳನ್ನು ಪ್ರಯೋಗಿಸುತ್ತವೆ.

- ಜ್ಞಾನಶಿಸ್ತುಗಳು ತಮ್ಮ ನಿರ್ದಿಷ್ಟ ಸಂಶೋಧನಾ ಅವಶ್ಯಕಕತೆಗಳಿಗೆ ತಕ್ಕಂತೆ ನಿರ್ದಿಷ್ಟ ಸಂಶೋಧನಾ ವಿಧಾನಗಳನ್ನು ವಿಕಾಸಗೊಳಿಸಿರುತ್ತವೆ.

- ಜ್ಞಾನಶಿಸ್ತುಗಳು ವಿಶ್ವವಿದ್ಯಾನಿಲಯ ಅಥವಾ ಕಾಲೇಜುಗಳಲ್ಲಿ ಆಯಾ ಶಾಸ್ತ್ರದ ವಿಭಾಗಗಳಲ್ಲಿ ಮತ್ತು ತತ್ಸಂಬಂಧಿತ ವೃತ್ತಿಪರ ಸಂಘಸಂಸ್ಥೆಗಳಲ್ಲಿ ಬೋಧಿಸಲಾಗುವ ವಿಷಯಗಳ ರೂಪದಲ್ಲಿ ಸಾಂಸ್ಥಿಕವಾದ ಮೂರ್ತರೂಪವನ್ನು ಹೊಂದಿರುತ್ತವೆ.

ಸಾಧಾರಣವಾಗಿ ಒಂದು ಜ್ಞಾನಶಿಸ್ತು ಎಷ್ಟೆಷ್ಟು ಈ ನಿರ್ಣಾಯಕ ಅಂಶಗಳನ್ನು ಹೊಂದಿರುವುದೋ ಅಷ್ಟಷ್ಟು ಆ ಶೈಕ್ಷಣಿಕ ಅನ್ವೇಷಣಾ ಕ್ಷೇತ್ರವು ಮಾನ್ಯತೆ ಪಡೆದ, ತನಗೆ ತಾನೇ ಬೆಳೆಯುವ, ವರ್ಧಿಸುತ್ತಿರುವ ವಿದ್ವತ್ ಸಂಗ್ರಹದ ಆಧಾರದ ಮೇಲೆ ನಿರ್ಮಾಣಗೊಳ್ಳುತ್ತಾ ಹೋಗುವ ಜ್ಞಾನಶಿಸ್ತಾಗುತ್ತದೆ. ಒಂದು ಜ್ಞಾನಶಿಸ್ತನ್ನು 'ಅಧ್ಯಯನ' ಎಂದು ಕರೆದರೆ, ಆಗ ಇದು ಸಾಮಾನ್ಯವಾಗಿ ಹೊಸ ಮೂಲದ್ದು ಎಂದಾಗುತ್ತದೆ (ಉದಾ: ಮಹಿಳಾ ಅಧ್ಯಯನ). ಅಲ್ಲದೆ ಇದು ಮೇಲೆ ಹೇಳಿದ ಒಂದು ಅಥವಾ ಒಂದಕ್ಕಿಂತ ಹೆಚ್ಚು ಲಕ್ಷಣಗಳನ್ನು ಹೊಂದಿಲ್ಲದೆ ಇರಬಹುದು, ಇದಕ್ಕೆ ಕಾರಣ ಸೈದ್ಧಾಂತೀರಕಣದ ಕೊರತೆ ಅಥವಾ ನಿರ್ದಿಷ್ಟ ವಿಧಾನ ಪ್ರಣಾಳಿಯ ಕೊರತೆ. ಈ 'ಅಧ್ಯಯನ ಶಾಸ್ತ್ರಗಳು' ಹಾಗೆಯೇ "ಅಶಾಸ್ತ್ರೀಯ"ವಾಗಿ ಉಳಿದುಕೊಳ್ಳಬಹುದು (ಉದಾಹರಣೆಗೆ 1970ರ ದಶಕದಲ್ಲಿ ಮಹಿಳಾ ಅಧ್ಯಯನಕ್ಕೆ ಆದಂತೆ) ಅಥವಾ ಅವು ಶಾಸ್ತ್ರೀಕರಣದ ಮತ್ತು ಸಂಸ್ಥೀಕರಣದ ಪ್ರಕ್ರಿಯೆಗೆ ತಮ್ಮನ್ನು ತಾವು ಒಳಪಡಿಸಿಕೊಳ್ಳಬಹುದು. ನಾವು ಈಗ ಈ ಕೆಳಗಿನಂತೆ ತೀರ್ಮಾನಿಸಬಹುದು:

- ವಿದ್ಯಾರ್ಥಿಗಳಿಗೆ (ಅಧ್ಯಯನ ಕಾರ್ಯಕ್ರಮದ ಸಲುವಾಗಿ) ಸಂರಚನೆಯನ್ನು, ವಿಶೇಷವಾಗಿ ಸ್ನಾತಕ ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಒದಗಿಸುವ ಕಲಿಕೆಯ ಒಂದು ಶಾಖೆ ಅಥವಾ ವಿದ್ವತ್ಪೂರ್ಣ ಅನ್ವೇಷಣೆಯೇ ಶೈಕ್ಷಣಿಕ ಜ್ಞಾನಶಿಸ್ತು.

- ಸಂಶೋಧನೆ ಮತ್ತು ವಿದ್ವತ್ತಿನ ಪುರೋಗತಿಗೆ ಸೂತ್ರೀಕರಿಸಿದ, ವಿಶ್ವವಿದ್ಯಾನಿಲಯ ಶೈಕ್ಷಣಿಕ ವಿಭಾಗದ ಅಂಗವಾಗಿರುವ ಕಲಿಕೆಯ ಕ್ಷೇತ್ರ ಅಥವಾ ಶಾಖೆಯೇ ಶೈಕ್ಷಣಿಕಶಾಸ್ತ್ರ.

- ಸಂಶೋಧಕರ, ವಿದ್ವತ್‌ಜನರ ಮತ್ತು ವಿಶೇಷಜ್ಞರ ವೃತ್ತಿಪರ ಪ್ರಶಿಕ್ಷಣಕ್ಕಾಗಿ ಶೈಕ್ಷಣಿಕ ಜ್ಞಾನಶಿಸ್ತನ್ನು ಸೂತ್ರೀಕರಿಸಲಾಗುತ್ತದೆ.

- ಶೈಕ್ಷಣಿಕ ಜ್ಞಾನಶಿಸ್ತು ಉನ್ನತಶಿಕ್ಷಣದ ಒಂದು ಭಾಗವಾಗಿ ಬೋಧಿಸಲಾಗುವ ಮತ್ತು ಸಂಶೋಧಿಸಲಾಗುವ ಜ್ಞಾನಶಾಖೆಯಾಗಿದೆ. ಶೈಕ್ಷಣಿಕ ಜ್ಞಾನಶಿಸ್ತುಗಳಿಗೆ ಉದಾಹರಣೆ ಮಾನವಶಾಸ್ತ್ರ, ಬಾಹ್ಯಾಕಾಶವಿಜ್ಞಾನ, ಮನಶ್ಶಾಸ್ತ್ರ, ಸಮಾಜಶಾಸ್ತ್ರ, ಪುರಾತತ್ವಶಾಸ್ತ್ರ, ಶಿಕ್ಷಣಶಾಸ್ತ್ರ ಇತ್ಯಾದಿ.

- ಶೈಕ್ಷಣಿಕ ಜ್ಞಾನಶಿಸ್ತು ಎಂದರೆ ಕಾಲೇಜು ಅಥವಾ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಬೋಧಿಸಲಾಗುವ ಮತ್ತು ಸಂಶೋಧಿಸಲಾಗುವ ಜ್ಞಾನದ ಉಪಶಾಖೆ.

- ಶೈಕ್ಷಣಿಕ ಜ್ಞಾನಶಿಸ್ತು ನಿರ್ದಿಷ್ಟ ವಿದ್ವತ್ಪೂರ್ಣ ವಿಷಯ ಕ್ಷೇತ್ರದೊಂದಿಗೆ ಅಥವಾ ಕಾಲೇಜು ವಿಭಾಗಕ್ಕೆ ಪ್ರಬಲ ಸಂಬಂಧ ಹೊಂದಿರುವ ಪರಿಣತಿ ವ್ಯಕ್ತಿಗಳು, ಯೋಜನೆಗಳು, ಸಮುದಾಯಗಳು, ಸವಾಲುಗಳು, ಅಧ್ಯಯನಗಳು, ಅನ್ವೇಷಣೆ, ಸಂಶೋಧನಾ ಕ್ಷೇತ್ರಗಳು ಮತ್ತು ಸೌಕರ್ಯಗಳನ್ನು ಒಳಗೊಳ್ಳುತ್ತದೆ.

ಉದಾಹರಣೆಗೆ, ವಿಜ್ಞಾನದ ಶಾಖೆಗಳನ್ನು ಸಾಧಾರಣವಾಗಿ ವೈಜ್ಞಾನಿಕ ಜ್ಞಾನಶಿಸ್ತುಗಳು ಎಂದು ಕರೆಯುತ್ತಾರೆ. ಉದಾಹರಣೆಗೆ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ.

- ಶೈಕ್ಷಣಿಕ ಜ್ಞಾನಶಿಸ್ತುಗಳೊಂದಿಗೆ ಸಂಬಂಧ ಹೊಂದಿರುವ ವ್ಯಕ್ತಿಗಳಿಗೆ ಸಾಧಾರಣವಾಗಿ ತಜ್ಞರು ಅಥವಾ ವಿಶೇಷಜ್ಞರು ಎನ್ನುತ್ತಾರೆ. ವಿಷಯವನ್ನು ಅಧ್ಯಯನ ಮಾಡಿರುವ, ಆದರೆ ಒಂದು ನಿರ್ದಿಷ್ಟ ಶೈಕ್ಷಣಿಕ ಜ್ಞಾನಶಿಸ್ತಿನಲ್ಲಿ ಕೇಂದ್ರೀಕೃತ ಅಧ್ಯಯನ ಕೈಗೊಳ್ಳದಿರುವ ಇತರರನ್ನು ಸಾಮಾನ್ಯಜ್ಞರೆಂದು ವರ್ಗೀಕರಿಸಲಾಗುತ್ತದೆ.

- ಶೈಕ್ಷಣಿಕ ಜ್ಞಾನಶಿಸ್ತುಗಳು ತಾವೇ ಹೆಚ್ಚು ಕಡಿಮೆ ಕೇಂದ್ರಿತ ಪದ್ಧತಿಗಳಾಗಿರುತ್ತವೆಯಾದರೆ, ವಿದ್ವತ್ಪೂರ್ಣ ಉಪಕ್ರಮಗಳಾದ ಬಹು ಶಿಸ್ತು, ಅಂತರ್ ಶಿಸ್ತು, ಅತೀತ ಶಿಸ್ತು, ಮಿಶ್ರ ಶಿಸ್ತು ಇವೇ ಮೊದಲಾದವುಗಳು ಒಂದಕ್ಕಿಂತ ಹೆಚ್ಚು ಶೈಕ್ಷಣಿಕ ಜ್ಞಾನಶಿಸ್ತುಗಳ ಅಂಶಗಳನ್ನು ಏಕೀಕೃತಗೊಳಿಸುತ್ತದೆ. ವಿಶಿಷ್ಟ ಅಧ್ಯಯನ ಕ್ಷೇತ್ರದೊಳಗೆ ಆಗುವ ಕೇಂದ್ರೀಕರಣದಿಂದ ಉದ್ಭವಿಸುವ ಸಮಸ್ಯೆಗಳನ್ನು ಅವು ಪರಿಹರಿಸುತ್ತವೆ.

- ಶೈಕ್ಷಣಿಕ ಜ್ಞಾನಶಿಸ್ತನ್ನು ಅಧ್ಯಯನ ಕ್ಷೇತ್ರವೆಂದೂ ಕರೆಯುತ್ತಾರೆ. ಅನ್ವೇಷಣಾ ಕ್ಷೇತ್ರ, ಸಂಶೋಧನಾ ಕ್ಷೇತ್ರ ಮತ್ತು ಜ್ಞಾನ ಶಾಖೆ ಇವು ಬೇರೆ ಬೇರೆ ದೇಶಗಳಲ್ಲಿ, ಕ್ಷೇತ್ರಗಳಲ್ಲಿ "ಜ್ಞಾನಶಿಸ್ತು" ಎಂಬುದನ್ನು ಸೂಚಿಸಲು ಬಳಸುವ ವಿವಿಧ ಪದಗಳಾಗಿವೆ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–3

ಸರಿಯಾದ ಹೇಳಿಕೆಯನ್ನು '✓' ಸಂಕೇತದಿಂದ ಗುರುತಿಸಿ.

1. ಒಂದು ಜ್ಞಾನಶಿಸ್ತಿನ ಸಂಶೋಧನಾ ವಿಷಯವನ್ನು ಮತ್ತೊಂದು ಜ್ಞಾನಶಿಸ್ತಿನೊಂದಿಗೆ ಹಂಚಿಕೊಳ್ಳಲಾಗದು.

2. ಜ್ಞಾನಶಿಸ್ತುಗಳು ತಮಗೆ ನಿರ್ದಿಷ್ಟವೂ  ಮತ್ತೊಂದು ಶಾಸ್ತ್ರದೊಂದಿಗೆ ಹಂಚಿಕೊಳ್ಳಲಾಗದಂತಹುದೂ ಆದ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ವಿಶೇಷ ಜ್ಞಾನ ಸಂಗ್ರಹದ ರಾಶಿಯನ್ನು ಹೊಂದಿರುತ್ತವೆ.

3. ಜ್ಞಾನಶಿಸ್ತುಗಳು ಸಿದ್ಧಾಂತಗಳಿಂದ ಮತ್ತು ಪರಿಕಲ್ಪನೆಗಳಿಂದ ಮುಕ್ತವಾಗಿರುವುದು.

4. ಜ್ಞಾನಶಿಸ್ತುಗಳು ತಮ್ಮ ಸಂಶೋಧನಾ ವಿಷಯಗಳಿಗೆ ಹೊಂದಿಕೆಯಾಗುವ ನಿರ್ದಿಷ್ಟ ಪಾರಿಭಾಷಿಕ ಶಬ್ದಗಳನ್ನು ಮತ್ತು ನಿರ್ದಿಷ್ಟ ತಾಂತ್ರಿಕ ಭಾಷೆಯನ್ನು ಉಪಯೋಗಿಸುತ್ತದೆ.

5. ಸಂಶೋಧನೆಯ ಕಾರ್ಯಪ್ರಣಾಳಿ ಜ್ಞಾನಶಿಸ್ತಿಗೆ ನಿರ್ದಿಷ್ಟವಾಗಿರುವುದಿಲ್ಲ.

6. ಜ್ಞಾನಶಿಸ್ತುಗಳು ವಿಶ್ವವಿದ್ಯಾನಿಲಯಗಳಲ್ಲಿ ಅಥವಾ ಕಾಲೇಜುಗಳಲ್ಲಿ, ಆಯಾ ಶೈಕ್ಷಣಿಕ ವಿಭಾಗಗಳಲ್ಲಿ ಮತ್ತು ತತ್ಸಂಬಂಧಿತ ವೃತ್ತಿಪರ ಸಂಘಸಂಸ್ಥೆಗಳಲ್ಲಿ ಬೋಧಿಸಲಾಗುವ ವಿಷಯಗಳ ರೂಪದಲ್ಲಿನ ಸಾಂಸ್ಥಿಕ ಮೂರ್ತ ಸ್ವರೂಪ ಉಳ್ಳದ್ದಾಗಿರಬೇಕು.

## 1.1.4. ಸಾರಾಂಶಿಸೋಣ

- ಶಾಲಾ ಪಠ್ಯವಿಷಯ ಎಂದರೆ ಶಾಲೆಯಲ್ಲಿ ಅಧ್ಯಯನ ಮಾಡಲಾಗುವ ಜ್ಞಾನ ಕ್ಷೇತ್ರ. ನಮ್ಮ ಕಲಿಕೆಯ ಒಂದು ಉಪಕರಣವೆಂದು ಅಥವಾ ನಿರ್ಣಾಯಕ ಅಂಶವೆಂದು ಇದನ್ನು ಕರೆಯಬಹುದು.

- ಜ್ಞಾನಶಿಸ್ತು ಎಂಬ ಪದಕ್ಕೆ ಯಾವುದೇ ಒಂದು ಸಮಗ್ರ ಪರಿಭಾಷೆಯಿಲ್ಲ.
- ಒಂದು ಶಾಲಾ ಪಠ್ಯವಿಷಯವು ಪಠ್ಯಕ್ರಮ ವಸ್ತು, ಬೋಧನೆ ಮತ್ತು ಕಲಿಕಾ ಚಟುವಟಿಕೆಗಳಿಗೆ ಒಂದು ಅರ್ಥವನ್ನು ಹಾಗೂ ರೂಪವನ್ನು ಕೊಡುವ ಸಂಯೋಜಕ ಚೌಕಟ್ಟನ್ನು ಒಳಗೊಳ್ಳುತ್ತದೆ.
- ಜ್ಞಾನಶಿಸ್ತು ಎಂಬುದು ಕಲಿಕೆಯ ಸಂಯೋಜನೆ ಮತ್ತು ಹೊಸಜ್ಞಾನದ ವ್ಯವಸ್ಥಿತ ಉತ್ಪಾದನೆಗೆ ತಾಂತ್ರಿಕ ಪದವಾಗಿದೆ.
- "ಶೈಕ್ಷಣಿಕ ಜ್ಞಾನಶಿಸ್ತು" ಎಂಬ ಪದ ನಿಶ್ಚಿತವಾಗಿಯೂ 'ಶಿಸ್ತು' ಎಂಬ ಪದದ ಅರ್ಥದ ಹಲವು ಮೂಲಾಂಶಗಳನ್ನು ಒಳಗೊಳ್ಳುತ್ತದೆ. ಇದು ಕಲಿಕೆಯ ಸಂಯೋಜನೆ ಮತ್ತು ಹೊಸ ಜ್ಞಾನದ ವ್ಯವಸ್ಥಿತ ಉತ್ಪಾದನೆಗೆ ಒಂದು ತಾಂತ್ರಿಕ ಶಬ್ದವಾಗಿದೆ.

## 1.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 1,2 ಮತ್ತು 3–ಉತ್ತರಗಳು

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1

ಕಲಿಕಾ ಸಾಮಾಗ್ರಿ ಭಾಗ 1.1.3.1 ನ್ನು ನೋಡಿ

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2

2,3,6, ಮತ್ತು 7

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–3

2,4, ಮತ್ತು 6

## 1.1.6. ಘಟಕಾಂತ್ಯ ಅಭ್ಯಾಸಗಳು

1. ಶಾಲಾ ಪಠ್ಯವಿಷಯ, ಜ್ಞಾನಶಿಸ್ತುಗಳು ಮತ್ತು ಶೈಕ್ಷಣಿಕ ಜ್ಞಾನಶಿಸ್ತುಗಳ ಅರ್ಥ ಮತ್ತು ಸ್ವರೂಪವನ್ನು ವಿವರಿಸಿ

## 1.1.7. ಪರಾಮರ್ಶನ ಸೂಚಿ


1. https://www.researchgate.net/publication/284157807_School_ subjects_and_ academic_disciplines_the_differences
2. Areekkuzhiyil, Santhosh . (2017). Understanding Discipline and Subjects. Hyderabad: Neelkamel Publishers.
3. Deng, Z (2013), School subjects and academic disciplines. In A Luke, A woods & K weir (Eds.), Curriculum, Syllabus design and equity: A primer and model. Routledge
4. Dirks, Arthur L. (1996). Organization of knowledge: The emergence of academic specialty in America. Published on-line by author. Retrieved June 25, 2016 from: http://webhost.bridgew.edu/adirks/ald/papers/orgknow.htm

5. Hirst, P.H. (1964). Knowledge and Curriculum. London: Routledge and Kegan Paul.

6. Ivor F. Goodson and Colin J. Marsh, Studying school subjects, A guide (1996), Routledge

7. Piaget, J. (1972). The Epistemology of Interdisciplinary Relationships. Paris: Organization for Economic Cooperation and Development.

8. Sabarish-P (2015). Understanding Disciplines And Subjectshttp://sabarishedn.blogspot.com/? m=1, Thrissur.

9. https://www.academia.edu/12584884/Deng_Z._2012_._ School_subjects_and_academic_ disciplines_the_differences._In_A ._Luke_K._Weir_A._Woods_and_M._Moroney_Eds._Curriculum_Syllabus_ Design_and_Equity_A_Primer_and_Model_pp.40-73_._New_York_Routledge

*************

# ಬ್ಲಾಕ್ 1 : ಜ್ಞಾನಶಿಸ್ತುಗಳು ಮತ್ತು ಶಾಲಾ ವಿಷಯಗಳಿಗೆ ಪೀಠಿಕೆ

## ಘಟಕ 2 : ಶಾಲಾ ವಿಷಯ ಮತ್ತು ಶೈಕ್ಷಣಿಕ ಶಿಸ್ತುಗಳ ನಡುವಿನ ಸಂಬಂಧ ಮತ್ತು ವ್ಯತ್ಯಾಸಗಳು

### ಘಟಕದ ರಚನೆ


1.2.1. ಕಲಿಕೆಯ ಉದ್ದೇಶಗಳು

1.2.2. ಪೀಠಿಕೆ

1.2.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.2.3.1. ಶಾಲಾ ಪಠ್ಯವಿಷಯಗಳು ಮತ್ತು ಶೈಕ್ಷಣಿಕ ಜ್ಞಾನಶಿಸ್ತುಗಳು–ವ್ಯತ್ಯಾಸಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1.2.3.2. ಶಾಲಾ ಪಠ್ಯವಿಷಯಗಳು ಮತ್ತು ಶೈಕ್ಷಣಿಕ ಜ್ಞಾನಶಿಸ್ತುಗಳು – ಸಂಬಂಧಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ– 2

1.2.4. ಸಾರಾಂಶಿಸೋಣ

1.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

1.2.6. ಘಟಕಾಂತ್ಯ ಅಭ್ಯಾಸಗಳು

1.2.7. ಪರಾಮರ್ಶನ ಸೂಚಿ


### 1.2.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶಾಲಾ ಪಠ್ಯವಿಷಯಗಳು ಮತ್ತು ಶೈಕ್ಷಣಿಕ ಶಾಸ್ತ್ರಗಳು – ಇವೆರಡರ ನಡುವಣ ವ್ಯತ್ಯಾಸಗಳನ್ನು ಗುರುತಿಸುವರು;
- ಶಾಲಾ ಪಠ್ಯವಿಷಯಗಳು ಮತ್ತು ಶೈಕ್ಷಣಿಕ ಶಾಸ್ತ್ರಗಳು ಇವೆರಡರ ನಡುವಣ ಸಂಬಂಧವನ್ನು ಸ್ಪಷ್ಟೀಕರಿಸುವರು; ಮತ್ತು
- ಶಾಲಾ ಪಠ್ಯವಿಷಯಗಳನ್ನು ಮತ್ತು ಶೈಕ್ಷಣಿಕ ಶಾಸ್ತ್ರಗಳನ್ನು ಗುರುತಿಸುವರು.

### 1.2.2. ಪೀಠಿಕೆ

ನೀವು ವಿಷಯ, ಶಾಲಾ ಪಠ್ಯವಿಷಯ, ಜ್ಞಾನಶಿಸ್ತು ಮತ್ತು ಶೈಕ್ಷಣಿಕ ಜ್ಞಾನಶಿಸ್ತು ಇವುಗಳ ಪರಿಕಲ್ಪನೆಗಳ ಬಗ್ಗೆ ಪರಿಚಿತರಾಗಿದ್ದೀರಿ. ಈ ಪರಿಕಲ್ಪನೆಗಳು ಪರಸ್ಪರ ಸಂಬಂಧವುಳ್ಳವೂ ಆಗಿವೆ, ಕೆಲವು ವ್ಯತ್ಯಾಸವುಳ್ಳವೂ ಆಗಿವೆ. ಈ ವ್ಯತ್ಯಾಸ ಮತ್ತು ಸಮಾನತೆಗಳನ್ನು ಕುರಿತ ಅರಿವು ನಮಗಿರಬೇಕಾದ್ದು ಅವಶ್ಯಕ. ಕಾರಣ, ಕಲಿಕೆ ಮತ್ತು ಬೋಧನೆಗಳಿಗೆ ಸಂಬಂಧಿಸಿದಂತೆ ಇವುಗಳಿಂದ ಕೆಲವು ಪರಿಣಾಮಗಳು ಉಂಟಾಗುತ್ತವೆ. ನಿಮ್ಮ ಬೋಧನೆಯು ಬೋಧಿಸುತ್ತಿರುವ ವಸ್ತುವಿನ ಸ್ವರೂಪವನ್ನು ಅವಲಂಬಿಸಿರುತ್ತದೆ. ಆದ್ದರಿಂದ ಶಿಕ್ಷಕ ತಾನು ಬೋಧಿಸುತ್ತಿರುವುದು

ಶಾಲಾ ಪಠ್ಯವಿಷಯವೋ ಅಥವಾ ಶೈಕ್ಷಣಿಕ ಜ್ಞಾನಶಿಸ್ತೋ ಎಂದು ತಿಳಿದಿರಬೇಕಾಗುತ್ತದೆ. ಶೈಕ್ಷಣಿಕ ಜ್ಞಾನಶಿಸ್ತುಗಳ ಬೋಧನೆಗೆ ಪಠ್ಯವಿಷಯವನ್ನು ಬೋಧಿಸುವುದಕ್ಕೆ ಬೇಕಾದ ವರ್ತನೆಗಳ ಸಮೂಹಕ್ಕಿಂತ ಭಿನ್ನವಾದುದರ ಅಗತ್ಯವಿರುತ್ತದೆ. ಶೈಕ್ಷಣಿಕ ವಿಷಯದ ಬೋಧನಾ ಯೋಜನೆ ಶೈಕ್ಷಣಿಕ ಜ್ಞಾನಶಿಸ್ತಿಗೆ ಬಳಸುವ ಬೋಧನಾ ಯೋಜನೆಗಿಂತ ಸಡಿಲವಾಗಿರುತ್ತದೆ. ನಾವೀಗ ಒಂದು ದೃಷಾಂತವನ್ನು ನೋಡೋಣ. ಶಿಕ್ಷಕರೊಬ್ಬರು ಶಾಸ್ತ್ರ ಆಧಾರಿತ ಭೌತಶಾಸ್ತ್ರ ತರಗತಿಯಲ್ಲಿ 'ಅಯಸ್ಕಾಂತದ ಗುಣಗಳು' ಎಂಬುದರ ಬಗ್ಗೆ ಬೋಧಿಸುತ್ತಿದ್ದಾರೆ ಎಂದು ಭಾವಿಸಿ. ಇದಕ್ಕೆ ಬೇಕಾದ ಪ್ರಾಥಮಿಕ ಹಾಗೂ ಬಹುಮುಖ್ಯ ವಿಧಾನ ಎಂದರೆ ವೀಕ್ಷಣೆ. ವಿದ್ಯಾರ್ಥಿಗಳಿಗೆ ಅಯಸ್ಕಾಂತದ ಗುಣಗಳನ್ನು ಪ್ರಾಯೋಗಿಕವಾಗಿ ತೋರದೆ ಈ ಶೀರ್ಷಿಕೆಯ ಬಗ್ಗೆ ಪಾಠ ಮಾಡಲು ಆಗುವುದಿಲ್ಲ. ಆದರೆ, 'ಮಹಿಳಾ ಅಧ್ಯಯನ'(ಅಧ್ಯಯನದ ವಿಷಯ) ದ ಬಗ್ಗೆ ಬೋಧಿಸುವಾಗ ಶಿಕ್ಷಕರು ಪ್ರಸ್ತುತ ಸಮಾಜದಲ್ಲಿ ಮಹಿಳೆಯರ ಸ್ಥಾನವೇನು ಎಂದು ಚರ್ಚೆಯಿಂದ ಅಥವಾ ವೀಡಿಯೋ ತೋರಿಸುವುದರ ಮೂಲಕ ಪಾಠವನ್ನು ಆರಂಭಿಸಬಹುದು. ಪ್ರಸ್ತುತ ಘಟಕದಲ್ಲಿ ಶಾಲಾ ಪಠ್ಯವಿಷಯಗಳು ಮತ್ತು ಶೈಕ್ಷಣಿಕ ಜ್ಞಾನಶಿಸ್ತು ಇವುಗಳ ನಡುವಣ ಸಂಬಂಧ ಮತ್ತು ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳೋಣ.

## 1.2.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.2.3.1. ಶಾಲಾ ಪಠ್ಯವಿಷಯಗಳು ಮತ್ತು ಶೈಕ್ಷಣಿಕ ಜ್ಞಾನಶಿಸ್ತುಗಳು – ಸಂಬಂಧ

ನಾವೀಗ 'ಜ್ಞಾನಶಿಸ್ತು'ಎಂಬ ಪದದಿಂದ ಆರಂಭಿಸೋಣ. ಮೇಲೆ ಹೇಳಿದಂತೆ, ಜ್ಞಾನಶಿಸ್ತು ಎಂಬುದು ಶಾಸ್ತ್ರೀಯ ಅಧ್ಯಯನದ ಒಂದು ಶಾಖೆಗೆ ಸಂಬಂಧಿಸಿರುತ್ತದೆ. ದೃಷ್ಟಾಂತಗಳೆಂದರೆ ಸಮಾಜವಿಜ್ಞಾನ, ಮಾನವ ಶಾಸ್ತ್ರ, ಗಣಿತ ಮತ್ತು ತತ್ವಶಾಸ್ತ್ರ –ಇವೆಲ್ಲವೂ ಶಿಸ್ತುಗಳು. ಇವುಗಳನ್ನು ನಾವು ವಿಶ್ವವಿದ್ಯಾನಿಲಯದಂತಹ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕಾಣಹುದು. ಅಂದಮಾತ್ರಕ್ಕೆ ಶಾಲೆಗಳಂತಹ ಅನ್ಯ ಶೈಕ್ಷಣಿಕ ಸನ್ನಿವೇಶಗಳಲ್ಲಿ ಜ್ಞಾನಶಿಸ್ತುಗಳು ಕಂಡುಬರುವುದಿಲ್ಲ ಎಂದರ್ಥವಲ್ಲ. ಗಣಿತವು ಶಾಲಾ ಪಠ್ಯವಿಷಯವೂ ಹೌದು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕಂಡು ಬರುವ ಶಿಸ್ತೂ ಹೌದು.

ಸಾಮಾನ್ಯವಾಗಿ ಜ್ಞಾನಶಿಸ್ತುಗಳು ಸೈದ್ಧಾಂತಿಕ ಹಿನ್ನೆಲೆ, ಸಂಶೋಧನೆ ಮತ್ತು ಪ್ರಯೋಗಗಳು, ಜ್ಞಾನಶಿಸ್ತುಗಳಲ್ಲಿ ಪರಿಣತಿವುಳ್ಳ ವಿಶೇಷಜ್ಞರ ತಂಡ – ಇವೆಲ್ಲವನ್ನೂ ಒಳಗೊಂಡಿರುತ್ತದೆ. ಉದಾಹರಣೆಗೆ ಒಂದು ನಿರ್ದಿಷ್ಟ ಜ್ಞಾನಶಿಸ್ತಿನಲ್ಲಿ ತನ್ನ ಅಧ್ಯಯನವನ್ನು ಕೈಗೊಳ್ಳುತ್ತಿರುವ ವ್ಯಕ್ತಿ ಅದರ ಆಳವಾದ ಅರಿವನ್ನು ಪಡೆಯುವುದರೊಂದಿಗೆ ಅದಕ್ಕೆ ಸಂಬಂಧಿಸಿದ ಪ್ರಯೋಗಗಳನ್ನು ಮತ್ತು ಸಂಶೋಧನೆಗಳನ್ನು ಕೈಗೊಳ್ಳುತ್ತಾನೆ. ಅಂತಹ ವ್ಯಕ್ತಿಯನ್ನು ಆಯ್ದ ಶಿಸ್ತಿನಲ್ಲಿ ವಿಶೇಷ ಜ್ಞಾನ ಸಂಪಾದನೆ ಮಾಡುತ್ತಿರುವ ವ್ಯಕ್ತಿ ಎಂದು ಪರಿಗಣಿಸುತ್ತೇವೆ.

- ಶಾಲಾ ಪಠ್ಯವಿಷಯಗಳು ಕಲಿಕಾರ್ಥಿಗಳನ್ನು ಶೈಕ್ಷಣಿಕ ಜ್ಞಾನಶಿಸ್ತುಗಳಲ್ಲಿ ವಿಶೇಷಜ್ಞರನ್ನಾಗಿ ಮಾಡುವ ಮೂಲಭೂತ ಮಾಹಿತಿಯ ವಿಕಾಸಕ್ಕೆ ಆಧಾರವಾಗಿವೆ. ಒಂದು ಶೈಕ್ಷಣಿಕ ಜ್ಞಾನಶಿಸ್ತು ಪರಿವರ್ತಿತಗೊಂಡು ಶಾಲಾ ಪಠ್ಯವಿಷಯವಾಗಿ ಪರಿಣಮಿಸುತ್ತದೆ. ಶಾಲೆಯಿಂದ ವಿಶ್ವವಿದ್ಯಾನಿಲಯದವರೆಗೆ ವಿದ್ಯಾರ್ಥಿಯು ಕೈಗೊಳ್ಳುವ ಕಲಿಕೆಯ ಪಯಣದಲ್ಲಿ ಶಾಲಾ ಪಠ್ಯವಿಷಯಗಳು ಮೊದಲು ಬಂದು ತರುವಾಯ ಶೈಕ್ಷಣಿಕ ಜ್ಞಾನಶಿಸ್ತುಗಳನ್ನು ಹೇಳಿಕೊಡಲಾಗುತ್ತದೆ. ಒಂದು ಶೈಕ್ಷಣಿಕ ಜ್ಞಾನಶಿಸ್ತು ಶಾಲಾ ಪಠ್ಯವಿಷಯವನ್ನು ರೂಪುಗೊಳಿಸಲು ಅಂತಿಮ ಬಿಂದುವನ್ನು ಒದಗಿಸುತ್ತದೆ. ಶಾಲಾ ಪಠ್ಯಷಯವು ಶೈಕ್ಷಣಿಕ ಜ್ಞಾನಶಿಸ್ತನ್ನು ತಿಳಿದುಕೊಳ್ಳಲು ಮಾರ್ಗತೋರುತ್ತದೆ.
- ಶಾಲಾ ಪಠ್ಯವಿಷಯಗಳು ತಮ್ಮ ಗುರಿಗಳನ್ನು ವಿಷಯವಸ್ತುಗಳು ಮತ್ತು ವಿಕಾಸ ಹಂತಗಳನ್ನು ಆಧರಿಸಿ ಶೈಕ್ಷಣಿಕ ಜ್ಞಾನಶಿಸ್ತುಗಳೊಂದಿಗೆ ವಿವಿಧ ರೀತಿಯ ಸಂಬಂಧಗಳನ್ನು ಹೊಂದಿರುತ್ತವೆ. ಶಾಲಾ ಪಠ್ಯವಿಷಯಗಳು ಶೈಕ್ಷಣಿಕ ಜ್ಞಾನಶಿಸ್ತುಗಳಿಂದ ಉತ್ಪನ್ನಗೊಳ್ಳುತ್ತವೆ. ಇವುಗಳು ಶೈಕ್ಷಣಿಕ ಜ್ಞಾನಶಿಸ್ತುಗಳ ಸಂರಚನೆಗೆ ಅನುಸಾರವಾಗಿ ಯೋಜಿತವಾಗಿರುತ್ತವೆ. ಉದಾಹರಣೆಗೆ, ಇತಿಹಾಸ

ಒಂದು ಶಾಲಾ ಪಠ್ಯವಿಷಯವಾಗಿ "ಮಾನವಿಕ ಶಾಸ್ತ್ರ"ದಿಂದ ವ್ಯುತ್ಪನ್ನಗೊಂಡಿದೆ ಮತ್ತು ಇತಿಹಾಸ (ಒಂದು ಶಾಲಾ ಪಠ್ಯವಿಷಯ) ಮತ್ತು ಮಾನವಿಕ ಶಾಸ್ತ್ರ (ಒಂದು ಜ್ಞಾನಶಿಸ್ತು)– ಇವೆರಡೂ ಸಂರಚನೆಯ ದೃಷ್ಟಿಯಿಂದ ವಿವರಣಾತ್ಮಕವೇ ಆಗಿವೆ. ಅರ್ಥಾತ್, ಇವೆರಡೂ ಸಂದರ್ಭಗಳಲ್ಲಿ 'ವಿವರಣಾತ್ಮಕತೆ' ಅವುಗಳ ಸ್ವರೂಪವಾಗಿದೆ.

- ಒಂದು ಜ್ಞಾನಶಿಸ್ತಾಗಿ ವಿಜ್ಞಾನವು ನಿಗಮನಾತ್ಮಕ ಉಪಕ್ರಮದಿಂದ ಸತ್ಯವನ್ನು ನಿಗಮನ ಮಾಡುತ್ತದೆ ಹಾಗೂ ಈ ಅಂಶವು ಶಾಲಾ ಪಠ್ಯವಿಷಯವಾದ ಭೌತಶಾಸ್ತ್ರಕ್ಕೂ ಅನ್ವಯಿಸುತ್ತದೆ.
- ಶಾಲಾ ಪಠ್ಯವಿಷಯಗಳು ಶೈಕ್ಷಣಿಕ ಶಿಸ್ತುಗಳಿಗೆ ವಿಶ್ವಸನೀಯ ಮತ್ತು ಪ್ರಾಮಾಣಿಕ ಪೀಠಿಕೆಗಳಾಗಿವೆ. ಶಾಲಾ ಪಠ್ಯವಿಷಯಗಳಲ್ಲಿ ವಿದ್ಯಾರ್ಥಿಗಳು ಸಾಪೇಕ್ಷವಾಗಿ ಸರಳ ಪರಿಕಲ್ಪನೆಗಳನ್ನು, ವಿಧಾನಗಳನ್ನು ಕಲಿಯುತ್ತಾರೆ. ಮುಂದೆ ಇದೇ ಪರಿಕಲ್ಪನೆಗಳನ್ನು, ವಿಧಾನಗಳನ್ನು ಆ ಶೈಕ್ಷಣಿಕ ಜ್ಞಾನಶಿಸ್ತಿನ ತಜ್ಞರು ಅರಿತಿರುವ ರೀತಿಯಲ್ಲಿ ಅಧ್ಯಯನ ಮಾಡುತ್ತಾರೆ. ನಾವು ಪಠ್ಯಕ್ರಮ ಸಂಯೋಜನೆಯಲ್ಲಿ ವರ್ತುಲ ಉಪಕ್ರಮವನ್ನು ಅನುಸರಿಸುತ್ತೇವೆ ಎಂಬುದನ್ನು ನೆನಪಿಸಿ. ಅಲ್ಲಿ, ಒಂದು ಶಾಲಾ ಪಠ್ಯವಿಷಯವು ಜ್ಞಾನಶಿಸ್ತಾಗಿ ವೃದ್ಧಿಗೊಳ್ಳುವುದು ಎಂಬುದನ್ನು ಕಾಣಬಹುದು.




ಈ ಕೆಳಗಿನ ಶೈಕ್ಷಣಿಕ ಕೋಷ್ಟಕದಿಂದ ಶಾಲಾ ಪಠ್ಯವಿಷಯಗಳು ಮತ್ತು ಶೈಕ್ಷಣಿಕ ಜ್ಞಾನಶಿಸ್ತುಗಳ ನಡುವಣ ವ್ಯತ್ಯಾಸಗಳನ್ನು ಅರಿಯಲು ಪ್ರಯತ್ನಿಸಿ.

| ಕ್ಷೇತ್ರಗಳು | ಶಾಲಾ ಪಠ್ಯವಿಷಯಗಳು | ಶೈಕ್ಷಣಿಕ ಜ್ಞಾನಶಿಸ್ತುಗಳು |
|---|---|---|
| ಗುರಿ | ಸಾಮಾಜಿಕ ಸುಧಾರಣೆ ಮತ್ತು ಪುನರ್ ಸಂರಚನೆಯ ಗುರಿ ಹೊಂದಿದೆ. | ವಿದ್ಯಾರ್ಥಿಗಳ ಬೌದ್ಧಿಕ ಕ್ಷಮತೆಯ ವಿಕಾಸ ಹಾಗೂ ಶೈಕ್ಷಣಿಕ ಸಂಸ್ಕೃತಿ/ಜ್ಞಾನಗಳ ಅನುಪಾಲನೆ/ಪುನರುತ್ಪಾದನೆ. |
| ವಿಷಯ ವಸ್ತು | ಸರಳ ವಿಚಾರಗಳಿಂದ ಮತ್ತು ಮಾಹಿತಿಗಳಿಂದ ರೂಪಿಸಲ್ಪಡುತ್ತದೆ. ಪ್ರಾಯೋಗಿಕ ಜ್ಞಾನ ಮತ್ತು ಸ್ಥಳೀಯ ಸಮುದಾಯಿಕ ಜ್ಞಾನ ಮತ್ತು ತಾಂತ್ರಿಕ ಜ್ಞಾನಗಳನ್ನು ಒಳಗೊಳ್ಳುತ್ತದೆ. | ಸಂಕೀರ್ಣ ಸಿದ್ಧಾಂತಗಳು ಮತ್ತು ಅವುಗಳ ನಿಹಿತಾರ್ಥಗಳು, ಶಾಸ್ತ್ರಕ್ಕೆ ಸಂಬಂಧಿಸಿದ ಮತ್ತು ಅಂತರ್ ಶಾಸ್ತ್ರಗಳಿಗೆ ಸಂಬಂಧಿಸಿದ ವಿಷಯವಸ್ತು. |

| | | |
|---|---|---|
| ಗಮನ ಕೇಂದ್ರ | ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಆವಶ್ಯಕತೆಗಳನ್ನು ಪೂರೈಸುವತ್ತ ಹೆಚ್ಚಿನ ಕಾಳಜಿ. | ಶಿಸ್ತೀಯ ವಿಷಯವಸ್ತುವಿನ ಕಲಿಕೆಗೆ ಹೆಚ್ಚಿನ ಕಾಳಜಿ, ಶಾಲಾ ಪಠ್ಯ ವಿಷಯಗಳಿಗೆ ಹೋಲಿಸಿದಾಗ ಗಮನ ಕೇಂದ್ರವು ಸೀಮಿತ ಆದರೆ ಶಾಸ್ತ್ರದ ಆಳವಾದ ಅರಿವಿನತ್ತ ಗಮನವು ಕೇಂದ್ರಿತ ವಾಗಿದೆ ಶಿಸ್ತಿಯ ಪರಿಧಿಯಲ್ಲಿಯೇ ಕಾರ್ಯ ಪ್ರವೃತ್ತವಾಗಿರುತ್ತದೆ. |
| ದಕ್ಷತೆಗಳು, ಕೌಶಲ್ಯಗಳು | ಸಂವಹನ, ಗ್ರಹಿಕೆ ಇವೇ ಮುಂತಾದ ಸಮಾಜದಲ್ಲಿ ಜೀವಿಸಲು ಅವಶ್ಯಕವಾಗಿ ವ್ಯಕ್ತಿಗೆ ಬೇಕಾದ ಕೌಶಲ್ಯಗಳು. | ಪ್ರಯೋಗ ಪರೀಕ್ಷೆ, ವೀಕ್ಷಣೆ ಇತ್ಯಾದಿ ಜ್ಞಾನಶಿಸ್ತಿನ ಅರ್ಥಮಾಡಿಕೊಳ್ಳುವಿಕೆ ಮತ್ತು ಅಧ್ಯಯನಗಳಿಗೆ ಸಂಬಂಧಿಸಿದ ಸಾಮರ್ಥ್ಯಗಳು. |
| ಫಲಿತಾಂಶ | ವ್ಯಕ್ತಿ ಉತ್ತಮು ನಾಗರಿಕನಾಗುವನು, ಮೂಲಭೂತ ಕೌಶಲ್ಯಗಳ ವಾಚನ, ಬರವಣಿಗೆ ಮತ್ತು ಅಂಕಗಣಿತಗಳ ಕಲಿಕೆ. | ವಿಶೇಷ ಕೌಶಲ್ಯಗಳ ಹಲವು ವೃತ್ತಿಪರ ಮತ್ತು ಔದ್ಯೋಗಿಕ ಕೌಶಲ್ಯಗಳ ವಿಕಾಸಕ್ಕೆ ಒತ್ತು ನೀಡುವಿಕೆ, ತನ್ನದೇ ಆದ ಚಿಂತನೆಯ ಮೂಲಕ ಶಿಸ್ತೀಯ ಜ್ಞಾನದ ಸಂವರ್ಧನೆ. |
| ವ್ಯಾಪ್ತಿ | ಗುರಿಗಳು ವಿಶಾಲ ಅಡಿಪಾಂಯುದ ಮೇಲಿರುವುದರಿಂದ ವ್ಯಾಪ್ತಿಂಯೂ ವಿಶಾಲವಾದುದು. | ವಿಷಯಕ್ಕೆ ಸೀಮಿತವಾದ ವ್ಯಾಪ್ತಿ, ಶಾಲಾ ಪಠ್ಯವಿಷಯಗಳಿಗೆ ಹೋಲಿಸಿದಾಗ ಸೀಮಿತ ದೃಷ್ಟಿಕೋನ. |
| ಸ್ವರೂಪ | ನಮ್ಯತೆ: ಸಮಾಜ ಬದಲಾದ ಹಾಗೆ ಬದಲಾಗುವುದು | ನಮ್ಯತೆಗೆ ಅಷ್ಟು ಅವಕಾಶವಿಲ್ಲ, ಶಿಸ್ತೀಯ ಚೌಕಟ್ಟಿನಲ್ಲೇ ಕಾರ್ಯ ನಡೆಯುವುದು, ಜ್ಞಾನದ ಬದಲಾವಣೆಗೆ ಹೆಚ್ಚು ಅವಕಾಶವಿಲ್ಲ. |
| ಪಠ್ಯಕ್ರಮ ಸಂರಚನೆ | ಕಲಿಕಾರ್ಥಿಗಳ ಆಸಕ್ತಿಗಳು, ಅಭಿವೃತ್ತಿಗಳು ಮತ್ತು ಸಂವೇದನೆಗಳನ್ನು ಆಧ'ರಿಸಿ ಸಂರಚಿಸಲಾಗುತ್ತದೆ. | ಆಯಾ ಜ್ಞಾನಶಿಸ್ತಿನ ಸ್ವರೂಪವನ್ನು ಆಧರಿಸಿ ಸಂರಚನೆಗೊಳ್ಳುತ್ತದೆ, ಹೊಸ ಆವಿಷ್ಕಾರಗಳು ಆದಂತೆ ಶಿಸ್ತಿನ ಸ್ವರೂಪಕ್ಕೆ ಅನುಸಾರವಾಗಿ ಪ್ರಗತಿ ಹೊಂದುತ್ತದೆ. |
| ಪಠ್ಯಕ್ರಮ ಸಂವಾದ | ಕಲಿಕಾರ್ಥಿ ಕೇಂದ್ರಿತ ಸಂರಚನಾತ್ಮಕ ಉಪಕ್ರಮ. | ಕಲಿಕಾರ್ಥಿ ಕೇಂದ್ರಿತವಲ್ಲ.<br>ಶಿಸ್ತು ಕೇಂದ್ರಿತ |
| ಕಾರ್ಯಕ್ಷೇತ್ರ | ಶಾಲೆಗಳಿಗೆ ಸೀಮಿತ. | ವಿಶ್ವವಿದ್ಯಾನಿಲಯಗಳು ಮತ್ತು ಇತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಿಸಲಾಗುತ್ತದೆ. |

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –2**

1. ಶಾಲಾ ಪಠ್ಯವಿಷಯ ಮತ್ತು ಶೈಕ್ಷಣಿಕ ಜ್ಞಾನಶಿಸ್ತುಗಳ ನಡುವೆ ಇರುವ ವ್ಯತ್ಯಾಸಗಳನ್ನು ವಿವರಿಸಿ.

## 1.2.4. ಸಾರಾಂಶಿಸೋಣ

- ಶಾಲೆ, ಕಾಲೇಜು ಅಥವಾ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಬೋಧಿಸುವ ಮತ್ತು ಸಂಶೋಧಿಸಲಾಗುವ ಜ್ಞಾನಶಾಖೆಗೆ ಪಠ್ಯವಿಷಯ ಅಥವಾ ಅಧ್ಯಯನ ಕ್ಷೇತ್ರ ಎನ್ನುವರು.
- ಶಾಲೆಯಲ್ಲಿ ಅಧ್ಯಯನ ಮಾಡಲಾಗುವ ಜ್ಞಾನಕ್ಷೇತ್ರಕ್ಕೆ ಶಾಲಾ ಪಠ್ಯವಿಷಯ ಎನ್ನುವರು. ಇದನ್ನು ಕಲಿಕೆಯ ಉಪಕರಣವೆಂದು ಅಥವಾ ನಮ್ಮ ಕಲಿಕೆಗೆ ನಿರ್ಣಾಯಕ ಅಂಶವೆಂದು ಕರೆಯಬಹುದು. ಇನ್ನೂ ಖಚಿತವಾಗಿ ಹೇಳಬೇಕೆಂದರೆ, ಕಲಿಕೆಯ ಬೇರೆ ಬೇರೆ ಭಾಗಗಳೇ ಈ ಪಠ್ಯವಿಷಯಗಳು. ಕಲಿಕಾರ್ಥಿಯು ವಿಶೇಷ ಜ್ಞಾನವನ್ನು ಸಂಪಾದಿಸಲು ಆಯ್ಕೆ ಮಾಡಿಕೊಂಡಿರುವ ಜ್ಞಾನ ಕ್ಷೇತ್ರವೇ ಇದಾಗಿದೆ.
- ಜ್ಞಾನಶಿಸ್ತು ಎಂಬ ಪದಕ್ಕೆ ಬದಲಾಗಿ 'ಶಾಸ್ತ್ರ' ಎಂಬ ಪದವನ್ನೂ ಬಳಸಬಹುದು. 'ಶಾಸ್ತ್ರ' ಎಂಬ ಪದ ಸಂಸ್ಕೃತದ ಧಾತುವಾದ 'ಶಾಸ್ತ್ರ' ಎಂಬುದರಿಂದ ಬಂದಿದೆ. 'ಶಾಸ್' ಎಂಬುದಕ್ಕೆ ಬೋಧಿಸು, ಮಾಹಿತಿಕೊಡು, ಶಾಸನಮಾಡು, ಸರಿಪಡಿಸು (ತಿದ್ದು), ಸಲಹೆಕೊಡು ಎಂಬ ಅರ್ಥಗಳಿವೆ. ಆಕ್ಸ್‌ಫರ್ಡ್‌ನಿಘಂಟು 'ಶಾಸ್ತ್ರ' (Discipline) ಎಂಬುದಕ್ಕೆ "ಜ್ಞಾನದ ಅಥವಾ ಕಲಿಕೆಯ ಒಂದು ಶಾಖೆ" ಎಂಬ ಅರ್ಥಕೊಡುತ್ತದೆ.
- ಶೈಕ್ಷಣಿಕ ಜ್ಞಾನಶಿಸ್ತು ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದ ಅಂಗವಾಗಿರುವ ಕಲಿಕೆಯ ಕ್ಷೇತ್ರ ಅಥವಾ ಶಾಖೆಯಾಗಿದ್ದು ಸಂಶೋಧನೆ ಮತ್ತು ವಿದ್ವತ್ತುಗಳಲ್ಲಿ ಪ್ರಗತಿಯನ್ನು ಉಂಟುಮಾಡುವ ಉದ್ದೇಶದಿಂದ ರೂಪಿತಗೊಂಡಿರುತ್ತದೆ. ಇದನ್ನು ಸಂಶೋಧಕರ, ವಿದ್ವಜ್ಞರ ಮತ್ತು ವಿಶೇಷಜ್ಞರ ವೃತ್ತಿಪರ ಪ್ರಶಿಕ್ಷಣದ ಸಲುವಾಗಿ ಸೂತ್ರೀಕರಿಸಲಾಗುತ್ತದೆ.
- ಶಾಲಾ ಪಠ್ಯವಿಷಯಗಳು ತಮ್ಮ ಮೂಲ ಶೈಕ್ಷಣಿಕ ಜ್ಞಾನಶಿಸ್ತುಗಳಿಗೆ ನೇರಸಂಬಂಧ ಹೊಂದಿರುವ ಗಣಿತ, ಇತಿಹಾಸ, ಭೂಗೋಳಶಾಸ್ತ್ರ, ರಸಾಯನಶಾಸ್ತ್ರ ಮತ್ತು ಅರ್ಥಶಾಸ್ತ್ರಗಳಂತಹ ಸಾಂಪ್ರದಾಯಿಕ ವಿಷಯಗಳಾಗಿರಬಹುದು. ಯಾವ ಶೈಕ್ಷಣಿಕ ಶಿಸ್ತಿನ ಹೆಸರನ್ನು ಶಾಲಾ ಪಠ್ಯವಿಷಯವು ಹೊಂದಿರುವುದೋ ಆ ಶೈಕ್ಷಣಿಕ ಶಿಸ್ತಿಗೆ ಆ ಶಾಲಾ ಪಠ್ಯವಿಷಯವು ವಿಶಾಸಾರ್ಹ, ಪ್ರಾಮಾಣಿಕ ಪೀಠಿಕೆಯಾಗಿರುತ್ತದೆ. ವಿದ್ಯಾರ್ಥಿಗಳು ಸಾಪೇಕ್ಷವಾಗಿ ಸರಳ ವಿಚಾರಗಳನ್ನು ಮತ್ತು ವಿಧಾನಗಳನ್ನು ಅಧ್ಯಯನ ಮಾಡುತ್ತಾರೆ. ತರುವಾಯ ಆ ವಿಚಾರ ಮತ್ತು ವಿಧಾನಗಳನ್ನೇ ಆಯಾ ಶೈಕ್ಷಣಿಕ ಜ್ಞಾನಶಿಸ್ತುಗಳಲ್ಲಿ ವಿಶೇಷಜ್ಞರು ಅರಿತಿರುವಂತೆ ಅಧ್ಯಯನ ಮಾಡುತ್ತಾರೆ.
- ಶಾಲಾ ಪಠ್ಯವಿಷಯಗಳನ್ನು ನಿರ್ಧರಿಸುವಲ್ಲಿ ಶೈಕ್ಷಣಿಕ ಜ್ಞಾನಶಿಸ್ತುಗಳ ಮೇಲೆ ಪಠ್ಯಕ್ರಮದ ನಿಲುವಿನ ದೃಷ್ಟಿಯಿಂದ ಹೆಚ್ಚಿನ ಅವಲಂಬನೆ ಕಂಡುಬರುತ್ತದೆಯಾದ್ದರಿಂದ ಅನ್ಯವಿಧದ ಜ್ಞಾನಗಳು ಕೈಬಿಟ್ಟುಹೋಗುತ್ತವೆ. (ಉದಾ: ಪ್ರಾಯೋಗಿಕ ಜ್ಞಾನ, ತಾಂತ್ರಿಕ ಜ್ಞಾನ, ಸ್ಥಳೀಯ ಸಾಮುದಾಯಿಕ ಜ್ಞಾನ ಇತ್ಯಾದಿ). ಇವುಗಳೂ ಪಠ್ಯಕ್ರಮದ ಪಠ್ಯವಸ್ತುಗಳಾಗುವ ಅವಶ್ಯಕತೆ ಇದೆ)

## 1.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 1 ಮತ್ತು 2– ಉತ್ತರಗಳು

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1**

1. ಸ್ವ ಕಲಿಕಾ ಸಾಮಗ್ರಿ ಭಾಗ 1.3.3.1 ನ್ನು ನೋಡಿ

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2

1. ಸ್ವ ಕಲಿಕಾ ಸಾಮಗ್ರಿ ಭಾಗ 1.3.3.2. ನ್ನು ನೋಡಿ

## 1.2.6. ಘಟಕಾಂತ್ಯದ ಅಭ್ಯಾಸಗಳು

1. ಶೈಕ್ಷಣಿಕ ಜ್ಞಾನಶಿಸ್ತುಗಳು ಮತ್ತು ಶಾಲಾ ಪಠ್ಯವಿಷಯಗಳು ಇವೆರಡರ ನಡುವಣ ಸಂಬಂಧ ಮತ್ತು ವ್ಯತ್ಯಾಸಗಳನ್ನು ಚರ್ಚಿಸಿ.

## 1.2.7. ಪರಾಮರ್ಶನ ಸೂಚಿ


1. https://brainly.in/question/1502247

1. https://www.researchgate.net/publication/284157807_School_subjects_and_academic_disciplines_the_differences

2. Areekkuzhiyil, Santhosh . (2017). *Understanding Discipline and Subjects*. Hyderabad: Neelkamel Publishers.

3. Deng, Z (2013), School subjects and academic disciplines. In A Luke, A woods & K weir (Eds.), Curriculum, Syllabus design and equity: A primer and model. Routledge

4. Dirks, Arthur L. (1996). Organization of knowledge: The emergence of academic specialty in America. Published on-line by author. Retrieved June 25, 2016 from: http://webhost.bridgew.edu/adirks/ald/papers/orgknow.htm

5. Hirst, P.H. (1964). *Knowledge and Curriculum*. London: Routledge and Kegan Paul.

6. Ivor F. Goodson and Colin J. Marsh, Studying school subjects, A guide (1996), Routledge

7. Piaget, J. (1972). *The Epistemology of Interdisciplinary Relationships*. Paris: Organization for Economic Cooperation and Development.

8. Sabarish-P (2015). *Understanding Disciplines And Subjects*http://sabarishedn.blogspot.com/?m=1, Thrissur.

9. https://www.academia.edu/12584884/Deng_Z._2012_._School_ subjects_and_academic_disciplines_the_differences._In_A._Luke_K._Weir_A._Woods_and_M._Moroney_ Eds._Curriculum_ Syllabus_Design_and_Equity_A_Primer_and_Model_pp.40-73_._New_York_Routledge


************

# ಬ್ಲಾಕ್ 1 : ಜ್ಞಾನಶಿಸ್ತುಗಳು ಮತ್ತು ಶಾಲಾ ವಿಷಯಗಳಿಗೆ ಪೀಠಿಕೆ

## ಘಟಕ 3 : ಶಾಲಾ ಶಿಕ್ಷಣದ ಗುರಿಗಳು

### ಘಟಕದ ರಚನೆ

1.3.1. ಕಲಿಕೆಯ ಉದ್ದೇಶಗಳು

1.3.2. ಪೀಠಿಕೆ

1.3.3.1. ಕಲಿಕಾ ಬಿಂದುಗಳು ಮತ್ತು ಕಲಿಕಾ ಚಟುವಟಿಕೆಗಳು

1.3.3.1. ಜಾಗತಿಕ ಮಟ್ಟದಲ್ಲಿ ಶಿಕ್ಷಣ ಮತ್ತು ಶಾಲಾ ಶಿಕ್ಷಣದ ಅರ್ಥ ಸ್ವರೂಪ ಮತ್ತು ಗುರಿಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1.3.3.2. ಶಿಕ್ಷಣದ ಗುರಿಗಳು / ಶಾಲಾ ಶಿಕ್ಷಣದ ಗುರಿಗಳು – ಭಾರತೀಯ ಸಂದರ್ಭದಲ್ಲಿ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

1.3.4. ಸಾರಾಂಶಿಸೋಣ

1.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು– 1 ಮತ್ತು 2

1.3.6. ಘಟಕಾಂತ್ಯ ಅಭ್ಯಾಸಗಳು

1.3.7. ಪರಾಮರ್ಶನ ಸೂಚಿ

### 1.3.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶಿಕ್ಷಣ ಮತ್ತು ಶಾಲಾ ಶಿಕ್ಷಣದ ಅರ್ಥ ಮತ್ತು ಸ್ವರೂಪಗಳನ್ನು ವಿವರಿಸುವರು;
- ಜಾಗತೀಕ ಸಂದರ್ಭದಲ್ಲಿ ಶಿಕ್ಷಣ ಮತ್ತು ಶಾಲಾ ಶಿಕ್ಷಣದ ಗುರಿಗಳನ್ನು ವಿವರಿಸುವರು ; ಮತ್ತು
- ಭಾರತೀಯ ಸಂದರ್ಭದಲ್ಲಿ ಶಿಕ್ಷಣ ಮತ್ತು ಶಾಲಾ ಶಿಕ್ಷಣದ ಗುರಿಗಳನ್ನು ವಿವರಿಸುವರು.

### 1.3.2. ಪೀಠಿಕೆ

ನಾವೆಲ್ಲರೂ ಶಾಲೆಯಲ್ಲಿ ಕಾರ್ಯನಿರತರಾಗಿರುತ್ತೇವೆ. ಪ್ರತಿದಿನ ಶಾಲೆಗೆ ಹೋಗುತ್ತೇವೆ. ಬೋಧನೆ, ವಿದ್ಯಾರ್ಥಿಗಳ ಮೇಲ್ವಿಚಾರಣೆ, ಪಠ್ಯಕ್ರಮ ಮತ್ತು ಸಹ ಪಠ್ಯಕ್ರಮ ಚಟುವಟಿಕೆಗಳಿಗೆ ನೆರವಾಗುವುದು ಇವೇ ಮೊದಲಾದ ಕಾರ್ಯಗಳನ್ನು ಕೈಗೊಳ್ಳುತ್ತೇವೆ. ಆದರೆ ನಾವೇಕೆ ಈ ಎಲ್ಲಾ ಚಟುವಟಿಕೆಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುತ್ತಿದ್ದೇವೆ ಎಂದು ಎಂದಾದರೂ ಆಲೋಚಿಸಿದ್ದೇವೆಯೆ? ನಮ್ಮ ಗುರಿಗಳೇನು? ನಾವೆಲ್ಲಿಗೆ ತಲುಪಲು ಬಯಸುತ್ತೇವೆ? ಅಥವಾ ಬೇರೆ ಮಾತುಗಳಲ್ಲಿ ಹೇಳುವುದಾದರೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಒದಗಿಸುವುದರಲ್ಲಿ ನಮ್ಮ ಗುರಿಗಳೇನು? ನಾವು ಅವರನ್ನು ಎಲ್ಲಿಗೆ ಕೊಂಡೊಯ್ಯಲು ಇಚ್ಚಿಸುತ್ತಿದ್ದೇವೆ? ಇತ್ಯಾದಿ. ಹೀಗೆಯೇ ವಿದ್ಯಾರ್ಥಿಗಳು ಶಾಲೆಗೆ ಬರುತ್ತಾರೆ. ನಾವೇನು ಬೋಧಿಸುವೆವೂ, ಏನು ಮಾರ್ಗದರ್ಶನ ನೀಡುವೆವೂ ಅದನ್ನು ಕಲಿಯುತ್ತಾರೆ. ಪರೀಕ್ಷೆಗಳಲ್ಲಿ ಸಫಲರಾಗಿ ಮುಂದಿನ ತರಗತಿಗೆ ಹೋಗುತ್ತಾರೆ. ಶಾಲಾ ಶಿಕ್ಷಣ ಮುಗಿಸಿದ ತರುವಾಯ ಕಾಲೇಜುಗಳಲ್ಲಿ

ಮುಂದಿನ ತರಗತಿಗಳಿಗೆ ದಾಖಲಾಗುತ್ತಾರೆ. ತಾವು ಏಕೆ ಶಾಲಾ ಶಿಕ್ಷಣವನ್ನು ಪಡೆಯಬೇಕು ಎಂದು ನಾವಾಗಲಿ, ಅವರಾಗಲಿ ತಿಳಿಯಲು ಉತ್ಸುಕರಾಗಿಲ್ಲ. ನಮ್ಮ ಗಂತವ್ಯ ಏನೆಂದು ಅರಿಯದೆ ಪ್ರಯಾಣ ಆರಂಭಿಸಿದ್ದೇವೆ. ಇದರಿಂದಾಗಿ ಅಪಾರ ನಷ್ಟ ಮತ್ತು ವಿಫಲತೆ ಉಂಟಾಗುವ ಸಾಧ್ಯತೆಯಿದೆ ಎಂದು ನಿಮಗೆ ಅನ್ನಿಸುವುದಿಲ್ಲವೆ? ಆದ್ದರಿಂದ ಪ್ರಸ್ತುತ ಘಟಕದಲ್ಲಿ ಶಾಲಾ ಶಿಕ್ಷಣದ ಗುರಿಗಳೇನು, ನಾವು ಶಿಕ್ಷಕರಾಗಿ ಶಾಲೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಕಾರ್ಯ ನಿರ್ವಹಿಸುವಾಗ ಯಾವ ಗುರಿಗಳನ್ನು ಹೊಂದಿರಬೇಕು ಎಂಬುದರ ಕುರಿತು ಈ ಘಟಕದಲ್ಲಿ ವಿಚಾರಮಾಡೋಣ.

## 1.3.3.2. ಜಾಗತಿಕ ಸಂದರ್ಭದಲ್ಲಿ ಶಿಕ್ಷಣ ಮತ್ತು ಶಾಲಾ ಶಿಕ್ಷಣದ ಅರ್ಥ, ಸ್ವರೂಪ ಮತ್ತು ಗುರಿಗಳು

ಜನರಿಗೆ ಶಿಕ್ಷಣವನ್ನು ಒದಗಿಸುವ ಸಾಮಾಜಿಕ ಉದ್ದೇಶದೊಂದಿಗೆ ಸ್ಥಾಪಿತವಾದ ಸಾಮಾಜಿಕ ಸಂಸ್ಥೆಯೇ ಶಾಲೆ. ಇದು ದೇಶದ ಶಿಕ್ಷಣದ ಗುರಿಗಳನ್ನು ಸಾಧಿಸಲು ಬೇಕಾದ ಮುಖ್ಯ ಸಾಧನವಾಗಿದೆ. ಆದ್ದರಿಂದ ಶಾಲಾ ಶಿಕ್ಷಣದ ಗುರಿಗಳೇನೆಂದು ಗುರುತಿಸುವ ಇಚ್ಛೆಯುಳ್ಳವರು ಮೊದಲು ಶಾಲೆಯಿರುವ ಸ್ಥಳ(ದೇಶ)ದ ಶಿಕ್ಷಣದ ತಾತ್ವಿಕ ವಿಚಾರಗಳೇನೆಂದು ಅರ್ಥಮಾಡಿಕೊಳ್ಳಬೇಕು. ಇದರಿಂದ ಸ್ವಾಭಾವಿಕವಾಗಿಯೇ ಶಾಲಾ ಶಿಕ್ಷಣದ ಗುರಿಗಳೇನು ಎಂದು ತಿಳಿದುಬರುತ್ತದೆ.

ಶಿಕ್ಷಣದ ಗುರಿಗಳು ಸ್ಥಿರವಲ್ಲ, ಸಾರ್ವತ್ರಿಕವಲ್ಲ, ಇವು ಬದಲಾಗುವಂಥವು ಹಾಗೂ ಸಾಪೇಕ್ಷ ಗುಣವುಳ್ಳವು. ಶಿಕ್ಷಣದ ಗುರಿಗಳ ಕೆಲವು ನಿರ್ದಿಷ್ಟ ಲಕ್ಷಣಗಳನ್ನು ನಾವು ಈ ಕೆಳಗಿನಂತೆ ನಿರ್ದೇಶಿಸಬಹುದು. ಇವು ಶಾಲೆಗಳ ಗುರಿಗಳೂ ಹೌದು. ಏಕೆಂದರೆ ಶಾಲೆಗಳು ಶಿಕ್ಷಣದ ಗುರಿಗಳನ್ನು ಸಾಧಿಸುವ ಉದ್ದೇಶವನ್ನೇ ಹೊಂದಿರುತ್ತವೆ.

- ಶಿಕ್ಷಣ ಏಕಮೇವ ಗುರಿಯುಳ್ಳ ಚಟುವಟಿಕೆ ಅಲ್ಲದ್ದರಿಂದ, ಅನೇಕ ಶೈಕ್ಷಣಿಕ ಗುರಿಗಳನ್ನು ಹೊಂದಿದೆ.
- ಶೈಕ್ಷಣಿಕ ಗುರಿಗಳು ಬೇರೆ ಬೇರೆ ಸ್ವರೂಪಗಳನ್ನು, ದಿಗ್ವಿನ್ಯಾಸಗಳನ್ನು ಹೊಂದಿರುವುತ್ತವೆ. ಕೆಲವು ಶಾಶ್ವತವೂ ನಿರ್ದಿಷ್ಟವೂ ಮತ್ತು ಬದಲಾಗದಂಥವುಗಳೆಂದರೆ ಮತ್ತೆ ಕೆಲವು ನಮ್ಯವೂ ಹೊಂದಿಕೊಳ್ಳುವಂಥವೂ ಮತ್ತು ಬದಲಾಗುವಂಥವೂ ಆಗಿವೆ.
- ಶೈಕ್ಷಣಿಕ ಗುರಿಗಳು ವ್ಯಕ್ತಿಯ ಮತ್ತು ಸಮಾಜದ ಅಗತ್ಯಗಳಿಗೆ ಸಂಬಂಧಿಸಿವೆ.
- ಶೈಕ್ಷಣಿಕ ಗುರಿಗಳು ಜೀವನದ ಆದರ್ಶಗಳಿಗೆ ಪರಸ್ಪರ ಸಂಬಂಧವನ್ನು ಹೊಂದಿವೆ. ಆದ್ದರಿಂದ ಶೈಕ್ಷಣಿಕ ಗುರಿಗಳು ಒಬ್ಬ ವ್ಯಕ್ತಿ ಅಥವಾ ದೇಶ ಹೊಂದಿರುವ ವಿಭಿನ್ನ ತಾತ್ವಿಕತೆ, ಧಾರ್ಮಿಕ, ರಾಜಕೀಯ ಮತ್ತು ಆರ್ಥಿಕ ಆದರ್ಶಗಳಿಗೆ ತಕ್ಕಂತೆ ಬದಲಾಗುತ್ತವೆ. ಆದ್ದರಿಂದ ಶಿಕ್ಷಣದ ಗುರಿಗಳನ್ನು ಸೂತ್ರೀಕರಿಸುವುದು ಎಂದರೆ ಬಾಳಿನ 'ಗುರಿಗಳನ್ನೇ' ಸೂತ್ರೀಕರಿಸಿದಂತೆ.
- ವಾಸ್ತವವಾಗಿ ಶಿಕ್ಷಣ ಎಂಬುದು ಸಮಾಜದ ಪ್ರತಿಬಿಂಬ ಹಾಗೂ ಸಾಮಾಜಿಕ ನಿಯಂತ್ರಣದ ಒಂದು ಪ್ರಕ್ರಿಯೆ. ಆದ್ದರಿಂದ ಶೈಕ್ಷಣಿಕ ಗುರಿಗಳು ಸಮಾಜವನ್ನು ರೂಪಿಸಲು, ಕಟ್ಟಲು ಬೇಕಾದ ಸಾಧನಗಳೇ ಆಗಿವೆ.
- ಕಾಲದಿಂದ ಕಾಲಕ್ಕೆ ಸ್ಥಳದಿಂದ ಸ್ಥಳಕ್ಕೆ ಶೈಕ್ಷಣಿಕ ಗುರಿಗಳು ಮಾರ್ಪಡುತ್ತವೆ. ಆದ್ದರಿಂದ ಈ ಗುರಿಗಳು ಸ್ಥಾಯಿಯಲ್ಲ.
- ಬೇರೆ ಬೇರೆ ರೀತಿಯ ಶಿಕ್ಷಣಗಳಿಗೆ ಪ್ರತ್ಯೇಕವಾದ ಶೈಕ್ಷಣಿಕ ಗುರಿಗಳಿರುತ್ತವೆ.

ಆದ್ದರಿಂದ ಶೈಕ್ಷಣಿಕ ಗುರಿಗಳು ವ್ಯಕ್ತಿಯ ಮತ್ತು ಸಮಾಜದ ನಿರ್ದಿಷ್ಟ ಅಗತ್ಯಗಳಿಗೆ ಅನುಸಾರವಾಗಿ ಬದಲಾಗುತ್ತವೆ. ಅನಾದಿ ಕಾಲದಿಂದಲೂ ಶೈಕ್ಷಣಿಕ ಗುರಿಗಳೇನು ಎಂಬ ಅನ್ವೇಷಣೆ ನಡೆಯುತ್ತಲೇ ಬಂದಿದೆ. ಈ ಅನ್ವೇಷಣೆ ಮಹಾನ್ ಚಿಂತಕರ ಮತ್ತು ತತ್ವಜ್ಞಾನಿಗಳ ಪ್ರಯತ್ನ ಹಾಗೂ ಅವರ ಶೈಕ್ಷಣಿಕ ಪ್ರಯೋಗಗಳಿಂದ ಹೆಚ್ಚಿನ ವೇಗ ಪಡೆದುಕೊಳ್ಳುತ್ತದೆ. ಸಾಮಾಜಿಕ ಮತ್ತು ಆರ್ಥಿಕ ವಿವಾದಾಂಶಗಳು ಶಿಕ್ಷಣದ ಗುರಿ ಮತ್ತು ಉದ್ದೇಶಗಳ ನಿರ್ಧಾರಕಗಳಾಗುತ್ತವೆ. ಶಿಕ್ಷಣವು ದೇಶದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳ ದೃಷ್ಟಿಯಿಂದ ಮುಂದಿನ ಪೀಳಿಗೆಯನ್ನು ಸಿದ್ಧಪಡಿಸಬೇಕಾಗುತ್ತದೆ. ಪ್ರತಿಯೊಂದು ರಾಷ್ಟ್ರವೂ ತನ್ನ ಶೈಕ್ಷಣಿಕ ಗುರಿಗಳನ್ನು ನಿರ್ಧರಿಸುವಾಗ ತನ್ನ ಆರ್ಥಿಕ ಪರಿಸ್ಥಿತಿಗಳನ್ನು ಪರಿಗಣನೆಗೆ ತಂದುಕೊಳ್ಳಬೇಕು. ಮಾಧ್ಯಮಿಕ ಶಿಕ್ಷಣ ಆಯೋಗ(1952) ಈ ರೀತಿ ಹೇಳಿದೆ; "ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಗಳು ಬದಲಾದಂತೆ ಹೊಸ ಹೊಸ ಸಮಸ್ಯೆಗಳು ಎದುರಾದಂತೆ ಶಿಕ್ಷಣವು ನಿರ್ದಿಷ್ಟ ಹಂತದಲ್ಲಿ ಇಟ್ಟುಕೊಳ್ಳಬೇಕಾದ ಉದ್ದೇಶಗಳನ್ನು ಜಾಗರೂಕತೆಯಿಂದ ಪುನರ್‌ಪರೀಕ್ಷಿಸುವುದು ಮತ್ತು ಸ್ಪಷ್ಟವಾಗಿ ವ್ಯಕ್ತಪಡಿಸುವುದು ಅಗತ್ಯವಾಗುತ್ತದೆ".

ವಿಶ್ವದಾದ್ಯಂತ ಶಿಕ್ಷಣದ ಗುರಿಗಳು ಸಾಧಾರಣವಾಗಿ ಒಂದೇ ಆಗಿರುವವು. ಇವು ರಾಷ್ಟ್ರದ ಪ್ರಜೆಗಳು ರಚನಾತ್ಮಕ ದಿಕ್ಕಿನತ್ತ ಒಯ್ಯಲು ನೆರವಾಗುವುದಕ್ಕಾಗಿ ರೂಪಿತವಾಗುವಂತಹವು. ಆದರೆ ಪ್ರತಿಯೊಂದು ರಾಷ್ಟ್ರದ ಶಿಕ್ಷಣದ ನಿರ್ದಿಷ್ಟ ಗುರಿಗಳು ಆ ದೇಶದ ತಾತ್ವಿಕ, ಸಮಾಜಶಾಸ್ತ್ರೀಯ, ತಾಂತ್ರಿಕ ಮತ್ತು ಇನ್ನಿತರ ಪರಿಸ್ಥಿತಿಗಳನ್ನು ಆಧರಿಸಿ ಹೊರಹೊಮ್ಮುತ್ತವೆ. ಈ ಅಂಶಗಳು ರಾಷ್ಟವೊಂದರ ಶಿಕ್ಷಣದ ಗುರಿಗಳನ್ನು ನಿಶ್ಚಯಿಸಿ, ತನ್ಮೂಲಕ ಆ ಸ್ಥಳದ ಶಾಲಾಶಿಕ್ಷಣದ ಗುರಿಗಳನ್ನು ನಿರ್ಧರಿಸುತ್ತವೆ.

ಈ ಕೆಳಗಿನ ಚಿತ್ರ ಶಿಕ್ಷಣದ ಗುರಿಗಳು ಮತ್ತು ಶಾಲಾ ಶಿಕ್ಷಣದ ಗುರಿಗಳ ನಡುವಣ ಸಂಬಂಧವನ್ನು ಸ್ಪಷ್ಟೀಕರಿಸುತ್ತದೆ.

ದೇಶದ ತಾತ್ವಿಕ ಸಮಾಜಶಾಸ್ತ್ರೀಯ ತಾಂತ್ರಿಕ ಹಾಗೂ ಇನ್ನಿತರ ಅಂಶಗಳು

↓

ರಾಷ್ಟ್ರದ ಶೈಕ್ಷಣಿಕ ತತ್ವಶಾಸ್ತ್ರ

↓

ಶಿಕ್ಷಣದ ಗುರಿಗಳು

↓

ಶಾಲಾ ಶಿಕ್ಷಣದ ಗುರಿಗಳು

ಹೀಗೆ ಶಾಲಾ ಶಿಕ್ಷಣದ ಗುರಿಗಳು ಶಿಕ್ಷಣದ ಗುರಿಗಳಿಂದಲೇ ಉದ್ಭವಿಸುತ್ತವೆ ಎಂಬುದು ನಿಚ್ಚಳವಾಗುತ್ತದೆ. ಎಲ್ಲ ರಾಷ್ಟ್ರಗಳಿಗೂ ಅನ್ವಯಿಸುವ ಶಿಕ್ಷಣದ ಮತ್ತು ಶಾಲಾ ಶಿಕ್ಷಣದ ಕೆಲವು ಸಾಮಾನ್ಯ ಗುರಿಗಳಿವೆ. ಆದರೆ ಕೆಲವು ನಿಗದಿತ ಗುರಿಗಳು ಆಯಾ ರಾಷ್ಟ್ರಗಳಿಗೆ ನಿರ್ದಿಷ್ಟವಾಗಿರುತ್ತವೆ. ಆದ್ದರಿಂದ ನಾವೀಗ ಶಿಕ್ಷಣದ ಮತ್ತು ಶಾಲಾಶಿಕ್ಷಣದ ಸಾಮಾನ್ಯ ಗುರಿಗಳೇನು ಎಂದು ಅರಿತುಕೊಂಡು ತದನಂತರ ಭಾರತೀಯ ಪರಿಸ್ಥಿತಿಯಲ್ಲಿ ಶಿಕ್ಷಣದ ಗುರಿಗಳೇನು ಎಂದು ಖಚಿತಪಡಿಸಿಕೊಳ್ಳೋಣ. ಆದ್ದರಿಂದ ನಮ್ಮ ಚರ್ಚೆ ಶಿಕ್ಷಣದ ಜಾಗತಿಕ ಗುರಿಗಳಿಂದ ಆರಂಭಗೊಂಡು ಜಾಗತಿಕ ಸಂದರ್ಭದಲ್ಲಿ ಅದರಿಂದ ವ್ಯುತ್ಪನ್ನಗೊಳ್ಳುವ ಶಾಲಾ ಶಿಕ್ಷಣದ ಗುರಿಗಳತ್ತ ಸಾಗುತ್ತದೆ. ತರುವಾಯ, ಭಾರತದಲ್ಲಿ ವಿಭಿನ್ನ ಕಾಲಘಟ್ಟದಲ್ಲಿ ವಿಭಿನ್ನ ದಸ್ತಾವೇಜಗಳು ಸೂಚಿಸಿರುವ ಶಿಕ್ಷಣದ ಗುರಿಗಳೇನೆಂದು ನೋಡಿ ನಂತರ ಇವುಗಳು ಶಾಲೆಗಳ ಗುರಿಗಳಿಗೆ ಹೊಂದಿರುವ ನಿಹಿತಾರ್ಥಗಳೇನೆಂದು ಪರಿಶೀಲಿಸೋಣ.

ಯುನೈಟೆಡ್ ನೇಷನ್ಸ್ (ಸಂಯುಕ್ತ ರಾಷ್ಟ್ರಗಳು)ನ ಜನರಲ್ ಅಸೆಂಬ್ಲಿ 1948ರಲ್ಲಿ ಅಳವಡಿಸಿಕೊಂಡ ಐತಿಹಾಸಿಕ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ಹೀಗೆ ಸಾರಿದೆ: "ಪ್ರತಿಯೊಬ್ಬರಿಗೂ ಶಿಕ್ಷಣದ ಹಕ್ಕು ಇದೆ". ಈ ಘೋಷಣೆಯ ಅನುಚ್ಛೇದ 26 ಹೀಗೆ ಹೇಳಿದೆ: "ಶಿಕ್ಷಣವು ಕನಿಷ್ಠ ಎಂದರೆ ಪ್ರಾಥಮಿಕ ಮತ್ತು ಮೂಲಭೂತ ಹಂತಗಳಲ್ಲಿ ಉಚಿತವಾಗಿರಬೇಕು" ಮತ್ತು "ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಬೇಕು", ಹಾಗೂ "ಮಾನವ ವ್ಯಕ್ತಿತ್ವ ಪೂರ್ಣ ವಿಕಾಸದತ್ತ ಮತ್ತು ಮಾನವ ಹಕ್ಕುಗಳಿಗೆ, ಮೂಲಭೂತ ಸ್ವಾತಂತ್ರಕ್ಕೆ ಆದರವು ಸದೃಢವಾಗುವತ್ತ ಶಿಕ್ಷಣವು ನಿರ್ದೇಶಿತವಾಗಬೇಕು". ಶಿಕ್ಷಣದ ಫಲವು ಮಾನವನ ವ್ಯಕ್ತಿತ್ವದ ಪೂರ್ಣವಿಕಾಸದಲ್ಲಿ ಪರಿಣಮಿಸಬೇಕು ಎಂಬ ವಿಚಾರ 1996ರಲ್ಲಿ ಯುನೆಸ್ಕೊ ಸಂಸ್ಥೆಗೆ ಜಾಕ್ಲುಸ್‌ಡೆಲರ್ಸ್ ಅವರ ಅಧ್ಯಕ್ಷತೆಯಲ್ಲಿ ಇಪ್ಪತ್ತೊಂದನೆ ಶತಮಾನದ ಅಂತರರಾಷ್ಟ್ರೀಯ ಶಿಕ್ಷಣ ಆಯೋಗ ಯುನೆಸ್ಕೊಗೆ ಸಲ್ಲಿಸಿದ "ಲರ್ನಿಂಗ್ ದಿ ಟ್ರೆಷರ್ ವಿಥಿನ್" ಎಂಬ ವರದಿಗಳಿಂದ ಪ್ರಭಾವಶಾಲಿ ವರದಿಗಳಲ್ಲಿ ಸೂಚಿತವಾಗಿದೆ. ಡೆಲರ್ಸ್‌ರವರ ಪ್ರಕಾರ, ಇಪ್ಪತ್ತೊಂದನೇ ಶತಮಾನ ಈ ಕೆಳಗಿನ ಪ್ರಮುಖ ಬಿಕ್ಕಟ್ಟುಗಳನ್ನು ಎದುರಿಸಬೇಕಾಗುತ್ತದೆ ಮತ್ತು ನಾವೆಲ್ಲರೂ ಅವುಗಳನ್ನು ಎದುರಿಸಿ ಜಯಿಸಬೇಕಾಗುತ್ತದೆ. ಈ ಬಿಕ್ಕಟ್ಟುಗಳು ಈ ಕೆಳಗಿನಂತಿವೆ.

- ಜಾಗತಿಕ ಮತ್ತು ಸ್ಥಾನೀಯಗಳ ನಡುವಣ ಬಿಕ್ಕಟ್ಟು.
- ಸಾರ್ವತ್ರಿಕ ಮತ್ತು ವೈಯಕ್ತಿಕವಾದವುಗಳ ನಡುವಣ ಬಿಕ್ಕಟ್ಟು.
- ಸಾಂಪ್ರದಾಯಿಕತೆ ಮತ್ತು ಆಧುನಿಕತೆಯ ನಡುವಣ ಬಿಕ್ಕಟ್ಟು.
- ದೀರ್ಘಕಾಲೀನ ಮತ್ತು ಅಲ್ಪಕಾಲೀನ ಪರಿಗಣನೆಗಳ ನಡುವಣ ಬಿಕ್ಕಟ್ಟು.
- ಸ್ಪರ್ಧೆಯ ಅಗತ್ಯ ಮತ್ತು ಸಮಾನಾವಕಾಶಗಳ ಬಿಕ್ಕಟ್ಟು.
- ಅಸಾಧಾರಣ ಜ್ಞಾನವಿಕಾಸ ಮತ್ತು ಅದನ್ನು ಸ್ವಾಂಗೀಕರಿಸಿಕೊಳ್ಳುವ ಮಾನವನ ಸಾಮಾರ್ಥ್ಯಗಳ ನಡುವಣ ಬಿಕ್ಕಟ್ಟು.
- ಆಧ್ಯಾತ್ಮಿಕತೆ ಮತ್ತು ಭೌತಿಕತೆಗಳ ನಡುವಣ ಬಿಕ್ಕಟ್ಟು.

ಇಪ್ಪತ್ತೊಂದನೇ ಶತಮಾನದ ಮಾನವ ಎದುರಿಸಲು ಹೊರಟಿರುವ ಪ್ರಮುಖ ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ, "ಪ್ರತಿಯೊಂದು ಮಗುವಿಗೂ ಅದರ ಪ್ರಾರಂಭಿಕ ಜೀವನದಲ್ಲಿ ಜ್ಞಾನಭಂಡಾರವನ್ನು ಒದಗಿಸುವಷ್ಟೇ ಸಾಲದು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜ್ಞಾನ, ಕೌಶಲ್ಯಗಳು ಮತ್ತು ಅಭಿವೃತ್ತಿಗಳನ್ನು ವಿಶಾಲಗೊಳಿಸಿಕೊಳ್ಳಲು ಮತ್ತು ಬದಲಾಗುತ್ತಿರುವ ಸಂಕೀರ್ಣ ಮತ್ತು ಸ್ವತಂತ್ರ ವಿಶ್ವಕ್ಕೆ ತನ್ನನ್ನು ತಾನು ಹೊಂದಿಸಿಕೊಳ್ಳಲು ಜೀವನದುದ್ದಕ್ಕೂ ಕಲಿಕೆಯ ಅವಕಾಶವನ್ನು ಬಳಸಿಕೊಳ್ಳುವಂತೆ ಶಿಕ್ಷಣವನ್ನು ಸಜ್ಜುಗೊಳಿಸಬೇಕು".

ವ್ಯಕಿಯೊಬ್ಬನ ಜೀವನದಲ್ಲಿ ಪ್ರಧಾನವಾಗಿರುವ ನಾಲ್ಕು ವಿಧದ ಕಲಿಕೆಯನ್ನು ಮೇಲೆ ತಿಳಿಸಿದ ವರದಿಯು ಪ್ರತಿಪಾದಿಸಿದೆ. ಈ ನಾಲ್ಕು ವಿಧಗಳು ಶಿಕ್ಷಣದ ನಾಲ್ಕು ಆಧಾರಸ್ತಂಭಗಳೆಂದೇ ಹೆಸರುವಾಸಿಯಾಗಿವೆ. ಅವು ಹೀಗಿವೆ:

1. ಅರಿತುಕೊಳ್ಳಲು ಕಲಿಯುವುದು: ಅರ್ಥಮಾಡಿಕೊಳ್ಳಲು ಬೇಕಾದ ಉಪಕರಣಗಳನ್ನು ಸ್ವಾಧೀನಪಡಿಸಿಕೊಳ್ಳುವುದು.
2. ಮಾಡುವುದನ್ನು ಕಲಿಯುವುದು: ತನ್ನ ಪರಿಸರದಲ್ಲಿ ಸೃಜನಾತ್ಮಕವಾಗಿ ಕಾರ್ಯ ಪ್ರವೃತ್ತರಾಗುವುದು.
3. ಸಹಬಾಳ್ವೆಯನ್ನು ಕಲಿಯುವುದು: ಸಕಲ ಮಾನವ ಚಟುವಟಿಕೆಗಳಲ್ಲಿ ಇತರರೊಂದಿಗೆ ಭಾಗವಹಿಸುವುದು ಮತ್ತು ಸಹಕರಿಸುವುದು.
4. ತಾನು ತಾನಾಗಿ ಬಾಳಲು ಕಲಿಯುವುದು: ಮೇಲೆ ಹೇಳಿದ ಮೂರರಿಂದ ಉಂಟಾಗುವ ಮುಖ್ಯ ಪ್ರಗತಿ.

ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯಲ್ಲಿ ಶಿಕ್ಷಣದ ಮೊದಲ ಎರಡು ಗುರಿಗಳ ಮೇಲೆ ಹೆಚ್ಚಿನ ಗಮನ ಕೊಡಲಾತ್ತಿತ್ತು. ಶಿಕ್ಷಣದ ನಾಲ್ಕೂ ಗುರಿಗಳನ್ನು ವ್ಯವಸ್ಥಿತ ಕಲಿಕಾ ಪದ್ಧತಿಯ ಅವಿಭಾಜ್ಯ ಅಂಗಗಳನ್ನಾಗಿ ಮಾಡಿಕೊಳ್ಳಬೇಕಾದ ಅಗತ್ಯವಿದೆ. ಈಗ ಈ ಪ್ರತಿಯೊಂದು ಗುರಿಗಳನ್ನು ಕುರಿತು ಚರ್ಚಿಸೋಣ.

## ಅರಿತುಕೊಳ್ಳಲು ಕಲಿಯುವುದು:

ಅರಿತುಕೊಳ್ಳಲು ಕಲಿಯುವುದು ಎಂಬುದರಲ್ಲಿ ಮುಖ್ಯವಾಗಿ ಎರಡು ಆಯಾಮಗಳಿವೆ. ಬಾಳಿನ ಒಂದು ಮಾರ್ಗ ಮತ್ತೊಂದು ಗುರಿ. ಒಂದು ಮಾರ್ಗವಾಗಿ ಇದು ವ್ಯಕ್ತಿಗೆ ತನ್ನ ಪರಿಸರದ ಬಗೆಗೆ ಅರಿತುಕೊಳ್ಳಲು ನೆರವಾಗುವ ಮೂಲಕ ಆತ/ಆಕೆ ಗೌರವಯುತವಾಗಿ ಬಾಳಲು ಕಸುಬಿಗೆ ಬೇಕಾದ ಕುಶಲತೆಗಳನ್ನು ಹಾಗೂ ಸಂಪರ್ಕ ಕುಶಲತೆಗಳನ್ನು ರೂಢಿಸಿಕೊಳ್ಳಲು ಸಹಾಯ ಮಾಡುತ್ತದೆ. ಗುರಿಯಾಗಿ, ಇದು ವ್ಯಕ್ತಿಯ ಸಾಮರ್ಥ್ಯಗಳನ್ನು ಅರ್ಥಮಾಡಿಕೊಳ್ಳಲು, ಅರಿತುಕೊಳ್ಳಲು ಮತ್ತು ಆವಿಷ್ಕರಿಸಲು ಪ್ರೋತ್ಸಾಹಿಸುತ್ತದೆ. ಈ ಹಿನ್ನೆಲೆಯಲ್ಲಿ ಮಕ್ಕಳು ವೈಜ್ಞಾನಿಕ ವಿಧಾನಗಳನ್ನು ಗಳಿಸಿಕೊಂಡು 'ವಿಜ್ಞಾನ ಮಿತ್ರ' ರಾಗುವುದು ಅಗತ್ಯವಾಗುತ್ತದೆ.

ವಿದ್ಯಾರ್ಥಿಗಳು 21ನೇ ಶತಮಾನದ ನಿರಂತರ ಬದಲಾಗುತ್ತಿರುವ, ತ್ವರಿತವಾಗಿ ಹೆಚ್ಚುತ್ತಿರುವ ಜ್ಞಾನವನ್ನು ಅರಗಿಸಿಕೊಳ್ಳಲು ಸಾಧ್ಯವಾಗುವಂತೆ ಅವರಿಗೆ ಸಾಮಾನ್ಯ ಶಿಕ್ಷಣ ಮತ್ತು ವಿಶೇಷ ಶಿಕ್ಷಣಗಳನ್ನು ಒದಗಿಸಬೇಕು. ಇದು ಕಲಿಕೆಯ ಎರಡನೇ ಪ್ರಮುಖ ಅಂಶ.

ವರದಿಯ ಪ್ರಕಾರ "ಅರಿತುಕೊಳ್ಳಲು ಕಲಿಯುವಿಕೆ ಎಂಬುದರಿಂದ ಕಲಿಯಲು ಕಲಿಯುವುದು ಎಂಬುದು ಪೂರ್ಣಸೂಚಿತವಾಗುತ್ತದೆ". ಆದ್ದರಿಂದ ಏಕಾಗ್ರತಾ ಶಕ್ತಿ, ಸ್ಮರಣಶಕ್ತಿ ಮತ್ತು ಚಿಂತನಾಶಕ್ತಿಗಳು ಇದಕ್ಕೆ ಅಗತ್ಯವಾಗುತ್ತವೆ. ಇಂದಿನ ಜಗತ್ತಿನಲ್ಲಿ, ಮಾಹಿತಿ ಬಹಳ ವೇಗದಿಂದ ಬೆಳೆಯುತ್ತಿರುವುದರಿಂದ, ವಸ್ತು ಮತ್ತು ಜನರ ಮೇಲೆ ಗಮನವಿರಿಸುವ ಅಗತ್ಯವಿದೆ. ಇಲ್ಲದಿದ್ದಲ್ಲಿ ನಾವು ವಿಫಲರಾಗುತ್ತೇವೆ. ಲಭ್ಯವಿರುವ ಅಪಾರ ಮಾಹಿತಿಯನ್ನು ಸಂಗ್ರಹಿಸಿ ವಿತರಿಸಲು ಸಾಧ್ಯವಾಗುವಂತೆ ಶಾಲೆಗಳಲ್ಲಿ ಮಕ್ಕಳಿಗೆ ಶೈಶವದಿಂದಲೇ ಸ್ಮರಣ ಶಕ್ತಿಯನ್ನು ಹೆಚ್ಚಿಸಿಕೊಳ್ಳುವಂತೆ ಪ್ರೋತ್ಸಾಹಿಸಬೇಕು. ಶಾಲೆಗಳು ಮಕ್ಕಳಲ್ಲಿ ಚಿಂತನೆಯ ಪ್ರಕ್ರಿಯೆಯನ್ನು ಬೆಳೆಸುವ ಪ್ರಯತ್ನ ಕೈಗೊಳ್ಳುವುದೂ ಅಗತ್ಯವಾಗಿದೆ. ಮೂರ್ತ ಮತ್ತು ಅಮೂರ್ತಗಳ ಮಧ್ಯೆ, ಕಲಿಕೆಯ ಉಪಕ್ರಮಗಳಿಂದ ನಿಗಮನ ಮತ್ತು ಆಗಮನಗಳ ನಡುವೆ ಪಾರಸ್ಪರಿಕ ವಿಚಾರ ವಿನಿಮಯಗಳನ್ನು ಪ್ರೋತ್ಸಾಹಿಸುವುದರ ಮೂಲಕ ಇದನ್ನು ಸಾಧಿಸಬಹುದಾಗಿದೆ. ಆದ್ದರಿಂದ ಜ್ಞಾನಾರ್ಜನೆ ಎಂದಿಗೂ ನಿಲ್ಲದ ಪ್ರಕ್ರಿಯೆಯಾಗಿದ್ದು ಅದನ್ನು ಎಲ್ಲಾ ಸ್ವರೂಪದ ಅನುಭವಗಳ ಮೂಲಕ ಸಮೃದ್ಧಗೊಳಿಸಬಹುದಾಗಿದೆ.

## ಮಾಡುವುದನ್ನು ಕಲಿಯುವುದು:

ಅರಿಯುವುದನ್ನು ಕಲಿಯುವುದು ಮತ್ತು ಮಾಡುವುದನ್ನು ಕಲಿಯುವುದು – ಇವೆರಡನ್ನು ಬೇರ್ಪಡಿಸಲಾಗದು. ಜ್ಞಾನ ಸಂಪಾದನೆಯಾದ ತರುವಾಯ, ಆ ಜ್ಞಾನವನ್ನು ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರುವ ಅವಶ್ಯಕತೆ ಇದೆ. ಈ ಪರಿಕಲ್ಪನೆ ಶಿಕ್ಷಣಕ್ಷೇತ್ರಕ್ಕೆ ಹೊಸದೇನಲ್ಲದಿದ್ದರೂ ಮುಂದಿನ ಕಾರ್ಯ ಯಾವ ರೀತಿ ಉದ್ಭವಿಸುತ್ತದೆ ಎಂದು ಸ್ಪಷ್ಟವಾಗಿ ಈಗಲೇ ಮುಂಗಾಣಲು ಸಾಧ್ಯವಿಲ್ಲವಾದ್ದರಿಂದ ಭವಿಷ್ಯದ ಕಾರ್ಯಯೋಜನೆಗೆ ಶಿಕ್ಷಣವು ಹೇಗೆ ಹೊಂದಿಕೊಳ್ಳಬಹುದು ಎಂಬ ಸೂಚನೆಕೊಡಲಾಗಿದೆ. ಉತ್ಪಾದನ ಪ್ರಕ್ರಿಯೆಗಳ ಬದಲಾದ ಸ್ವಭಾವದ ಕಾರಣದಿಂದ ವ್ಯಕ್ತಿಯ ಕುಶಲತೆಯಿಂದ ಆತನ/ಆಕೆಯ ವೈಯಕ್ತಿಕ ಯೋಗ್ಯತೆ ಬದಲಾವಣೆಯಾಗಬೇಕೆಂದು ಆಯೋಗ ಪ್ರತಿಪಾದಿಸುತ್ತದೆ. "ಶುದ್ಧ ಶಾರೀರಿಕ ಕೆಲಸಗಳು ಯಂತ್ರಗಳ ನಿಯಂತ್ರಣ, ಪರಿಪಾಲನೆ ಮತ್ತು ಮೇಲ್ವಿಚಾರಣೆಯಂತಹ ಆರ್ಥಿಕ, ಬೌದ್ಧಿಕ ಹಾಗೂ ಮಾನಸಿಕ ಕೆಲಸದಿಂದ ಮತ್ತು ವಿನ್ಯಾಸ, ಅಧ್ಯಯನ ಮತ್ತು ಪ್ರಬಂಧನೆ ಮೊದಲಾದ ಕೆಲಸಗಳಿಂದ ಅಗತ್ಯ ಬದಲಾವಣೆ ತರಬೇಕಾಗುತ್ತದೆ. ಸ್ವತಃ ಯಂತ್ರಗಳೇ ಹೆಚ್ಚು ಬುದ್ಧಿವಂತವಾಗುತ್ತಿವೆ ಹಾಗೂ ಶಾರೀರಿಕ ಶ್ರಮದ ಅಗತ್ಯ ಕಡಿಮೆಯಾಗುತ್ತಿದೆ". ಆದ್ದರಿಂದ, ಕಲಿಕಾರ್ಥಿಗಳಲ್ಲಿ ಸಂವಹನ ಸಾಮರ್ಥ್ಯ, ಮತ್ತೊಬ್ಬರ ಜೊತೆಗೂಡಿ ಕಾರ್ಯನಿರ್ವಹಿಸುವಿಕೆ ಬಿಕ್ಕಟ್ಟುಗಳನ್ನು ನಿಭಾಯಿಸಿ ಪರಿಹರಿಸುವಿಕೆ ಮೊದಲಾದವುಗಳನ್ನು ಬೆಳೆಸಬೇಕು.

ಎರಡನೆಯದಾಗಿ, ಮುಂದುವರೆದ ಆರ್ಥಿಕತೆಗಳ ಅಭೌತೀಕರಣವು (ಆಜಟಚಿಣಜಡಿಚಿಟಟುಚಿಣುಠಟ) ಮಾರುಕಟ್ಟೆ ಆಧಾರಿತ (ಹಣಕಾಸು ಲೆಕ್ಕ ಪ್ರಬಂಧನೆ) ಮತ್ತು ಮಾರುಕಟ್ಟೆಯ ಸೇವಾ ಕ್ಷೇತ್ರ (ಶಿಕ್ಷಣ, ಆರೋಗ್ಯ ಸಾಮಾಜಿಕ ಸೇವೆಗಳು)ಗಳ ಪರಿಮಾಣಾತ್ಮಕ ಮತ್ತು ಗುಣತ್ಮಾಕ ವಿಸ್ತಾರಕ್ಕೆ ಕಾರಣವಾಗಿದೆ. ನಿಸ್ಸಂಶಯವಾಗಿ ಇದು ಕೆಲಸಗಾರರಲ್ಲಿ ವ್ಯಕ್ತಿಗಳ ನಡುವೆ ಸಂಬಂಧವನ್ನು ಕುರಿತು ಅಪಾರ ತರಬೇತಿ ನೀಡುವುದನ್ನು ಅವಶ್ಯವಾಗಿಸಿದೆ. ಆದ್ದರಿಂದ ಕಲಿಕಾರ್ಥಿಗಳಲ್ಲಿ ಸಾಂಘಿಕಕ್ರಿಯೆ(ಖಿಜಚಿಟ ತಿಡಿಞ)ಯ ಗುಣಗಳನ್ನು ಬೆಳೆಸುವುದು ಮತ್ತು ಪರಸ್ಪರ ವ್ಯಕ್ತಿಗಳ ನಡುವಣ ಸಂಬಂಧವನ್ನು ಬೆಳೆಸುವುದು ಶಿಕ್ಷಣ ವ್ಯವಸ್ಥೆಯ ಕರ್ತವ್ಯವಾಗುತ್ತದೆ.

## ಸಹಬಾಳ್ವೆಯನ್ನು ಕಲಿಯುವುದು

21ನೇ ಶತಮಾನದಲ್ಲಿ ಮಾನವ ಸಮಾಜವು ಎದುರಿಸಬೇಕಾಗಬಹುದಾದ ಸ್ವಯಂನಾಶದ ಬೆದರಿಕೆಯಂತಹ ಅಪಾಯವನ್ನು ಹಿಂದೆಂದೂ ಮುಖಾಮುಖಿಯಾಗಿ ಎದುರಿಸಿಲ್ಲ. ಮಾನವ ಜೀವಿಗಳು ಬಿಕ್ಕಟ್ಟು, ನಾಶ ಮತ್ತು ಸಾಮೂಹಿಕ ಹತ್ಯೆಗಳಿಗೆ ಮೂಕಪ್ರೇಕ್ಷಕರಾಗುತ್ತಿದ್ದಾರೆ. ಆದ್ದರಿಂದ, ಇತರ ಜನರಿಗೆ, ಅವರ ಸಂಸ್ಕೃತಿಗೆ, ಅಪಾರ ಆಧ್ಯಾತ್ಮಿಕ ಮೌಲ್ಯಗಳಿಗೆ ಗೌರವ ಕೊಡುವ ಮೂಲಕ ಬಿಕ್ಕಟ್ಟನ್ನು ನಿವಾರಿಸಲು ಅಥವಾ ಅವನ್ನು ಶಾಂತಿಪೂರ್ಣವಾಗಿ ಪರಿಹರಿಸಲು ನೆರವಾಗುವಂತಹ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವ ಅಗತ್ಯವಿದೆ. ಪೂರ್ವಾಗ್ರಹಗಳನ್ನು ಮತ್ತು ಬಿಕ್ಕಟ್ಟುಗಳನ್ನು ಪರಿಹರಿಸುವ ಅನೇಕ ಮಾರ್ಗಗಳಲ್ಲಿ ಒಂದಾದ 'ಅಹಿಂಸೆ'ಯನ್ನು ಆಯೋಗವು ಪ್ರತಿಪಾದಿಸಿದೆ. ಅಷ್ಟೇ ಅಲ್ಲದೆ ಪೂರ್ವಾಗ್ರಹಗಳನ್ನು ಮತ್ತು ಹಗೆತನಗಳನ್ನು ಕಡಿಮೆ ಮಾಡಲು ಮತ್ತು ಸಹಕಾರ, ಮಿತ್ರತ್ವಗಳಿಗೆ ದಾರಿಮಾಡಲು ರಾಷ್ಟ್ರಗಳು ಸಾಮಾನ್ಯ ಗುರಿಗಳನ್ನು ಉದ್ದೇಶಗಳನ್ನು ಹೊಂದಿರಬೇಕಾಗುತ್ತದೆ. ಆದ್ದರಿಂದ, ಆಯೋಗ ಹೀಗೆ ಸಲಹೆ ನೀಡಿದೆ: "ಕ್ರೀಡೆ ಅಥವಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ಮತ್ತು ನೆರೆಹೊರೆಯ ಸಂಬಂಧ, ಪುನರುಜ್ಜೀವನ, ವಂಚಿತರಿಗೆ ನೆರವು, ಮಾನವ ಹಿತಕಾಯ, ಅಂತರ್‌ಪೀಳಿಗೆಗೆ ನೆರವು ಇವೇ ಮೊದಲಾದ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗುವುದರ ಮೂಲಕ ಸಹಕಾರಿ ಕಾರ್ಯಗಳಲ್ಲಿ ಕ್ರಿಯಾಶೀಲರಾಗಲು ಮಕ್ಕಳಿಗೆ ಶೈಶವದಿಂದಲೇ ಪರಿಚಯಿಸಲು, ಸಾಕಷ್ಟು ಸಮಯ ಮತ್ತು ಅವಕಾಶಗಳು ತನ್ನ ಕಾರ್ಯಕ್ರಮಗಳಲ್ಲಿರುವಂತೆ ಸಾಂಪ್ರದಾಯಿಕ ಶಿಕ್ಷಣ ನೋಡಿಕೊಳ್ಳಬೇಕು." "ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಬಿಕ್ಕಟ್ಟುಗಳನ್ನು ಪರಿಹರಿಸಲು ಒಟ್ಟಿಗೆ ಕೈಜೋಡಿಸಬೇಕು. ಇದರಿಂದ ಶಿಕ್ಷಕ  ವಿದ್ಯಾರ್ಥಿ ಸಂಬಂಧವೂ ವರ್ಧಿಸುತ್ತದೆ"

## ತಾನು ತಾನಾಗಿ ಬಾಳಲು ಕಲಿಯುವುದು

ಈ ಹಿಂದೆ ಪರಿಚಯಿಸಿದ ಮೂರು ವಿಧದ ಕಲಿಕೆಗಳು ನಾಲ್ಕನೇ ವಿಧದ ಕಲಿಕೆ ಆಧಾರವಾಗಿರುತ್ತವೆ. ಈ ವಿಧದ ಕಲಿಕೆ ಮಾನವ ವ್ಯಕ್ತಿತ್ವ, ಶರೀರ, ಮನ, ಬುದ್ಧಿಚೇತನ, ಸರ್ವಾಂಗೀಣ ವಿಕಾಸವನ್ನು ಗುರಿಯನ್ನಾಗಿಟ್ಟುಕೊಂಡಿದೆ. ಪ್ರತಿಯೊಬ್ಬ ವ್ಯಕ್ತಿಯೂ ಸ್ವತಂತ್ರವೂ ವಿಮರ್ಶಾತ್ಮಕವೂ ಆದ ಚಿಂತನಾಶಕ್ತಿಯನ್ನು ಬೆಳೆಸಿಕೊಳ್ಳುವುದರ ಜೊತೆಗೆ ತನ್ನದೇ ಆದ ನಿರ್ಣಯವನ್ನು ತೆಗೆದುಕೊಳ್ಳುವ ಶಕ್ತಿಯನ್ನು ರೂಪಿಸಿಕೊಳ್ಳಬೇಕು. ಅಂತರರಾಷ್ಟ್ರೀಯ ಶಿಕ್ಷಣ ಆಯೋಗ, 1972 ತನ್ನ ವರದಿಯಲ್ಲಿ "ವಿಶ್ವವು ತಾಂತ್ರಿಕ ಪರಿವರ್ತನೆಯಿಂದಾಗಿ ಅಮಾನವೀಕರಣವಾಗುವ ಸಂಭವವಿದೆ" ಎಂದು ಹೇಳಿದೆ. ಆದ್ದರಿಂದ, ಶಿಕ್ಷಣವು, ವ್ಯಕ್ತಿಯು ತನ್ನ ಸಮಸ್ಯೆಗಳನ್ನು ತಾನೇ ಪರಿಹರಿಸಿಕೊಳ್ಳಲು, ತನ್ನದೇ ನಿರ್ಧಾರಗಳನ್ನು ತೆಗೆದುಕೊಳ್ಳಲು ಮತ್ತು ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ನೆರವಾಗಬೇಕು. "ಜನರು ತಮ್ಮ ಹುಟ್ಟು ಸಾಮರ್ಥ್ಯಗಳನ್ನು ಬೆಳೆಸಿಕೊಂಡು ತಮ್ಮ ಜೀವನವನ್ನು ಸಾಧ್ಯವಾದಷ್ಟು ನಿಯಂತ್ರಣದಲ್ಲಿರಿಸಿಕೊಳ್ಳಲು ಬೇಕಾದ ಚಿಂತನಾ ಸ್ವಾತಂತ್ರ್ಯ, ನಿರ್ಣಯ ಸಾಮರ್ಥ್ಯ, ಭಾವನೆ ಮತ್ತು ಕಲ್ಪನಾ ಶಕ್ತಿಗಳನ್ನು" ಒದಗಿಸಿಕೊಡಲು ಶಿಕ್ಷಣವು ಪ್ರಯತ್ನಿಸಬೇಕು

ಇಪ್ಪತ್ತೊಂದನೇ ಶತಮಾನದ ಆದಿಭಾಗದಲ್ಲಿ, ಮಾನವನ ಸ್ವಾತಂತ್ರ್ಯದ ಅತಿ ಸ್ಪಷ್ಟ ವ್ಯಕ್ತ ಸ್ವರೂಪಗಳಾದ ಕಲ್ಪನಾಶಕ್ತಿ ಮತ್ತು ಸೃಜನಾತ್ಮಕತೆಗಳ ಗುಣಗಳಿಗೆ ವೈಯಕ್ತಿಕ ವರ್ತನೆಯ ಮಾನಕೀಕರಣವು ದಾರಿಮಾಡಿಕೊಡಬೇಕಾದ ಅವಶ್ಯಕತೆಯಿದೆ. ಆಯೋಗವು ಹೀಗೆ ಒತ್ತಿ ಹೇಳಿದೆ: "...ಆದ್ದರಿಂದ ಮಕ್ಕಳಿಗೆ ಮತ್ತು ಯುವಕರಿಗೆ ಸೌಂದರ್ಯಶಾಸ್ತ್ರೀಯ, ಕಲಾತ್ಮಕ, ಕ್ರೀಡಾಸಂಬಂಧಿತ, ವೈಜ್ಞಾನಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಅನ್ವೇಷಣೆ ಮತ್ತು ಪ್ರಯೋಗಗಳಿಗೆ

ಹಾಗೂ ಅವರ ಸಮಕಾಲೀನರ ಅಥವಾ ಹಿಂದಿನ ಪೀಳಿಗೆಗಳ ಕೊಡುಗೆಗಳ ಪರಿಚಯಕ್ಕೆ ಸಾಧ್ಯವಿರುವ ಎಲ್ಲಾ ಅವಕಾಶಗಳನ್ನು ಒದಗಿಸುವುದು ಅತ್ಯಗತ್ಯ. ಸಾರಭೂತವಾಗಿ ಹೇಳುವುದಾದರೆ ಶಿಕ್ಷಣವು ಮಾನವ ಜೀವಿಗಳಲ್ಲಿ ಪೂರ್ಣವಿಕಸಿತ ವ್ಯಕ್ತಿತ್ವವನ್ನು ಪೋಷಿಸುವ ಪ್ರಯತ್ನ ಕೈಗೊಳ್ಳಲೇಬೇಕು.

21ನೇ ಶತಮಾನದ ಮೂರು ಪಠ್ಯಕ್ರಮಸಂಬಂಧಿ ಚರ್ಚೆಗಳ ವಿಷಯಗಳೆಂದರೆ, ಸ್ವಾಯತ್ತ ಕಲಿಕಾರ್ಥಿಗಳು, ಸಹಭಾಗಿ ಪೌರತ್ವ ಮತ್ತು ಜಾಗತೀಕರಣ. ಇವು ವಿವಾದಗಳಲ್ಲಿ ಅಧಿಕವಾಗಿಯೇ ಚರ್ಚಿತವಾದ ಅಂಶಗಳು. ಸಮಕಾಲೀನ ಶಾಲಾ ಶಿಕ್ಷಣವು "ಪ್ರತಿ ಕಲಿಕಾರ್ಥಿಯು ತನ್ನದೇ ಆದ ಜ್ಞಾನದ ಅಡಿಪಾಯವನ್ನು, ಸಾಮಾರ್ಥ್ಯಗಳನ್ನು ಬೆಳೆಸಿಕೊಳ್ಳಲು ಅವಕಾಶ ಮಾಡಬೇಕು ಎಂದು ಈ ಚರ್ಚೆಗಳು ಪ್ರತಿಪಾದಿಸುತ್ತವೆ. ಯುವ ಪೀಳಿಗೆಯನ್ನು ತಮ್ಮ ಭವಿಷ್ಯದಲ್ಲಿ ಪ್ರಜಾಸತ್ತಾತ್ಮಕ ಸಮಾಜದಲ್ಲಿ ಕ್ರಿಯಾತ್ಮಕ, ಜವಾಬ್ದಾರಿಯತ ಮತ್ತು ಉತ್ಪಾದಕ ಪಾತ್ರವಹಿಸುವಂತೆ ಸಿದ್ಧಗೊಳಿಸಬೇಕು. ಇದರ ಜೊತೆಗೆ, ಶಾಲೆಗಳು ಆರ್ಥಿಕ ಮತ್ತು ಸಾಂಸ್ಕೃತಿಕ ಜಾಗತೀಕರಣಗಳಿಂದ ಉಂಟಾಗಿರುವ ಸವಾಲುಗಳನ್ನು ಎದುರಿಸಲು ವ್ಯಕ್ತಿಗಳಿಗೆ ನೆರವಾಗುವ ಉಪಕರಣಗಳಾಗಬೇಕು ಎಂಬ ನಿರೀಕ್ಷೆಯಿದೆ.

## ಶಾಲಾ ಶಿಕ್ಷಣದ ಗುರಿಗಳು – ಪಠ್ಯಕ್ರಮ ಸಿದ್ಧಾಂತದ ಆಧಾರದ ಮೇಲೆ

ಕಳೆದ ಶತಮಾನದುದ್ದಕ್ಕೂ ನಾಲ್ಕು ಪಠ್ಯಕ್ರಮ ಸಿದ್ಧಾಂತದಲ್ಲಿ ಪ್ರತಿಬಿಂಬಿತವಾಗುವ ನಾಲ್ಕು ವಿಭಿನ್ನ ಗುರಿಗಳನ್ನು ಸಾಧಿಸುವಂತೆ ಶಾಲೆಗಳಿಗೆ ಸೂಚಿಸುತ್ತಾ ಬರಲಾಗಿದೆ ಅವು ಹೀಗಿವೆ:

- ಶೈಕ್ಷಣಿಕ ವೈಚಾರಿಕತೆ: ನಿರ್ದಿಷ್ಟ ಜ್ಞಾನಶಾಖೆಗಳಿಗೆ, ತಂತ್ರಗಳಿಗೆ ಮತ್ತು ಶೈಕ್ಷಣಿಕ ಶಾಖೆಗಳಲ್ಲಿ ಹುದುಗಿರುವ ಅರಿಯುವ ಮಾರ್ಗಗಳಿಗೆ ವಿದ್ಯಾರ್ಥಿಗಳನ್ನು ಪರಿಚಯಿಸುವ ಮೂಲಕ ಬೌದ್ಧಿಕ ಬೆಳವಣಿಗೆಯನ್ನು ಸಾಧಿಸುವುದೇ ಶಾಲಾ ಶಿಕ್ಷಣದ ಮೂಲಭೂತ ಕರ್ತವ್ಯವಾಗಿದೆ.
- ಮಾನವತಾವಾದ: ವಿದ್ಯಾರ್ಥಿಗಳ ಸಾಮರ್ಥ್ಯ, ವೈಯಕ್ತಿಕ ಸ್ವಾತ್ರಂತ್ರ್ಯ, ಸ್ವಯಂ–ವಾಸ್ತವೀಕರಣ ಮತ್ತು ಸರ್ವಾಂಗೀಣ ವಿಕಾಸ ಇವುಗಳನ್ನು ಪೋಷಿಸಿ ಬೆಳೆಸುವುದೇ ಶಾಲೆಯ ಪ್ರಮುಖ ಗುರಿ.
- ಸಾಮಾಜಿಕ ದಕ್ಷತೆ: ಯುವಕರು ಸಮಾಜಕ್ಕೆ ಕೊಡುಗೆ ನೀಡುವ ಸದಸ್ಯರನ್ನಾಗಿ ಮಾಡಲು ಅವರಿಗೆ ತರಬೇತಿ ನೀಡಿ ತನ್ಮೂಲಕ ಸಮಾಜದ ಸದ್ಯದ ಮತ್ತು ಭವಿಷ್ಯದ ಶ್ರಮಶಕ್ತಿಯ ಅವಶ್ಯಕತೆಗಳನ್ನು ಪೂರೈಸುವುದೇ ಶಾಲಾ ಶಿಕ್ಷಣದ ಪ್ರಮುಖ ಉದ್ದೇಶ.
- ಸಾಮಾಜಿಕ ಪುನರ್ ನಿರ್ಮಾಣ: ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವ (ಅಸಮಾನತೆ, ಅನ್ಯಾಯ, ಬಡತನ ಇತ್ಯಾದಿ) ಮತ್ತು ಸಮಾಜ ಸುಧಾರಣೆ ಮತ್ತು ಪುನರ್ ನಿರ್ಮಾಣ ಮಾಡುವ ಒಂದು ಮೂಲಭೂತ ಉಪಕರಣವೇ ಶಾಲಾ ಶಿಕ್ಷಣ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ

'ದಿ ಟ್ರೆಷರ್ ವಿಥಿನ್' ದಸ್ತಾವೇಜು ಶಿಕ್ಷಣದ ವಿವಿಧ ಉದ್ದೇಶಗಳಲ್ಲಿ ಸೂಚಿಸಲಾದ ವಿಚಾರಗಳನ್ನು ಈ ಕೆಳಗೆ ಕೊಡಲಾಗಿದೆ. ಅವುಗಳನ್ನು ಪ್ರತ್ಯೇಕ ಉದ್ದೇಶಗಳಡಿಯಲ್ಲಿ ಸೂಕ್ತವಾಗಿ ವರ್ಗೀಕರಿಸಿ.

1. ಅರಿಯಲು ಕಲಿಯುವುದು.
2. ಮಾಡಲು ಕಲಿಯುವುದು.
3. ಸಹಬಾಳ್ವೆಯನ್ನು ಕಲಿಯುವುದು.
4. ತಾನು ತಾನಾಗಿರಲು ಕಲಿಯುವುದು.

1. ಬಿಕ್ಕಟ್ಟುಗಳನ್ನು ಶಾಂತಿಯುತವಾಗಿ ಪರಿಹರಿಸಿ.
2. ಸಾಂಘಿಕ ಕ್ರಿಯೆಯ ಗುಣಗಳು.
3. ಆತನ/ಆಕೆಯ ಪರಿಸರವನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ.
4. ಜನರಿಗೆ ಚಿಂತನಾ ಸ್ವಾತಂತ್ರ್ಯವನ್ನು ನೀಡಲು ಪ್ರಯತ್ನ.
5. ಆತ/ಆಕೆಯ ವೈಯಕ್ತಿಕ ಸಾಮರ್ಥ್ಯದ ಬೆಳವಣಿಗೆ.
6. ರಾಷ್ಟ್ರಗಳು ಸಾಮಾನ್ಯ ಉದ್ದೇಶಗಳನ್ನು ಹೊಂದಿರಬೇಕು.
7. ಅರ್ಥಮಾಡಿಕೊಳ್ಳುವಿಕೆಯನ್ನು ಪೋಷಿಸುವ ಪ್ರಯತ್ನ.
8. ತನ್ನ ಸಮಸ್ಯೆಯನ್ನು ತಾನೇ ಪರಿಹರಿಸಿಕೊಳ್ಳಲು ನೆರವು.
9. ಕಲಿಯುವುದನ್ನು ಕಲಿಯುವುದರ ಪೂರ್ವ ಸೂಚನೆ.
10. ಸಂವಹನ ಮತ್ತು ಇತರರೊಡನೆ ಕಾರ್ಯಪ್ರವೃತ್ತರಾಗುವ ಸಾಮರ್ಥ್ಯಗಳು.
11. ಬಾಲ್ಯದಿಂದಲೇ ಸಹಕಾರ ಕೆಲಸಗಳಲ್ಲಿ ತೊಡಗುವ ಪ್ರವೃತ್ತಿ ಬೆಳೆಸುವುದು.
12. ತನ್ನದೇ ಆದ ನಿರ್ಧಾರ ತೆಗೆದುಕೊಳ್ಳಲು ನೆರವು.

## 1.3.3.3. ಶಿಕ್ಷಣದ ಗುರಿಗಳು/ ಶಾಲಾ ಶಿಕ್ಷಣದ ಗುರಿಗಳು– ಭಾರತೀಯ ಸಂದರ್ಭ

## I. ಭಾರತದ ಸಂವಿಧಾನದಿಂದ ವ್ಯುತ್ಪನ್ನಗೊಂಡಂತೆ ಶಾಲಾ ಶಿಕ್ಷಣದ ಗುರಿಗಳು

1. **ಜನರಲ್ಲಿ ಪ್ರಜಾಸತ್ತಾತ್ಮಕ ಪೌರತ್ವ ಮತ್ತು ಮೌಲ್ಯಗಳ ವಿಕಾಸ:** ಪ್ರಜಾಪ್ರಭುತ್ವದ ಸಫಲತೆ ಬಹಳಮಟ್ಟಿಗೆ ಜನರಿಗೆ ತಮ್ಮ ಹಕ್ಕಗಳು ಮತ್ತು ಕರ್ತವ್ಯಗಳ ಬಗೆಗೆ ಇರುವ ಅರಿವನ್ನು ಹಾಗೂ ಅವರು ತಮ್ಮ ಕರ್ತವ್ಯಗಳನ್ನು ಎಷ್ಟರ ಮಟ್ಟಿಗೆ ನಿಭಾಯಿಸುತ್ತಾರೆ ಎಂಬುದನ್ನು ಅವಲಂಬಿಸಿದೆ. ಪ್ರಜಾಸತ್ತಾತ್ಮಕ ಪೌರತ್ವದ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಪ್ರಮುಖವಾಗಿ ಬೇಕಾದ ಗುಣಗಳನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ನೆರವಾಗುವಂತಹ ವಿಧದ ಶಿಕ್ಷಣವನ್ನು ಒದಗಿಸುವ ಜವಾಬ್ದಾರಿಯನ್ನು ಶಿಕ್ಷಣವು ವಹಿಸಿಕೊಳ್ಳಬೇಕು. ಜನರಲ್ಲಿ ಒಳಿತು ಕೆಡಕುಗಳ ಬಗ್ಗೆ ಚಿಂತಿಸಿ ಬೇರ್ಪಡಿಸುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿವಾದಾಂಶಗಳನ್ನು ಅರ್ಥಮಾಡಿಕೊಳ್ಳುವ ಹಾಗೂ ಅಂತಹ ಸಮಸ್ಯೆಗಳನ್ನು ಪರಿಹರಿಸುವ ಸಾಧ್ಯತೆಗಳ ಬಗ್ಗೆ ಆಲೋಚಿಸುವ ಸಾಮರ್ಥ್ಯವನ್ನು ವಿಕಾಸಗೊಳಿಸುವುದು ಶಿಕ್ಷಣದ ಗುರಿಯಾಗಿದೆ. ಹೀಗಾಗಿ ಪ್ರತಿಯೊಬ್ಬರಲ್ಲಿ ಪ್ರಜಾಸತ್ತಾತ್ಮಕ ಪೌರತ್ವವನ್ನು ರೂಪಿಸುವುದು ಮತ್ತು ಅದರತ್ತ ಅವನನ್ನು ನಿರ್ದೇಶಿಸುವುದು ಶಿಕ್ಷಣಕ್ಕೆ ಒಂದು ಸವಾಲೆನಿಸುವ ಜವಾಬ್ದಾರಿಯಾಗಿದೆ. ಪ್ರಜಾಸತ್ತಾತ್ಮಕ ಪೌರತ್ವವನ್ನು ವಿಕಾಸಗೊಳಿಸುವುದು ಶಾಲೆಗಳ ಜವಾಬ್ದಾರಿಯಾಗಿದೆ.

2. **ಕೌಶಲಯುಕ್ತ ಜೀವನಕ್ಕೆ ತರಬೇತಿ:** ಪ್ರಜಾಸತ್ತಾತ್ಮಕ ಆದರ್ಶಗಳು ಸಮಾಜದಲ್ಲಿ ವ್ಯಕ್ತಗೊಂಡಾಗ ಮಾತ್ರ ಪ್ರಜಾಪ್ರಭುತ್ವ ಸಫಲವಾಯಿತು ಎಂದು ಹೇಳಬಹುದು ಮತ್ತು ಇದನ್ನು ಸಾಕಾರಗೊಳಿಸಲು ಶಿಕ್ಷಣದ ಮೂಲಕ ವ್ಯಕ್ತಿಯ ಸಾಮಾಜೀಕರಣ ಅತ್ಯಗತ್ಯ. ವೈಜ್ಞಾನಿಕ ಮನೋಭಾವವುಳ್ಳ ಮನಸ್ಸು, ಹೃದಯ ವೈಶಾಲ್ಯತೆ, ಸಹನೆ, ಪರಸ್ಪರ ಕೊಡುಕೊಳ್ಳುವಿಕೆ, ಅನ್ಯರಾಷ್ಟ್ರಗಳ ಸಂಸ್ಕೃತಿಗೆ ಗೌರವ ಇವೇ ಮುಂತಾದ ಕೆಲವು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ರೂಢಿಸುವಂತಹ ಶಿಕ್ಷಣ ವ್ಯವಸ್ಥೆಯನ್ನು ವಿನ್ಯಾಸಗೊಳಿಸಬೇಕು. ವ್ಯಕ್ತಿಯಲ್ಲಿ ಸಾಮಾಜಿಕ ಗುಣಗಳಾದ ಸಾಂಘಿಕ ಸ್ಪಂದನೆ, ಸಹಕಾರ, ಶಿಸ್ತು, ಸಹಾನುಭೂತಿ, ಭ್ರಾತೃತ್ವ

ಇತ್ಯಾದಿಗಳನ್ನು ಬೆಳೆಸುವುದೂ ಅಪೇಕ್ಷಣೀಯ. ಸಾಮಾಜಿಕ ನ್ಯಾಯದಲ್ಲಿ ವಿಶ್ವಾಸವನ್ನು ಸೃಷ್ಟಿಸುವ ಮತ್ತು ಅನ್ಯಾಯದ ವಿರುದ್ಧ ಹೋರಾಡುವ ಇಚ್ಛೆಯನ್ನು ಮೂಡಿಸುವ ಗುರಿಯನ್ನು ಶಿಕ್ಷಣವು ಹೊಂದಿರಬೇಕಾಗುತ್ತದೆ. ಶಿಕ್ಷಣವು ಮಾನವರು ಪರಸ್ಪರ ಹೊಂದಿಕೊಂಡು ಹೋಗಲು ನೆರವಾಗುತ್ತದೆ. ಆದ್ದರಿಂದ, ಶಿಕ್ಷಣವು ಮಕ್ಕಳಲ್ಲಿ ಈ ಮೌಲ್ಯಗಳನ್ನು ವಿಕಾಸಗೊಳಿಸುವತ್ತ ಗುರಿಯಿಡಬೇಕು.

3. **ಔದ್ಯೋಗಿಕ ಕುಶಲತೆಯ ವಿಕಾಸ:** ಕಲಿಕಾರ್ಥಿಗಳಲ್ಲಿ ಕೆಲವು ಔದ್ಯೋಗಿಕ ಮತ್ತು ವೃತ್ತಿಪರ ಕೌಶಲಗಳನ್ನು ಬೋಧಿಸುವುದು ರಾಷ್ಟ್ರದ ಪ್ರಥಮ ಕರ್ತವ್ಯ. ಇದರಿಂದ ಅವರು ತಮ್ಮ ಜೀವನೋಪಾಯವನ್ನು ಕಂಡುಕೊಳ್ಳಲು ಸಮರ್ಥರಾಗುತ್ತಾರಲ್ಲದೆ ರಾಷ್ಟ್ರದ ಆರ್ಥಿಕ ಪ್ರಗತಿಗೂ ಕೊಡುಗೆ ನೀಡುತ್ತಾರೆ. ದೇಶದ ರಾಷ್ಟ್ರದ ಸಂಪತ್ತನ್ನು ವೃದ್ಧಿಗೊಳಿಸಲು ಯುವ ವಿದ್ಯಾರ್ಥಿಗಳ ಉತ್ಪಾದಕ ಅಥವಾ ಔದ್ಯೋಗಿಕ ಕೌಶಲಗಳನ್ನು ಹೆಚ್ಚಿಸುವ ಗುರಿಯನ್ನು ಶಿಕ್ಷಣವು ಹೊಂದಿರಬೇಕು. ಆದ್ದರಿಂದ ಕೆಲಸದ ಘನತೆಗೆ ಮತ್ತು ವ್ಯಕ್ತಿಯ ಉತ್ಪಾದನಾ ದಕ್ಷತೆಗೆ ಮೆಚ್ಚುಗೆ ಸೂಚಿಸುವ ಮನೋಭಾವವನ್ನು ಮೂಡಿಸುವುದು ಶಾಲೆಗಳ ಗುರಿಯಾಗಬೇಕು.

4. **ಸಾಮಾಜಿಕ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ವಿಕಾಸ:** ಪ್ರಜಾಪ್ರಭುತ್ವದ ಸಫಲತೆ, ಅದರ ಬಲ ಮತ್ತು ಸ್ಥಿರತೆ ಜನರಿಗೆ ಸಾಮಾಜಿಕ ಹೊಣೆಯ ಬಗೆಗಿರುವ ವಿಕಸಿತ ಪ್ರಜ್ಞೆ ಮತ್ತು ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳ ಆಳವಾದ ಗ್ರಹಿಕೆಗಳನ್ನು ಅವಲಂಬಿಸಿದೆ. ಆದ್ದರಿಂದ ಶಾಲೆಗಳು ಸಾಮಾಜಿಕ ಹೊಣೆಯ ಪ್ರಜ್ಞೆಯನ್ನು ಗಾಢಗೊಳಿಸುವ ಮತ್ತು ನೈತಿಕ, ಆಧ್ಯಾತ್ಮಿಕ ಮೌಲ್ಯಗಳ ಗ್ರಹಿಕೆಯನ್ನು ಮತ್ತಷ್ಟು ಬಲಗೊಳಿಸುವ ಮತ್ತು ಗಾಢಗೊಳಿಸುವ ಗುರಿಯನ್ನಿಟ್ಟುಕೊಳ್ಳಬೇಕು.

5. **ರಾಷ್ಟ್ರೀಯ ಪ್ರಜ್ಞೆಗೆ ಉತ್ತೇಜನ:** ಭಾರತವು ಹಲವು ಜಾತಿ, ಜನ ಸಮುದಾಯ, ಭಾಷೆ, ಧರ್ಮ ಸಂಸ್ಕೃತಿಗಳಿಗೆ ಆಶ್ರಯತಾಣವಾಗಿದೆ. ಸಾಮಾಜಿಕ ಮತ್ತು ರಾಜಕೀಯ ಏಕತೆಯನ್ನು ಸಾಧಿಸುವಿಕೆ ನಮ್ಮ ಶಿಕ್ಷಣ ವ್ಯವಸ್ಥೆಯ ಪ್ರಮುಖ ಗುರಿಯಾಗಿದೆ. ಆದ್ದರಿಂದ 'ವಿವಿಧತೆಯಲ್ಲಿ ಏಕತೆ'ಯನ್ನು ಕಂಡುಕೊಳ್ಳಲು ನಮ್ಮ ವಿದ್ಯಾರ್ಥಿಗಳನ್ನು ಸಮರ್ಥರನ್ನಾಗಿಸುವುದು ಶಿಕ್ಷಣದ ಪ್ರಮುಖ ಪಾತ್ರವಾಗಿದೆ. ಹೀಗೆ ಶಾಲೆಗಳ ಯೋಜಿತ ಚಟುವಟಿಕೆಗಳ ಮೂಲಕ ಈ ರಾಷ್ಟ್ರಪ್ರಜ್ಞೆಗೆ ಉತ್ತೇಜನ ಕೊಡುವ ಗುರಿಯನ್ನು ಹೊಂದಿರಬೇಕು.

6. **ಭೌತಿಕ ಸಂಪನ್ಮೂಲಗಳ ಅಭಿವೃದ್ಧಿ:** ಭಾರತದಂತಹ ಪ್ರಜಾಪ್ರಭುತ್ವದಲ್ಲಿ ಕೃಷಿಯ ಆಧುನೀಕರಣ ಮತ್ತು ತೀವ್ರಗತಿಯ ಕೈಗಾರಿಕೀಕರಣಗಳೂ ಶಿಕ್ಷಣದ ಪ್ರಮುಖ ಗುರಿಯಾಗಿರಬೇಕು. ಈ ಉದ್ದೇಶವನ್ನು ಸಾಧಿಸಲು ಶಿಕ್ಷಣವು ಉತ್ಪಾದಕತೆಗೆ ಸಂಬಂಧಿರಬೇಕು, ವಿಜ್ಞಾನವನ್ನು ಶಿಕ್ಷಣದ ಮೂಲಭೂತ ಅಂಗವೆಂದು ಪರಿಗಣಿಸಬೇಕು, ಕಾರ್ಯಾನುಭವವನ್ನು ಪ್ರಧಾನವೆಂದು ಪರಿಗಣಿಸಬೇಕು, ಔದ್ಯೋಗಿಕ ಶಿಕ್ಷಣವನ್ನು ವಿಸ್ತಾರಗೊಳಿಸಬೇಕು, ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣಗಳನ್ನು ಸುಧಾರಿಸಬೇಕು. ಇದಕ್ಕೆ ಸಂಬಂಧಿಸಿದಂತೆ, ಶಾಲೆಗಳು ವಿದ್ಯಾರ್ಥಿಗಳಲ್ಲಿ ಅವಶ್ಯಕ ಸಾಮರ್ಥ್ಯಗಳನ್ನು ಬೆಳೆಸುವಂತಹ ಉತ್ಪಾದಕ ಕೌಶಲ್ಯಗಳನ್ನು ಅವರಲ್ಲಿ ವಿಕಾಸಗೊಳಿಸಬೇಕು.

7. **ಮಾನವ ಸಂಪನ್ಮೂಲಗಳ ಅಭಿವೃದ್ಧಿ:** ಜನರ ಜ್ಞಾನ, ಕುಶಲತೆಗಳು, ಆಸಕ್ತಿಗಳು ಮತ್ತು ಮೌಲ್ಯಗಳ ಪಲ್ಲಟದಿಂದಾಗಿ ಒಟ್ಟಾರೆ ಬದಲಾವಣೆ ಎಂಬುದು ಈ ಗುರಿಯಿಂದ ಧ್ವನಿತವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಯೇ ಗುರಿ. ಆ ವ್ಯಕ್ತಿಗೆ ತನ್ನ ಅಂತಸ್ಸತ್ವಗಳನ್ನು ಸಾಮಾಜಿಕ ಪುನರ್ ಸಂಯೋಜನೆ ಮತ್ತು ಸಾಮಾಜಿಕ ದೃಷ್ಟಿಕೋನಗಳಿಗೆ ಒತ್ತು ನೀಡುವುದರ ಮೂಲಕ ಪೂರ್ಣ ಪ್ರಮಾಣದಲ್ಲಿ ವಿಕಾಸಗೊಳಿಸಿಕೊಳ್ಳಲು ಅತ್ಯಂತ ವ್ಯಾಪಕವಾದ ಅವಕಾಶಗಳನ್ನು ಒದಗಿಸುವುದು ಶಿಕ್ಷಣದ ಪ್ರಾಥಮಿಕ ಉದ್ದೇಶವಾಗಿದೆ. ಜನರಲ್ಲಿ ಆವಶ್ಯಕವಾದ ಮೌಲ್ಯಗಳನ್ನು ವಿಕಾಸಗೊಳಿಸುವಂತೆ, ಸಮರ್ಪಕ ಮತ್ತು ಸಮರ್ಥ ನಾಯಕತ್ವವನ್ನು ಮತ್ತು ಶಿಕ್ಷಿತ ಮತದಾರ ಸಮುದಾಯವನ್ನು ವಿಕಾಸಗೊಳಿಸುವಿಕೆ – ಇವುಗಳು ಪ್ರಜಾಪ್ರಭುತ್ವವನ್ನು ಸಬಲೀಕರಿಸಲು ಆವಶ್ಯಕ. ಆದ್ದರಿಂದ ಶಾಲೆಗಳು ಭಾರತೀಯ ಪ್ರಜಾಪ್ರಭುತ್ವವನ್ನು ರಕ್ಷಿಸುವ ಸಲುವಾಗಿ ಇಂತಹ ಮಾನವ ಸಂಪನ್ಮೂಲಗಳನ್ನು ವಿಕಾಸಗೊಳಿಸುವ ಗುರಿಯನ್ನು ಸಾಧಿಸುವ ಕೆಲಸ ಮಾಡಬೇಕು. ಪ್ರಜಾಪ್ರಭುತ್ವದ

ಬಹುಪಾಲು ಸದಸ್ಯರು ಶಾರೀರಿಕ, ಮಾನಸಿಕ ಸಾಮಾಜಿಕ, ನೈತಿಕ ಮತ್ತು ಆಧ್ಯಾತ್ಮಿಕ ವಿಕಾಸದ ಮೂಲಕ ಪಕ್ವ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದಾಗ ಮಾತ್ರ ಅದು ಯಶಸ್ವಿಯಾಗಲು ಸಾಧ್ಯ. ಈ ಗುರಿಗಳು ಸಾಮಾಜಿಕ ಅಥವಾ ರಾಷ್ಟ್ರೀಯ ಉದ್ದೇಶಗಳಾಗಿದ್ದು ಅವುಗಳನ್ನು ಶಿಕ್ಷಣದ ಮೂಲಕ ಸಾಧಿಸಬೇಕಾಗಿದೆ. ಇವುಗಳು ಸಮಾಜವನ್ನು ದೃಢಗೊಳಿಸಲು ಅತ್ಯಗತ್ಯ.

## ಶಾಲಾ ಶಿಕ್ಷಣದ ಗುರಿಗಳು – ನಿಗಮನಗಳು

ಈ ಮೇಲಿನ ಚರ್ಚೆಯಿಂದ ಶಾಲೆಗಳ ಗುರಿಗಳಿಗೆ ಸಂಬಂಧಿಸಿದಂತೆ ಕೆಳಗಿನ ಅಂಶಗಳನ್ನು ನಿಗಮನಗೊಳಿಸಬಹುದು.

- ಪ್ರಜಾಸತ್ತಾತ್ಮಕ ಪೌರತ್ವ
- ಜೀವನದ ಕೌಶಲ್ಯಗಳು
- ಔದ್ಯೋಗಿಕ ಕೌಶಲ್ಯಗಳು
- ಸಾಮಾಜಿಕ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳು
- ರಾಷ್ಟ್ರೀಯ ಪ್ರಜ್ಞೆ
- ಭೌತಿಕ ಸಂಪನ್ಮೂಲಗಳು ಮತ್ತು ಮಾನವ ಸಂಪನ್ಮೂಲಗಳು

## II. ರಾಷ್ಟ್ರೀಯ ಶಿಕ್ಷಣ ನೀತಿ (1986)ಯಿಂದ ವ್ಯುತ್ಪನ್ನಗೊಂಡಂತೆ ಶಾಲಾ ಶಿಕ್ಷಣದ ಗುರಿಗಳು

ಭಾರತ ಸರ್ಕಾರ "ರಾಷ್ಟೀಯ ಶಿಕ್ಷಣ ನೀತಿ 1986" ಎಂಬ ಶೀರ್ಷಿಕೆಯಡಿ ತನ್ನ ಹೊಸ ಶಿಕ್ಷಣ ನೀತಿಯನ್ನು ಘೋಷಿಸಿತು. ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಪಿಇ 1986) ಪ್ರಕಾರ ಶಿಕ್ಷಣದ ಗುರಿಗಳು ಈ ಕೆಳಗಿನಂತಿರಬೇಕು:

### ಎ) ವ್ಯಕ್ತಿಯ ಮತ್ತು ಸಮಾಜದ ಸರ್ವಾಂಗೀಣ ವಿಕಾಸಕ್ಕೆ ಪೋಷಣೆ.

ಬಿ) ಭಾರತದ ಸಾಮಾನ್ಯ ಸಾಂಸ್ಕೃತಿಕ ಪರಂಪರೆ, ಸಮತಾವಾದ, ಪ್ರಜಾಪ್ರಭುತ್ವ ಸಮಾಜವಾದ ಮತ್ತು ಧರ್ಮನಿರಪೇಕ್ಷತೆ, ಲಿಂಗ ಸಮಾನತೆ, ರಾಷ್ಟ್ರೀಯ ಏಕತೆ, ಸಾಮಾಜಿಕ ನಿರ್ಬಂಧಗಳ ನಿವಾರಣೆ ಇವೇ ಮೊದಲಾದ ಮೌಲ್ಯಗಳಿಗೆ ಉತ್ತೇಜನ.

ಸಿ) ಜಾತಿ, ಪಂಥ, ಪ್ರದೇಶ ಅಥವಾ ಲಿಂಗ ಮುಂತಾದುವುಗಳನ್ನು ಪರಿಗಣಿಸದೆ ಎಲ್ಲ ವಿದ್ಯಾರ್ಥಿಗಳಿಗೂ ಒಂದೆ ರೀತಿಯ ಗುಣಾತ್ಮಕ ಶಿಕ್ಷಣವನ್ನು ಒದಗಿಸುವುದು.

ಡಿ) ರಾಷ್ಟ್ರೀಯ ಸ್ವಾವಲಂಬನೆಯನ್ನು ಖಚಿತಪಡಿಸಿಕೊಳ್ಳು ನೆರವಾಗುವ ಎಲ್ಲಾ ಮಟ್ಟದಲ್ಲಿನ ಆರ್ಥಿಕ ಸ್ತರದಲ್ಲಿ ಶ್ರಮಶಕ್ತಿ (ಒಚಿಟಿ ಠಠತಿಜಡಿ)ಯನ್ನು ಅಭಿವೃದ್ಧಿಗೊಳಿಸುವುದು.

ಇ) ವೈಜ್ಞಾನಿಕ ಮನೋಭಾವ ಹಾಗೂ ಮನಸ್ಸು ಚೇತನಗಳ ಸ್ವಾತಂತ್ರ್ಯಗಳನ್ನು ವಿಕಾಸಗೊಳಿಸುವುದು.

ಎಪ್) ಶಿಕ್ಷಣ ವ್ಯವಸ್ಥೆಯ ಎಲ್ಲ ಮಟ್ಟದಲ್ಲಿ ಗುಣಾತ್ಮಕತೆಯನ್ನು ಸುಧಾರಿಸಲು ಅದನ್ನು ಪುನರ್ ಸಂರಚಿಸುವುದು ಮತ್ತು ವಿಜ್ಞಾನ ತಂತ್ರಜ್ಞಾನ, ನೈತಿಕ ಮೌಲ್ಯಗಳ ವಿಕಾಸ ಹಾಗೂ ಶಿಕ್ಷಣ ಮತ್ತು ಜನರ ಜೀವನದ ನಡುವಣ ಹತ್ತಿರದ ಸಂಬಂಧಗಳಿಗೆ ಅಧಿಕ ಗಮನ ನೀಡುವುದು.

ಜಿ) ವಿದ್ಯಾರ್ಥಿಗಳ ಮನದಲ್ಲಿ ರಾಷ್ಟ್ರೀಯ ಏಕತೆ ಹಾಗೂ ಧರ್ಮನಿರಪೇಕ್ಷತೆ, ವೈಜ್ಞಾನಿಕ ಹಾಗೂ ನೈತಿಕ ಮೌಲ್ಯಗಳ ಪ್ರಾಮುಖ್ಯವನ್ನು ಅಚ್ಚೊತ್ತುವಂತೆ ಭೋಧಿಸುವುದು.

ಹೆಚ್) ಜಾಗತಿಕ ದೃಷ್ಟಿಯನ್ನು ಬಲಪಡಿಸುವುದು ಮತ್ತು ಯುವ ಪೀಳಿಗೆಯನ್ನು ಅಂತರ ರಾಷ್ಟ್ರೀಯ ಸಹಕಾರ ಮತ್ತು ಶಾಂತಿಯುತ ಸಹಬಾಳ್ವೆಗೆ ಪ್ರೇರೇಪಿಸುವುದು.

ಐ) ಸಮಾನತೆಗೆ ಉತ್ತೇಜನ ನೀಡಲು ಸರ್ವರಿಗೂ ಸಮಾನ ಅವಕಾಶ ಆಥವಾ ಲಭ್ಯತೆಯನ್ನು ಒದಗಿಸುವುದಷ್ಟೇ ಅಲ್ಲದೆ ಯಶಸ್ಸಿಗೆ ಅಗತ್ಯವಾದ ಪರಿಸ್ಥಿತಿಗಳನ್ನು ಕಲ್ಪಿಸಿಕೊಡುವುದು.

ಜೆ) ಪರಿಸರ ಸಂರಕ್ಷಣೆಯ ಪ್ರಮುಖತೆಯನ್ನು ಕುರಿತ ಪ್ರಜ್ಞೆಯನ್ನು ಮೂಡಿಸುವುದು ಹಾಗೂ ಸಣ್ಣ ಕುಟುಂಬದ ರೂಢಿಗಳ ಆಚರಣೆಯನ್ನು ಪಾಲಿಸುವಂತೆ ಬೋಧಿಸುವುದು.

ಕೆ) ವಿದ್ಯಾರ್ಥಿಗಳನ್ನು ಮುಕ್ತ ಹಾಗೂ ದೂರಶಿಕ್ಷಣದ ಮುಖಾಂತರ ಆದರಣೀಯ ಗುರಿಯಾದ ಜೀವನ ಪರ್ಯಂತದ ಶಿಕ್ಷಣದತ್ತ ಪ್ರೋತ್ಸಾಹಿಸುವುದು.

**ಶಾಲಾ ಶಿಕ್ಷಣದ ಗುರಿ – ನಿಗಮನಗಳು**

ಈ ಮೇಲಿನ ಚರ್ಚೆಯಿಂದ ಶಾಲೆಗಳ ಗುರಿಗಳಿಗೆ ಸಂಬಂಧಿಸಿದಂತೆ ಕೆಳಗಿನ ಅಂಶಗಳನ್ನು ನಿಗಮನಗೊಳಿಸಬಹುದು.

- ವ್ಯಕ್ತಿಯ ಹಾಗೂ ಸಮಾಜದ ಸರ್ವಾಂಗೀಣ ವಿಕಾಸವನ್ನು ಸಾಧಿಸುವ ಗುರಿ
- ರಾಷ್ಟ್ರೀಯ, ವೈಜ್ಞಾನಿಕ, ನೈತಿಕ, ಪರಿಸರ ಮೌಲ್ಯಗಳೊಂದಿಗೆ ಭಾರತೀಯ ಸಾಂಸ್ಕೃತಿಕ ಮೌಲ್ಯಗಳಿಗೆ ಒತ್ತಾಸೆ, ಯಾವುದೇ ಬೇಧಭಾವವಿಲ್ಲದೆ ಗುಣಾತ್ಮಕ ಶಿಕ್ಷಣ ಒದಗಿಸುವುದು ಮತ್ತು ಶ್ರಮ ಶಕ್ತಿಯ ವಿಕಾಸ.

## III. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005) ಇದರಿಂದ ವ್ಯುತ್ಪನ್ನಗೊಂಡಂತೆ ಶಾಲಾ ಶಿಕ್ಷಣದ ಗುರಿಗಳು

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005)–ಇದರ ಪ್ರಕಾರ ಶಿಕ್ಷಣದ ಗುರಿಗಳು ಈ ಕೆಳಗಿನಂತಿವೆ.

- ಇದರ ಅನುಸಾರ ಶಿಕ್ಷಣವು ಪ್ರಜಾಸತ್ತಾತ್ಮಕ ಮೌಲ್ಯಗಳಾದ ಸಮಾನತೆ, ನ್ಯಾಯ, ಸ್ವಾತಂತ್ರ್ಯ, ಅನ್ಯರ ಹಿತದ ಬಗೆಗೆ ಕಾಳಜಿ, ಧರ್ಮನಿರಪೇಕ್ಷ ಮಾನವೀಯ ಘನತೆ ಮತ್ತು ಹಕ್ಕುಗಳಿಗೆ ಗೌರವಗಳನ್ನು ಬೆಳೆಸಬೇಕು, ತರ್ಕ ಮತ್ತು ಅರಿವಿನ ಮೇಲೆ ಆಧರಿಸಿರುವ ಈ ಮೌಲ್ಯಗಳಿಗೆ ಬದ್ಧತೆಯನ್ನು ಬೆಳೆಸಬೇಕು, ಚಿಂತನೆ ಮತ್ತು ಕ್ರಿಯೆಗಳ ಸ್ವಾತಂತ್ರ್ಯವನ್ನು ಉತ್ತೇಜಿಸಬೇಕು, ಸ್ವತಂತ್ರವಾಗಿ ಮತ್ತು ಸಾಂಘಿಕವಾಗಿ ಮೌಲ್ಯಾಧಾರಿತ ತೀರ್ಮಾನ ಕೈಗೊಳ್ಳುವಿಕೆಯನ್ನು ಪ್ರೋತ್ಸಾಹಿಸಬೇಕು, ಕಲಿಯಲು ಬೇಕಾದ ಕಲಿಕೆಯ ಕುಶಲತೆಗಳನ್ನು ಬೋಧಿಸಬೇಕು ಮತ್ತು ನಮ್ಯವೂ ಸೃಜನಾತ್ಮಕವೂ ಆದ ರೀತಿಯಲ್ಲಿ ಹೊಸ ಹೊಸ ಪರಿಸ್ಥಿತಿಗಳಿಗೆ ಪ್ರತಿಕ್ರಿಯಿಸಲು ಸಾಧ್ಯವಾಗುವಂತೆ ಪುನರ್ ಕಲಿಕೆಗೆ ಇಚ್ಛೆಯನ್ನು ತೋರುವಂತೆ ಬೋಧಿಸಬೇಕು, ಪಠ್ಯಕ್ರಮ ಜ್ಞಾನ ನಿರ್ಮಾಣದ ಪ್ರಕ್ರಿಯೆಗಳಿಗೆ ಒತ್ತು ನೀಡಬೇಕು. ಜೀವನದಲ್ಲಿನ ಆಯ್ಕೆಗಳು ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳಲ್ಲಿ ಭಾಗವಹಿಸುವಿಕೆ ಇವು ಸಮಾಜಕ್ಕೆ ಕೊಡುಗೆಗಳನ್ನು ಕೊಡುವ ಸಾಮರ್ಥ್ಯವನ್ನು ಅವಲಂಭಿಸಿವೆ. ಈ ಕಾರಣದಿಂದಾಗಿ ಶಿಕ್ಷಣವು ಕಾರ್ಯಮಾಡುವ ಸಾಮರ್ಥ್ಯ, ಆರ್ಥಿಕ ಪ್ರಕ್ರಿಯೆಗಳಲ್ಲಿ ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ಭಾಗವಹಿಸುವ ಸಾಮರ್ಥ್ಯಗಳನ್ನು ಬೆಳೆಸಬೇಕು. ಸೌಂದರ್ಯ ಮತ್ತು ಕಲೆಯ ರೂಪಗಳ ಯೋಗ್ಯ ಗ್ರಹಿಕೆಯೂ ಮಾನವ ಜೀವನದ ಒಂದು ಅವಿಭಾಜ್ಯ ಅಂಗ. ಕಲೆ ಸಾಹಿತ್ಯ ಮತ್ತು ಇತರ ಕ್ಷೇತ್ರಗಳಲ್ಲಿನ ಸೃಜನಶೀಲತೆಗಳು ಪರಸ್ಪರ ಸಂಬಂಧ ಹೊಂದಿವೆ. ಶಿಕ್ಷಣವು ಮಗುವಿನ ಸೃಜನಶೀಲ ಅಭಿವ್ಯಕ್ತಿಯನ್ನು ಮತ್ತು ಸೌಂದರ್ಯಾತ್ಮಕ ಪ್ರಶಂಸಾಭಾವವನ್ನು ವರ್ಧಿಸಲು ಮಾರ್ಗ ಮತ್ತು ಅವಕಾಶಗಳನ್ನು ಒದಗಿಸಬೇಕು.

## ಶಾಲಾ ಶಿಕ್ಷಣದ ಗುರಿಗಳು – ನಿಗಮನಗಳು

ಈ ಮೇಲಿನ ಚರ್ಚೆಯಿಂದ ಶಾಲೆಗಳ ಗುರಿಗಳಿಗೆ ಸಂಬಂಧಿಸಿದಂತೆ ಕೆಳಗಿನ ಅಂಶಗಳನ್ನು ನಿಗಮನಗೊಳಿಸಬಹುದು.

- ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬೆಳೆಸುವುದು.
- ಈ ಮೌಲ್ಯಗಳಿಗೆ ಬದ್ಧತೆಯನ್ನು ಬೆಳೆಸುವುದು.
- ಚಿಂತನೆ ಮತ್ತು ಕ್ರಿಯೆಗಳ ತಂತ್ರ, ಕಲಿಯುವ ಕಲಿಕೆಯ ಕೌಶಲ್ಯಗಳನ್ನು ಬೆಳೆಸುವುದು.
- ಮೌಲ್ಯಾಧಾರಿತ ನಿರ್ಣಯ ತೆಗೆದುಕೊಳ್ಳುವ ಕುಶಲತೆಯನ್ನು ಪ್ರೋತ್ಸಾಹಿಸುವುದು.
- ಹೊಸತನ್ನು ಕಲಿಯುವ ಮನೋಭಾವವನ್ನು ಬೆಳೆಸುವುದು.
- ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಸಾಮರ್ಥ್ಯವನ್ನು ವಿಕಾಸಗೊಳಿಸುವುದು.
- ಕಲೆಯ ರೂಪಗಳ ಯೋಗ್ಯತಾ ಗ್ರಹಣದ ಮನೋಭಾವವನ್ನು ಪ್ರೋತ್ಸಾಹಿಸುವುದು.

# IV. ಜಾಗತೀಕರಣದ ಸಂದರ್ಭದಲ್ಲಿ ಶಿಕ್ಷಣದ ಗುರಿಗಳು

**ಜಾಗತಿಕ ಶಿಕ್ಷಣದ ಗುರಿ ಮತ್ತು ಪ್ರಾಮುಖ್ಯತೆಗಳನ್ನು ಈ ಕೆಳಗಿನಂತೆ ಉಲ್ಲೇಖಿಸಬಹುದು:**

1. ಶಿಕ್ಷಣವು ಕಲಿಕಾರ್ಥಿಗಳಲ್ಲಿ ಜ್ಞಾನವನ್ನು ಪಡೆಯುವ, ಮೌಲ್ಯಮಾಪನ ಮಾಡುವ, ಅಳವಡಿಸಿಕೊಳ್ಳುವ ಮತ್ತು ಅನ್ವಯಿಸುವ ಸಾಮರ್ಥ್ಯವನ್ನು ವರ್ಧಿಸುವ ಗುರಿಹೊಂದಿರಬೇಕು.

2. ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಯೂ ಸ್ವತಂತ್ರ್ಯವಾಗಿ ವಿಕಾಸ ಹೊಂದಲು ಎಡೆಗೊಡಬೇಕು. ವ್ಯಕ್ತಿಯು ಅಲ್ಪಕಾಲೀನ ಮೌಲ್ಯಗಳನ್ನು ಉತ್ಪಾದಿಸುತ್ತಿರುವ ನಿರಂತರ ಪರಿವರ್ತನಶೀಲ ಸಮಾಜದಲ್ಲಿ ಪರಾಮರ್ಶನ ನಿಲುವನ್ನು ಕಂಡುಕೊಳ್ಳಬೇಕು.

3. ಶಿಕ್ಷಣವು ವಿದ್ಯಾರ್ಥಿಗಳಿಗೆ ಹೊಸ ಸಂಸ್ಕೃತಿಗಳ ಕುಶಲತೆಯನ್ನು ಸಂಪಾದಿಸುವುದರಲ್ಲಿ ನೆರವಾಗಬೇಕು. ವಿಮರ್ಶಾತ್ಮಕ ಚಿಂತನಾ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದರಲ್ಲಿ, ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವುದರಲ್ಲಿ ಮತ್ತು ಪ್ರಭಾವಶಾಲಿಯಾಗಿ ವಿನ್ಯಾಸಗೊಳಿಸಿದ ಬೋಧನ ಕಲಿಕಾ ಪರಿಸರದಲ್ಲಿ ತಮ್ಮ ಜ್ಞಾನವನ್ನು ಸ್ವತಂತ್ರವಾಗಿ ಅನ್ವಯಿಸುವಲ್ಲಿ ಶಿಕ್ಷಣವು ಕಲಿಕಾರ್ಥಿಗಳಿಗೆ ನೆರವಾಗಬೇಕು.

4. ಶಿಕ್ಷಣವು ಜನರಿಗೆ ಸುಸಂಗತ ಜ್ಞಾನವನ್ನು ಪಡೆಯುವ ಸಾಮರ್ಥ್ಯವನ್ನು ಮತ್ತು ಬದಲಾಗುತ್ತಿರುವ ಪರಿಸರಕ್ಕೆ ಹೊಂದಿಕೊಳ್ಳಲು ನೆರವಾಗುವಂತಹ ಸಹನೆ, ಮಾನವೀಯ ಹಕ್ಕುಗಳಿಗೆ ಗೌರವ, ವೈವಿಧ್ಯಮಯ ಸಂಸ್ಕೃತಿಗಳಿಗೆ ಸಹನೆ, ಇತರರಿಗೆ ಮತ್ತು ಪರಿಸರಕ್ಕೆ ಆದರ ಇವೇ ಮೊದಲಾದ ಮೌಲ್ಯಗಳನ್ನು ಅರ್ಥೈಸುವ ಸಾಮರ್ಥ್ಯವನ್ನು ಒದಗಿಸಿಕೊಡಬೇಕು. ಶಿಕ್ಷಣವು ಸಮಾಜದ ಕಾಳಜಿಗಳು ಹಾಗೂ ವ್ಯಕ್ತಿಯ ಪ್ರಾಮಾಣಿಕತೆಗಳ ನಡುವೆ ಸೂಕ್ತ ಸಮತೋಲನವನ್ನು ಕಾಪಾಡಿಕೊಳ್ಳಬೇಕು.

5. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಉನ್ನತ ಮಟ್ಟದ ತರಬೇತಿ ಪಡೆದ ವ್ಯಕ್ತಿಗಳ ಅಗತ್ಯವಿರುವ ಜ್ಞಾನದ ಆಧಾರದ ಮೇಲೆ ಇಂದಿನ ಉದಯೋನ್ಮುಖ ಆರ್ಥಿಕತೆಯು ನಿಂತಿರುವುದರಿಂದ ಶಿಕ್ಷಣವು ವೈಜ್ಞಾನಿಕವಾಗಿ ಮತ್ತು ತಾಂತ್ರಿಕವಾಗಿ ಪ್ರಶಿಕ್ಷಕರಾದ ವ್ಯಕ್ತಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತಯಾರು ಮಾಡಬೇಕು.

6. ಜಾಗತಿಕ ಸಮಾಜದಲ್ಲಿ ಶಿಕ್ಷಣವು ವಿದ್ಯಾರ್ಥಿಗಳಿಗೆ ಒಟ್ಟುಗೂಡಿ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಒದಗಿಸುವ ಗುರಿಯನ್ನು ಹೊಂದಿರಬೇಕು. ಒಂದೇ ಸಮಾಜದ ಮಧ್ಯದಲ್ಲಿ, ಒಂದೇ 'ಜಾಗತಿಕ

ಹಳ್ಳಿಯಲ್ಲಿ' ಸಹನೆ, ಮಾನವೀಯ ಹಕ್ಕುಗಳಿಗೆ ಗೌರವ, ಸಂಸ್ಕೃತಿಗಳ ವಿವಿಧತೆಗೆ ಸಹನೆ, ಇತರರಿಗೆ ಮತ್ತು ಪರಿಸರಕ್ಕೆ ಆದರ ಸಮಾಜದ ಕಾಳಜಿಗಳು ಮತ್ತು ವ್ಯಕ್ತಿಗಳ ಪ್ರಾಮಾಣಿಕತೆಗಳ ನಡುವೆ ಸಮತೋಲನವನ್ನು ಕಾಪಾಡಿಕೊಳ್ಳುವಿಕೆ ಇವೇ ಮೊದಲಾದವುಗಳಿಂದ ವ್ಯಕ್ತಿಗಳು ಸಹಬಾಳ್ವೆ ನಡೆಸುವ ಇಚ್ಛೆಯನ್ನು ಹೆಚ್ಚಿಸುವ ವೇಗವರ್ಧಕದಂತೆ ಶಿಕ್ಷಣವು ಕೆಲಸ ಮಾಡಬೇಕು.

7. ಹೊಸ ಪರಿಸ್ಥಿತಿಗಳನ್ನು ಗ್ರಹಿಸಲು ಸಾಧ್ಯವಾಗುವಂತೆ ಸೂಕ್ತನಿರ್ಣಯ ಕೈಗೊಳ್ಳಲು ಮತ್ತು ಮತ್ತೊಬ್ಬರೊಂದಿಗೆ ಸೇರಿ ಕಾರ್ಯಪ್ರವೃತ್ತರಾಗಲು ತಾವು ಸಮರ್ಥರಾಗುವಂತೆ ವಿದ್ಯಾರ್ಥಿಗಳು ಸ್ವತಂತ್ರ ಚಿಂತನೆ ಕೈಗೊಳ್ಳಲು ಶಿಕ್ಷಣವು ಅವರಿಗೆ ನೆರವಾಗಬೇಕು. ಜಾಗತಿಕ ದೃಷ್ಟಿಕೋನದಿಂದ ವಿದ್ಯಮಾನಗಳನ್ನು ವಿಮರ್ಶಿಸುವಲ್ಲಿ ಜನರಿಗೆ ಶಿಕ್ಷಣ ಸಹಾಯ ನೀಡಬೇಕು

8. ಶಿಕ್ಷಣವು ವ್ಯಕ್ತಿಯು, ಸಾಂಸ್ಕೃತಿಕ ಸಂವೇದನ ಶೀಲತೆ ಹಾಗೂ ಅನುಭವಗಳನ್ನು ಪಡೆದುಕೊಳ್ಳಲು ಸಹಾಯ ಮಾಡುವ ಬಹುಮುಖ ಚಿಂತನಾ ಕೌಶಲ್ಯಗಳನ್ನು ವಿಕಾಸಗೊಳಿಸಬೇಕಲ್ಲದೆ ಭಾಷೆ ಮತ್ತು ವಿಭಿನ್ನ ಸಂಸ್ಕೃತಿಗಳ ಸಾಮರಸ್ಯದ ಕುಶಲತೆಯನ್ನು ಬೆಳೆಸಲು ನೆರವಾಗಬೇಕು.

9. ಜಾಗತೀಕರಣದ ದೆಸೆಯಿಂದಾಗುವ ಸಾಮಾಜಿಕ ವಿರೋಧಾಭಾಸಗಳನ್ನು ಮತ್ತು ಬಿಗುವುಗಳನ್ನು ಪರಿಹರಿಸಿ ನಿರ್ವಹಿಸುವಲ್ಲಿ ಅಧಿಕಾಧಿಕ ಪ್ರಮುಖ ಪಾತ್ರವನ್ನು ಶಿಕ್ಷಣವು ಹೊಂದಿರಬೇಕು.

10. ಜಾಗತಿಕ ಆರ್ಥಿಕತೆಗೆ ಅಗತ್ಯವಿರುವ ಹೊಸ ಜ್ಞಾನ ಮತ್ತು ಕೌಶಲ್ಯಗಳನ್ನು ಜನರಿಗೆ ಒದಗಿಸುವುದು ಶಿಕ್ಷಣದ ಗುರಿಯಾಗಬೇಕು. ಇಂತಹ ಜಾಗತಿಕ ಸಂದರ್ಭದಲ್ಲಿ ಮಕ್ಕಳು ಜಾಗತಿಕ ಶ್ರಮಬಲದೊಂದಿಗೆ ಸ್ಪರ್ಧಿಸಲು ಸಮರ್ಥರಾಗುವಂತೆ ಅವರನ್ನು ಸಿದ್ಧಪಡಿಸುವ ಗುರಿ ಶಿಕ್ಷಣದ್ದಾಗಿರಬೇಕು.

11. ವಿದ್ಯಾರ್ಥಿಗೆ ಸದ್ಯದ ಇತ್ತೀಚಿನ ಜ್ಞಾನಕ್ಷೇತ್ರಗಳ ಪರಿಚಯ ಮಾಡಿಕೊಡಲು ಮತ್ತು ಅಂತರರಾಷ್ಟ್ರೀಯ ಅರಿವನ್ನು ಮೂಡಿಸಲು ಅವರಲ್ಲಿ ಶಿಕ್ಷಣವು ಜಾಗತಿಕ ಪೌರತ್ವದ ಸಂವೇದನೆಗಳನ್ನು ಬೆಳೆಸಬೇಕು.

12. ಜಾಗತಿಕ ಪ್ರಪಂಚದಲ್ಲಿ ಉತ್ತಮ ಶಿಕ್ಷಿತ ಪ್ರಜೆಗಳನ್ನು ನಿರ್ಮಾಣ ಮಾಡುವುದು ಶಿಕ್ಷಣದ ಗುರಿಯಾಗಬೇಕು.

## ಶಾಲಾ ಶಿಕ್ಷಣದ ಗುರಿಗಳು – ನಿಗಮನಗಳು:

ಈ ಮೇಲಿನ ಚರ್ಚೆಯಿಂದ ಶಾಲೆಗಳ ಗುರಿಗಳಿಗೆ ಸಂಬಂಧಿಸಿದಂತೆ ಕೆಳಗಿನ ಅಂಶಗಳನ್ನು ನಿಗಮನಗೊಳಿಸಬಹುದು.

- ಜ್ಞಾನವನ್ನು ಪಡೆಯಲು, ಮೌಲ್ಯಗಳನ್ನು ಮಾಡಲು, ಅಳವಡಿಸಿಕೊಳ್ಳಲು ಮತ್ತು ಅನ್ವಯಿಸಲು ಕಲಿಕಾರ್ಥಿಗಳ ಸಾಮರ್ಥ್ಯವನ್ನು ಹೆಚ್ಚಿಸುವುದು.
- ಪ್ರತಿಯೊಬ್ಬರು ಸ್ವತಂತ್ರವಾಗಿ ವಿಕಾಸಹೊಂದಲು ಎಡೆಮಾಡಿಕೊಡುವುದು.
- ಹೊಸ ಸಂಸ್ಕೃತಿ ಕೌಶಲ್ಯಗಳನ್ನು ಸಂಪಾದಿಸಲು ನೆರವಾಗುವುದು.
- ಸುಸಂಗತ ಜ್ಞಾನ ಸಂಪಾದನೆಯ ಮತ್ತು ಮೌಲ್ಯಗಳ ಅನ್ವಯನದ ಸಾಮರ್ಥ್ಯವನ್ನು ಜನರಿಗೆ ನೀಡುವುದು.
- ವೈಜ್ಞಾನಿಕವಾಗಿ, ತಾಂತ್ರಿಕವಾಗಿ ತರಬೇತಿ ಪಡೆದಿರುವ ವ್ಯಕ್ತಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತಯಾರು ಮಾಡುವುದು.
- ಜೊತೆಗೂಡಿ ಕೆಲಸ ಮಾಡುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಿಗೆ ಒದಗಿಸುವುದು ಮತ್ತು ವಿದ್ಯಾರ್ಥಿಗಳು ಸೂಕ್ತ ನಿರ್ಣಯ ತೆಗೆದುಕೊಳ್ಳಲು ಸ್ವತಂತ್ರವಾಗಿ ಆಲೋಚಿಸಲು ಸಮರ್ಥರಾಗುವಂತೆ ಮಾಡುವುದು.

- ಜಾಗತಿಕ ಆರ್ಥಿಕತೆಗೆ ಅಗತ್ಯವಾದ ಹೊಸಜ್ಞಾನ ಮತ್ತು ಕೌಶಲ್ಯಗಳನ್ನು ಜನರಿಗೆ ನೀಡುವುದು.
- ಜಾಗತಿಕ ಪೌರತ್ವದ ಭಾವನೆಯನ್ನು ಮೂಡಿಸುವುದು.

## V. ಕರಡು ರಾಷ್ಟ್ರೀಯ ಶಿಕ್ಷಣ ನೀತಿ 2019ರ ಪ್ರಕಾರ ಶಾಲಾ ಶಿಕ್ಷಣದ ಗುರಿಗಳು

ಕರಡು ರಾಷ್ಟ್ರೀಯ ಶಿಕ್ಷಣ ನೀತಿ 2019 ತನ್ನ ಪೀಠಿಕೆಯಲ್ಲಿ ಭಾರತದಲ್ಲಿ ಶಿಕ್ಷಣದ ದರ್ಶನವನ್ನು ಸ್ಪಷ್ಟವಾಗಿ ಮಂಡಿಸಿದೆ. ಇದರ ಪ್ರಕಾರ ಹೆಚ್ಚುತ್ತಿರುವ ದೇಶದ ವಿಕಾಸಕ್ಕೆ ಅವಶ್ಯಕವಾದವುಗಳಿಗೆ ಶಿಕ್ಷಣವು ಪ್ರತಿಯೊಬ್ಬ ಪೌರನ ಜೀವನವನ್ನು ಸ್ಪರ್ಶಿಸುವುದರ ಜೊತೆಜೊತೆಗೆ ನ್ಯಾಯಯುತ ಮತ್ತು ಸಮದರ್ಶಿಯಾದ ಸಮಾಜವನ್ನು ಸೃಷ್ಟಿಸಬೇಕಾಗಿದೆ. ಯುನೆಸ್ಕೊ, OECD, ವರ್ಲ್ಡ್ ಬ್ಯಾಂಕ್, ವರ್ಲ್ಡ್ ಎಕಾನಮಿಕ್ ಫೋರಂ ಮೊದಲಾದ ಸಂಸ್ಥೆಗಳ ವರದಿಗಳು ಉಲ್ಲೇಖಿಸುವಂತೆ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಸಮೃದ್ದ ಮತ್ತು ಸಂಕೀರ್ಣ ಸೃಜನಾತ್ಮಕ ಸಾಮರ್ಥ್ಯವನ್ನು ವಿಕಾಸಗೊಳಿಸುವುದಕ್ಕೆ ಒತ್ತು ನೀಡುತ್ತಾ ವಿದ್ಯಾರ್ಥಿಗಳ ಸಮಗ್ರ ವಿಕಾಸವನ್ನು ಒಳಗೊಳ್ಳುವ ವಿಶಾಲ ದೃಷ್ಟಿಕೋನವುಳ್ಳ ಶಿಕ್ಷಣವನ್ನು ಒದಗಿಸಬೇಕೆಂದು ಇಲ್ಲಿ ಆದೇಶಿಸಲಾಗಿದೆ. ಕರಡು ನೀತಿಯು ಸಂಜ್ಞಾನಾತ್ಮಕ ಕೌಶಲ್ಯಗಳಾದ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನಗಳೆಂಬ "ಮೂಲಭೂತ ಕೌಶಲ್ಯಗಳು" ಹಾಗೂ ವಿಮರ್ಶಾತ್ಮಕ ಮತ್ತು ಸಮಸ್ಯಾ ಪರಿಹಾರಾತ್ಮಕ ಕೌಶಲ್ಯಗಳೆಂಬ ಉನ್ನತ ಕೌಶಲ್ಯಗಳಷ್ಟೇ ಅಲ್ಲದೆ ಮೃದು ಕೌಶಲ್ಯಗಳಾದ ಸಾಮಾಜಿಕ ಮತ್ತು ಭಾವನಾತ್ಮಕ ಕೌಶಲ್ಯಗಳನ್ನು ವಿಕಾಸಗೊಳಿಸುವಿಕೆ ಶಾಲಾ ಶಿಕ್ಷಣದ ಪ್ರಮುಖ ಗುರಿ ಎಂದು ಒತ್ತಿ ಹೇಳಿದೆ. ಇದು ಸಾಂಸ್ಕೃತಿಕ ಪ್ರಜ್ಞೆ ಮತ್ತು ಸಹಾನುಭೂತಿ, ನಿರಂತರ ಮುಂದುವರೆಯುವ ಮನೋಭಾವ ಮತ್ತು ಸ್ಥೈರ್ಯ ತಂಡಕಾರ್ಯ ಮತ್ತು ನಾಯಕತ್ವ ಇತ್ಯಾದಿ ಒಳಗೊಳ್ಳುತ್ತವೆ. ಶಿಕ್ಷಣ ನೀತಿಯು ಶಿಕ್ಷಣವನ್ನು ಹೆಚ್ಚು ಹೆಚ್ಚಾಗಿ ಒಳಗೊಳ್ಳುವ ರೀತಿಯಲ್ಲಿ ಗ್ರಹಿಸಬೇಕಾದುದು ಮುಖ್ಯ ಸಂಗತಿ ಎಂಬ ಅಂಶವನ್ನು ಗುರುತಿಸಿದ್ದು ಈ ನಿಯಮದಿಂದ ಶಿಕ್ಷಣದ ವಿಷಯ ಮತ್ತು ಪ್ರಕ್ರಿಯೆಗಳ ಮರುಹೊಂದಾಣಿಕೆಗೆ ಸಂಬಂಧಿಸಿದಂತೆ ಮಾಡಬೇಕಾದ ಸುಧಾರಣೆಯ ಬಗೆಗೆ ಮಾಹಿತಿ ಮತ್ತು ಮಾರ್ಗದರ್ಶನವನ್ನು ನಾವು ಪಡೆದುಕೊಳ್ಳಬೇಕಾಗುತ್ತದೆ.

ಕರಡು ನೀತಿಯ ಪ್ರಕಾರ, ಸಾಂಸ್ಕೃತಿಕವಾಗಿ ಭಾರತವು ತನ್ನ ಅನೇಕ ಭಾಷೆ ಮತ್ತು ಉಪಭಾಷೆ, ಸುಮಾರು ಏಳು ವಿಧದ ಸಾಂಪ್ರದಾಯಿಕ ನೃತ್ಯರೂಪಗಳು ಹಾಗೂ ಎರಡು ಸಾಂಪ್ರದಾಯಿಕ ಸಂಗೀತದ ರೂಪಗಳು, ಅನೇಕ ಸುಸಂವರ್ಧಿತ ಜಾನಪದ ಕಲೆಗಳು ಮತ್ತು ಸಂಗೀತ ಕುಂಬಾರಿಕೆ, ಶಿಲ್ಪಕಲೆ ಮತ್ತು ಕಂಚು, ಮನೋಜ್ಞ ವಾಸ್ತುಶಿಲ್ಪ, ನಂಬಲಾಗದ ಪಾಕಪದ್ಧತಿಗಳು ಎಲ್ಲ ವಿಧದ ಅದ್ಭುತ ಬಟ್ಟೆಬರೆಗಳು ಹಾಗೂ ಇನ್ನೂ ಅನೇಕ ವೈವಿಧ್ಯತೆಯೊಂದಿಗೆ ಜೀವನದ ಎಲ್ಲ ನಡೆಗಳಲ್ಲಿ ಅಪಾರ ವೈವಿಧ್ಯತೆಯ ತೊಟ್ಟಿಲಾಗಿಯೇ ಬಂದಿದೆ, ಹಾಗೆಯೇ ಮುಂದುವರೆಯತ್ತಲೂ ಇದೆ. ವಿಶ್ವ ಪರಂಪರೆಗೆ ಪ್ರತ್ಯೇಕ ಸ್ವತ್ತಿನಂತಿರುವ ಇವುಗಳನ್ನು ಪೋಷಿಸಿ, ಮುಂದಿನ ಪೀಳಿಗೆಗೆ ಸಂರಕ್ಷಿಸಿ ಇಡುವುದಷ್ಟೆ ಅಲ್ಲದೆ ಇವುಗಳನ್ನು ನಮ್ಮ ಶಿಕ್ಷಣ ವ್ಯವಸ್ಥೆಯ ಮೂಲಕ ಸಮೃದ್ಧಗೊಳಿಸಿ ಹೊಸರೀತಿಯಲ್ಲಿ ಬಳಸಿಕೊಳ್ಳಬೇಕು.

## ಶಾಲಾ ಶಿಕ್ಷಣದ ಗುರಿಗಳು – ನಿಗಮನಗಳು

ಈ ಮೇಲಿನ ಚರ್ಚೆಯಿಂದ ಶಾಲೆಗಳ ಗುರಿಗಳಿಗೆ ಸಂಬಂಧಿಸಿದಂತೆ ಕೆಳಗಿನ ಅಂಶಗಳನ್ನು ನಿಗಮನಗೊಳಿಸಬಹುದು.

- ಪ್ರತಿಯೊಬ್ಬ ವ್ಯಕ್ತಿಯ ಸೃಜನಾತ್ಮಕ ಅಂತಸ್ಸತ್ವದ ಬೆಳವಣಿಗೆ
- ಸಂಜ್ಞಾನಾತ್ಮಕ ಕೌಶಲ್ಯಗಳ ಬೆಳವಣಿಗೆ
- ಮೂಲಭೂತ ಕೌಶಲ್ಯಗಳ ಬೆಳವಣಿಗೆ
- ಉನ್ನತ ಮಟ್ಟದ ಕೌಶಲ್ಯಗಳ ಬೆಳವಣಿಗೆ
- ಸಾಮಾಜಿಕ ಮತ್ತು ಭಾವನಾತ್ಮಕ ಕೌಶಲ್ಯಗಳ ಬೆಳವಣಿಗೆ
- ಸಾಂಸ್ಕೃತಿಕವಾಗಿ ವೈವಿಧ್ಯತೆಯುಳ್ಳ ಕಲೆಗಳು ಮತ್ತು ಕೌಶಲ್ಯಗಳ ಬೆಳವಣಿಗೆ

ಶಾಲಾ ಶಿಕ್ಷಣಕ್ಕೆ ಮತ್ತಷ್ಟು ನಿರ್ದಿಷ್ಟ ಗುರಿಗಳು ಇವೆ, ಇವುಗಳನ್ನು ಆಯಾ ಕ್ಷೇತ್ರದಲ್ಲಿನ ತಜ್ಞರು ಮುಂದಿಟ್ಟಿದ್ದಾರೆ. ಇವು ಬಹಳ ಮಹತ್ವಪೂರ್ಣವಾಗಿವೆ. ಅವು ಈ ಕೆಳಗಿನಂತಿವೆ;

- ಕಲಿಕೆಯನ್ನು ಕುರಿತ ಪ್ರೀತಿಯನ್ನು ಬೆಳೆಸುವುದು ಮತ್ತು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಅಂತಸ್ಸತ್ವವನ್ನು ಪೂರ್ಣರೂಪದಲ್ಲಿ ಸಾಧಿಸಲು ಅವಕಾಶ ಒದಗಿಸುವುದು ಮತ್ತು ಸುರಕ್ಷಿತ ಹಾಗೂ ಸವಾಲಿನಂತಿರುವ ಪರಿಸರದಲ್ಲಿ ತಮ್ಮ ಹಿತಾಶಕ್ತಿಗಳನ್ನು ಬೆಳೆಸಿಕೊಳ್ಳಲು ಅನ್ವೇಷಿಸಲು ಅವಕಾಶ ಮಾಡುವುದು;
- ಮಕ್ಕಳು ಆತ್ಮವಿಶ್ವಾಸವುಳ್ಳವರು, ಸಂಪನ್ಮೂಲವುಳ್ಳವರು, ಅನ್ವೇಷಣಾ ಮನೋವೃತ್ತಿಯುಳ್ಳವರು ಹಾಗೂ ಸ್ವತಂತ್ರ ಕಲಿಕಾರ್ಥಿಗಳು ಆಗಿ ತಮ್ಮ ಕೌಶಲ್ಯಗಳನ್ನು ಅನ್ವಯಿಸಲು ಸಮರ್ಥರಾಗುವಂತೆ ಅವರಿಗೆ ನೆರವಾಗುವುದು;
- ಪರಸ್ಪರ ಗೌರವ ತೋರಿಸಲು, ಇತರರ ವಿಚಾರಗಳನ್ನು, ಅಭಿವೃತ್ತಿಗಳನ್ನು, ಮೌಲ್ಯಗಳನ್ನು ಹಾಗೂ ಭಾವನೆಗಳನ್ನು ಅರ್ಥಮಾಡಿಕೊಂಡು ಪರಿಗಣಿಸಲು ಸೂಕ್ತ ಪರಸರವನ್ನು ಸೃಷಿಸುವುದು;
- ಮಕ್ಕಳ ಆತ್ಮಗೌರವ, ಚೇತರಿಕೆಯ ಶಕ್ತಿ, ವೈಯಕ್ತಿಕ ವಿಕಾಸ ಮತ್ತು ಸ್ವಾಸ್ಥ್ಯ ಸ್ಥಿತಿಗಳನ್ನು ಬೆಳೆಸಿಕೊಳ್ಳುವಂತೆ ಗಮನಹರಿಸುವುದು;
- ವೈಯಕ್ತಿಕ ಮತ್ತು ಸಾಂಘಿಕ ಜವಾಬ್ದಾರಿಯ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು;
- ತಮ್ಮ ಸಮುದಾಯದ ಒಂದು ಭಾಗವಾಗಿ ಮತ್ತೊಬ್ಬರಿಗೆ ಮಹತ್ವಕೊಡುವುದಕ್ಕೆ ಮತ್ತೊಬ್ಬರಿಂದ ಮಹತ್ವವನ್ನು ಪಡೆಯುವುದಕ್ಕೆ ಮಕ್ಕಳಿಗೆ ಸಾಧ್ಯವಾಗುವಂತೆ ಮಾಡುವುದು;
- ಉತ್ಕೃಷ್ಟ ಮತ್ತು ನವೀನ ಬೋಧನೆ ಮತ್ತು ಕಲಿಕೆಗಳ ಮೂಲಕ ಮಕ್ಕಳಿಗೆ ಸಮೃದ್ಧ, ವೈವಿಧ್ಯಮಯ ಮತ್ತು ಸವಾಲುಗಳುಳ್ಳ ಶಿಕ್ಷಣವನ್ನು ಒದಗಿಸುವುದು;
- ಸಫಲತೆಯನ್ನು ಶ್ಲಾಘಿಸುವ, "ಮಾಡಬಲ್ಲೆ" ಎಂಬ ಮನೋಭಾವವನ್ನು ಪ್ರೋತ್ಸಾಹಿಸುವ ಮತ್ತು ಪ್ರತಿಯೊಬ್ಬರೂ ಅವರವರ ಉತ್ಕಷ್ಟತೆಯನ್ನು ಸಾಧಿಸಲು ಸ್ಫೂರ್ತಿ ನೀಡುವ ಶಿಕ್ಷಣವನ್ನು ಒದಗಿಸುವುದು;
- ವೈಯಕ್ತಿಕ ವಿಕಾಸ, ಸಾಮಾಜಿಕ ಜವಾಬ್ದಾರಿ ಮತ್ತು ಸ್ವಯಂ ಮೌಲ್ಯದ ಪ್ರಜ್ಞೆಗಳಿಗೆ ಬೆಂಬಲ ನೀಡುವುದು;
- ಜೀವನ ಪರ್ಯಂತದ ಕಲಿಕೆಗಾಗಿ ಆತ್ಮವಿಶ್ವಾಸವನ್ನು ತುಂಬುವುದರ ಜೊತೆಗೆ ಆರೋಗ್ಯಕರ ಮತ್ತು ಸಂತೃಪ್ತಿಯ ಜೀವನಕ್ಕೆ ಬೆಂಬಲ ನೀಡುವ ಅಭಿಪ್ರವೃತ್ತಿ ಮತ್ತು ಕೌಶಲ್ಯಗಳನ್ನು ವಿಕಾಸಗೊಳಿಸುವುದು;
- ಕಲಿಕೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಪೋಷಕರು/ಪಾಲಕರೊಂದಿಗೆ ಮತ್ತು ಸಮುದಾಯದೊಂದಿಗೆ ಸಹಭಾಗಿಗಳಾಗಿ ಕಾರ್ಯಪ್ರವೃತ್ತರಾಗುವಂತೆ ಮಾಡುವದು;
- ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ತಮ್ಮ ಆಸೆ ಅಕಾಂಕ್ಷೆಗಳನ್ನು ಸಾಧಿಸಲು ಪ್ರವೃತ್ತರಾಗಿರುವಾಗ ಅವರು ಸಂತೋಷವಾಗಿಯೂ ಆತ್ಮವಿಶ್ವಾಸ ಭರಿತರಾಗಿಯೂ ಇರಲು ಸುರಕ್ಷಿತ, ಸಹಾಯಕ ಮತ್ತು ಸುವ್ಯವಸ್ಥಿತ ಪರಿಸರವನ್ನು ಒದಗಿಸುವುದು.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

ಈ ಕೆಳಗಿನ ವಿಭಿನ್ನ ದಸ್ತಾವೇಜುಗಳಿಂದ ಮತ್ತು ಸಂದರ್ಭಗಳಿಂದ ನಿಗಮನಗೊಂಡ ಶಾಲಾ ಶಿಕ್ಷಣದ ಗುರಿಗಳನ್ನು (ಎರಡು) ಉಲ್ಲೇಖಿಸಲಾಗಿದೆ. ಅವುಗಳನ್ನು ಸೂಕ್ತ ದಸ್ತಾವೇಜುಗಳಡಿಯಲ್ಲಿ ಮತ್ತು ಸಂದರ್ಭದಲ್ಲಿ ವರ್ಗೀಕರಿಸಿ.

1. ಭಾರತದ ಸಂವಿಧಾನ
2. ರಾಷ್ಟ್ರೀಯ ಶಿಕ್ಷಣನೀತಿ, 1986
3. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು
4. ಜಾಗತೀಕರಣದ ಸಂದರ್ಭ

    1. ಶ್ರಮಶಕ್ತಿಯನ್ನು ಬೆಳೆಸುವುದು.
    2. ಪ್ರಜಾಸತ್ತಾತ್ಮಕ ಪೌರತ್ವ.
    3. ಪ್ರಿ ವ್ಯಕ್ತಿಗೂ ಸ್ವತಂತ್ರವಾಗಿ ವಿಕಾಸಹೊಂದಲು ಅವಕಾಶ ಮಾಡುವುದು.
    4. ಹೊಸತನ್ನು ಕಲಿಯಲು ಪ್ರೋತ್ಸಾಹಿಸುವುದು.
    5. ಬದುಕಿನ ಕೌಶಲ್ಯಗಳು.
    6. ವ್ಯಕ್ತಿಯ ಮತ್ತು ಸಮಾಜದ ಸರ್ವಾಂಗೀಣ ವಿಕಾಸವನ್ನು ಸಾಧಿಸುವುದು.
    7. ಮೌಲ್ಯಧಾರಿತ ನಿರ್ಣಯ ಕೈಗೊಳ್ಳುವ ಕೌಶಲ್ಯಗಳನ್ನು ಪ್ರೋತ್ಸಾಹಿಸುವುದು.
    8. ಹೊಸ ಸಂಸ್ಕೃತಿಗಳ ಕೌಶಲ್ಯಗಳನ್ನು ಸಂಪಾದಿಸಲು ವಿದ್ಯಾರ್ಥಿಗಳಿಗೆ ನೆರವಾಗುವುದು.

## 1.3.4. ಸಾರಾಂಶಿಸೋಣ

- ಶಾಲೆ ಎನ್ನವುದು ಜನರಿಗೆ ಶಿಕ್ಷಣವನ್ನು ಒದಗಿಸುವ ಸಾಮಾಜಿಕ ಉದ್ದೇಶದೊಂದಿಗೆ ಸ್ಥಾಪಿತವಾದ ಒಂದು ಸಾಮಾಜಿಕ ಸಂಸ್ಥೆ. ಇದು ರಾಷ್ಟ್ರವೊಂದರ ಶಿಕ್ಷಣದ ಗುರಿಗಳನ್ನು ಸಾಧಿಸಲು ಬೇಕಾದ ಒಂದು ಸಾಧನ.
- ಶಿಕ್ಷಣದ ಗುರಿಗಳು ಸ್ಥಿರವೂ, ಸಾರ್ವತ್ರಿಕವೂ ಆದುದಲ್ಲ.

  ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು ಬದಲಾದಂತೆ, ಹೊಸ ಸಮಸ್ಯೆಗಳು ಉದ್ಭವವಾದಂತೆ, ಶಿಕ್ಷಣವು ನಿರ್ದಿಷ್ಟ ಹಂತದಲ್ಲಿ ತನ್ನ ಮುಂದಿಟ್ಟುಕೊಳ್ಳಬೇಕಾದ ಉದ್ದೇಶಗಳನ್ನು ಜಾಗರೂಕತೆಯಿಂದ ಪುನರ್ ಪರೀಕ್ಷಿಸುವುದು ಹಾಗೂ ಸ್ಪಷ್ಟರೂಪದಲ್ಲಿ ಪುನಃ ವ್ಯಕ್ತಪಡಿಸುವುದು ಅಗತ್ಯವಾಗುತ್ತದೆ.
- ಸಾಮಾನ್ಯವಾಗಿ ವಿಶ್ವದಾದ್ಯಂತ ಶಿಕ್ಷಣದ ಗುರಿಗಳು ಒಂದೇ ಸಮನಾಗಿರುವುದು. ಪ್ರಜೆಗಳು ಹಾಗೂ ರಾಷ್ಟ್ರ ಧನಾತ್ಮಕ ದಿಶೆಯಲ್ಲಿ ಮುಂದುವರೆಯಲು ನೆರವಾಗುವುದೇ ಇದರ ಉದ್ದೇಶ. ಆದರೆ ಪ್ರತಿಯೊಂದು ದೇಶದ ನಿರ್ದಿಷ್ಟ ಗುರಿಗಳು ಆ ದೇಶದ ತಾತ್ವಿಕ, ಸಮಾಜಶಾಸ್ತ್ರೀಯ, ತಾಂತ್ರಿಕ ಹಾಗೂ ಇನ್ನೂ ಹಲವು ಪರಿಸ್ಥಿತಿಗಳನ್ನು ಅವಲಂಬಿಸಿರುವುವು. ಈ ಅಂಶಗಳು ರಾಷ್ಟ್ರದ ಶಿಕ್ಷಣದ ಗುರಿಗಳನ್ನು ನಿರ್ಧರಿಸುವುವು. ಅಂತೆಯೇ, ಆ ರಾಷ್ಟ್ರದ ಶಾಲಾ ಶಿಕ್ಷಣದ ಗುರಿಗಳನ್ನು ನಿರ್ಧರಿಸುವುವು.
- “ಲರ್ನಿಂಗ್ ದಿ ಟ್ರೆಷರ್ ವಿಥಿನ್” ಎಂಬ ದಸ್ತಾವೇಜು ಇಪ್ಪತ್ತೊಂದನೇ ಶತಮಾನದ ಶಿಕ್ಷಣದ

ಅಂತರ ರಾಷ್ಟ್ರೀಯ ಆಯೋಗದಿಂದ ರಚಿಸಲ್ಪಟ್ಟಿದ್ದು ಈ ಆಯೋಗಕ್ಕೆ ಜಾಕ್ವಸ್ ಡೆಲೋರ್ಸ್ ಎಂಬುವರು ಅಧ್ಯಕ್ಷರಾಗಿದ್ದರು. ಈ ಆಯೋಗವು ನಾಲ್ಕು ವಿಧದ ಕಲಿಕೆಗಳನ್ನು ಸಲಹೆ ಮಾಡಿದೆ: ಅರಿಯಲು ಕಲಿಯುವುದು, ಮಾಡಲು ಕಲಿಯುವುದು, ಸಹಬಾಳ್ವೆಯನ್ನು ಕಲಿಯುವುದು ಮತ್ತು ತಾನು ತಾನಾಗಿರಲು ಕಲಿಯುವುದು. ಶಾಲೆಗಳು ಇವುಗಳನ್ನು ಸಾಧಿಸಲು ನೆರವಾಗುವ ಉಪಕರಣಗಳಂತಾಗಬೇಕು ಎಂದು ನಿರೀಕ್ಷಿಸಲಾಗುತ್ತದೆಯಲ್ಲದೆ ಇವುಗಳೇ ಶಾಲೆಗಳ ಗುರಿಗಳು ಆಗಿ ಪರಿಣಮಿಸುತ್ತವೆ.

- ಭಾರತದಲ್ಲಿನ ಶಾಲಾ ಶಿಕ್ಷಣದ ಗುರಿಗಳನ್ನು ವಿಭಿನ್ನ ಸಂದರ್ಭಗಳ, ವಿಭಿನ್ನ ಕಾಲಘಟ್ಟದಲ್ಲಿ ಹೊರಬಂದ ದಸ್ತಾವೇಜುಗಳಿಂದ ಪಡೆಯಬಹುದು.
- ಅವು ಯಾವುವೆಂದರೆ: ಭಾರತದ ಸಂವಿಧಾನ ದಸ್ತಾವೇಜು, ರಾಷ್ಟ್ರೀಯ ಶಿಕ್ಷಣ ನೀತಿ, 1986 (NPE 1986), ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2005 (NCF, 2005) ಮತ್ತು ಜಾಗತೀಕರಣದ ಸಂದರ್ಭ ಹಾಗೂ ಕರಡು ರಾಷ್ಟ್ರೀಯ ಶಿಕ್ಷಣ ನೀತಿ, 2019. ಪ್ರತಿಯೊಂದು ದಸ್ತಾವೇಜು ಶಾಲಾ ಶಿಕ್ಷಣದ ಕೆಲವು ಸಾಮಾನ್ಯ ಹಾಗೂ ಸಂದರ್ಭೋಚಿತವಾದ ನಿರ್ದಿಷ್ಟ ಗುರಿಗಳನ್ನು ಸಲಹೆ ಮಾಡುತ್ತವೆ.

## 1.3.5. 'ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ' 1 ಮತ್ತು 2–ಉತ್ತರಗಳು

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1

ಅರಿಯಲು ಕಲಿಯುವುದು – 3,7,9

ಮಾಡಲು ಕಲಿಯುವುದು– 2, 5, 10

ಸಹಬಾಳ್ವೆಯನ್ನು ಕಲಿಯುವುದು–1, 6, 11

ತಾನು ತಾನಾಗಿರುವುದನ್ನು ಕಲಿಯುವುದು–4,8,12

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2

ಭಾರತದ ಸಂವಿಧಾನ–2,5

ರಾಷ್ಟ್ರೀಯ ಶಿಕ್ಷಣ ನೀತಿ, 1989–1,6

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು– 20155– 4,7

ಜಾಗತೀಕರಣದ ಸಂದರ್ಭ–3,8

## 1.3.6. ಘಟಕಾಂತ್ಯ ಅಭ್ಯಾಸಗಳು

1. ಶಾಲಾ ಶಿಕ್ಷಣದ ಗುರಿಗಳನ್ನು ವಿವರಿಸಿ.

## 1.3.7. ಪರಾಮರ್ಶನ ಸೂಚಿ


1. John White (2005). The Aims of School Education. London: University of London.
2. Tomas England (2004). Curriculum Research. Orebro: Orebro University.
3. NCF (2005). Report of NCF-2005. New Delhi.

4. Aldrich R (1988). The national curriculum: an historical perspective.In Lawton D. and Chitty C. (eds) The National Curriculum, London: Institute of Education, University of London.

5. White J. (ed) (2003) Rethinking the School Curriculum: Values, Aims and Purposes. London: Routledge Publications.

6. White J. (2006) Intelligence, Destiny and Education: The Ideological Origins of Intelligence Testing. London: RoutledgePublications.

7. Deng, Zongyi (2009). The formation of a school subject and the nature of curriculum content: An analysis of liberal studies in Hong Kong. Journal of Curriculum Studies, 41(5), 585–604.

8. Englund, Tomas (2007): Is there a future for (Swedish) curriculum theory? In Eva Forsberg red.: Curriculum Theory Revisited s.31-41. Uppsala University: Studies in Educational Policy and Educational Philosophy Research Report 10.

9. Goodson, Ivor (1988): The Making of Curriculum. London: Falmer.

10. http://www.ippr.org/files/uploadedFiles/research/projects/Education/The%2520Aims%2520of%2520School%2520Ed%2520FINAL.pdf

11. https://www.cheam.sutton.sch.uk/88/aims-of-the-school

12. https://www.drishtiias.com/loksabha-rajyasabha-discussions/draft-national-education-policy-2019

13. http://www.ncert.nic.in/rightside/links/pdf/framework/english/nf2005.pdf

14. http://www.bdu.ac.in/cde/docs/ebooks/B-Ed/I/CONTEMPORARY%20INDIA%20AND%20EDUCATION.pdf

***********

# ಬ್ಲಾಕ್ 1: ಜ್ಞಾನಶಿಸ್ತುಗಳು ಮತ್ತು ಶಾಲಾ ವಿಷಯಗಳಿಗೆ ಪೀಠಿಕೆ

## ಘಟಕ 4: ಶೈಕ್ಷಣಿಕ ಜ್ಞಾನಶಿಸ್ತುಗಳ ಉಗಮ ಮತ್ತು ಶಾಲಾ ಪಠ್ಯವಿಷಯಗಳ ರೂಪಣ

ಘಟಕದ ರಚನೆ


1.4.1. ಕಲಿಕಾ ಉದ್ದೇಶಗಳು

1.4.2. ಪೀಠಿಕೆ

1.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.4.3.1. ಶೈಕ್ಷಣಿಕ ಜ್ಞಾನಶಿಸ್ತುಗಳ ಉಗಮ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1

1.4.3.2. ಶಾಲಾ ಪಠ್ಯವಿಷಯಗಳ ರೂಪಣ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2

1.4.4. ಸಾರಾಂಶಿಸೋಣ

1.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

1.4.6. ಘಟಕಾಂತ್ಯ ಅಭ್ಯಾಸಗಳು

1.4.7. ಪರಾಮರ್ಶನ ಸೂಚಿ


### 1.4.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶೈಕ್ಷಣಿಕ ಶಿಸ್ತುಗಳ ಐತಿಹಾಸಿಕ ದೃಷ್ಟಿಕೋನವನ್ನು ವಿವರಿಸುವರು;
- ಶೈಕ್ಷಣಿಕ ಶಾಸ್ತ್ರಗಳು ಹೇಗೆ ಉಗಮವಾದವು ಎಂದು ವಿವರಿಸುವರು; ಮತ್ತು
- ಶಾಲಾ ಪಠ್ಯವಿಷಯಗಳು ಹೇಗೆ ರೂಪುಗೊಂಡವು ಎಂದು ವಿವರಿಸುವರು.

### 1.4.2. ಪೀಠಿಕೆ

ನಾವು ಇಂದು ಪರಿಗಣಿಸಿರುವ ವಿಜ್ಞಾನ, ಗಣಿತ, ಇತಿಹಾಸ ಇತ್ಯಾದಿ ಜ್ಞಾನಶಿಸ್ತುಗಳು ಹಿಂದೊಂದು ಕಾಲದಲ್ಲಿ ಅಸ್ತಿತ್ವದಲ್ಲಿ ಇರಲಿಲ್ಲ ಎಂದು ನಮಗೆ ತಿಳಿದಿದೆ. ಆ ಕಾಲದಲ್ಲಿ ಎಲ್ಲ ಜ್ಞಾನವನ್ನೂ ಒಂದೇ ಘಟಕವಾಗಿ ಎಂದು ಪರಿಗಣಿಸಲಾಗುತ್ತಿತ್ತು. ಜ್ಞಾನವನ್ನು ಹಲವು ಕಾರಣಗಳಿಂದಾಗಿ ವಿವಿಧ ಶಾಸ್ತ್ರಗಳಾಗಿ ವರ್ಗೀಕರಿಸಲಾಯಿತು. ಹೀಗಾಗಿ ನಾವಿಂದು ಶಾಲೆಗಳಲ್ಲಿ ಬೋಧಿಸುತ್ತಿರುವ ವಿಷಯಗಳು ಕಾಲಾಂತರದಲ್ಲಿ ಉಗಮವಾದವು ಎಂದೂ ನಾವು ಅರಿತಿದ್ದೇವೆ. ಸ್ವಾಭಾವಿಕವಾಗಿಯೇ ಈ ಜ್ಞಾನಶಿಸ್ತುಗಳು ಮತ್ತು ಶಾಲಾ ಪಠ್ಯವಿಷಯಗಳು ಹೇಗೆ ಉಗಮವಾದವು ಎಂದು ಅರಿಯಲು ಕುತೂಹಲ ಉಂಟಾಗುತ್ತದೆ. ಈ ಘಟಕದಲ್ಲಿ ಈ ಪ್ರಕ್ರಿಯೆಯ ಹಿಂದಿರುವ ಇತಿಹಾಸವನ್ನು ಅರ್ಥಮಾಡಿಕೊಳ್ಳೋಣ.

## 1.4.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.4.3.1. ಶೈಕ್ಷಣಿಕ ಶಾಸ್ತ್ರಗಳ ಉಗಮ

ಜ್ಞಾನವು ಜ್ಞಾನಶಿಸ್ತುಗಳ ಉಗಮದ ಪ್ರಕ್ರಿಯೆಯ ಪ್ರಾರಂಭ ಬಿಂದು. ನಾವೀಗ ಜ್ಞಾನವು ಹೇಗೆ ಸೃಷ್ಟಿಯಾಯಿತೆಂದು ನೋಡೋಣ. ಒಂದು ದೃಷ್ಟಾಂತವನ್ನು ಪರಿಗಣಿಸಿ. ನಾಯಿಗಳನ್ನು ತರಬೇತಿಯಿಂದ ಪಳಗಿಸಬಹುದು ಎಂಬ ಅನುಭವ ಕೆಲವರಿಗೆ ಉಂಟಾಯಿತು ಎಂದಿಟ್ಟುಕೊಳ್ಳಿ. ತತ್ಫಲವಾಗಿ ಅವರು "ನಾಯಿಗಳು ತರಬೇತಿಗೆ ಒಳಪಡಬಲ್ಲವು" ಎಂದು ತೀರ್ಮಾನಿಸುತ್ತಾರೆ, ಈ ಸಂಗತಿ ಹಲವರಿಂದ ಮತ್ತಷ್ಟು ಪ್ರಮಾಣೀಕರಿಸಲ್ಪಟ್ಟು ಇದು ಜ್ಞಾನವಾಗಿ ಸ್ಥಿರಗೊಳ್ಳುತ್ತದೆ.

ಜ್ಞಾನವು ಶೈಕ್ಷಣಿಕ ಜ್ಞಾನಶಿಸ್ತಿನ ಪರಿಧಿಗೆ ಬಂದಾಗ, ಇದರ ಗಮನಕೇಂದ್ರ ಮತ್ತು ವ್ಯಾಪ್ತಿ ಕಿರಿದಾಗುವುದು. ಜ್ಞಾನವನ್ನು ಶಿಸ್ತಿನ ಅಡಿಯಲ್ಲಿ ತರುವುದು ಎಂದರೆ ವಿವಿಧ ಸ್ವರೂಪದ ಜ್ಞಾನದ ಎಲ್ಲೆಯನ್ನು ನಿಶ್ಚಿತಗೊಳಿಸುವುದಾಗಿದೆ. ಆದ್ದರಿಂದ, ಶಾಸ್ತ್ರವು ಸೀಮೆಯನ್ನು ನಿಶ್ಚಯಿಸಿ, ಒಂದು ನಿರ್ದಿಷ್ಟ ಜ್ಞಾನವನ್ನು ಗೊತ್ತುಮಾಡಲಾದ ಜ್ಞಾನಶಿಸ್ತಿನ ಒಳಗೆ ಅಥವಾ ಹೊರಗೆ ಸ್ಥಿರಪಡಿಸಬಹುದೇ ಎಂದು ನಿರ್ಧರಿಸುತ್ತದೆ.

ನಾವು ಇಂದು ಈ ಸೀಮೆಗಳನ್ನು ಕುರಿತು ಎಷ್ಟು ಪರಿಚಿತರಾಗಿದ್ದೇವೆ ಎಂದರೆ ಯಾರಾದರೂ ಸಸ್ಯದ ಸಂರಚನೆಯನ್ನು ವಿವರಿಸಿದರೆ ಆ ಕ್ಷಣವೇ ನಾವು ಆತ ಸಸ್ಯಶಾಸ್ತ್ರವನ್ನು ಕುರಿತು ಮಾತನಾಡುತ್ತಿದ್ದಾನೆ ಎನ್ನುತ್ತೇವೆ. ಹಾಗೆಯೇ, ಯಾರಾದರೂ ದೇಶವೊಂದರ ಸರ್ಕಾರದ ಸ್ವರೂಪದ ಬಗ್ಗೆ ಮಾತನಾಡಿದರೆ ಆತ ರಾಜ್ಯಶಾಸ್ತ್ರದ ಬಗೆಗೆ ಮಾತನಾಡುತ್ತಿದ್ದಾನೆ ಎನ್ನುತ್ತೇವೆ.

ಜನರು ಜ್ಞಾನವನ್ನು ವಿವಿಧ ಶಾಸ್ತ್ರಗಳಡಿಯಲ್ಲಿ ಏಕೆ ವರ್ಗೀಕರಿಸಿದರು? ಹೀಗೆ ಮಾಡುವುದರಿಂದ ಜನರಿಗೆ ಆ ಶಾಸ್ತ್ರದಲ್ಲಿ ತಜ್ಞತೆಯನ್ನು ಸಂಪಾದಿಸಲು ನೆರವಾಗುವುದೆಂದು ಬಹುಶಃ ಅವರು ಭಾವಿಸಿರಬಹುದು. ಈ ವಿಶಿಷ್ಟಗೊಳಿಸುವಿಕೆಯಿಂದ ತತ್ವಗಳನ್ನು, ನಿಯಮಗಳನ್ನು ಮತ್ತು ಸಿದ್ಧಾಂತರೂಪಣೆಗಳನ್ನು ಕೈಗೊಳ್ಳಲು ಸಹ ನೆರವಾಗುತ್ತದೆ. ನಿಯಮಗಳ ಹಾಗೂ ತತ್ವಗಳ ಜಾಲವು ಶಾಸ್ತ್ರಗಳ ಎಲ್ಲೆಯೊಳಗಿನಿಂದ ಹೊಸ ಜ್ಞಾನವನ್ನು ನಿಗಮನ ಮಾಡಲು ಸಹಾಯ ಮಾಡುತ್ತದೆ. ಶಾಸ್ತ್ರದಲ್ಲಿ ಮತ್ತಷ್ಟು ಅನ್ವೇಷಣೆ ಮಾಡುವುದರಿಂದ ಪುನಃ ಆ ಶಿಸ್ತಿನ ಸಂವರ್ಧನೆ ಮತ್ತು ವಿಸ್ತರಣೆಗೆ ದಾರಿಯಾಗುತ್ತದೆ.

**ಜ್ಞಾನದ ವರ್ಗೀಕರಿಸುವ ಅಗತ್ಯಗಳೇನು ಎಂಬುದನ್ನು ಈ ಕೆಳಗಿನಂತೆ ಗುರುತಿಸಬಹುದು:**

- ವಿವಿಧ ಕ್ಷೇತ್ರಗಳಲ್ಲಿ ಹೊಸ ಜ್ಞಾನದ ನಿರಂತರವಾಗಿ ಹುಟ್ಟಿಕೊಂಡ ದೆಸೆಯಿಂದ ಆ ಜ್ಞಾನದ ಸಂರಕ್ಷಣೆ ಮತ್ತು ವರ್ಗಾವಣೆಗಳು ಅನಿವಾರ್ಯವಾಯಿತು.
- ಪುರಾತನ ಸಂಸ್ಕೃತಿಗಳ ಸಂಪ್ರದಾಯಗಳು ಮತ್ತು ಜ್ಞಾನಗಳು ಸಹ ಅಧಿಕ ಸಂಕೀರ್ಣಗೊಂಡವು. ಈ ವೈವಿಧ್ಯಮಯ ಕೌಶಲ್ಯಗಳು ಮತ್ತು ಕಾರ್ಯಕಲಾಪಗಳು ಮಾನವ ಜ್ಞಾನದ ಪ್ರಾರಂಭಿಕ ರೂಪಗಳಾಗಿದ್ದವು. ಮಾನವನ ಅಸ್ತಿತ್ವದ ಪ್ರಾರಂಭದ ಕಾಲದಿಂದಲೂ ಪ್ರತಿಯೊಂದು ಪೀಳಿಗೆಯೂ ಮುಂದಿನ ಪೀಳಿಗೆಗೆ ತಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು, ಸಂಪ್ರದಾಯಗಳನ್ನು, ನೈತಿಕತೆ, ಧರ್ಮ ಹಾಗೂ ಕೌಶಲ್ಯಗಳನ್ನು ವರ್ಗಾಯಿಸಲು ಪ್ರಯತ್ನಿಸಿವೆ.
- ಸಾಕ್ಷರ–ಪೂರ್ವ ಸಮಾಜಗಳಲ್ಲಿ ಮೌಖಿಕವಾಗಿ ಹಾಗೂ ವೀಕ್ಷಣೆ ಮತ್ತು ಅನುಕರಣೆಗಳ ಮುಖಾಂತರ ಜ್ಞಾನವನ್ನು ಸಂಪಾದಿಸಲಾಯಿತು. ಆದರೆ ಸಮಯ ಕಳೆದಂತೆ ವಿವಿಧ ಕೌಶಲ್ಯಗಳು ಮತ್ತು ಕಾರ್ಯಕಲಾಪಗಳು ಹೊಸ ಹೊಸ ಜ್ಞಾನದಿಂದ, ಹೊಸ ಹೊಸ ಶೋಧನೆಗಳಿಂದ ಹೆಚ್ಚು ಹೆಚ್ಚು ವಿಶಿಷ್ಟ ಸ್ವರೂಪವುಳ್ಳದ್ದಾದವು. ಇಂತಹ ಪ್ರತಿಯೊಂದು ಶೋಧನೆ ಮತ್ತು ಆವಿಷ್ಕಾರವೂ ವಿವಿಧ ಜ್ಞಾನಕ್ಷೇತ್ರಗಳ ಮಾನವನ ಅರಿವನ್ನು ಸಮೃದ್ಧಗೊಳಿಸಿತು.

ಒಂದು ನಿರ್ದಿಷ್ಟ ಕ್ಷೇತ್ರದ ವ್ಯವಸ್ಥಿತ ಜ್ಞಾನಸಂಗ್ರಹಕ್ಕೆ 'ಜ್ಞಾನಶಿಸ್ತು' ಎಂದು ಹೆಸರಿಸಲಾಯಿತು. ಮಾನವನ ಜ್ಞಾನದ ವಿಭಿನ್ನ ಕ್ಷೇತ್ರಗಳ ಶಾಸ್ತ್ರೀಯ ಅಧ್ಯಯನ ಈ ಕ್ಷೇತ್ರಗಳ ವಿಭಿನ್ನ ಕಾಲಘಟ್ಟಗಳಲ್ಲಿ ಆರಂಭವಾದ ಸಾಂಸ್ಥೀಕೃತ ಅಧ್ಯಯನ ಮತ್ತು ಸಂಶೋಧನೆಗಳೊಂದಿಗೆ ಶುರುವಾಯಿತು. ಸಮಾಜವು ಹೊಂದಿದ್ದ ಜ್ಞಾನವನ್ನು ಶಿಸ್ತುಗಳ ಸ್ಥಾನಕ್ಕೆ ಏರುವಂತೆ ವಿಕಸಿತಗೊಳಿಸಲಾಯಿತಲ್ಲದೆ ಇವುಗಳ ವಿಶಿಷ್ಟಗೊಳಿಸುವಿಕೆ ಮತ್ತು ವೈವಿಧ್ಯೀಕರಣಗಳಿಂದಾಗಿ ಮತ್ತಷ್ಟು ಜ್ಞಾನ ವಿಘಟನೆಯಾಗಿ ಹೊಸ ಶಿಸ್ತುಗಳು ಹುಟ್ಟುಕೊಂಡವು. ಜ್ಞಾನಶಿಸ್ತುಗಳ ವಿಕಾಸಾತ್ಮಕ ಪ್ರಕ್ರಿಯೆ ಈ ಕೆಳಗಿನ ಹಂತಗಳ ಮೂಲಕ ಹಾದು ಹೋಗಿರಬಹುದು.

- ಜ್ಞಾನ ಸಂಚಯನ.
- ಜ್ಞಾನದ ವೈಶಿಷ್ಟ್ಯೀಕರಣ ಮತ್ತು ವಿಘಟನೆ.
- ಜ್ಞಾನಶಿಸ್ತುಗಳ ರೂಪಣ.
- ಜ್ಞಾನಶಿಸ್ತುಗಳ ಪರಿಧಿಯಲ್ಲಿಯೇ ಜ್ಞಾನದ ವೈವಿಧ್ಯೀಕರಣ ಮತ್ತು ಹೆಚ್ಚಿನ ವೈಶಿಷ್ಟ್ಯೀಕರಣ.
- ಶಿಸ್ತೀಯ ಸೀಮೆಗಳ ಭೇದನೆ ಮತ್ತು ಅಧಿಕ ವೈಶಿಷ್ಟ್ಯೀಕರಣಗೊಂಡ ಹೊಸ ಶಿಸ್ತುಗಳ ಉಗಮ.
- ಹೊಸ ಶಿಸ್ತುಗಳ ರೂಪಣ, ಶಿಸ್ತೀಯ ಸೀಮೆಗಳ ಭೇದನ ಮತ್ತು ಹೆಚ್ಚು ವೈಶಿಷ್ಟ್ಯೀಕರಣಗೊಂಡ ಹೊಸ ಶಿಸ್ತುಗಳ ಉಗಮ.

**ಈ ಅಂಶಗಳನ್ನು ಈ ಕೆಳಗಿನ ಚಿತ್ರದ ರೂಪದಲ್ಲಿ ಪ್ರತಿನಿಧಿಸಲಾಗಿದೆ.**




**ಇದು ಈ ಕೆಳಗಿನ ಯಾವುದಾದರೊಂದು ವಿಧದಲ್ಲಿ ಉಂಟಾಗಬಹುದು:**

1. ಜ್ಞಾನದ ಒಂದು ಅಥವಾ ಒಂದಕ್ಕಿಂತ ಹೆಚ್ಚು ಶಾಖೆಗಳು ಪರಸ್ಪರ ಲಯವಾಗಿ ತನ್ನದೇ ಆದ ವಿಶಿಷ್ಟ ಗುಣಲಕ್ಷಣಗಳನ್ನು ವಿಕಸಿತಗೊಳಿಸಿಕೊಂಡು ಹೊಸದಾದ ಶಿಸ್ತು ರೂಪುಗೊಳ್ಳುತ್ತದೆ. ಅಂತರ್‌ಶಾಸ್ತ್ರೀಯ ಕಲಿಕೆಯಲ್ಲಿ ಒಂದು ಶಿಸ್ತಿನ ವ್ಯಾಪ್ತಿಯಿಂದ ಆಚೆಗೆ ಹರಡಿರುವಂಥ ವಿಷಯ ಅಥವಾ ಸಮಸ್ಯೆಯನ್ನು

ಅರ್ಥಮಾಡಿಕೊಳ್ಳಲು ಕಲಿಕಾರ್ಥಿಗಳು ಎರಡು ಅಥವಾ ಅನೇಕ ಶಾಸ್ತ್ರಗಳನ್ನು ಆಧರಿಸುತ್ತಾರೆ. ಕಲಿಕಾರ್ಥಿಗಳು ಹೊಸ ಜ್ಞಾನಸಂಪಾದನೆಗಾಗಿ, ಹೊಸ ಅರಿವು ಮತ್ತು ಕೌಶಲ್ಯಗಳಿಗಾಗಿ ಮತ್ತು ಸಾಧಾರಣ ಸಮಸ್ಯಾ ವಿವರಣೆ ಅಥವಾ ಪರಿಹಾರದ ಸಲುವಾಗಿ ಮಾಹಿತಿ ಪರಿಕಲ್ಪನೆಗಳು, ವಿಧಾನಶಾಸ್ತ್ರಗಳು ಮತ್ತು ಕಾರ್ಯವಿಧಾನಗಳನ್ನು ಸಂಯೋಜಿಸಿ ವಿಕಾಸಗೊಳಿಸುತ್ತಾರೆ. ಸಾಧಾರಣವಾಗಿ ಅಂತರ್‌ಶಿಸ್ತುಗಳಿಗೆ ಹೇಳಲಾಗುವ ಉದಾಹರಣೆಗಳೆಂದರೆ ನರವಿಜ್ಞಾನ (Nero science), ಜೈವ ರಸಾಯನ ಶಾಸ್ತ್ರ (Biochemistry), ಭೂ ಜೀವಶಾಸ್ತ್ರ, ಜ್ಞಾನ ವೈವಿಧ್ಯೀಕರಣ ಮತ್ತು ಜ್ಞಾನದ ವಿಘಟನೆ, ಶಾಸ್ತ್ರದ ವೈವಿಧ್ಯೀಕರಣ, ಶಾಸ್ತ್ರದ ಪರಿಧಿಯಲ್ಲಿ ಜ್ಞಾನದ ಮತ್ತಷ್ಟು ವಿಘಟನೆ ಶಾಸ್ತ್ರೀಯ ಸೀಮೆಗಳ ಭೇದನೆ ಹಾಗೂ ಅಧಿಕ ವೈಶಿಷ್ಟ್ಯೀಕರಣಗೊಂಡ ಹೊಸ ಶಾಸ್ತ್ರಗಳ ಉಗಮ, ಊರ್ಜಿತವಾಗಬಲ್ಲ ವಿಜ್ಞಾನ ಮತ್ತು ಇಂಜಿನಿಯರಿಂಗ್, ಮನೋಭಾಷಾ ವಿಜ್ಞಾನ (Psycholinguistics), ಸಾಂಸ್ಕೃತಿಕ ಅಧ್ಯಯನ ಇತ್ಯಾದಿ.

2. ಒಂದು ಸಾಮಾಜಿಕ ಮತ್ತು ವೃತ್ತಿಪರ ಚಟುವಟಿಕೆಯೂ ಹಲವು ಶಿಸ್ತುಗಳಿಗೆ ಅನ್ವಯನ ಕ್ಷೇತ್ರವಾಗುತ್ತದೆಯಲ್ಲದೆ ಒಂದು ಪ್ರತ್ಯೇಕ ಸ್ವತಂತ್ರ ಅಧ್ಯಯನ ಕ್ಷೇತ್ರವೆಂದು ಮಾನ್ಯಮಾಡಲ್ಪಡುತ್ತದೆ. ಉದಾಹರಣೆಗೆ ಶಿಕ್ಷಣ, ಸಮಾಜಕಾರ್ಯ, ಮ್ಯಾನೇಜ್‌ಮೆಂಟ್, ವೈದ್ಯಕೀಯ ವಿಜ್ಞಾನ, ಕೃಷಿವಿಜ್ಞಾನ ತಂತ್ರಜ್ಞಾನ ಮತ್ತು ಇಂಜಿನಿಯರಿಂಗ್ ಇತ್ಯಾದಿ ಈ ಎಲ್ಲವುಗಳಿಗೆ ಸಂಬಂಧಿಸಿದಂತೆ ಆಯಾ ಕ್ಷೇತ್ರಗಳಲ್ಲಿ ವೃತ್ತಿನಿರತರಾದವರ ಅಭ್ಯಾಸಗಳೇ ವ್ಯವಸ್ಥಿತ ಶಾಸ್ತ್ರಗಳಾಗಿ ರೂಪುಗೊಂಡವು. ಈ ಅಭ್ಯಾಸಗಳಿಂದ ಹೊರ ಹೊಮ್ಮಿದ ವೈಶಿಷ್ಟ್ಯೀಕೃತ ಜ್ಞಾನದ ಬಳಕೆಯಿಂದ ಇದು ಸಾಧ್ಯವಾಯಿತು.

3. ಅನೇಕ ಶಿಸ್ತುಗಳು ಒಂದು ಪ್ರಮುಖ ಕಾರ್ಯಕ್ಷೇತ್ರದತ್ತ ಕೇಂದ್ರೀಕೃತಗೊಂಡು ಇವೆರಡರ ಸಂವರ್ಧನೆಗಾಗಿ ದ್ವಿಮುಖ ಪ್ರವಾಹದ ವಿಚಾರಗಳಿಗೆ ದಾರಿಮಾಡಿಕೊಟ್ಟಾಗ ಅಂತರ್‌ಶಿಸ್ತೀಯ ಜ್ಞಾನ ಮತ್ತು ಕ್ಷೇತ್ರಗಳ ಉಗಮಕ್ಕೆ ಈ ವಿದ್ಯಮಾನ ಕಾರಣವಾಗುತ್ತದೆ.

4. ಸಮಾಜ – ರಾಜಕೀಯ ಸನ್ನಿವೇಶಗಳಲ್ಲಿ ಜರುಗುವ ಬದಲಾವಣೆಗಳು ಹೊಸ ಶಾಸ್ತ್ರಗಳ ರೂಪಣೆಗೆ ಕಾರಣವಾಗಬಹುದು. ಜನರ ಜೀವನ ವ್ಯವಸ್ಥೆಯಲ್ಲಿ ಆಗುತ್ತಿರುವ ಬದಲಾವಣೆಯ ಆಧಾರದ ಮೇಲೆ ಯಾವುದಾದರೊಂದು ರೂಪದ ಅನ್ವೇಷಣ ಅಗತ್ಯವಾಗಬಹುದು ಮತ್ತು ಬಳಿಕ ಅವುಗಳು ಹೊಸ ಶಿಸ್ತುಗಳ ರೂಪಣಕ್ಕೆ ಕಾರಣವಾಗಬಹುದು. ಉದಾಹರಣೆ, 'ನಗರ ಅಧ್ಯಯನ' ಎಂಬ ಶಿಸ್ತು ನಗರ ಸಮಾಜದ ನಿರ್ಮಾಣದಿಂದ ಉಂಟಾಗಿದೆ.

5. ಹೊಸ ಸಂಶೋಧನೆಗಳು ಮತ್ತು ತತ್ಪರಿಣಾಮವಾಗಿ ಆಗುವ ಬೆಳವಣಿಗೆಗಳು ಮತ್ತು ಶೋಧನೆಗಳು ಸಹ ಹೊಸ ಶಾಸ್ತ್ರದ ಉಗಮಕ್ಕೆ ಕಾರಣವಾಗುತ್ತವೆ. ಉದಾಹರಣೆಗೆ, ನ್ಯಾನೊಟೆಕ್ನಾಲಜಿ, ಮಾಹಿತಿ ತಂತ್ರಜ್ಞಾನ, ಬಾಹ್ಯಾಕಾಶ ವಿಜ್ಞಾನ ಇತ್ಯಾದಿ. ಕಂಪ್ಯೂಟರ್‌ನ ಶೋಧನೆ ಮತ್ತು ತತ್‌ಸಂಬಂಧಿತ ತಂತ್ರಜ್ಞಾನದ ಶೋಧನೆ ಮಾಹಿತಿ ತಂತ್ರಜ್ಞಾನದ ವಿಕಾಸಕ್ಕೆ ಕಾರಣವಾಗುತ್ತವೆ.

## ಜ್ಞಾನಶಿಸ್ತುಗಳ ರೂಪಣದ ಕಾಲಾನುಕ್ರಮಣಿಕೆ

ಮಾನವರು ಪರಸ್ಪರದಿಂದ ಕಲಿಯಲಾರಂಭಿಸಿದ ಕಾಲದಿಂದ ಜ್ಞಾನಶಿಸ್ತುಗಳು ಗೊತ್ತಿಲ್ಲದ್ದಂತೇ ಮಾನವನ ಜತೆಗೇ ನಡೆದು ಬಂದಿವೆ. ಆದರೆ ಈ ಜ್ಞಾನ ವಿನಿಮಯಕ್ಕೆ ಯಾವ ಹೆಸರನ್ನೂ ಕೊಟ್ಟಿರಲಿಲ್ಲ ಎಂಬುದೇನೋ ನಿಜವೇ. ನಾವಿಂದು ತಿಳಿದಿರುವ ಶೈಕ್ಷಣಿಕ ಶಿಸ್ತನ್ನೇ ಹೋಲುವ ಶಿಸ್ತು ಸಾಕ್ರಟಿಸ್ ಕಾಲದ ಗ್ರೀಕರ ಅವಧಿಯಲ್ಲಿ ಪ್ರಚಲಿತದಲ್ಲಿತ್ತು. ಈ ಕಾಲಘಟ್ಟದಲ್ಲಿ ಮತ್ತು ಪ್ರಸ್ತುತದ ಕಾಲದ ಕೊಂಚ ಹಿಂದಿನವರೆಗೂ ಶಿಕ್ಷಣ ಕೇವಲ ಮೇಲ್ವರ್ಗದ ಜನರಿಗೆ ಮಾತ್ರ ಮೀಸಲಾಗಿತ್ತು. ಅಲ್ಲದೆ, ಆ ಸಮಯದಲ್ಲಿ ಶಿಕ್ಷಣ ಧಾರ್ಮಿಕ ಮತ್ತು ಸೇನಾ ಕೇಂದ್ರಿತವಾಗಿತ್ತು. ಇದು ಇಂದು ನಾವು ತಿಳಿದಿರುವ ಶಿಸ್ತು ಕೇಂದ್ರಿತ ಪಠ್ಯಕ್ರಮಕ್ಕೆ ವಿರುದ್ಧವಾಗಿತ್ತು.

1800ರ ದಶಕದಲ್ಲಿ ನಾವಿಂದು ಕಾಣುತ್ತಿರುವ ಆಧುನಿಕ ಶಿಸ್ತೀಯ ವಿಷಯಗಳು ವಿಕಾಸವಾದವು. ವಿದ್ವಜ್ಜನರು ತಮಗೆ ಆಸಕ್ತಿಕರವಾಗಿದ್ದ ಕ್ಷೇತ್ರಗಳಲ್ಲಿ ವಿಶೇಷ ತಜ್ಞತೆಯನ್ನು ಪಡೆದು ಇತರರೊಂದಿಗೆ ಆ ಜ್ಞಾನವನ್ನು ಹಂಚಿಕೊಳ್ಳುತ್ತಾ ಹೋದಂತೆ ನಾವು ಇಂದಿನ ಕಾಲದಲ್ಲಿ ತಿಳಿದಿರುವ ಶಿಸ್ತೀಯ ವಿಷಯಗಳು ಆರಂಭವಾದವು. ನಿರ್ದಿಷ್ಟ ವಿಷಯದಲ್ಲಿ ವಿಶಿಷ್ಟತೆಯನ್ನು ಪಡೆದ ವಿದ್ವಾಂಸರು ಶಾಸ್ತ್ರಗಳನ್ನು ಸೃಷ್ಟಿಸಲು, ಆಯಾ ಅಧ್ಯಯನ ಕ್ಷೇತ್ರಕ್ಕೆ ವ್ಯಾಖ್ಯಾನಗಳನ್ನು ನಿರ್ಧರಿಸಲು ಪರಸ್ಪರ ಸಹಕರಿಸುತ್ತಿದ್ದರು. ಸಮುದಾಯದೊಂದಿಗೆ ಜ್ಞಾನವೂ ಬೆಳೆದಂತೆ ವೃತ್ತಿಗಳ ಆವಶ್ಯಕತೆಯೂ ಕಂಡುಬಂದಿತು ಹಾಗೂ ಈ ಸಮುದಾಯಗಳು ಮತ್ತು ವೃತ್ತಿಗಳು ಶೈಕ್ಷಣಿಕ ಶಿಸ್ತುಗಳಿಂದ ಉಗಮವಾದವು.

ಕೆನಿಕ್(1974) ಅವರ ಪ್ರಕಾರ ಯಾವುದೇ ಸಾಮಾಜಿಕ ವಿದ್ಯಮಾನದಂತೆಯೇ ಶೈಕ್ಷಣಿಕ ಶಾಸ್ತ್ರಗಳಿಗೂ ಒಂದು ಇತಿಹಾಸವಿದೆ. ಪ್ರತಿಯೊಂದು ಜ್ಞಾನಶಿಸ್ತನ್ನೂ ಅದರ ಐತಿಹಾಸಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಲು ಸಾಧ್ಯವಿದೆ. ಯಾವ ನಿರ್ದಿಷ್ಟ ಐತಿಹಾಸಿಕ ಸನ್ನಿವೇಶದ ದೆಸೆಯಿಂದ ಒಂದು ಶೈಕ್ಷಣಿಕ ಶಿಸ್ತಿನ ಆಧಾರಸ್ತಂಭಗಳು ರಚಿತವಾದವು ಮತ್ತು ಅವು ಕಾಲಕ್ರಮೇಣ ಹೇಗೆ ಬದಲಾದವು ಎಂಬೀ ಅಂಶಗಳನ್ನು ವಿಜ್ಞಾನದ ಇತಿಹಾಸಕಾರರು ವಿಶ್ಲೇಷಿಸಲು, ಅದರ ವಿಕಾಸವನ್ನು ವಿಶ್ಲೇಷಿಸಲು ಸಾಧ್ಯವಿದೆ. ಶಿಸ್ತುಗಳ ಬಹುಕಾಲದ ನಿರಂತರತೆ, ಅನಂತತೆ ಅಥವಾ ರೂಢಿತಪ್ಪಿದ ಅಭ್ಯಾಸಗಳಿಂದ ಪಕ್ಕಸರಿಯುವಿಕೆ, ಚಿಂತನಾವಿಧಾನ ಇವೆಲ್ಲವನ್ನು ಅರ್ಥಮಾಡಿಕೊಳ್ಳಲು ಐತಿಹಾಸಿಕ ದೃಷ್ಟಿಕೋನ ಸಹಾಯ ಮಾಡುತ್ತದೆ. ಕೆಲವು ವೇಳೆ ಈ ಕಾರಣದಿಂದ ಹಳೆಯ ಜ್ಞಾನಶಿಸ್ತು ಮಾಯವಾಗಿ ಇದರ ಜಾಗವನ್ನು ಭರಿಸಬಲ್ಲ ಮತ್ತೊಂದು ಹೊಸ ಶಾಸ್ತ್ರ ಜ್ಞಾನಶಿಸ್ತು ಸೃಷ್ಟಿಗೊಳ್ಳುತ್ತದೆ. ಬೇರೆ ಪದಗಳಲ್ಲಿ ಹೇಳುವುದಾದರೆ ಐತಿಹಾಸಿಕ ದೃಷ್ಟಿಕೋನವು ವಿಜ್ಞಾನ ಮತ್ತು ಶೈಕ್ಷಣಿಕ ಶಿಸ್ತುಗಳ ಗತಿಶೀಲತೆಯನ್ನು ಸೆರೆಹಿಡಿಯುತ್ತದೆ.

ಇತಿಹಾಸಕಾರರು ಸಾಧಾರಣವಾಗಿ ನಿರ್ದಿಷ್ಟ ಶಿಸ್ತೊಂದನ್ನು ಪ್ರಭಾವಿಸಿದ ವಿಶಾಲ ಸಾಮಾಜಿಕ ಸಂದರ್ಭ ಮತ್ತು ಒಟ್ಟಾರೆ ಪರಿಸ್ಥಿತಿಗಳನ್ನು ಹುಡುಕಲು ಯತ್ನಿಸುತ್ತಾರೆ. ಉದಾಹರಣೆಗೆ, ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿದ್ದ ರಾಜಕೀಯ ಪರಿಸರ ಅಥವಾ ಸಮಾಜಕ್ಕೆ ಇದ್ದ ಆವಶ್ಯಕತೆಗಳು ಶಿಸ್ತಿನ ಬೆಳವಣಿಗೆಗೆ ಇರಬಹುದಾದ ಆಂತರಿಕ ಕಾರಣಗಳು. ವಿಶ್ವವಿದ್ಯಾನಿಲಯಗಳು ಮೂರು ಶಿಸ್ತುಗಳಿಗೆ ಪ್ರಶಿಕ್ಷಿತ ವ್ಯಕ್ತಿಗಾರರನ್ನು ಉತ್ಪಾದಿಸುವ ಹೊಣೆಯನ್ನು ಹೊತ್ತಿದ್ದವು. ಈಶ್ವರ ಮೀಮಾಂಸೆ, ನ್ಯಾಯ ಮತ್ತು ವೈದ್ಯಕೀಯ ಈ ಮೂರಕ್ಕೆ ಜ್ಞಾನಶಿಸ್ತು ಅಥವಾ discipline ಎಂಬ ಪದವನ್ನು ಪ್ರಥಮ ಬಾರಿಗೆ ಅನ್ವಯಿಸಲಾಯಿತು. ತಜ್ಞರ ಪ್ರಕಾರ, "ಈ ಪ್ರಾರಂಭಕಾಲದ ಜ್ಞಾನವನ್ನು ಶಾಸ್ತ್ರಬದ್ಧಗೊಳಿಸುವಿಕೆ ಬಾಹ್ಯಬೇಡಿಕೆಗಳಿಗೆ ಪ್ರತಿಕ್ರಿಯೆಯ ರೂಪದಲ್ಲಿ ಉಂಟಾಯಿತಾದರೆ ಹತ್ತೊಂಬತ್ತನೇ ಶತಮಾನದಲ್ಲಿ ಆಂತರಿಕ ಕಾರಣಗಳಿಂದ ಶಿಸ್ತುಗಳ ವೈಶಿಷ್ಟ್ಯೀಕರಣ ಸಂಭವಿಸಿತು.

## ಹೊಸ ಜ್ಞಾನಶಿಸ್ತು ಹೇಗೆ ಉಗಮವಾಗುವುದು?

ಹೊಸ ಜ್ಞಾನಶಿಸ್ತು ರೂಪುಗೊಳ್ಳಲು ಅದು ಯಾವ ಶಿಸ್ತನ್ನು ಕುರಿತದ್ದಾಗಿದೆ, ಅದರ ಸ್ಪಷ್ಟ ಸಂಶೋಧನಾ ಕಾರ್ಯಸೂಚಿ ಹೇಗಿರಬೇಕು ಇವೇ ಮುಂತಾದ ಹಾಗೂ ಅನುಯಾಯಿಗಳನ್ನು ಪ್ರೋತ್ಸಾಹಿಸಬಲ್ಲ ಅಂಶಗಳ ವ್ಯಾಖ್ಯಾನ ಮತ್ತು ಮಂಡನೆಯನ್ನು ಕೈಗೊಳ್ಳಬಲ್ಲ, ಬೌದ್ಧಿಕ ನಾಯಕತ್ವದ ಹೊರೆಯನ್ನು ಹೊರಬಲ್ಲ ಪ್ರತಿಭಾಶಾಲಿ ವಿಜ್ಞಾನಿಗಳ ಆವಶ್ಯಕತೆಯಿದೆ. ಬೇರೆ ರೀತಿಯಲ್ಲಿ ಹೇಳುವುದಾದೆ, ತಮ್ಮ ಮೂಲಭೂತ ಶಿಸ್ತಿನ ಕ್ಷೇತ್ರವನ್ನು ಹಿಂದೆಬಿಟ್ಟು, ಸಂಭಾವ್ಯ ವಿಫಲತೆಯ ಅಪಾಯದಿಂದ ಕೂಡಿದ ತಮ್ಮ ಹೊಸ ಶಿಸ್ತಿನ ಕ್ಷೇತ್ರಕ್ಕೆ ಕಾಲಿಡಬಲ್ಲ ಸಾಹಸಿ ಮುಂದಾಳುಗಳು ಹೊಸ ಜ್ಞಾನಶಿಸ್ತಿನ ರೂಪಣಕ್ಕೆ ಬೇಕಾಗುತ್ತಾರೆ.

ಇದರ ಅರ್ಥವೇನೆಂದರೆ, ಹೊಸ ಹೊಸದಾದ ಮೂಲಭೂತ ಅಂಶಗಳನ್ನು ಮತ್ತು ಒಳನೋಟಗಳನ್ನು ಆಕರ ಶಾಸ್ತ್ರ(ಅಥವಾ ಶಾಸ್ತ್ರಗಳ)ದ ಅಂಶಗಳೊಂದಿಗೆ ಹೊಸೆಯುವ ಅಂತರ್‌ಶಿಸ್ತೀಯ ಯೋಜನೆಯಿಂದ ಅನಿವಾರ್ಯವಾಗಿ ಪ್ರಾಯಶಃ ಎಲ್ಲಾ ಹೊಸ ಶಿಸ್ತುಗಳೂ ಉಗಮವಾಗುತ್ತವೆ. ಹೊಸ ಶಿಸ್ತು ಸ್ಥಿರಗೊಂಡ ತರುವಾಯ ನವವಿಧದ ಸಂಶೋಧಕರ ಅಗತ್ಯ ಬೀಳುತ್ತದೆ. ಮುಂದಾಳುಗಳು ಹಾಗೆಯೇ ಬಿಟ್ಟು ಹೋದ ಜಾಗಗಳನ್ನು ತುಂಬುವ ಮೂಲಕ ಶಿಸ್ತನ್ನು ಕ್ರೋಢೀಕರಿಸುವ ವ್ಯಕ್ತಿಗಳ ಅಗತ್ಯ ಈ ಹೊಸ ಶಿಸ್ತಿಗೆ ಇರುತ್ತದೆ. ಇಂತಹ ಕ್ರೋಢೀಕರಿಸುವ, ಸಂಯೋಜಿಸುವ ವ್ಯಕ್ತಿಗಳು ಇಲ್ಲದಿದ್ದಲ್ಲಿ ತನ್ನದೇ ಆದ ಒಂದು ಸ್ಥಾನದಿಂದ ಗುರುತಿಸಿಕೊಳ್ಳಲು

ಸಾಧ್ಯವಾಗದೆ ಶಾಸ್ತ್ರವು ಕ್ರಮೇಣ ಕಣ್ಮರೆಯಾಗುತ್ತದೆ. ಆದ್ದರಿಂದ, ಕ್ರೋಢೀಕರಣ ಹಂತದಲ್ಲಿ ಶಾಸ್ತ್ರಗಳು ಮೂಲ ವಿಚಾರಗಳನ್ನು ಪರಿಮಿತಗೊಳಿಸಿ ಶಾಸ್ತ್ರೀಯ ಸುಸಂಗತೆ ಮತ್ತು ಸಾಂಪ್ರದಾಯಿಕತೆಯ ಮೇಲೆ ಹೆಚ್ಚು ಹೆಚ್ಚು ಗಮನವನ್ನು ಕೇಂದ್ರೀಕರಿಸುತ್ತವೆ.

ಆರ್ಥರ್ ಎಲ್. ಡಿರ್ಕ್ಸ್ ಶೈಕ್ಷಣಿಕ ಶಿಸ್ತುಗಳ ವಿಕಾಸದ ಸಮಗ್ರ ವಿವರವನ್ನು ಕೊಡುತ್ತಾರೆ. ಈ ಕೆಳಗಿನ ಕಾಲಾನುಕ್ರಮಣಿಕೆ ಕಾಲಪ್ರವಾಹದ ಹಿನ್ನೆಲೆಯಲ್ಲಿ ಶಿಸ್ತುಗಳ ಇತಿಹಾಸವನ್ನು ಸೂಚಿಸುತ್ತದೆ.




ಕ್ರಿ.ಪೂ. 500ರಲ್ಲಿ ಪೈಥಾಗೊರಾಸ್ ಸಂಗ್ರಹಶಾಲೆಯಲ್ಲಿ (ಮ್ಯೂಸಿಯಂ) ಗಣಿತ, ಸಂಗೀತ, ಧ್ವನಿ ವಿಜ್ಞಾನ ಮತ್ತು ರೇಖಾಗಣಿತಗಳನ್ನು ಕುರಿತ ಅಧ್ಯಯನವನ್ನು ಕೈಗೊಳ್ಳಲಾಗುತ್ತಿತ್ತು. ಭಾಷಣ ಸಂಪ್ರದಾಯವನ್ನು ಸ್ಥಾಪಿಸಿದ, ಆದರೆ ಸಂಚಾರಿ ಶಿಕ್ಷಕರಾಗಿದ್ದ ಗ್ರೀಕ್ ಉಪಾಧ್ಯಾಯರು ಇತರ ಕ್ಷೇತ್ರಗಳಲ್ಲಿ ಸಂಶೋಧನೆ ಕೈಗೊಳ್ಳುತ್ತಿದ್ದರು. ಸಾಕ್ರಟಿಸ್ ಅನ್ವೇಷಣೆಗೆ ಪ್ರೋತ್ಸಾಹನ ನೀಡುವ, ಪ್ರಶ್ನಿಸುವ ವಿಧಾನವನ್ನು ಮಂಡಿಸಿದ. ಕ್ರಿ.ಪೂ. 392ರಲ್ಲಿ ಸಾಂಕ್ರಟಿಸ್ ಅಥೆನ್ಸ್‌ನಲ್ಲಿ ವಿದ್ಯಾರ್ಥಿಗಳನ್ನು ರಾಜಕೀಯದಲ್ಲಿ ತರಬೇತಿಗೊಳಿಸಲು ವಾಗ್ಮಿತೆಯ ಪಾಠಶಾಲೆಯನ್ನು ಸ್ಥಾಪಿಸಿದ. ಕ್ರಿ.ಪೂ 387ರಲ್ಲಿ ಪ್ರೇಟೋ (Academy) ಪ್ರೌಢವಿದ್ಯಾಶಾಲೆಯನ್ನು ತೆರೆದ. ಗ್ರೀಕರು ಮೊದಲ ಬಾರಿಗೆ ಬೋಧಿಸಿದ  ಶಾಸ್ತ್ರಗಳಲ್ಲಿ ಗಣಿತ ಮತ್ತು ಸಂಗೀತಶಾಸ್ತ್ರಗಳು ಸೇರಿದ್ದವು. ಪ್ಲೇಟೊ ತನ್ನ ಅಕಾಡೆಮಿಯನ್ನು ತೆರೆದಾಗ ಆತ ಈಗಾಗಲೇ ಬೋಧಿಸಲಾಗುತ್ತಿದ್ದ ಗಣಿತಶಾಸ್ತ್ರದ ಜೊತೆಗೆ ರಾಜನೀತಿ ಮತ್ತು ಶಿಕ್ಷಣಗಳಂತಹ ಸಾಮಾಜಿಕ ವಿಷಯಗಳನ್ನು ಬೋಧಿಸಿದ. ಪೈಥಾಗೊರಸನ ಸಂಖ್ಯಾ ಸಿದ್ಧಾಂತ, ಉನ್ನತ ರೇಖಾಗಣಿತ ಮತ್ತು ವಿಜ್ಞಾನವನ್ನು ಕುರಿತ ಪರ್ಯಾಲೋಚನೆಗಳ ವಿಷಯಗಳು ಆತನ ಮಾದರಿ ಅಧ್ಯಯನದಲ್ಲಿ ಒಳಗೊಂಡಿದ್ದವು. ಆತ ಶಿಕ್ಷಣ, ನ್ಯಾಯಶಾಸ್ತ್ರ, ರಾಜನೀತಿ ಇವೇ ಮುಂತಾದ ಸಾಮಾಜಿಕ ವಿಷಯಗಳನ್ನು ಕುರಿತು ವಿಚಾರ ಮಾಡುತ್ತಿದ್ದ. ಅರಿಸ್ಟಾಟಲ್ ಅಕಾಡೆಮಿಯನ್ನೇ ಹೋಲುತ್ತಿದ್ದ, ಆದರೆ ಬೌದ್ಧಿಕ ವ್ಯಾಪ್ತಿಯಲ್ಲಿ ವಿಶಾಲವಾಗಿದ್ದ ಪ್ರವಚನ ಶಾಲೆಯನ್ನು (ಲೈಸೀಯವರ್) ಅಥೆನ್ಸ್‌ನಲ್ಲಿ ಕ್ರಿ.ಪೂ. 335ರಲ್ಲಿ ತೆರೆದ. ಇಲ್ಲಿ ಪ್ರವಚನಕ್ಕೆ ವಿಷಯವಾಗದೇ ಇದ್ದ ಕ್ಷೇತ್ರಗಳೇ ಇರಲಿಲ್ಲ ಎನ್ನಬಹುದು. ಸಂಗೀತ, ಸಸ್ಯಶಾಸ್ತ್ರೀಯ ವರ್ಗೀಕರಣ, ಜೀವ ಶಾಸ್ತ್ರ, ಮಾನವಶಾಸ್ತ್ರ, ರಾಜನೀತಿ, ನ್ಯಾಯ, ತರ್ಕ, ಅಧ್ಯಾತ್ಮ ಶಾಸ್ತ್ರ, ಭೌತಶಾಸ್ತ್ರ, ರಾಜನೀತಿ, ಮನಃಶಾಸ್ತ್ರ, ಕಾವ್ಯಶಾಸ್ತ್ರ, ಅಲಂಕಾರ ಶಾಸ್ತ್ರ ಇತ್ಯಾದಿ.  ಎರಡನೇ ಥಿಯೊಡೋನೆಯಸ್ ಎಂಬಾತ ಕ್ರಿ.ಪೂ. 400ರ ಶತಮಾನದ ಅವಧಿಯಲ್ಲಿ ವ್ಯಾಕರಣ, ವೈದ್ಯಶಾಸ್ತ್ರ, ಸಾಹಿತ್ಯ, ವೈದ್ಯಕೀಯ, ನ್ಯಾಯ ಮತ್ತು ತತ್ವಶಾಸ್ತ್ರ ಬೋಧಿಸುವ ವಿಶ್ವವಿದ್ಯಾನಿಲಯವನ್ನು ತೆರೆದ. (ಶಾರೀರಿಕ ರಚನಾಶಾಸ್ತ್ರ, ಶಸ್ತ್ರಚಿಕಿತ್ಸೆ, ಔಷಧಶಾಸ್ತ್ರ ಮತ್ತು ವಿಶೇಷ ವೈದ್ಯಕೀಯ), ತತ್ವಶಾಸ್ತ್ರ (ತರ್ಕ, ನೀತಿಶಾಸ್ತ್ರ ಮತ್ತು ಅಧ್ಯಾತ್ಮ ಶಾಸ್ತ್ರ), ಸಾಹಿತ್ಯ (ಭಾಷಾಶಾಸ್ತ್ರ, ವ್ಯಾಕರಣ, ಕಾವ್ಯಶಾಸ್ತ್ರ ಮತ್ತು ಛಂದಶಾಸ್ತ್ರ, ಸಮಾಜ ವಿಜ್ಞಾನ, ಇತಿಹಾಸ, ಭೂಗೋಳಶಾಸ್ತ್ರ, ರಾಜನೀತಿ, ನ್ಯಾಯ ಸಮಾಜಶಾಸ್ತ್ರ, ನ್ಯಾಯಶಾಸ್ತ್ರ, ಮತಧರ್ಮಶಾಸ್ತ್ರ (ಧರ್ಮ ಹೋಲಿಕೆ, ಧರ್ಮಗಳ ಇತಿಹಾಸ, ಕುರಾನಿನ ಅಧ್ಯಯನ, ಧಾರ್ಮಿಕ ಸಂಪ್ರದಾಯಗಳು ಮತ್ತು ಇತರ ಧಾರ್ಮಿಕ ವಿಷಯಗಳು). ಗಣಿತ (ಬೀಜಗಣಿತ, ರೇಖಾಗಣಿತ ಮತ್ತು ಖಗೋಳಶಾಸ್ತ್ರ) – ಇವೆಲ್ಲವೂ ಕ್ರಿ.ಶ. 1000ದ ಶತಮಾನದ ಅವಧಿಯ ಇಸ್ಲಾಮೀ ಸಂಸ್ಕೃತಿಯ ಸ್ವರ್ಣಯುಗದ ಕಾಲದಲ್ಲಿ ಪಠ್ಯಕ್ರಮದಲ್ಲಿ ಒಳಗೊಂಡಿದ್ದ ವಿಸ್ತೃತ ವ್ಯಾಪ್ತಿಯ ವಿಷಯಗಳಾಗಿದ್ದವು. ಮಧ್ಯಯುಗದ ಪ್ರಪಂಚದಲ್ಲಿ ಕೇವಲ ನಾಲ್ಕು ಪ್ರಮುಖ ಅಧ್ಯಯನ ಶಾಖೆಗಳಿದ್ದವು. ಅವುಗಳೆಂದರೆ ವೈದ್ಯಶಾಸ್ತ್ರ, ಮತಧರ್ಮಶಾಸ್ತ್ರ, ಉದಾರಶಾಸ್ತ್ರಗಳು (ಯುರೋಪಿನ ಮಧ್ಯಯುಗದ

ಶಿಕ್ಷಣ ಪದ್ಧತಿಯಲ್ಲಿನ ತ್ರಿಶಾಸ್ತ್ರಗಳು ಅಂದರೆ ವ್ಯಾಕರಣ, ತರ್ಕ, ಅಲಂಕಾರ ಹಾಗೂ ಚತುಶ್ಶಾಸ್ತ್ರಗಳು ಅಂದರೆ ಅಂಕಗಣಿತ, ಜ್ಯಾಮಿತಿ, ಖಗೋಳಶಾಸ್ತ್ರ ಮತ್ತು ಸಂಗೀತ). ಹಾಗೂ ಚರ್ಚಿನ ಕಾನೂನು (Canon Law). ಸಮಕಾಲೀನ ಕಾಲಘಟ್ಟದಲ್ಲಿ ಅಧ್ಯಯನ ಮಾಡಲ್ಪಡುವ ಶಾಸ್ತ್ರಗಳ ಸಂಖ್ಯೆ ಬಹಳವಾಗಿ ಅಧಿಕಗೊಂಡಿತು. ಹತ್ತೊಂಭತ್ತನೇ ಶತಮಾನದ ಮಧ್ಯಭಾಗದಿಂದ ಅಸಾಂಪ್ರದಾಯಿಕ ಭಾಷೆಗಳು, ರಾಜ್ಯಶಾಸ್ತ್ರ, ಸಾಹಿತ್ಯ ಮತ್ತು ಅರ್ಥಶಾಸ್ತ್ರಗಳಂತಹ ಹೊಚ್ಚಹೊಸ ಶಾಸ್ತ್ರಗಳು ಸೇರ್ಪಡೆಯಾದವು. ಇದಲ್ಲದೆ, ಪ್ರಕೃತಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹಲವು ಆವಿಷ್ಕಾರಗಳಾದವು. ಇಂಜಿನಿಯರಿಂಗ್, ಜೀವಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಭೌತಶಾಸ್ತ್ರ ವಿಷಯಗಳು ಅಧ್ಯಯನಕ್ಕೆ ಆಯ್ಕೆಗೊಂಡವು. ಇಡೀ ಪ್ರಪಂಚದ ಪ್ರಗತಿಯ ವೇಗ ತೀವ್ರವಾಗಿದ್ದ ಇಪ್ಪತ್ತನೆಯ ಶತಮಾನದಲ್ಲಿ ಹೊಸ ಹೊಸ ಶೈಕ್ಷಣಿಕ ವಿಜ್ಞಾನ ವಿಷಯಗಳನ್ನು ಅಧ್ಯಯನ ಮಾಡುವ ಅಗತ್ಯ ಒದಗಿಬಂತು. ಜೀವನ ಮತ್ತು ಸಾಮಾಜಿಕ ಪ್ರಜ್ಞೆಯು ಹೊಸ ಮಟ್ಟ ತಲುಪಿದ್ದರ ಕಾರಣದಿಂದ ಮನಶ್ಶಾಸ್ತ್ರ, ಸಮಾಜಶಾಸ್ತ್ರ ಮತ್ತು ಶಿಕ್ಷಣಶಾಸ್ತ್ರಗಳನ್ನು ಅಂದಿನ ಪಠ್ಯಕ್ರಮದಲ್ಲಿ ಸೇರಿಸುವುದು ಅಗತ್ಯವಾಯಿತು. ಇಪ್ಪತ್ತನೇ ಶತಮಾನದ ಅಂತ್ಯಭಾಗದಲ್ಲಿ ವೈಜ್ಞಾನಿಕ ಕುತೂಹಲದಲ್ಲಿ ಒಂದು ಹೊಸ ಸ್ಫೋಟವೇ ಆಗಿದ್ದು ಕಂಡುಬಂತು. ನಿರ್ದಿಷ್ಟ ಜ್ಞಾನಕ್ಷೇತ್ರ ಅಥವಾ ನಿರ್ದಿಷ್ಟ ಪ್ರಶ್ನೆಗಳ ಮೇಲೆ ಕೇಂದ್ರೀಕೃತಗೊಂಡ ಹೊಸ ಶಾಸ್ತ್ರಗಳು ಕಾಣಿಸಿಕೊಂಡವು. ಹಲವು ಶಾಸ್ತ್ರಗಳು ವಿದ್ಯಾರ್ಥಿಗಳನ್ನು ಒಂದು ವೃತ್ತಿಗಾಗಿ ಮತ್ತು ಬಾಳಿನ ಗತಿಯ ನಿರ್ಮಾಣಕ್ಕಾಗಿ ಸಿದ್ಧಪಡಿಸಲೆಂದೇ ಅಸ್ತಿತ್ವಕ್ಕೆ ಬಂದವು. ವೈದ್ಯಶಾಸ್ತ್ರದ ಬೆಳವಣಿಗೆಯಿಂದ ಆತಿಥ್ಯ ನಿರ್ವಹಣೆ ಮತ್ತು ಶುಶ್ರೂಷೆಯಂತಹ ವಿಭಾಗಗಳು ವಿಕಾಸಗೊಂಡವು. ಕಡೆಗೆ ಭೂ ಭೌತಶಾಸ್ತ್ರ ಮತ್ತು ಜೀವ ರಸಾಯನಶಾಸ್ತ್ರಗಳಲ್ಲಿ ಎಷ್ಟರಮಟ್ಟಿಗೆ ಬೆಳವಣಿಗೆಗಳು ಕಂಡುಬಂದವೆಂದರೆ ಈ ಕ್ಷೇತ್ರಗಳಲ್ಲಿ ನಿರ್ದಿಷ್ಟ ವೃತ್ತಿಗಳನ್ನು, ರೂಪುರೇಷೆಯನ್ನು ಹಾಕುವ ಅವಶ್ಯಕತೆ ಕಂಡುಬಂತು. ಕಾರಣ, ಈ ಶಾಖೆಗೆ ವಿಜ್ಞಾನಿಗಳ ಕೊಡುಗೆ ಅಪಾರವಾಗಿದ್ದು ಅವು ಪ್ರಸಿದ್ಧಿಗೆ ಬಂದವು.

ಜ್ಞಾನಶಿಸ್ತುಗಳ ವಿಕಾಸ ಒಂದು ನಿರಂತರ ಪ್ರಕ್ರಿಯೆ. ಮಾನವ ಜೀವಿಯಂತೆಯೇ ಸಮಾಜಗಳು ಮತ್ತು ತಂತ್ರಜ್ಞಾನಗಳು ವಿಕಸನಗೊಳ್ಳುತ್ತವೆ. ಮಾನವನ ತಿಳಿವಳಿಕೆ ಮತ್ತು ಅರ್ಥೈಸುವಿಕೆಗಳು ಕೂಡ ವಿಕಸನಗೊಂಡು ತತ್ಫಲವಾಗಿ ಹೊಸ ಜ್ಞಾನನಿರ್ಮಾಣ ಮತ್ತು ಹೊಸಶಿಸ್ತುಗಳ ಉಗಮಕ್ಕೆ ದಾರಿಯಾಗುತ್ತದೆ. ವೈಜ್ಞಾನಿಕ ಜ್ಞಾನ, ತಿಳಿವಳಿಕೆ ಮತ್ತು ಅಭ್ಯಾಸಗಳು ಮುಂದುವರೆದಂತೆ ಕೆಲವು ಹಳೆಯ ಶಿಸ್ತುಗಳು ತಮ್ಮ ಪ್ರಾಬಲ್ಯವನ್ನು ಕಳೆದುಕೊಳ್ಳಬಹುದು ಅಥವಾ ಅಂತಹ ಶಿಸ್ತುಗಳನ್ನು ಬೇರೆ ಸ್ವರೂಪದಲ್ಲಿ ಅಳವಡಿಸಿಕೊಳ್ಳಲಾಗುವುದು.

ಶ್ರೀಮಂತ ಜ್ಞಾನಭಂಡಾರವನ್ನು ಹೊಂದಿರುವ ಶಾಸ್ತ್ರಗಳು ಅಂತರ್‌ಶಿಸ್ತೀಯ ಅಧ್ಯಯನಗಳಿಗೆ ನಿರ್ಮಾಣ ಶಿಲೆಗಳಿದ್ದಂತೆ. ಹಿಂದಿನ ಶಿಸ್ತುಗಳ ತಿಳುವಳಿಕೆ ಭವಿಷ್ಯದ ಶಿಸ್ತುಗಳನ್ನು ಅರಿತುಕೊಳ್ಳಲು ಅವಶ್ಯಕ. ಉದಾಹರಣೆಗೆ ವೈದ್ಯಕೀಯ ವಿಷಯಗಳ ಬಗೆಗೆ ತಿಳಿದುಕೊಳ್ಳುವಾಗ ಹಿಂದೆ ಗಿಡಮೂಲಿಕೆಗಳನ್ನು ಹೇಗೆ ಬಳಸುತ್ತಿದ್ದರು, ಇಂದು ನಾವು ಆಧುನಿಕ ಔಷಧಶಾಸ್ತ್ರದಲ್ಲಿ ಎಷ್ಟು ಮುಂದುವರೆದಿದ್ದೇವೆ ಎಂಬುವುಗಳ ಬಗ್ಗೆ ಅವಲೋಕಿಸುವುದುಮುಖ್ಯವಾಗುತ್ತದೆ. ಹೀಗೆ ಪುನರಾವಲೋಕಿಸುವಾಗ ಯಾವುದು ಪರಿಣಾಮಕಾರಿಯಾಗಿತ್ತು ಯಾವುದು ಪರಿಣಾಮಕಾರಿಯಾಗಿರಲಿಲ್ಲ ಎಂಬುದನ್ನು ಕಾಣಲು ಸಮರ್ಥರಾಗುತ್ತೇವೆ. ಆದ್ದರಿಂದಲೇ ಶಿಸ್ತುಗಳು ಬದಲಾಗುತ್ತವೆ, ಹೊಸ ಶಿಸ್ತುಗಳು ರೂಪುಗೊಳ್ಳುತ್ತವೆ. ವಿದ್ಯಾರ್ಥಿಗಳಿಗೆ ಏನನ್ನು ಕಲಿಯುವುದು ಮುಖ್ಯವಾಗಿದೆ ಎಂದು ಸಮಾಜ ಭಾವಿಸುತ್ತದೆಯೋ ಅದಕ್ಕನುಗುಣವಾಗಿ ಅನಾದಿಕಾಲದಿಂದಲೂ ಶಿಕ್ಷಣವಿಷಯಗಳು ನಿರಂತರವಾಗಿ ಬದಲಾಗುತ್ತಿವೆ.

ಗತಕಾಲದ್ದನ್ನು ವಿದ್ಯಾರ್ಥಿಗಳಿಗೆ ಕಲಿಯಲು ಅವಕಾಶ ಕಲ್ಪಿಸಿ ಮತ್ತು ಅದನ್ನು ಪ್ರಸ್ತುತ ಮತ್ತು ಭವಿಷ್ಯದ ಬಗೆಗೆ ಕಲಿಯುವಾಗ ಪರಿಗಣನೆಗೆ ತೆಗೆದುಕೊಳ್ಳಲು ಅನುಕೂಲವಾಗಲಿ ಎಂದು ಶಿಕ್ಷಣವು ಗತಶತಮಾನಗಳಿಂದ ವಿಕಸನಗೊಳ್ಳುತ್ತಾ ಬಂದಿದೆ. ಹದಿನೇಳನೇ, ಹದಿನೆಂಟನೇ ಮತ್ತು ಹತ್ತೊಂಬತ್ತನೇ ಶತಮಾನಗಳಲ್ಲಿ ಮೊದಲ ಬಾರಿಗೆ ಗುರುತಿಸಿದಾಗ ಇವುಗಳು ಹೇಗೆ ಇದ್ದವೋ ಅವುಗಳ ಆಧಾರದ ಮೇಲೆಯೇ ಎಲ್ಲ ಜ್ಞಾನಶಿಸ್ತುಗಳೂ ನಿರ್ಮಾಣಗೊಂಡಿವೆ. ಈ ಸಂಗತಿ ಕಲೆ, ಇತಿಹಾಸ ಮತ್ತು ಮಾನವಿಕ ಶಾಸ್ತ್ರಗಳ ಮುಖ್ಯ ವಿಷಯಗಳ ಕುರಿತಂತೆ ಬಹಳ ಸತ್ಯವಾಗಿದೆ. ಏಕೆಂದರೆ, ಕಳೆದ ಶತಮಾನಗಳಲ್ಲಿ ಈ ಶಿಸ್ತುಗಳು ಬಹಳ ಪ್ರಮುಖವಾಗಿದ್ದವು. ಇಪ್ಪತ್ತೊಂದನೇ

ಶತಮಾನದ ಪ್ರಧಾನ ಅಂಶವೆಂದರೆ ಬಹುತೇಕ ಎಲ್ಲಾ ಶಿಸ್ತುಗಳೂ ಇತರ ಶಿಸ್ತುಗಳನ್ನು ಒಳಗೊಂಡಿರುತ್ತವೆಯಾದ್ದರಿಂದ ಅಂತರ ಶಿಸ್ತೀಯ ಉಪಕ್ರಮವು ಅಗತ್ಯವಾಗುತ್ತದೆ. ಶಿಸ್ತುಗಳನ್ನು ಒಟ್ಟಾಗಿ ಸಂಯೋಜಿಸುತ್ತಿರುವುದರಿಂದ, ಹಿಂದಿನ ಕಾಲದಲ್ಲಿ ಒಂದೊಂದು ವಿಷಯವನ್ನು ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಅಧ್ಯಯನ ಮಾಡಿದಂತೆ ಮಾಡುವ ಬದಲಿಗೆ ಅಪಾರ ಪ್ರಮಾಣದ ಹೊಸ ಮಾಹಿತಿಯನ್ನು ಅಲ್ಪಸಮಯದಲ್ಲಿ ಕಲಿಯಲು ಸಾಧ್ಯವಾಗುತ್ತದೆ. ಇದರಿಂದ ಇಂದಿನ ಸಮಾಜದಲ್ಲಿ ಹೆಚ್ಚು ಕುಶಲತೆಯುಳ್ಳ ಮತ್ತು ವೈವಿಧ್ಯಮಯ ಕೆಲಸಗಾರರು ತರಬೇತುಗೊಳ್ಳಲು ಸಾಧ್ಯವಾಗುತ್ತದೆ.

ಹಿಂದಿನ ದಿನಗಳಲ್ಲಿ ಸಮಾಜದ ಬೇಡಿಕೆಗಳ ಒತ್ತಡದ ಕಾರಣದಿಂದಾಗಿ ಉನ್ನತಶಿಕ್ಷಣಕ್ಕೆ ಹೋಗುತ್ತಿದ್ದರು, ಅಧ್ಯಯನ ಕ್ಷೇತ್ರಗಳು ಸೀಮಿತವಾಗಿದ್ದರಿಂದ ವಿದ್ಯಾರ್ಥಿಗಳಿಗೆ ಮಾನವಿಕ ಶಿಸ್ತುಗಳನ್ನು ಮತ್ತು ಧಾರ್ಮಿಕ ಶಿಸ್ತುಗಳನ್ನು ಬೋಧಿಸಲಾಗುತ್ತಿತು. ಇಂದಿನ ಕಾಲದಲ್ಲಿ ವಿದ್ಯಾರ್ಥಿಗಳು ತಮ್ಮ ಒಲವು, ಆಸಕ್ತಿ, ನಿರಾಸಕ್ತಿಗಳಿಗೆ ತಕ್ಕಂತೆ ತಾವು ಕಲಿಯಲು ಇಚ್ಛಿಸಿದ್ದನ್ನು ಆಯ್ಕೆ ಮಾಡಲು ಅವಕಾಶ ಕೊಡಲಾಗುತ್ತದೆ. ವಿದ್ಯಾರ್ಥಿಗಳಿಗೆ ವಿಭಿನ್ನ ಶಿಸ್ತುಗಳಿಂದ ವಿಷಯಗಳನ್ನು ಅಧ್ಯಯನ ಮಾಡಿ, ತರುವಾಯ ಅವೆಲ್ಲವನ್ನು ಸಂಯೋಜಿಸಿ ಅವರದೇ ಆದ ಒಂದು ಶಿಸ್ತನ್ನು ರೂಪಿಸಿಕೊಳ್ಳಲು ಸಾಧ್ಯವಿದೆ. ಈ ಉಪಕ್ರಮಕ್ಕೆ ಅಂತರ್‌ಶಿಸ್ತೀಯ ಅಧ್ಯಯನ ಎನ್ನವರು. ಪ್ರತ್ಯೇಕ ಶಿಸ್ತುಗಳು ಇಲ್ಲದಿದ್ದಲ್ಲಿ ಅಂತರ್‌ಶಿಸ್ತೀಯ ಅಧ್ಯಯನಗಳ ನಿರ್ಮಾಣ, ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಹೊಸದನ್ನು ಸೇರಿಸಲು ಇಲ್ಲವೇ ಹೆಣೆಯಲು ಸಾಧ್ಯವಾಗುವುದಿಲ್ಲ.

## ಭಾರತದಲ್ಲಿ ಶೈಕ್ಷಣಿಕ ಶಾಸ್ತ್ರಗಳ ಉಗಮ

ಭಾರತದ ಸಂದರ್ಭದಲ್ಲಿ ಶಿಸ್ತುಗಳು ಉಗಮವಾಗಿ ಶೈಕ್ಷಣಿಕ ಶಿಸ್ತುಗಳು ಹೇಗೆ ರೂಪುಗೊಂಡವು ಎಂಬುದನ್ನು ಕುರಿತ ಶೋಧನಕಾರ್ಯಗಳು ನಮಗೆ ಹೆಚ್ಚು ಕಂಡುಬಂದಿಲ್ಲ. ಇದು ಸಂಶೋಧನೆಗೆ ಸೂಕ್ತವಾದ ಕ್ಷೇತ್ರ. ಶಿಸ್ತು ಎಂಬ ನಿಜವಾದ ಅರ್ಥದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಿಸ್ತುಗಳು ಭಾರತದಲ್ಲಿದ್ದವು ಎಂಬುದರ ಬಗ್ಗೆ ಸಂಶಯವಿಲ್ಲ. ಬೇರೆ ಬೇರೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಇವುಗಳನ್ನು ಅಧ್ಯಯನ ಮಾಡಲಾಗುತ್ತಿತ್ತು. ಇಂದು ಶಾಲೆಗಳಲ್ಲಿ ಜನಪ್ರಿಯವಾಗಿರುವ ಶಿಸ್ತುಗಳು ಪಾಶ್ಚಾತ್ಯ ದೇಶಗಳ ಪ್ರಭಾವದ ಪರಿಣಾಮವಾಗಿರಬಹುದು. ಆದರೆ, ಭಾರತದಲ್ಲೂ ಅನೇಕ ಶೈಕ್ಷಣಿಕ ಶಿಸ್ತುಗಳು ಮೂಡಿ ಬೆಳೆದು ಬಂದಿವೆ ಎಂದು ಹೇಳಲು ದಾಖಲೆಗಳಿವೆ. ಪ್ರಿಯ ವಿದ್ಯಾರ್ಥಿ/ ವಿದ್ಯಾರ್ಥಿನಿಯರೇ, ಈ ಅಧ್ಯಯನ ಕ್ಷೇತ್ರಕ್ಕೆ ಹೆಚ್ಚಿನ ಗಮನಕೊಡಿ, ಆಳವಾದ ಅಧ್ಯಯನ ಕೈಗೊಳ್ಳಿ ಮತ್ತು ಸೂಕ್ತ ಜ್ಞಾನವನ್ನು ಗುರುತಿಸಿ.

ಭಾರತದಲ್ಲಿ ಜ್ಞಾನಶಿಸ್ತುಗಳ ಉಗಮವನ್ನು ಹಿಂದೂ ಧರ್ಮದ ವೇದಾಂತಗಳು ಎಂದೇ ಹೆಸರಾದ ಆರು ಸಹಾಯಕ ಶಾಸ್ತ್ರಗಳು ವಿಕಸನಗೊಂಡ ಪುರಾತನ ಕಾಲದಲ್ಲಿ ಗುರುತಿಸಬಹುದು, (ಈ ನಿಗಮನವನ್ನು ಸಮರ್ಥಿಸಲು ಮತ್ತಷ್ಟು ಪುರಾವೆಗಳು ಬೇಕು). ಈ ವೇದಾಂಗಗಳು ಇಂತಿವೆ.

1. ಶಿಕ್ಷಣ, ಧ್ವನಿ ಶಾಸ್ತ್ರ, ಉಚ್ಚಾರಣೆ: ವೇದ ಪಠಣದ ಸಂದರ್ಭದಲ್ಲಿ ಸಂಸ್ಕೃತದ ಅಕ್ಷರಗಳು, ಉಚ್ಚಾರಣಾ ರೀತಿ, ಪ್ರಮಾಣ, ಒತ್ತು, ಸ್ವರವಿನ್ಯಾಸ ಮತ್ತು ಪದಗಳ ಮಾಧುರ್ಯ ಪೂರ್ಣ ಮಿಶ್ರಣ–ಇವಿಷ್ಟು ಅಂಶಗಳು ಹೇಗಿರಬೇಕು ಎಂಬುದರ ಮೇಲೆ ಈ ಶಾಸ್ತ್ರವು ಗಮನ ಕೇಂದ್ರೀಕರಿಸುತ್ತದೆ.

2. ಛಂದಸ್ಸು: ಕಾವ್ಯದ ಛಂದಸ್ಸುಗಳ ಮೇಲೆ ಈ ಶಾಸ್ತ್ರ ಗಮನಹರಿಸುತ್ತದೆ. ಒಂದು ಶ್ಲೋಕದಲ್ಲಿ ಇಂತಿಷ್ಟು ಅಕ್ಷರಗಳಿರಬೇಕೆಂಬ, ಒಂದು ಶ್ಲೋಕದಲ್ಲಿ ಇಂತಿಷ್ಟೇ ಮಾತ್ರೆಗಳಿರಬೇಕೆಂಬ ನಿಯಮಗಳ ಮೇಲೆ ಈ ಶಾಸ್ತ್ರ ಗಮನ ಕೇಂದ್ರೀಕರಿಸುತ್ತದೆ.

3. ವ್ಯಾಕರಣ: ವ್ಯಾಕರಣ ಮತ್ತು ಭಾಷಾ ವಿಶ್ಲೇಷಣೆಯ ವಿಚಾರಗಳನ್ನು ಸೂಕ್ತವಾಗಿ ವ್ಯಕ್ತಪಡಿಸುವುದಕ್ಕೋಸ್ಕರ ಶಬ್ದಗಳ ಮತ್ತು ವಾಕ್ಯಗಳ ಸ್ವರೂಪವನ್ನು ನಿಶ್ಚಯಿಸುವ ಸಲುವಾಗಿ ವ್ಯಾಕರಣದ ನಿಯಮಗಳು ಮತ್ತು ಭಾಷಾ ವಿಶ್ಲೇಷಣೆಗಳ ಮೇಲೆ ಈ ಶಾಸ್ತ್ರವು ಗಮನ ಕೇಂದ್ರೀಕರಿಸುತ್ತದೆ.

4. ನಿರುಕ್ತ: ಈ ಶಾಸ್ತ್ರವು ಶಬ್ದಗಳ ನಿಷ್ಪತ್ತಿಯ ಬಗೆಗೆ ವಿವರಿಸುವಂತಹವು. ವಿಶೇಷತಃ ಪ್ರಾಚೀನವಾದುವು ಪುರಾತನ ಕಾಲದಿಂದ ಬಳಕೆಯಲ್ಲಿರುವುವು, ಸ್ಪಷ್ಟ ಅರ್ಥ ಇಲ್ಲದೆ ಇರುವುದು, ಗಮನ ಕೇಂದ್ರೀಕರಿಸುತ್ತದೆ. ಈ ಅಧೀನ ಶಾಸ್ತ್ರ ಪದಗಳನ್ನು ಬಳಸಿರುವ ಸಂದರ್ಭದ ಹಿನ್ನೆಲೆಯಲ್ಲಿ ಅವುಗಳ ಸರಿಯಾದ ಅರ್ಥವನ್ನು ಬೆಳಕಿಗೆ ತರಲು ಬೇಕಾದ ಭಾಷಾ ಸಂಬಂಧಿ ವಿಶ್ಲೇಷಣೆಯನ್ನು ಕೈಗೊಳ್ಳುತ್ತದೆ.

5. ಕಲ್ಪ: (ಮತಾಚರಣೆಯ ಸೂಚನೆಗಳು) ಜೀವನದ ಮಹತ್ತರ ಘಟನೆಗಳಾದ ಹುಟ್ಟು, ಸಾವು ಇವೆರಡರ ನಡುವಣ ಘಟನೆಗಳು ಕುಟುಂಬದಲ್ಲಿ ಸಾವು, ವೈಯಕ್ತಿಕ ನಡೆವಳಿಕೆ, ಇವುಗಳಿಗೆ ಸಂಬಂಧಿಸಿದ ಧಾರ್ಮಿಕ ಆಚರಣೆಗಳು, ವೈದಿಕ ಮತಾಚರಣೆಗಳ ನಿರ್ದಿಷ್ಟ ಕ್ರಮಗಳು, ವ್ಯಕ್ತಿಯ ಜೀವನದ ವಿವಿಧ ಹಂತಗಳಲ್ಲಿ ಆತ ಅನುಸರಿಸಬೇಕಾದ ವರ್ತನೆಗಳು ಮತ್ತು ಸರಿಯಾದ ಕರ್ತವ್ಯಗಳು – ಇವೆಲ್ಲವುಗಳನ್ನು ಕುರಿತಂತೆ ಈ ಶಾಸ್ತ್ರವು ಚರ್ಚಿಸುತ್ತದೆ.

6. ಜ್ಯೋತಿಷ್ಯ: ವ್ರತಾಚರಣೆಗೆ ಶುಭಸಮಯ, ಜ್ಯೋತಿಷ್ಯಶಾಸ್ತ್ರ, ಮತ್ತು ಖಗೋಳಶಾಸ್ತ್ರ. ಈ ಸಹಾಯಕ ಶಾಸ್ತ್ರವು ಕಾಲ ನಿರ್ಧಾರದತ್ತ ಗಮನ ಕೇಂದ್ರೀಕರಿಸುತ್ತದೆ.

ಈ ಶಾಸ್ತ್ರಗಳ ಗುಣಲಕ್ಷಣಗಳ ಬೇರುಗಳನ್ನು ಪುರಾತನ ಕಾಲದಲ್ಲಿ ಕಾಣಬಹುದು ಹಾಗೂ ಬೃಹದಾರಣ್ಯಕ ಉಪನಿಷತ್ತು ಇವುಗಳನ್ನು ವೇದಗ್ರಂಥಗಳ ಅವಿಭಾಜ್ಯ ಅಂಗವೆಂದು ಹೇಳುತ್ತದೆ. ಪ್ರತ್ಯೇಕವಾಗಿ ಈ ಸಹಾಯಕ ಅಧ್ಯಯನ ಶಾಸ್ತ್ರಗಳ ಮೂಲವನ್ನು ಕ್ರಿ.ಪೂ. 2ನೇ ಶತಮಾನದಲ್ಲಿ ಕಾಣಬಹುದಲ್ಲದೆ, ಕ್ರಿ.ಪೂ 5ನೇ ಶತಮಾನದಲ್ಲಿದ್ದ ವಿದ್ವಾಂಸ ಯಾಸ್ಕರು ವೇದಾಂಗಗಳನ್ನು ಉಲ್ಲೇಖಿಸುತ್ತಾರೆ. ಆದಾಗ್ಯೂ, ಈ ಆರು ವೇದಾಂಗಗಳ ಪಟ್ಟಿಯನ್ನು ಮೊದಲ ಬಾರಿಗೆ ಯಾವಾಗ, ಎಲ್ಲಿ ಪರಿಕಲ್ಪಿಸಲಾಯಿತು ಎಂಬುದು ಅಸ್ಪಷ್ಟ.

ಬಹುಶಃ ವೇದಾಂಗಗಳು ವೈದಿಕ ಕಾಲದ ಅಂತ್ಯಭಾಗದ ಹೊತ್ತಿಗೆ ವಿಕಸನಗೊಂಡಿರಬೇಕು. ಅರ್ಥಾತ್ ಕ್ರಿ.ಪೂ. ಒಂದನೇ ಶತಮಾನದ ಮಧ್ಯಭಾಗದಲ್ಲಿ ಅಥವಾ ಮಧ್ಯಬಾಗದ ಬಳಿಕ ವಿಕಸನಗೊಂಡಿರಬೇಕು. ವೇದಾಧ್ಯಯನಕ್ಕೆ ಸಹಾಯಕವಾಗುವ ಶಾಸ್ತ್ರಗಳಂತೆ ಇವು ವಿಕಾಸಗೊಂಡರೂ ಅವುಗಳ ಛಂದಸ್ಸು, ಧ್ವನಿ ಸಂರಚನೆ, ಭಾಷಾಸಂರಚನೆ, ವ್ಯಾಕರಣ, ಭಾಷಾಸಂಬಂಧಿ ವಿಶ್ಲೇಷಣೆ ಮತ್ತು ಇನ್ನಿತರ ವಿಷಯಗಳು ಇವೇ ಮುಂತಾದ ಅಂಶಗಳ ಬಗೆಗಿನ ವೇದಾಂಗಗಳ ಅಂತದೃಷ್ಟಿ ವೈದಿಕ ಕಾಲಾನಂತರದ ಅಧ್ಯಯನಗಳನ್ನು, ಕಲೆ ಸಂಸ್ಕೃತಿಗಳನ್ನು, ಹಿಂದೂ ತತ್ವಶಾಸ್ತ್ರದ ವಿವಿಧ ಪಂಥಗಳನ್ನು ಪ್ರಭಾವಿಸಿತು.

ಕ್ರಿ.ಪೂ. 1200ರಿಂದ ಹಿಡಿದು ಕ್ರಿ.ಶ. 18ನೇ ಶತಮಾನದ ಕಾಲಾವಧಿಯಲ್ಲಿ ಭಾರತೀಯ ಉಪಖಂಡದಲ್ಲಿ ಭಾರತೀಯ ಗಣಿತಶಾಸ್ತ್ರ ಉಗಮವಾಯಿತು ಎಂದು ಕಂಡುಬಂದಿದೆ. ಆರ್ಯಭಟ್ಟ, ಬ್ರಹ್ಮಗುಪ್ತ, ಭಾಸ್ಕರ II ಮತ್ತು ವರಾಹಮಿಹಿರ ಮುಂತಾದವರ ಕೃತಿಗಳಿಂದ ಗಣಿತ ಒಂದು ನಿಖರಶಾಸ್ತ್ರವಾಗಿ ಬೆಳೆಯಿತು ಎಂಬುದು ಸ್ಪಷ್ಟವಾಗುತ್ತದೆ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1

ಈ ಕೆಳಗೆ ಶಿಸ್ತುಗಳ ವಿಕಸನ ಪ್ರಕ್ರಿಯೆಯ ಹಂತಗಳನ್ನು ಕೊಟ್ಟಿದೆ. ಅವುಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ.

1. ಎಲ್ಲಾ ಶಾಸ್ತ್ರಗಳ ಎಲ್ಲೆಯನ್ನು ಮೀರಿ ಹೊಸ ಶಾಸ್ತ್ರಗಳ ರೂಪಣ ಮತ್ತು ಅಧಿಕ ವೈಶಿಷ್ಟೀಕರಣಗೊಂಡ ಹೊಸ ಶಾಸ್ತ್ರಗಳ ಉಗಮ.

2. ಜ್ಞಾನದ ವೈಶಿಷ್ಟೀಕರಣ ಮತ್ತು ವಿಘಟನ.

3. ಜ್ಞಾನ ಸಂಚಯನ.

4. ಶಾಸ್ತ್ರಗಳ ಎಲ್ಲೆಯನ್ನು ಮೀರುವಿಕೆ ಮತ್ತು ಹೆಚ್ಚು ವೈಶಿಷ್ಟೀಕರಣಗೊಂಡ ಹೊಸಶಾಸ್ತ್ರಗಳ ಉಗಮ.

5. ಶಾಸ್ತ್ರಗಳ ರೂಪಣ.

6. ಶಾಸ್ತ್ರಗಳ ಪರಿಧಿಯೊಳಗೇ ಜ್ಞಾನದ ವೈವಿಧ್ಯೀಕರಣ ಮತ್ತು ಇನ್ನಷ್ಟು ವೈಶಿಷ್ಟೀಕರಣ.

## 1.4.3.2. ಶಾಲಾ ಪಠ್ಯವಿಷಯಗಳ ರೂಪಣ

ಇಂದಿನ ಶಾಲಾಪಠ್ಯವಿಷಯಗಳ ಇತಿಹಾಸ ಇತ್ತೀಚಿನ ಮೂಲದ್ದು. ಇದು ಕಳೆದ ಕೆಲವು ದಶಕಗಳ ಹಿಂದೆ ಆರಂಭಗೊಂಡಿತು. ಈ ಅಧ್ಯಯನ ಕ್ಷೇತ್ರ ಹೆಚ್ಚು ಅನ್ವೇಷಣೆಗೆ ಒಳಪಟ್ಟಿಲ್ಲವಾದ್ದರಿಂದ ಸಂಶೋಧನೆಗೆ ಬಹಳ ಒಳ್ಳೆಯ ಕ್ಷೇತ್ರವಾಗಿದೆ. ಇಂದಿನ ಶಿಕ್ಷಣ ವ್ಯವಸ್ಥೆಯನ್ನು ಪ್ರಭಾವಿಸಿದ ಪಠ್ಯವಿಷಯಗಳ ಸಮೂಹಕ್ಕೆ ಉಗಮ ಸ್ಥಾನವಾಗಿರುವ, ಪ್ರಸ್ತುತದ ಶಿಕ್ಷಣದ ವ್ಯವಸ್ಥೆಗೆ ಕಾರಣಗಳಾದ, ಭಾರತದ ಬೇರೆ ಬೇರೆ ಕಾಲಘಟ್ಟದ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಪರಿಸ್ಥಿತಿಗಳ ಅಧ್ಯಯನ ಇದಕ್ಕೆ ಅತ್ಯಗತ್ಯವಾಗುತ್ತದೆ. ಶಾಲಾ ಪಠ್ಯವಿಷಯಗಳ ಉಗಮವನ್ನು ಅರ್ಥಮಾಡಿಕೊಳ್ಳಬೇಕಾದರೆ ನಾವು ಅನೇಕ ಸಾಕ್ಷ್ಯಾಧಾರಗಳನ್ನು ಪರಾಮರ್ಶಿಸಬೇಕಾಗುತ್ತದೆ. ಶಾಲೆಗಳ ನಿಯಮಗಳು ಮತ್ತು ವಿಧಿಗಳು, ಅಧಿಕಾರಿಗಳಿಂದ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ವಿಧಿಸಲಾಗುತ್ತಿದ್ದ ಬಾಹ್ಯವಿಧಿಗಳು, ಪಠ್ಯವಿಷಯಗಳ ಮತ್ತು ಬೋಧನಾ ನಿಯಮಗಳ ಕಡ್ಡಾಯ ಆಚರಣೆ ಇತ್ಯಾದಿ. ವೈಯಕ್ತಿಕ ಅನುಭವಗಳು ಸದಾಕಾಲವೂ ಒಂದು ಗೊತ್ತಾದ ಸಾಮಾಜಿಕ ರಾಜಕೀಯ ಸಂದರ್ಭದ ಪರಿಣಾಮವಾಗಿರುವುದು ಎಂದು ಪ್ರತಿಪಾದಿಸುವ 80ರ ದಶಕದ 'ಸಾಂಸ್ಕೃತಿಕ ಶೈಲಿ'ಯು ಶಾಲಾ ಆಚರಣೆಗಳು ಸಾಮಾಜಿಕ – ಆರ್ಥಿಕ ಸಂದರ್ಭಗಳ ಫಲಿತಾಂಶ ಎಂದು ಕಾಣುವ ಪ್ರವೃತ್ತಿಯನ್ನು ಪ್ರಭಾವಿಸಿತು.

ಶಾಲಾ ಪಠ್ಯವಿಷಯಗಳ ಉಗಮವನ್ನು ಕುರಿತು ತಿಳಿದುಕೊಳ್ಳಬೇಕಾದರೆ ಪ್ರಪ್ರಥಮವಾಗಿ ಬೇರೆ ಬೇರೆ ದಸ್ತಾವೇಜುಗಳ ಪ್ರಕಾರ ಬೇರೆ ಬೇರೆ ಕಾಲ ಘಟ್ಟಗಳಲ್ಲಿ ವಿವಿಧ ವಿಷಯಗಳ ಉದಯ ಮತ್ತು ಅಸ್ತಗಳ ಜಾಡನ್ನು ಅರಸಬೇಕಾಗುತ್ತದೆ. ಶಾಲಾ ಪಠ್ಯವಿಷಯಗಳ ರೂಪಣಕ್ಕೆ ಹಲವಾರು ಸುಳಿವುಗಳನ್ನು ಕೊಡುವ ಪಠ್ಯಪುಸ್ತಕಗಳು, ಅವುಗಳ ಅಂತಸ್ಸತ್ವ, ಭಾಷೆ ಮತ್ತು ಶೈಲಿ ಇವೇ ಮುಂತಾದುವುಗಳನ್ನು ಪರಿಶೀಲಿಸಬೇಕಾಗುತ್ತದೆ.

ಇಂದಿನ ಅಧಿಕಾಂಶ ಶಾಲೆಗಳಲ್ಲಿ ಪ್ರಸ್ತುತದಲ್ಲಿರುವ ಪಠ್ಯಕ್ರಮಗಳ ವಿನ್ಯಾಸವು ಹಲವಾರು ವರ್ಷಗಳಿಂದ ಜರುಗಿದ ಐತಿಹಾಸಿಕ ಮತ್ತು ಸಾಂಸ್ಕೃತಿಕ ವಿದ್ಯಮಾನಗಳ ಫಲಿತಾಂಶ ಎಂಬ ಅಂಶವನ್ನು ತಜ್ಞರ ಸಂಶೋಧನೆ ಮತ್ತು ಬರೆವಣಿಗೆಗಳು ಬೆಳಕಿಗೆ ತರುತ್ತವೆ. ಶಾಲೆಗಳಲ್ಲಿ ಬೋಧಿಸಲಾಗುವ ಪಠ್ಯವಿಷಯಗಳ ವಿನ್ಯಾಸ ಒಳಗೊಂಡಂತೆ ಶಿಕ್ಷಣ ವ್ಯವಸ್ಥೆಯು ಕಾಲಪ್ರವಾಹದ ಹತ್ತು ಹಲವು ಶಕ್ತಿಗಳಿಂದ ಬಹಳವಾಗಿ ಪ್ರಭಾವಿತಗೊಂಡಿದೆ.

ಪುರಾತನ ಭಾರತದಲ್ಲಿ, ಶಾಲೆಗಳು ಗುರುಕುಲಗಳ ರೂಪದಲ್ಲಿದ್ದವು. ಪ್ರಾಯೋಗಿಕ ಹಾಗೂ ರಾಜನೈತಿಕ ಈ ಎರಡೂ ಸ್ವರೂಪದ ಅನೇಕ ವಿಷಯಗಳನ್ನು ವಿದ್ಯಾರ್ಥಿಗಳ ಅವಶ್ಯಕತೆಗೆ ತಕ್ಕಂತೆ ಬೋಧಿಸುತ್ತಿದ್ದರು. ಇವುಗಳು ಸಾಂಪ್ರದಾಯಿಕ ಕಲಿಕೆಯ ವಸತಿ ಶಾಲೆಗಳಾಗಿದ್ದವು. ಇವು ಶಿಕ್ಷಕರ ಮನೆಗಳು ಇಲ್ಲವೇ ಆಶ್ರಮಗಳೇ ಆಗಿರುತ್ತಿದ್ದವು. ಮೊಘಲರ ಆಳ್ವಿಕೆಯ ಕಾಲದಲ್ಲಿ ಮುಸಲ್ಮಾನ ತಂದೆ ತಾಯಿಗಳ ಮಕ್ಕಳಿಗೆ ಬೋಧಿಸಲೆಂದು ಮದರಸಾಗಳನ್ನು ತೆರೆಯಲಾಗಿತ್ತು. ಹದಿನೆಂಟನೇ ಶತಮಾನದಲ್ಲಿ ಸ್ಥಳೀಯ ಶಿಕ್ಷಣವು ಎಲ್ಲೆಡೆಯೂ ಪ್ರಚಲಿತವಾಗಿತ್ತು ಎಂದು ಬ್ರಿಟಿಷರ ಕಾಲದ ದಸ್ತಾವೇಜುಗಳಲ್ಲಿ ಕಂಡುಬರುತ್ತದೆ. ದೇಶದ ಬಹಳಷ್ಟು ಕಡೆ ಪ್ರತಿಯೊಂದು ದೇವಾಲಯ, ಮಸೀದಿ ಅಥವಾ ಗ್ರಾಮದಲ್ಲಿ ಒಂದು ಶಾಲೆ ಇರುತ್ತಿತ್ತು. ಈ ಶಾಲೆಗಳಲ್ಲಿ ಓದು, ಬರಹ, ಕಲೆ, ಧರ್ಮಶಾಸ್ತ್ರ, ಕಾನೂನು, ಖಗೋಳ ವಿಜ್ಞಾನ, ನೀತಿ ಶಾಸ್ತ್ರ, ವೈದ್ಯಶಾಸ್ತ್ರ, ವಿಜ್ಞಾನ ಮತ್ತು ಧರ್ಮ ಇವೆಲ್ಲವನ್ನು ಬೋಧಿಸಲಾಗುತ್ತಿತ್ತು.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಇಂಗ್ಲೆಂಡ್ ಮತ್ತು ಇನ್ನಿತರ ದೇಶಗಳಿಂದ ಬಂದ ಕ್ರೈಸ್ತ ಮಿಷನರಿಗಳು ಭಾರತದಾದ್ಯಂತ ಶಾಲೆಗಳನ್ನು ಸ್ಥಾಪಿಸಿದರು. ಈ ಶಾಲೆಗಳು ಭಾರತದ ಆಧುನಿಕ ಶಾಲೆಗಳಿಗೆ ನಾಂದಿಹಾಡಿದವು ಹಾಗೂ ಈ ಶಾಲೆಗಳು ಗೊತ್ತುಪಡಿಸಿದ ಪಠ್ಯವಿಷಯಗಳು ಭಾರತದಲ್ಲಿನ ಶಾಲೆಗಳಿಗೆ ಒರೆಗಲ್ಲಾಯಿತು. ಪ್ರಸ್ತುತದಲ್ಲಿ ಬಹುತೇಕ ಶಾಲೆಗಳು ಬ್ರಿಟಿಷರು ಹಾಕಿಕೊಟ್ಟ ಮಾದರಿಯನ್ನೇ ಅನುಸರಿಸುತ್ತವೆ.

ಭಾರತೀಯ ಶಾಲೆಯಲ್ಲಿ ಬೋಧಿಸಬೇಕಾದ ವಿವಿಧ ವಿಷಯಗಳ ಬಗೆಗೆ ಅರಿವು ಇರಲಿಲ್ಲ ಎಂದು ಇದರ ಅರ್ಥವಲ್ಲ. ಇದೇ ಸಮಯದಲ್ಲಿ ಮೇಲೆ ಹೇಳಿದಂತೆ ಭಾರತೀಯ ಶಾಲೆಗಳಲ್ಲಿ ಚೆನ್ನಾಗಿ ನೆಲೆನಿಂತ ದೇಶೀ ವಿಷಯಗಳನ್ನು ಬೋಧಿಸಲಾಗುತ್ತಿತ್ತು. ಇವುಗಳು ವಿದ್ಯಾರ್ಥಿಗಳ ದಿನನಿತ್ಯದ ಜೀವನಕ್ಕೆ ಸಂಬಂಧಿಸಿದ್ದವು ಹಾಗೂ ದೈನಂದಿನ ಜೀವನಕ್ಕೆ ಉಪಯುಕ್ತವಾಗಿದ್ದವು. ಭಾರತೀಯ ಭಾಷೆಗಳಲ್ಲಿ (ಅವರವರ ಭಾಷೆಗೆ) ಓದು, ಬರಹಗಳ ಕೌಶಲ್ಯಗಳನ್ನು ಬೆಳೆಸುವುದು ಭಾರತೀಯ ಶೈಕ್ಷಣಿಕ ಸಂಸ್ಥೆಗಳ ಮುಖ್ಯ ಉದ್ದೇಶವಾಗಿತ್ತು. ಇತರ ವಿಷಯಗಳಿಗೆ ಆಯಾ ಶಾಸ್ತ್ರಗಳ ಬೆಂಬಲವಿದ್ದೆ ಇತ್ತು. ಈ ವಿಷಯಗಳನ್ನು ಶಾಲೆ ಮತ್ತು ಕಾಲೇಜುಗಳಲ್ಲಿ ಬೋಧಿಸಲಾಗುತ್ತಿತ್ತು. 5ನೇ ಶತಮಾನದಲ್ಲಿ ಸ್ಥಾಪಿತವಾದ ನಳಂದ ವಿಶ್ವವಿದ್ಯಾನಿಲಯದಲ್ಲಿ ಚೆನ್ನಾಗಿ ನೆಲೆನಿಂತ ವಿಷಯಗಳಾದ ಧರ್ಮಶಾಸ್ತ, ತರ್ಕಶಾಸ್ತ್ರ, ಖಗೋಳಶಾಸ್ತ್ರ, ಅಧ್ಯಾತ್ಮಶಾಸ್ತ್ರ, ವೈದ್ಯಶಾಸ್ತ್ರ ಮತ್ತು ತತ್ವಶಾಸ್ತ್ರ ಇವೇ ಮುಂತಾದುವುಗಳನ್ನು ಬೋಧಿಸಲಾಗುತ್ತಿತ್ತು. ತಕ್ಷಶಿಲಾದಲ್ಲಿ (ಕ್ರಿ.ಪೂ.800) ಧನುರ್ವಿದ್ಯೆ, ಶಿಕಾರಿ, ಗಜವಿದ್ಯೆಗಳ ಜೊತೆಗೆ ಕಾನೂನು, ವೈದ್ಯಶಾಸ್ತ್ರ ಮತ್ತು ಯುದ್ಧವಿದ್ಯೆಗಳನ್ನು ಹೇಳಿಕೊಡಲಾಗುತ್ತಿತ್ತು. ವಿಕ್ರಮಶಿಲದಲ್ಲಿ (ಕ್ರಿ.ಪೂ. 783) ತತ್ವಶಾಸ್ತ್ರ, ವ್ಯಾಕರಣ, ಭಾರತೀಯ ತರ್ಕಶಾಸ್ತ್ರ, ಆಧ್ಯಾತ್ಮಶಾಸ್ತ್ರ ಇತ್ಯಾದಿಗಳನ್ನು ಬೋಧಿಸಲಾಗುತ್ತಿತ್ತು.

ಭಾರತದಲ್ಲಿ ಶಾಲಾ ಪಠ್ಯವಿಷಯಗಳ ರೂಪಣ ಎಂಬ ವಿಷಯ ಬಹಳ ವಿಸ್ತಾರವಾದುದು ಹಾಗೂ ಇದನ್ನು ಅರ್ಥಮಾಡಿಕೊಳ್ಳಲು ಭಾರತದ ಶೈಕ್ಷಣಿಕ ಪದ್ಧತಿಯನ್ನು ಪ್ರಭಾವಿಸಿದ ದೇಶದ ರಾಜಕೀಯ, ಸಾಮಾಜಿಕ–ಸಾಂಸ್ಕೃತಿಕ ಸನ್ನಿವೇಶಗಳ ಆಳವಾದ ಅಧ್ಯಯನ ಅವಶ್ಯಕವಾಗುತ್ತದೆ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–2

ಈ ಕೆಳಗೆ ಕೆಲವು ಅಪೂರ್ಣ ವಾಕ್ಯಗಳನ್ನು ಕೊಡಲಾಗಿದೆ. ಸೂಕ್ತವಾದ ಉತ್ತರಗಳಿಂದ ಅವುಗಳನ್ನು ಪೂರ್ಣಗೊಳಿಸಿ.

1. ಪುರಾತನ ಭಾರತದಲ್ಲಿ ಶಾಲೆಗಳು ________________ ರೂಪದಲ್ಲಿದ್ದವು.
2. ನಳಂದ ವಿಶ್ವವಿದ್ಯಾನಿಲಯದಲ್ಲಿ ________________ ಮತ್ತು ________________ ವಿಷಯಗಳನ್ನು ಬೋಧಿಸಲಾಗುತ್ತಿತ್ತು.
3. ನಮ್ಮ ಇಂದಿನ ಬಹುತೇಕ ಶಾಲೆಗಳಲ್ಲಿರುವ ಪಠ್ಯವಿಷಯಗಳ ವಿನ್ಯಾಸ ________________ ಪರಿಣಾಮ ಎಂದು ತಜ್ಞರು ತಿಳಿಸಿಕೊಟ್ಟಿದ್ದಾರೆ.
4. ಭಾರತದ ಆಧುನಿಕ ಶಾಲಾ ಶಿಕ್ಷಣ ಆರಂಭ ಬಿಂದುವಿನಂತಿದ್ದ ಶಾಲೆಗಳನ್ನು ________________ ಸ್ಥಾಪಿಸಿದರು.

## 1.4.4. ಸಾರಾಂಶಿಸೋಣ

- ಶಾಸ್ತ್ರದ ವಿಕಾಸದ ಪ್ರಕ್ರಿಯೆಯಲ್ಲಿ ಜ್ಞಾನವು ಆರಂಭ ಬಿಂದುವಾಗಿದೆ.
- ಒಂದು ನಿರ್ದಿಷ್ಟ ಕ್ಷೇತ್ರದ ವ್ಯವಸ್ಥಿತ ಜ್ಞಾನ ಸಂಗ್ರಹವೇ ಶಾಸ್ತ್ರ.
- ಜ್ಞಾನವು ಶೈಕ್ಷಣಿಕ ಶಾಸ್ತ್ರದ ಕ್ಷೇತ್ರದೊಳಗೆ ಪ್ರವೇಶಿಸಿದಾಗ ಅದರ ಗಮನಕೇಂದ್ರ ಮತ್ತು ವ್ಯಾಪ್ತಿ ಕಿರಿದಾಗುವುವು. ಜ್ಞಾನವನ್ನು ಶಾಸ್ತ್ರ ವ್ಯಾಪ್ತಿಯಲ್ಲಿ ತರುವುದು ಎಂದರೆ ವಿವಿಧ ಗುಣಲಕ್ಷಣಗಳುಳ್ಳ ಜ್ಞಾನದ ಎಲ್ಲೆಯನ್ನು ನಿಶ್ಚಯಿಸುವುದು ಎಂದರ್ಥ.
- ವಿವಿಧ ಶಾಸ್ತ್ರಗಳಲ್ಲಿ ಜ್ಞಾನವನ್ನು ವರ್ಗೀಕರಿಸುವುದರ ಹಿಂದೆ ಹಲವು ಪ್ರಬಲ ಕಾರಣಗಳಿವೆ.
- ಶಾಸ್ತ್ರಗಳ ವಿಕಸನ ಪ್ರಕ್ರಿಯೆ ಈ ಮುಂದಿನ ಹಂತಗಳ ಮೂಲಕ ಹಾದು ಹೋಗಿರಬಹುದು. ಜ್ಞಾನ ಸಂಚಯನ, ಜ್ಞಾನದ ವೈಶಿಷ್ಟೀಕರಣ ಮತ್ತು ವಿಘಟನ ಶಾಸ್ತ್ರಗಳ ರೂಪಣ, ಶಾಸ್ತ್ರದ ಪರಿದಿಯಲ್ಲಿಯೇ

ಜ್ಞಾನದ ವೈಶಿಷ್ಟೀಕರಣ ಮತ್ತು ಇನ್ನಷ್ಟು ವೈಶಿಷ್ಟೀಕರಣ, ಶಾಸ್ತ್ರೀಯ ಎಲ್ಲೆಗಳನ್ನು ಮೀರಿಹೋಗುವಿಕೆ ಹಾಗೂ ಮತ್ತಷ್ಟು ವೈಶಿಷ್ಟೀಕರಣಗೊಂಡ ಹೊಸಶಾಸ್ತ್ರಗಳ ಉಗಮ, ಹೊಸ ಶಾಸ್ತ್ರಗಳ ರೂಪಣ.

- ಶಾಸ್ತ್ರಗಳ ಉಗಮಕ್ಕೆ ದೀರ್ಘ ಇತಿಹಾಸವೇ ಇದೆ. ಭಾರತದಲ್ಲಿ ಪುರಾತನ ಕಾಲದಿಂದಲೂ ಶಾಸ್ತ್ರಗಳು ಬೆಳೆಯುತ್ತಾ ಬಂದಿವೆ.
- ಭಾರತದಲ್ಲಿ ಸಾಮಾಜಿಕ–ರಾಜಕೀಯ ಪ್ರಬಾವದಿಂದಾಗಿ ಶಾಲಾ ಪಠ್ಯವಿಷಯಗಳು ವಿಕಸನಗೊಂಡಿವೆ.

## 1.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 1 ಮತ್ತು 2–ಉತ್ತರಗಳು

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಕೊಳ್ಳಿ –1

3,2,5,6,4,1

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –2

1. ಗುರುಕುಲಗಳು
2. ಧರ್ಮಶಾಸ್ತ್ರ, ತರ್ಕಶಾಸ್ತ್ರ, ಭೂಗೋಳಶಾಸ್ತ್ರ, ಆಧ್ಯಾತ್ಮಶಾಸ್ತ್ರ, ವೈದ್ಯಶಾಸ್ತ್ರ ಮತ್ತು ತತ್ವಶಾಸ್ತ್ರ.
3. ಐತಿಹಾಸಿಕ ಮತ್ತು ಸಾಂಸ್ಕೃತಿಕ ವಿದ್ಯಮಾನಗಳು
4. ಮಿಷನರಿಗಳು

## 1.4.6. ಘಟಕಾಂತ್ಯ ಅಭ್ಯಾಸಗಳು

1. ಶಾಸ್ತ್ರಗಳು ಹೇಗೆ ಉಗಮಗೊಂಡವು ಎಂಬುದನ್ನು ಸ್ಪಷ್ಟೀಕರಿಸಿ.
2. ಭಾರತದಲ್ಲಿ ಶಾಲಾಪಠ್ಯವಿಷಯಗಳ ರೂಪಣ ಪ್ರಕ್ರಿಯೆಯನ್ನು ವಿವರಿಸಿ.

## 1.4.7. ಪರಾಮರ್ಶನ ಗ್ರಂಥಗಳು


1. A Brief History of the Online Classroom and Virtual College Courses. College Classes, Retrieved from http://www.collegeclasses.com/a-brief-history-of-the-online-classroom-and-virtual-college-courses/(2011-2015).
2. https://www.quora.com/What-are-the-ancient-disciplines-of-the-Indian-education-system-How-would-you-describe-them-and-explain-the-place-and-signification-of-Kautilya-Arthashastra-among-them
3. Cohen, E., & Lloyd, S. (2014). Disciplinary evolution and the rise of the transdiscipline. Informing Science: the International Journal of an Emerging Transdiscipline, 17,189-215. Available: http://www.inform.nu/Articles/Vol17/ISJv17p189-215Cohen0702.pdf
4. Deng, Z. (2007). Knowing the subject matter of a secondary school science subject. Journal of Curriculum Studies, 39(5), 503-535.

5. Deng, Z. (2009). The formation of a school subject and the nature of curriculum content. Hong Kong: Journal of Curriculum Studies, 41:5.

6. Grayson, D.J. (2004). Disciplinary Knowledge from a Pedagogical Point of View. Andromeda Science Education and University of Pretoria, retrieved from web.phys.ksu.edu/icpe/publications/teach2/Grayson.pdfon 15.10.2015.

7. NCERT (2005). New Curriculum Framework (2005). New Delhi: National Council of Educational Research and Training.

8. Stengel, B.S. (2010). Academic Discipline and School Subject: Contestable Curricular Concepts. Journal of Curriculum Studies, 29:5.

9. Crotty, J. M. Distance Learning Has Been Around Since 1892, You Bic MOOC. forbes, Retrieved from http://www.forbes.com/sites/jamesmarshallcrotty/2012/11/14/distance-learning-has-been-around-since-1892-you-big-mooc/#1c3f6e055bf7

https://press.rebus.community/idsconnect/chapter/the-history-of-the-academy-and-the-disciplines/

*************

# ಬ್ಲಾಕ್ 1 : ಜ್ಞಾನಶಿಸ್ತುಗಳು ಮತ್ತು ಶಾಲಾ ವಿಷಯಗಳಿಗೆ ಪೀಠಿಕೆ

## ಘಟಕ 5 : ಶಾಲಾ ಪಠ್ಯವಿಷಯಗಳ ಪ್ರಾಧಾನ್ಯತೆ

**ಘಟಕದ ರಚನೆ**


1.5.1. ಕಲಿಕಾ ಉದ್ದೇಶಗಳು

1.5.2. ಪೀಠಿಕೆ

1.5.3. ಕಲಿಕಾ ಅಂಕಗಳು ಮತ್ತು ಕಲಿಕಾ ಚಟುವಟಿಕೆಗಳು

1.5.3.1. ಶಾಲಾ ಪಠ್ಯ ವಿಷಯಗಳ ಪ್ರಾಧಾನ್ಯತೆ–ಸಾಮಾನ್ಯವಾಗಿ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ– 1

1.5.3.2. ಶಾಲಾ ಪಠ್ಯವಿಷಯಗಳ ಪ್ರಾಧಾನ್ಯತ– ವಿಷಯವಾರು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ– 2

1.5.4. ಸಾರಾಂಶಿಸೋಣ

1.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

1.5.6. ಘಟಕಾಂತ್ಯ ಅಭ್ಯಾಸಗಳು

1.5.7. ಪರಾಮರ್ಶನ ಸೂಚಿ


### 1.5.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶಾಲಾ ಪಠ್ಯ ವಿಷಯಗಳ ಅಧ್ಯಯನದ ಅವಶ್ಯಕತೆಯನ್ನು ವ್ಯಕ್ತಪಡಿಸುವರು;
- ಶಾಲಾ ಪಠ್ಯ ವಿಷಯಗಳ ಉದ್ದೇಶಗಳನ್ನು ಸ್ಪಷ್ಟೀಕರಿಸುವರು;
- ಸಾಮಾನ್ಯವಾಗಿ ಶಾಲಾ ಪಠ್ಯ ವಿಷಯಗಳ ಉಪಯೋಗಗಳು ಏನಾಗಿರುವುವು ಎಂದು ವಿವರಿಸುವರು; ಮತ್ತು
- ವಿವಿಧ ಶಾಲಾ ಪಠ್ಯ ವಿಷಯಗಳ ಪ್ರಾಧಾನ್ಯತೆ ಏನೆಂದು ವಿವರಿಸುವರು.

### 1.5.2. ಪೀಠಿಕೆ

ನಮ್ಮನ್ನು ಇತರ ಪ್ರಾಣಿಗಳಿಗಿಂತ, ಭೂಮಿಯ ಮೇಲೆ ಹರಿದಾಡುವ ಜೀವಿಗಳಿಗಿಂತ ಮೇಲೆತ್ತುವುದೇ ಶಿಕ್ಷಣ ಮತ್ತು ಶಿಕ್ಷಣವೆಂಬ ಉಸಿರೇ ನಮ್ಮನ್ನು ಸಬಲರನ್ನಾಗಿಸುವುದು. ಯಾವುದೋ ಒಂದು ಸಂಸ್ಥೆಯು ಕೊಡುವ ಗೌರವವನ್ನು ಸಂಪಾದಿಸಲು ಕಲಿಕೆ ಅಧ್ಯಯನಗಳು ಕೇವಲ ಒಂದು ಸಾಧನ ಎಂದು ನಾವು ಪರಿಗಣಿಸಿದಲ್ಲಿ, ನಮಗೆ ಸ್ವಲ್ಪ ಜ್ಞಾನ ಲಾಭವೇನೋ ಆಗುವುದು. ಆದರೆ, ಮಾನವೀಯತೆ ಸ್ವಲ್ಪವೂ ಲಭಿಸುವುದಿಲ್ಲ.

ಉತ್ತಮ ಗುಣಮಟ್ಟದ, ವಿಶಾಲ ಶಿಕ್ಷಣ ಜೀವನ ಪರ್ಯಂತ ನಮ್ಮ ಬಳಿ ಇರುವ ಒಂದು ಆಸ್ತಿ. ಇದು ಕೇವಲ ಬೇರೆ ಬೇರೆ ವೃತ್ತಿಗಳ ಬಾಗಿಲನ್ನು ತೆರೆಯಲು ಬೇಕಾದ ಕೀಲಿ ಮಾತ್ರವಲ್ಲ, ಬದಲಾಗಿ, ನಾವು ಹಲವು

ಜನರೊಂದಿಗೆ ಬೆರೆಯಲು ಸಾಧ್ಯವಾಗುವಂತೆ ಮಾಡುವ ಒಂದು ಸಾಮಾಜಿಕ ಆಸ್ತಿ. ಈ ಪ್ರಪಂಚವೇ ಶಿಕ್ಷಿತ ವ್ಯಕ್ತಿಗೆ ಹೆಚ್ಚು ಆಸಕ್ತಿ ಜನಕ ಸ್ಥಳವಾಗಿದೆ. ಅಶಿಕ್ಷಿತನಾದ ವ್ಯಕ್ತಿ ಕೇವಲ ಸಮುದ್ರ ಮತ್ತು ಶಿಲೆಗಳನ್ನು ನೋಡಿದರೆ ಶಿಕ್ಷಿತನಾದ ವ್ಯಕ್ತಿ ಅಲೆಯು ಕೊರೆದು ಮಾಡಿರುವ ವೇದಿಕೆಯನ್ನು, ವಿಭಿನ್ನ ಶಿಲಾರೂಪಣಗಳ ಮೇಲೆ ಕೊರೆತದ ವೈವಿಧ್ಯಮಯ ಪ್ರಭಾವಗಳನ್ನು ಕಾಣುತ್ತಾನೆ. ಶಿಕ್ಷಣವು ನಮ್ಮ ನೇತ್ರಗಳನ್ನು ತೆರೆದು ಬಾಹ್ಯ ಪ್ರಪಂಚವನ್ನು ಬೇರೆ ರೀತಿಯಲ್ಲಿ ಕಾಣುವಂತೆ ಮಾಡುತ್ತದೆ. ವ್ಯಕ್ತಿಯು ಆಯ್ಕೆ ಮಾಡಿಕೊಂಡ ವೃತ್ತಿಯನ್ನು ಹಿಡಿಯಲು ನೆರವಾಗುವ ಸಂಕುಚಿತ ಶಿಕ್ಷಣವು ಪ್ರಪಂಚವನ್ನೇ ಸಂಕುಚಿತಗೊಳಿಸಿಬಿಡುತ್ತದೆ. ನಾವು ಅನೇಕ ವಿಷಯಗಳಲ್ಲಿ ವಿದ್ವಾಂಸರಾಗಲು ಬಯಸಿ ವಿಸ್ತೃತ ವ್ಯಾಪ್ತಿಯ ವಿಷಯಗಳನ್ನು ಅಧ್ಯಯನ ಮಾಡುವ ಮೂಲಕ ಬಹುಶ್ರುತರಾಗಬೇಕು! ಒಳ್ಳೆಯವರಾಗಲು, ಮಾನವರಾಗಲು, ಇತರರಿಗಿಂತ ಭಿನ್ನವಾಗಿ ಚಿಂತಿಸಲು ಸಾಧ್ಯವಾಗಬೇಕೆಂಬ ನಮ್ಮ ಗುರಿಯನ್ನು ತಲುಪಲು ಶಾಲಾ ಶಿಕ್ಷಣ ನಮಗೆ ನೆರವಾಗುತ್ತದೆ. ಶೂನ್ಯದಲ್ಲಿ ಇದು ಸಾಧ್ಯವಿಲ್ಲ. ಬೇರೆ ಬೇರೆ ಕಾರ್ಯ ಸಾಧಿಸಲು ವಿವಿಧ ವಿಷಯಗಳ ಕಲಿಕೆ ನಮ್ಮನ್ನು ಸಜ್ಜುಗೊಳಿಸುತ್ತದೆ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಘಟಕದಲ್ಲಿ ವಿವಿಧ ಶಾಲಾ ಪಠ್ಯವಿಷಯಗಳ ಅರ್ಥ, ಪ್ರಾಧಾನ್ಯತೆ ಮತ್ತು ಅವುಗಳ ಅಧ್ಯಯನದ ಉಪಯೋಗಗಳೇನೆಂದು ವಿಚಾರಮಾಡೋಣ.

## 1.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

## 1.5.3.1. ಶಾಲಾ ಪಠ್ಯ ವಿಷಯಗಳ ಪ್ರಾಧಾನ್ಯತೆ– ಸಾಮಾನ್ಯವಾಗಿ

ಶಾಲೆಯಲ್ಲಿ ಬೋಧಿಸುವ ವಿಷಯಗಳನ್ನು ವಿದ್ಯಾರ್ಥಿಗಳು ಏಕೆ ಕಲಿಯಬೇಕು? ಪ್ರತಿಯೊಬ್ಬ ಕಲಿಕಾರ್ಥಿಗೂ ಈ ಪ್ರಶ್ನೆ ಬರುವುದು ಸಹಜವೇ. ಶಿಕ್ಷಕರಾಗಿ ನಾವು ಬೋಧಿಸುವ ನಮ್ಮ ನಮ್ಮ ವಿಷಯಗಳ ಅಗತ್ಯ ಮತ್ತು ಪ್ರಾಧಾನ್ಯತೆಗಳೇನು ಎಂದು ತಿಳಿದುಕೊಳ್ಳುವುದು ನಮ್ಮ ಪ್ರಮುಖ ಹೊಣೆಗಾರಿಕೆ.

ಐದು ಶಿಕ್ಷಕರಿಗೆ ಈ ಮುಂದಿನ ಪ್ರಶ್ನೆಯನ್ನು ಕೇಳಿ ಅವರ ಉತ್ತರಗಳನ್ನು ವಿಶ್ಲೇಷಿಷಿ; ನೀವು ಬೋಧಿಸುತ್ತಿರುವ ಪಠ್ಯ ವಿಷಯವನ್ನು ಬೋಧಿಸುವ ಅಗತ್ಯವೇನು? ಆ ವಿಷಯದ ಅನುಕೂಲತೆಗಳೇನು ಎಂದು ನೀವು ಭಾವಿಸುವಿರಿ.

ನಾನು ಈ ಪ್ರಶ್ನೆಗೆ ಅನೇಕ ಉತ್ತರಗಳನ್ನು ಕೇಳಿದ್ದೇನೆ. "ನಾನು ಅದನ್ನು ಬೋಧಿಸಬೇಕಾಗಿದೆ", "ಪಠ್ಯಕ್ರಮದಲ್ಲಿ ಅದನ್ನು ಬೋಧಿಸಬೇಕು ಎಂದು ಹೇಳಿದೆ", "ನಾವು ಪರೀಕ್ಷೆಯನ್ನು ನಡೆಸಬೇಕಾಗಿದೆ" – ಹೀಗೆ ಅನೇಕ ಶಿಕ್ಷಕರು ಇದಕ್ಕಿಂತ ಹೆಚ್ಚು ಯೋಚಿಸಲು ಹೋಗುವುದಿಲ್ಲ. ಪಠ್ಯ ವಿಷಯಗಳು ನಮ್ಮನ್ನು ನಮ್ಮ ಗುರಿಗೆ ತಲುಪಿಸಲು ಇರುವ ವಾಹನಗಳಂತೆ. ಪಠ್ಯಕ್ರಮದಲ್ಲಿ ಪ್ರತಿಯೊಂದು ವಿಷಯವನ್ನು ಗುಣಾತ್ಮಕ ಜೀವನವನ್ನು ನಡೆಸಲು ನೆರವಾಗುವ ರೀತಿಯಲ್ಲಿ ಒಂದು ನಿಶ್ಚಿತ ಉದ್ದೇಶದೊಂದಿಗೆ ಸೇರಿಸಲಾಗಿದೆ. ನಿಶ್ಚಯಿಸಲ್ಪಟ್ಟ ಪಠ್ಯವಸ್ತುವನ್ನು ಬೋಧಿಸಿ ಮುಗಿಸುವ ಅಥವಾ ವಿದ್ಯಾರ್ಥಿಗಳಿಗೆ ಕಿರುಪರೀಕ್ಷೆಗಳನ್ನು, ಪರೀಕ್ಷೆಗಳನ್ನು ಕೈಗೊಳ್ಳುವ ಉದ್ದೇಶಕ್ಕಿಂತ ಇನ್ನೂ ಹೆಚ್ಚಿನ ಉದ್ದೇಶ ಪಠ್ಯವಿಷಯಗಳ ಬೋಧನೆಯ ಹಿಂದಿದೆ. ಪರೀಕ್ಷೆಗಳನ್ನು ನಡೆಸದೆಯೇ ನಾವು ನಮ್ಮ ಗುರಿಯನ್ನು ಮುಟ್ಟಲು ಸಮರ್ಥರಾಗಬಹುದು. ಅಲ್ಲದೆ, ಇದು ತರಗತಿಯಲ್ಲೇ ಸಾಧ್ಯವಾಗಬಹುದು. ಹಾಗಾದರೆ ವಿವಿಧ ಶಾಲಾ ಪಠ್ಯವಿಷಯಗಳನ್ನು ಬೋಧಿಸುವ ಅಥವಾ ಕಲಿಯುವ ಉದ್ದೇಶಗಳೇನು? ಶಾಲಾ ಪಠ್ಯವಿಷಯಗಳ ಕಲಿಕೆಯ ಅನುಕೂಲತೆಗಳೇನೆಂದು ನಾವೀಗ ಅರ್ಥ ಮಾಡಿಕೊಳ್ಳೋಣ. ಅವು ಈ ಕೆಳಗಿನಂತಿವೆ.

ಶಿಕ್ಷಣಕ್ಷೇತ್ರದ ತಜ್ಞರು ಬೇರೆ ಬೇರೆ ವಿಷಯಗಳ ಸ್ವಭಾವವನ್ನು ವಿಶ್ಲೇಷಿಸಿ ಕೆಲವು ವಿಷಯಗಳನ್ನು ಕಲಿಯುವುದರಿಂದ ನಮ್ಮ ಗುರಿಯನ್ನು ತಲುಪಲು ನೆರವಾಗುವುದೆಂಬ ನಿರ್ಧಾರಕ್ಕೆ ಬಂದಿದ್ದಾರೆ. ಈ ಅರಿವಿನೊಂದಿಗೆ ಶಾಲಾ ಸಂದರ್ಭದಲ್ಲಿ ಶಿಕ್ಷಣದ ಗುರಿಗಳನ್ನು ತಲುಪಲು ಅರ್ಥಪೂರ್ಣವಾಗಿರುವ ವಿಷಯಗಳನ್ನು ಶಿಫಾರಸ್ಸು ಮಾಡಿದ್ದಾರೆ. ನಾವೀಗ ಶೈಕ್ಷಣಿಕ ಸಂದರ್ಭದಲ್ಲಿ ಈ ಶಾಲಾ ಪಠ್ಯ ವಿಷಯಗಳಿಂದ ಸಾಧಿಸಲ್ಪಡುವ ಉದ್ದೇಶಗಳು ಏನೆಂದು ನೋಡೋಣ.

- ವ್ಯಕ್ತಿಯನ್ನು ಗುಣಾತ್ಮಕ ಜೀವನವನ್ನು ಸಾಗಿಸಲು ಬೇಕಾದ ಕೌಶಲ್ಯಗಳು ಮತ್ತು ದಕ್ಷತೆಗಳೊಂದಿಗೆ ಶಾಲಾ ಪಠ್ಯ ವಿಷಯಗಳು ಸಜ್ಜುಗೊಳಿಸುತ್ತವೆ.

- ಸಂವಹನ, ಸಮಸ್ಯಾ ಪರಿಹಾರ, ವಿಶ್ಲೇಷಣಾತ್ಮಕ ಚಿಂತನೆ ಇವೇ ಮುಂತಾದ ದೈನಂದಿನ ಬದುಕಿಗೆ ಅಗತ್ಯವಾದ ಮೂಲಭೂತ ಶೈಕ್ಷಣಿಕ ಕುಶಲತೆಗಳಿಗೆ ಇವು ನೆರವಾಗುತ್ತವೆ.
- ಇತರ ವ್ಯಕ್ತಿಗಳು ನೆಲೆಸಿರುವ ನೆರೆಹೊರೆಯ ಬಗೆಗೆ ತಿಳಿವನ್ನು ನೀಡುತ್ತವೆ.
- ಸಾಮಾಜೀಕರಣದ ಪ್ರಕ್ರಿಯೆಗೆ ವಿದ್ಯಾರ್ಥಿಗಳನ್ನು ಇವು ಸಜ್ಜುಗೊಳಿಸುತ್ತವೆ.
- ವ್ಯಕ್ತಿಯು ಸಾಮಾಜಿಕ ಸಂದರ್ಭದಲ್ಲಿ ಬೆಳೆಸಿಕೊಳ್ಳಬೇಕಾದ ಪ್ರೇಮ, ಸಹಕಾರ, ಭ್ರಾತೃತ್ವ, ಸಹನೆ ಇವೇ ಮೊದಲಾದ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಲು ಈ ವಿಷಯಗಳು ಸಹಾಯಕವಾಗುತ್ತವೆ.
- ವಿವಿಧ ವಿಷಯಗಳಿಂದ ಮೂಡುವ ಜ್ಞಾನ ತನ್ನ ಸುತ್ತಮುತ್ತಲಿರುವ ವ್ಯಕ್ತಿಗಳ ಮತ್ತು ಪ್ರಕೃತಿಯ ಯೋಗ್ಯತೆಯನ್ನು ವ್ಯಕ್ತಿಯು ಗುರುತಿಸಲು ಸಾಧ್ಯವಾಗುವಂತೆ ಮಾಡುತ್ತದೆ.
- ವಿವಿಧ ಪಠ್ಯವಿಷಯಗಳ ವಿಚಾರಗಳು, ಮಕ್ಕಳ ಸಾಮಾಜಿಕ ವರ್ತನೆಯನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವಂತಿರುತ್ತವೆ.
- ಶಾಲಾ ಪಠ್ಯವಿಷಯಗಳು ರಾಷ್ಟ್ರೀಯತೆ, ಅಂತರ–ರಾಷ್ಟ್ರೀಯತೆ ಮತ್ತು ದೇಶಪ್ರೇಮ ಸಂಬಂಧಿ ಭಾವನೆಗಳನ್ನು ಬೆಳೆಸಿಕೊಳ್ಳಲು ಅವರನ್ನು ಸಜ್ಜುಗೊಳಿಸುತ್ತವೆ.
- ಶಾಲಾ ಪಠ್ಯವಿಷಯಗಳು ಸಾಮಾಜಿಕ ಸಂರಚನೆ, ಸಾಮಾಜಿಕ ಸಂಬಂಧಗಳೊಂದಿಗೆ ನಂಟನ್ನು ಹೊಂದಿವೆ. ಅಲ್ಲದೆ, ಅವು ಸಾಂಸ್ಕೃತಿಕ ಪರಂಪರೆಯ ಮುಂದುವರಿಕೆಯ ಪ್ರಕ್ರಿಯೆಗೆ ಕೊಡುಗೆ ನೀಡಿವೆ. ಸಮಾಜದ ಬಗ್ಗೆ ಮತ್ತು ತತ್ಸಂಬಂಧಿತ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಲು ಶಾಲಾ ಪಠ್ಯವಿಷಯಗಳು ಬಹುಮೂಲ್ಯ ಆಕರಗಳು ಎಂದು ಪರಿಗಣಿಸಲಾಗಿದೆ.
- ಶಾಲಾ ಪಠ್ಯವಿಷಯಗಳ ಜ್ಞಾನ ಮತ್ತು ತರಗತಿಯಲ್ಲಿ ಅವುಗಳ ಬೋಧನಾ ವಿಧಾನ–ಇವೆರಡರ ನಡುವಣ ಸಂಬಂಧವನ್ನು ಕಂಡುಹಿಡಿಯಲು ಶಾಲಾ ಪಠ್ಯ ವಿಷಯಗಳ ಅಧ್ಯಯನ ಅವಶ್ಯಕವಾಗಿದೆ.
- ಇವತ್ತಿನ ದಿನ ಶಾಲಾ ಪಠ್ಯವಿಷಯಗಳನ್ನು ಸಾಂಸ್ಕೃತಿಕ ಮತ್ತು ಐತಿಹಾಸಿಕ ವಿದ್ಯಮಾನಗಳೆಂದು ಪರಿಗಣಿಸಲಾಗುತ್ತಿದೆಯಾದ್ದರಿಂದ ಅವುಗಳ ಕುರಿತಾದ ಅಧ್ಯಯನ ಅವಶ್ಯಕವಾಗುತ್ತದೆ.
- ಶಾಲಾ ಪಠ್ಯವಿಷಯಗಳ ಅಧ್ಯಯನದ ಅಗತ್ಯತೆಗೆ ಅನೇಕ ಕಾರಣಗಳಲ್ಲಿ ಅವುಗಳಿಂದ ಸಿಗುವ ಶಾಲಾ ಜ್ಞಾನ ಮತ್ತು ಸಮಾಜದ ಕುರಿತಾದ ಸ್ಪಷ್ಟಚಿತ್ರಣ ಒಂದು ಮುಖ್ಯ ಕಾರಣವಾಗಿದೆ.
- ಶಾಲಾ ಪಠ್ಯವಿಷಯಗಳ ಅಧ್ಯಯನವು ಪಠ್ಯವಸ್ತುವಿನಲ್ಲಿ ಹುದುಗಿರುವ ಶೈಕ್ಷಣಿಕ ಅಂತಸ್ಸತ್ವವನ್ನು ಹೊರಗೆಡವಲು ನಿರ್ಣಾಯಕ ಅಂಶವಾದ "ಪಠ್ಯವಸ್ತುವಿನ ಸಿದ್ಧಾಂತ"ದ ತಿಳಿವನ್ನು ಒಳಗೊಂಡಿದೆ.
- ಶೈಕ್ಷಣಿಕ ಸಂಸ್ಕಾರದ ಅನುಪಾಲನೆ ಮತ್ತು ವಿದ್ಯಾರ್ಥಿಗಳ ಬೌದ್ಧಿಕ ಸಾಮರ್ಥ್ಯದ ಬೆಳವಣಿಗೆಗೆ ನೆರವಾಗುವ ಗುರಿಯನ್ನು ಶಾಲಾ ಪಠ್ಯವಿಷಯಗಳು ಹೊಂದಿರುತ್ತವೆ.
- ಭವಿಷ್ಯದ ನಾಗರಿಕರನ್ನು ಅಗತ್ಯ ಜ್ಞಾನ, ಕೌಶಲ್ಯಗಳು ಮತ್ತು ಬಂಡವಾಳಗಳಿಂದ ಸಜ್ಜುಗೊಳಿಸುವ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಉತ್ಪಾದಕತ್ವದ ಅನುಪಾಲನೆ ಮತ್ತು ವರ್ಧನೆಗಳ ಪ್ರಮುಖ ಉದ್ದೇಶವನ್ನಿಟ್ಟುಕೊಂಡು ಶಾಲಾ ಪಠ್ಯವಿಷಯಗಳನ್ನು ರಚಿಸಲಾಗುತ್ತದೆ. ವಿಮೋಚನೆ ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ಉಂಟುಮಾಡಬಲ್ಲ ಅರ್ಥಪೂರ್ಣ ಕಲಿಕಾ ಅನುಭವಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ಸಲುವಾಗಿ ಶಾಲಾ ಪಠ್ಯವಿಷಯಗಳನ್ನು ರಚಿಸಲಾಗುತ್ತದೆ.
- ಜ್ಞಾನನಿರ್ಮಾಣಕ್ಕೆ ಹಾಗೂ ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ ಕೊಡುಗೆ ನೀಡುವ ಸಂತೋಷದಾಯಕ ಅನುಭವಗಳು ಅವರಿಗೆ ದೊರಕುವ ರೀತಿಯಲ್ಲಿ ಶಾಲಾ ಪಠ್ಯವಿಷಯಗಳು

ರಚಿತಗೊಳ್ಳುತ್ತವೆ. ಶಾಲಾ ಪಠ್ಯಕ್ರಮವು ಕಲಿಕಾರ್ಥಿ ಕೇಂದ್ರಿತ ಉಪಕ್ರಮವನ್ನು ಪ್ರೋತ್ಸಾಹಿಸುತ್ತದೆ. ಇದರಿಂದ ಶಾಲಾ ಪಠ್ಯವಿಷಯ ಸಂಬಂಧಿತ ಜ್ಞಾನನಿರ್ಮಾಣ ಸಾಧ್ಯವಾಗಿ ತತ್ಪರಿಣಾಮವಾಗಿ ವಿದ್ಯಾರ್ಥಿಗಳು ತಾವು ಆಯ್ಕೆ ಮಾಡಿಕೊಂಡಿರುವ ಅಧ್ಯಯನ ಕ್ಷೇತ್ರದಲ್ಲಿ ತಮ್ಮ ತಮ್ಮ ಅಗತ್ಯ, ಆಸಕ್ತಿಗಳಿಗೆ ಅನುಗುಣವಾಗಿ ಕಲಿಯಲು ಸಾಧ್ಯವಾಗುತ್ತದೆ.

- ಶಾಲಾ ಪಠ್ಯವಿಷಯಗಳು ಜಾಗತೀಕರಣ ಹಾಗೂ ಜ್ಞಾನಾಧಾರಿತ ಆರ್ಥಿಕತೆಗಳ ಸವಾಲುಗಳನ್ನು ಎದುರಿಸಲು ಅಗತ್ಯವಾದ ಸಾಮಾನ್ಯ ಕೌಶಲ್ಯಗಳು ಮತ್ತು ಕಲಿಕಾ ಸಾಮರ್ಥ್ಯಗಳಿಂದ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುತ್ತವೆ.
- ಶಾಲಾ ಪಠ್ಯವಿಷಯಗಳ ಅಧ್ಯಯನದಿಂದ ವಿಮೋಚನೆಗೆ ಕೊಂಡೊಯ್ಯುವ ಹೊಸ ಮಾರ್ಗಗಳ ಸೃಷ್ಟಿ ಮತ್ತು ಅನ್ವೇಷಣೆಗಳು ವಿದ್ಯಾರ್ಥಿಗಳಿಗೆ ಸಾಧ್ಯವಾಗುವಂತೆ ವಿಶಾಲ ದಿಗಂತವು ತೆರೆಯುತ್ತದೆ.
- ಶಾಲಾ ಪಠ್ಯವಿಷಯಗಳ ಅಧ್ಯಯನವು ಒಂದು ರಾಷ್ಟ್ರದ ಸಮಾಜ, ಸಂಸ್ಕೃತಿ ಹಾಗೂ ಮೌಲ್ಯಗಳು ಶಾಲಾ ಪಠ್ಯವಿಷಯಗಳನ್ನು ಹೇಗೆ ಪ್ರಭಾವಿಸುತ್ತವೆ ಎಂಬುದನ್ನು ವಿಶ್ಲೇಷಿಸುವುದಕ್ಕೆ ನೆರವಾಗುತ್ತದೆ.

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1

ನಿಮ್ಮ ವೃತ್ತಿ ಜೀವನದಲ್ಲಿ ಶಾಲಾ ಪಠ್ಯವಿಷಯದ ಬೋಧನೆಯ ಅನುಭವದ ಹಿನ್ನೆಲೆಯಲ್ಲಿ ಶಾಲಾ ಪಠ್ಯವಿಷಗಳ ಇನ್ನೂ ನಾಲ್ಕು ಅನುಕೂಲತೆಗಳನ್ನು ಪಟ್ಟಿ ಮಾಡಿರಿ.

## 1.5.3.2. ಶಾಲಾ ಪಠ್ಯವಿಷಯಗಳ ಪ್ರಾಧಾನ್ಯತೆ–ವಿಷಯವಾರು

ಶಾಲೆಯಲ್ಲಿ ನಾವು ಅನೇಕ ವಿಷಯಗಳನ್ನು ಬೋಧಿಸುತ್ತೇವೆ. ಪ್ರತಿಯೊಂದು ವಿಷಯಕ್ಕೂ ಅದರದೇ ಆದ ಅನುಕೂಲತೆಗಳಿವೆ. ಕೆಲವು ಫಲಿತಾಂಶಗಳು ಒಂದಕ್ಕಿಂತ ಹೆಚ್ಚು ವಿಷಯಗಳ ಸೇರಿಕೆಯಿಂದ ಸಿಗಬಹುದು, ಇಲ್ಲವೇ ಕೆಲವು ವಿಷಯಗಳು ಗೊತ್ತುಪಡಿಸಿದ ಗುರಿಯನ್ನು ತಲುಪಲು ಅದನ್ನು ಸಶಕ್ತಗೊಳಿಸಲು ಸಹಾಯಕವಾಗಬಲ್ಲವು. ಶಾಲೆಯಲ್ಲಿ ಬೋಧಿಸಲಾಗುವ ಕೆಲವು ವಿಷಯಗಳ ಪ್ರಾಮುಖ್ಯತೆ ಏನು ಎಂದು ನೋಡೋಣ.

### ಗಣಿತ :

ಗಣಿತ ನಮ್ಮ ಕಾಲದ ಅವಿಭಾಜ್ಯ ಅಂಗವಾಗಿದೆ. ಗಣಿತದಿಂದಲೇ ನಮ್ಮ ದಿನವನ್ನು ಆರಂಭಿಸುತ್ತೇವೆ. "ಓ! ಈಗಾಗಲೇ 7 ಗಂಟೆಯಾಗಿಬಿಟ್ಟಿದೆ", ದಯವಿಟ್ಟು ನನಗೆ ಅರ್ಧ ಲೋಟ ಕಾಫಿಯನ್ನು ಕೊಡಿ". "ನಾನು 8 ಕಿ.ಮೀ. ಪ್ರಯಾಣಿಸಬೇಕಾಗಿದೆ', ನಾನು ಬೆಳಗ್ಗೆ 10 ಗಂಟೆಯ ಹೊತ್ತಿಗೆ ಶಾಲೆ ತಲುಪಬೇಕಿದೆ', ಈ ಎಲ್ಲ ವಾಕ್ಯಗಳಲ್ಲಿ ನಾವು ಗಣಿತವನ್ನು ಉಪಯೋಗಿಸುತ್ತಿದ್ದೇವೆ. ಗಣಿತವಿಲ್ಲದೆ ನಾವು ಜೀವಿಸಲಾರೆವು, "ಸರ್, ಕ್ಷಮಿಸಿ ನಾನು ಅರ್ಧಗಂಟೆ ತಡವಾಗಿ ಬಂದಿದ್ದೇನೆ"– ಈ ಎಲ್ಲ ವಾಕ್‌ಸರಣಿಗಳು ನಾವು ಗಣಿತದೊಂದಿಗೆ ಹೇಗೆ ಬದುಕುತ್ತಿದ್ದೇವೆ ಎಂಬುದನ್ನು ತೋರಿಸುತ್ತದೆ. ಹೀಗೆ, ಇದು ನಮಗೆ ಸಮಯವನ್ನು ಹೇಳುವುದಕ್ಕೆ ನೆರವಾಗುತ್ತದೆ.

ಇದು ನಮ್ಮ ಹಣಕಾಸು ಲೆಕ್ಕವನ್ನು ಸರಿಯಾಗಿ ಇಡಲು ಸಹಾಯ ಮಾಡುತ್ತದೆ, ದೃಷ್ಟಾಂತಕ್ಕೆ ಬ್ಯಾಂಕ್‌ನ ಖಾತೆಯಲ್ಲಿ ಶಿಲ್ಕು (Balance) ಎಷ್ಟಿದೆ ಎಂದು ತಿಳಿಯುವುದು, ಮೊತ್ತಗಳನ್ನು ಕೂಡಲು ಕಳೆಯಲು ಗಣಿತವು ಬೇಕಾಗುತ್ತದೆ. ಗಣಿತ ಗೊತ್ತಿರುವ ವ್ಯಕ್ತಿ ಸಾಲಕ್ಕೆ ಸಿಲುಕುವ ಸಂಭಾವ್ಯತೆ ಕಡಿಮೆ. ಏಕೆಂದರೆ ಆ ವ್ಯಕ್ತಿಗೆ ತನ್ನ ಬಳಿ ಎಷ್ಟು ಹಣವಿತ್ತು, ತಾನು ಎಷ್ಟು ಖರ್ಚು ಮಾಡಿದ್ದೇನೆ, ಎಷ್ಟು ಶಿಲ್ಕು ಉಳಿದಿದೆ ಎಂದು ತಿಳಿದಿರುತ್ತದೆ. ಗಣಿತವು ಉತ್ತಮ ಸಮಸ್ಯಾ ಪರಿಹಾರ ಕೌಶಲ್ಯವನ್ನು ಹೊಂದಲು ಉಪಕರಿಸುತ್ತದೆ.

ವಿಶ್ಲೇಷಣಾತ್ಮಕವಾಗಿ ಚಿಂತಿಸಲು ಮತ್ತು ತಾರ್ಕಿಕ ಸಾಮರ್ಥ್ಯ ಹೊಂದಲು ಗಣಿತ ನಮಗೆ ನೆರವಾಗುತ್ತದೆ. ನಮ್ಮ ಸುತ್ತಮುತ್ತಲ ಪ್ರಪಂಚವನ್ನು ಕುರಿತಂತೆ ವಿಶ್ಲೇಷಣಾತ್ಮಕವಾಗಿ ಹಾಗೂ ವಿಮರ್ಶಕಾತ್ಮಕವಾಗಿ ಚಿಂತಿಸುವ ಸಾಮರ್ಥ್ಯವನ್ನು ಇದು ಕೊಡುತ್ತದೆ. ವಿಶ್ಲೇಷಣಾತ್ಮಕ ಮತ್ತು ತಾರ್ಕಿಕ ಕೌಶಲ್ಯತೆಗಳು ಮುಖ್ಯವಾದುವು. ಕಾರಣ, ಅವು ನಮಗೆ ಸಮಸ್ಯಾ ಪರಿಹಾರದಲ್ಲಿ ಮತ್ತು ಪರಿಹಾರವನ್ನು ಕಂಡುಕೊಳ್ಳುವಲ್ಲಿ ನಮಗೆ ಸಹಾಯ ಮಾಡುತ್ತದೆ.

ಪ್ರತಿಯೊಬ್ಬ ವ್ಯಕ್ತಿಯೂ ಗಣಿತವನ್ನು ಪ್ರಾಯೋಗಿಕವಾಗಿ ಯಾವುದಾದರೊಂದು ರೀತಿಯಲ್ಲಿ ಬಳಸುತ್ತಾನೆ. ಸ್ವಾಭಾವಿಕವಾಗಿಯೇ, ಗಣಿತಶಾಸ್ತ್ರಜ್ಞರು ಮತ್ತು ವಿಜ್ಞಾನಿಗಳು ತಮ್ಮ ಬೋಧನೆಗಳ ಮೂಲಭೂತ ಅಂಶಗಳನ್ನು ಹೊರತರಲು ಗಣಿತವನ್ನೇ ಅವಲಂಬಿಸುತ್ತಾರೆ. ಉದಾಹರಣೆಗೆ, ಆಧಾರಕಲ್ಪನೆ(ಊಥಿರಿಠಣಝಫ)ಯನ್ನು ಪರೀಕ್ಷಿಸುವಿಕೆ, ಎಲ್ಲರಿಗೂ ತಿಳಿದಿರುವಂತೆ ಗಣಿತವನ್ನು ಅವಲಂಬಿಸುತ್ತದೆಯಾದರೂ ಇದೊಂದೇ ಗಣಿತವನ್ನು ಬಳಸುವ ಏಕಮೇವ ವೃತ್ತಿ ಮಾರ್ಗವಲ್ಲ. ನಗದು ದಾಖಲೆ ಪುಸ್ತಕದಲ್ಲಿ ಲೆಕ್ಕವನ್ನಿಡುವುದಕ್ಕೆ ಮೂಲಭೂತ ಅಂಕಗಣಿತದ ಅರಿವು ಇರಬೇಕು. ಕಾರ್ಖಾನೆಯಲ್ಲಿ ಕೆಲಸ ಮಾಡುವವರು ಜೋಡಣಾ ಸಾಲಿನಲ್ಲಿರುವ ಯಂತ್ರದ ಅಂಗಭಾಗಗಳ ಲೆಕ್ಕವನ್ನಿಡಲು ಮಾನಸಿಕವಾಗಿ ಗಣಿತವನ್ನು ಮಾಡಲು ಸಮರ್ಥರಾಗಿರಬೇಕು. ಅಲ್ಲದೆ, ಇನ್ನು ಕೆಲವು ಸಂದರ್ಭಗಳಲ್ಲಿ, ಅಂತಿಮ ಉತ್ಪನ್ನದ ನಿರ್ಮಾಣ ಮಾಡಲು ರೇಖಾಗಣಿತೀಯ ಗುಣಗಳನ್ನು (ಅಂಗಭಾಗದ ಉದ್ದ ಅಗಲಗಳ ಅಳತೆ) ಬಳಸಿಕೊಂಡು ತಯಾರಿಕಾ ಸಾಫ್ಟ್‌ವೇರನ್ನು ಕೌಶಲದಿಂದ ನಿರ್ವಹಿಸಬೇಕಾಗುತ್ತದೆ.

ಗಣಿತ ನಮ್ಮ ಸುತ್ತ ಮುತ್ತಲೂ ಇದೆ ಹಾಗೂ ಪ್ರಪಂಚವನ್ನು ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

ಗಣಿತದಿಂದಲೇ ಮುಂದುವರೆಯುತ್ತಿರುವ ಪ್ರಪಂಚದಲ್ಲಿ ಜೀವಿಸುತ್ತಾ ಅದರ ಬಗೆಗೆ ತಿಳಿದುಕೊಳ್ಳದೇ ಇರುವುದು ಒಂದು ಕಲಾ ವಸ್ತು ಸಂಗ್ರಹಾಲಯದಲ್ಲಿ ಕಣ್ಣುಮುಚ್ಚಿಕೊಂಡು ನಡೆದು ಹೋದಂತೆಯೇ ಸರಿ. ಗಣಿತವನ್ನು ಕಲಿಯುವುದು ಅದರ ಯೋಗ್ಯತೆಯನ್ನು ಗ್ರಹಿಸುವುದು, ಇವೆರಡರಿಂದ ಪ್ರಪಂಚದಲ್ಲಿ ಹಲವು ವಿದ್ಯಮಾನಗಳ ವಿಷಯಗಳ ನೈಜ ಸ್ವರೂಪವನ್ನು ಅರಿಯಲು ನೆರವಾಗುತ್ತವೆ.

## ವಿಜ್ಞಾನ :

ವೈಜ್ಞಾನಿಕ ಸಮುದಾಯದ ಸಾಂಪ್ರದಾಯಿಕ ಭಾಗ ಎಂದು ಎಣಿಸಿದ ವ್ಯಕ್ತಿಗಳೊಂದಿಗೆ ವಿಜ್ಞಾನದ ಅಂತಸತ್ವ ಮತ್ತು ಪ್ರಕ್ರಿಯೆಗಳನ್ನು ಹಂಚಿಕೊಳ್ಳಲು ವಿಜ್ಞಾನ ಶಿಕ್ಷಣ ಒಂದು ಕ್ಷೇತ್ರವಾಗಿದೆ. ವಿಜ್ಞಾನವನ್ನು ಸಮರ್ಪಕವಾಗಿ ಬೋಧಿಸುವುದರಿಂದ ಕುತೂಹಲವನ್ನು ಉಂಟುಮಾಡಲು "ಏಕೆ" ಎಂಬುದನ್ನು ಅರ್ಥಮಾಡಿಕೊಳ್ಳುವ ಹಂಬಲವನ್ನು ಪೂರೈಸಲು ಸಾಧ್ಯವಾಗುತ್ತದೆ. ನಮ್ಮ ನೈಜ ಕುತೂಹಲವನ್ನು ಜ್ಞಾನವಾಗಿ ಬದಲಾಯಿಸುವ ಒಂದು ವಿಧಾನವನ್ನು ಅನುಸರಿಸುವುದರಿಂದ ಅನ್ವೇಷಣೆಯ ಶಕ್ತಿ ಮತ್ತು ಸಂಭಾವ್ಯತೆ ಉಂಟಾಗುವುದರೊಂದಿಗೆ ಸಮಸ್ಯೆಗಳಿಗೆ ಅನ್ವೇಷಣೆಯ ಮೂಲಕ ಪರಿಹಾರ ಹುಡುಕಲು ನೆರವಾಗುತ್ತದೆ.

ವಿಜ್ಞಾನದ ಅರಿವು ಮತ್ತು ಪ್ರೇಮ ಅಂತಿಮ ಸಮಾನಕಾರಿಯಾಗಿದ್ದು, ಮಾನವ ಹಕ್ಕುಗಳಿಗೆ ಮತ್ತು ಉತ್ತಮ ಗುಣವುಳ್ಳ ಜೀವನಕ್ಕೆ ಮಾರ್ಗವಾಗಿದೆ. ವೈಜ್ಞಾನಿಕ ಕಾರ್ಯಕ್ರಮಗಳನ್ನು ಬಲವಾಗಿ ಬೆಂಬಲಿಸುವ ರಾಷ್ಟ್ರಗಳು ಆರ್ಥಿಕವಾಗಿ ಸಬಲವಾಗಿವೆ, ಹೊಸ ತಂತ್ರಜ್ಞಾನಗಳನ್ನು ಸೃಷ್ಟಿಸುವ ವ್ಯಕ್ತಿಗಳನ್ನು ಅಧಿಕ ಸಂಖ್ಯೆಯಲ್ಲಿ ಹೊಂದಿವೆ.

ವಿಜ್ಞಾನದ ಅಧ್ಯಯನಗಳು ವ್ಯಕ್ತಿಯನ್ನು ಈ ಕೆಳಗಿನವುಗಳಲ್ಲಿ ಸಮರ್ಥನನ್ನಾಗಿಸುತ್ತವೆ:

- ಪ್ರಪಂಚದ ಬಗ್ಗೆ ಅರಿವು
- ಹೆಚ್ಚಾದ ಬೌದ್ಧಿಕ ಸಾಮರ್ಥ್ಯಗಳು
- ತಾರ್ಕಿಕ ವಿವೇಚನೆ

- ವಿಮರ್ಶಾತ್ಮಕ ಚಿಂತನಾ ಸಾಮರ್ಥ್ಯಗಳು
- ಆಧಾರ ಕಲ್ಪನೆಗಳ ಸೃಷ್ಟಿ ಮತ್ತು ಅವುಗಳ ಪರೀಕ್ಷಣೆ, ಸೃಜನಾತ್ಮಕತೆ ಮತ್ತು ಶೋಧನೆ
- ವಿಶ್ವದ ಬೆಡಗನ್ನು ಅನ್ವೇಷಿಸುವಿಕೆ
- ಸಂಶೋಧನೆಗೆ ದ್ವಾರವನ್ನು ತೆರೆಯುವಿಕೆ
- ವಿಜ್ಞಾನದ ಆನಂದವನ್ನು ಪಡೆಯುತ್ತಿರುವವರೊಂದಿಗೆ ಭೇಟಿ
- ಸಮಾಜಕ್ಕೆ ಕೊಡುಗೆ ನೀಡುವುದಕ್ಕಾಗಿ ಅವರವರ ತೀವ್ರಾಸಕ್ತಿಯನ್ನು ಅನುಸರಿಸಿ ಮುಂದುವರೆಯುವುದು.

ವಿಜ್ಞಾನದ ಅರಿವಿನಿಂದ ತಾರ್ಕಿಕವಾಗಿ ಚಿಂತಿಸಲು ಕಲಿಯಬಹುದಲ್ಲದೆ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯಬಹುದು. ಆರಂಭದ ವರ್ಷಗಳಲ್ಲಿ ಕಲಿತ ಸಮಸ್ಯಾ ಪರಿಹಾರ ಕೌಶಲ್ಯವೇ ವ್ಯಕ್ತಿಯನ್ನು ಸಮಸ್ಯೆಗಳನ್ನು ಪರಿಹರಿಸಲು ಸಮರ್ಥನನ್ನಾಗಿಸುತ್ತದೆ. ವ್ಯಕ್ತಿಗಳು ಅವರವರ ವಿಜ್ಞಾನದ ಜ್ಞಾನವನ್ನು ವಾಸ್ತವಿಕ ಜೀವನದಲ್ಲಿ ಅನ್ವಯಿಸಿಕೊಂಡಿರುವುದರಿಂದಲೇ ವೈದ್ಯಕೀಯ, ಸಾರಿಗೆ, ನಮ್ಮ ಸುತ್ತ ಮುತ್ತ ಕಾಣುವ ಎಲ್ಲವೂ ಅಸ್ತಿತ್ವವನ್ನು ಪಡೆದಿವೆ. ಈ ವ್ಯಾಸಂಗ ವಿಷಯದ ಜ್ಞಾನ ಹಲವು ಇನ್ನಿತರ ವಿಷಯಗಳನ್ನು ಚೆನ್ನಾಗಿ ತಿಳಿದುಕೊಳ್ಳುವುದಕ್ಕೂ ನಮ್ಮನ್ನು ಸಮರ್ಥರನ್ನಾಗಿಸುತ್ತದೆ.

ಪರಿಸರದ ಎಲ್ಲ ಮುಖಗಳು ನಮ್ಮ ಜೀವನದ ಮೇಲೆ ಗಾಢ ಪ್ರಭಾವ ಬೀರಿವೆ. ಭೂಮಿ ಹೇಗೆ ಕಾರ್ಯಪ್ರವೃತ್ತವಾಗಿದೆ, ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದು ಹೇಗೆ ಎಂಬುವುಗಳ ಬಗ್ಗೆ ಅರಿಯಲು ವಿಜ್ಞಾನ ನೆರವಾಗುತ್ತದೆ. ಈ ಸಂಪನ್ಮೂಲಗಳ ಕೊರತೆ ಜೀವರಾಶಿಗಳನ್ನು ಹೇಗೆ ಪ್ರಭಾವಿಸುತ್ತದೆ ಮತ್ತು ನಾವು ಹೇಗೆ ಈ ಸಂಪನ್ಮೂಲಗಳನ್ನು ಸಂರಕ್ಷಿಸಬಹುದೆಂದೂ ವಿಜ್ಞಾನ ನಮಗೆ ಬೋಧಿಸುತ್ತದೆ.

ವಿಜ್ಞಾನ ನಮಗೆ ವಿವಿಧ ಹವಾಮಾನ ಪರಿಸ್ಥಿತಿಗಳನ್ನು ಕುರಿತು ಕಲಿಯಲು ಹಾಗೂ ಸಾಮಾನ್ಯ ಹವಾಮಾನ ಮತ್ತು ಅಪಾಯಕಾರಿ ಹವಾಮಾನಗಳು ಯಾವುದು ಎಂದು ಪ್ರತ್ಯೇಕಿಸಲು ನೆರವಾಗುತ್ತದೆ. ಈ ತಿಳಿವಿನಿಂದ ಪ್ರಕೃತಿ ವಿಕೋಪದ ಬಗ್ಗೆ ಎಚ್ಚರದಿಂದ ಇರಬಹುದು ಅಥವಾ ದುರ್ಘಟನೆಯಿಂದ ಪಾರಾಗಬಹುದು.

ವಿಜ್ಞಾನದ ಪ್ರಕ್ರಿಯೆಗಳು ಮತ್ತು ವಿಚಾರಗಳು ಪ್ರತಿಯೊಬ್ಬರಿಗೂ ಮೂರು ವಿಧದಲ್ಲಿ ಬಹಳ ಪ್ರಮುಖವಾಗಿವೆ. ಮೊದಲನೆಯದಾಗಿ ಅವರವರ ವೈಯಕ್ತಿಕ ಜೀವನದಲ್ಲಿ, ಉದಾಹರಣೆಗೆ, ವ್ಯಕ್ತಿಯ ಆರೋಗ್ಯಕರ ಜೀವನಶೈಲಿಯ ಅಂಶಗಳೇನು ಎಂದು ಪ್ರಮಾಣಸಹಿತ ಗುರುತಿಸಿಕೊಳ್ಳಬಹುದು. ಎರಡನೆಯದು, ಸಾರ್ವಜನಿಕ ಜೀವನದಲ್ಲಿ – ಸಾಮಾಜಿಕ ನಿರ್ಧಾರಗಳಲ್ಲಿ ಮಾಹಿತಿಆಧರಿತವಾಗಿ ಪಾತ್ರವಹಿಸಬಹುದು. ಉದಾಹರಣೆಗೆ ವಿದ್ಯುತ್–ಸರಬರಾಜಿಗೆ ಭವಿಷ್ಯದ ಆಯ್ಕೆಗಳೇನು ಎಂದು ತಿಳಿಯಬಹುದು, ಮೂರನೆಯದು ತಮ್ಮ ತಮ್ಮ ಆರ್ಥಿಕ ಜೀವನದಲ್ಲಿ ಅವರವರ ವೃತ್ತಿಯ ವಿಜ್ಞಾನ ಸಂಬಂಧಿ ಅಂಶಗಳಲ್ಲಿ ಆಗುವ ಬದಲಾವಣೆಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕಾಗಿ ಬಂದಾಗ ಹಾಗೆ ಮಾಡಲು ಸಮರ್ಥರಾಗುತ್ತಾರೆ.

ವಿಜ್ಞಾನ ಸರ್ವತ್ರ ಇದೆ. ವಿಜ್ಞಾನ ವಿಮರ್ಶಾತ್ಮಕ ಚಿಂತನಶೀಲತೆಯನ್ನು ಬೆಳೆಸುತ್ತದೆ. ವಿವೇಕಪೂರಿತ ಪ್ರಶ್ನೆಗಳನ್ನು ಕೇಳುವಲ್ಲಿ, ವಿಶ್ಲೇಷಣಾತ್ಮಕ ಚಿಂತನೆಯೊಂದಿಗೆ ಮುನ್ನಡೆಯುವಲ್ಲಿ ನೆರವಾಗುವುದರೊಂದಿಗೆ ನಮ್ಮ ಸಮಸ್ಯಾಪರಿಹಾರದಲ್ಲಿ ವಿಜ್ಞಾನ ಸಹಾಯಕವಾಗುತ್ತದೆ. ನಾವು ಕೈಗೊಳ್ಳುವ ಪ್ರತಿಯೊಂದು ನಿರ್ಣಯವು ಈ ಪ್ರಕ್ರಿಯೆಗಳನ್ನು ಆಧರಿಸಿದೆ. ನಾವು ಕುತೂಹಲದಿಂದ ಪ್ರಶ್ನಿಸುತ್ತೇವೆ(ಸಮಸ್ಯೆ ಏನು?), ನಾವು ಆಧಾರ ಕಲ್ಪನೆಯನ್ನು ರಚಿಸುತ್ತೇವೆ(ಇದಕ್ಕೆ ಈ ಕಾರಣವಿರಬಹುದು), ನಾವು ಆ ಆಧಾರಕಲ್ಪನೆಯನ್ನು ಒರೆಗೆ ಹಚ್ಚುತ್ತೇವೆ(ತರ್ಕಿಸಿದ ಕಾರಣವನ್ನು ದೃಢಿಕರಿಸುವುದು ಹೇಗೆ?), ಇದನ್ನು ಪ್ರಮಾಣಸಹಿತ ಪರೀಕ್ಷಿಸಿ ಫಲಿತಾಂಶಗಳ ಮೌಲ್ಯಮಾಪನ ಮಾಡುತ್ತೇವೆ(ಪರಿಹಾರ ಕೆಲಸ ಮಾಡುತ್ತದೆಯೇ?), ಹಾಗೂ ಆ ಫಲಿತಾಂಶಗಳ ಆಧಾರದ ಮೇಲೆ ಭವಿಷ್ಯದ ನಿರ್ಧಾರಗಳನ್ನು ಕೈಗೊಳ್ಳುತ್ತೇವೆ. ಇದನ್ನೇ ವಿಜ್ಞಾನದ ಫಲಿತಾಂಶ ಎನ್ನುತ್ತೇವೆ.

**ಸಾಮಾಜಿಕ ವಿಜ್ಞಾನಗಳು:**

ಮಾನವ ಜೀವಿಗಳ ವರ್ತನೆ, ಬೆಳವಣಿಗೆ ಮತ್ತು ಅಭಿವೃದ್ಧಿ, ಸಂಬಂಧಗಳು, ಅವರು ಉಪಯೋಗಿಸುವ ಸಂಪನ್ಮೂಲಗಳು, ಕಾರ್ಯೋನ್ಮುಖರಾಗಲು ಮತ್ತು ದೈನಂದಿನ ಜೀವನವನ್ನು ಸುಗಮವಾಗಿ ಸಾಧಿಸಲು ಅವರಿಗೆ ಬೇಕಾದ ವಿವಿಧ ಸಂಸ್ಥೆಗಳು – ಇವೆಲ್ಲವನ್ನೂ ಕುರಿತ ಅಧ್ಯಯನ ಶಾಖೆಗೆ ಸಾಮಾಜಿಕ ವಿಜ್ಞಾನಗಳು ಎನ್ನುವರು. ಉದಾಹರಣೆಗೆ, ಕುಟುಂಬ, ಶಾಲೆ, ಕಾರ್ಯಸ್ಥಳ, ಸರ್ಕಾರ, ನ್ಯಾಯಾಂಗ, ವಿನೋದಕೂಟ ಇತ್ಯಾದಿ. ಜೀವನದ ಈ ಎಲ್ಲ ಮುಖಗಳು ಒಂದಕ್ಕೊಂದು ಸಂಬಂಧಿಸಿವೆ, ಪರಸ್ಪರ ಅವಲಂಬಿತವಾಗಿವೆ. ನಾವು ವೈದ್ಯರೋ ಇಂಜಿನಿಯರೋ ಚಾರ್ಟರ್ಡ್ ಅಕೌಂಟೆಂಟೋ ಕಲಾಕಾರರೋ ಅಥವಾ ಶಿಕ್ಷಕರೋ ಆಗಲು ಬಯಸಿದರೂ ನಾವು ಒಂದು ಸಮಾಜದೊಳಗೆ ಇರಬೇಕು. ವಿವಿಧ ಸಾಂಸ್ಕೃತಿಕ ಮತ್ತು ಸಾಮಾಜಿಕ–ಆರ್ಥಿಕ ಹಿನ್ನಲೆಯುಳ್ಳ ವ್ಯಕ್ತಿಗಳೊಂದಿಗೆ ವ್ಯವಹರಿಸಬೇಕು. ಬೇರೆ ಬೇರೆ ಸ್ಥಿತಿಗತಿಗಳಿಗೆ, ಪರಿಸರಗಳಿಗೆ ಹೊಂದಿಕೊಳ್ಳಬೇಕು ಹಾಗೂ ಶಾಂತಿಯುತ, ಪರಿಣಾಮಕಾರಿ ಜೀವನ ಸಾಗಿಸಲು ಸಾಮಾಜಿಕ ನೀತಿನಿಯಮಗಳನ್ನು ಪಾಲಿಸಬೇಕು.

ಪ್ರಾಥಮಿಕ ಮಟ್ಟದಿಂದ ಮಾಧ್ಯಮಿಕ ತರಗತಿಯವರೆಗೆ ಸಮಾಜ ವಿಜ್ಞಾನವನ್ನು ಪಠ್ಯಕ್ರಮದಲ್ಲಿ ಸೇರಿಸಿರುವುದು ಅದರ ಪ್ರಾಧಾನ್ಯತೆ, ಅದು ವಿದ್ಯಾರ್ಥಿಯ ಜೀವನದಲ್ಲಿ ವಹಿಸುವ ಪಾತ್ರ ಎಷ್ಟು ಮಹತ್ವದ್ದು ಎಂದು ಸೂಚಿಸುತ್ತದೆ. ಇತಿಹಾಸ, ಭೂಗೋಳಶಾಸ್ತ್ರ, ಸಾಂಸ್ಕೃತಿಕ ಅಧ್ಯಯನಗಳು, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಮನಶ್ಶಾಸ್ತ್ರ, ಮಾನವಶಾಸ್ತ್ರ ಮುಂತಾದ ವ್ಯಾಸಂಗ ವಿಷಯಗಳ ಒಂದು ಸಂಯೋಜನೆಯ ಮುಖಾಂತರ ಸಮಾಜ ವಿಜ್ಞಾನವನ್ನು ಶಾಲಾಪಠ್ಯಕ್ರವದಲ್ಲಿ ಅಳವಡಿಸಿಕೊಳ್ಳಲಾಗುತ್ತದೆ.

ಈ ವಿಷಯಗಳು ಮಕ್ಕಳು ಈ ಕೆಳಗಿನವುಗಳನ್ನು ಬೆಳೆಸಿಕೊಳ್ಳಲು ನೆರವಾಗುತ್ತವೆ.

ಜಗತ್ತು ಮತ್ತು ಪರಿಸರದ ಬಗ್ಗೆ ಅರಿವು: ಸಾಮಾಜಿಕ ಅಧ್ಯಯನಗಳ ಪಾಠಗಳಿಗೆ ಸಂಬಂಧಿಸಿದ – ನನ್ನ ಕುಟುಂಬ, ನನ್ನ ನೆರೆಹೊರೆ, ಸಮುದಾಯ ಸಹಾಯಕರು, ಆದಿಮಾನವ, ಸಿಂಧೂಕಣಿವೆ ನಾಗರೀಕತೆ, ಭಾರತೀಯ ಇತಿಹಾಸದಲ್ಲಿನ ಆಧುನಿಕಯುಗ, ಭಾರತ ಸ್ವಾತಂತ್ರ ಆಂದೋಲನ ಇತ್ಯಾದಿ ವಿಷಯಗಳು ವಿದ್ಯಾರ್ಥಿಗಳಿಗೆ ಅವರ ನೆರೆಹೊರೆ ತಾಣಗಳು, ರಾಷ್ಟ್ರ ಮತ್ತು ಜಗತ್ತಿನ ಬಗ್ಗೆ ಬೋಧಿಸಿ ತಿಳಿವನ್ನು ನೀಡುತ್ತವೆ. ಪ್ರಪಂಚ ಹೇಗೆ ವಿಕಸನಗೊಂಡಿತು ಮತ್ತು ಭಿನ್ನ ಭಿನ್ನ ಸಮಾಜಗಳು ವಿಕಸನಗೊಂಡಿದ್ದು ಹೇಗೆ, ಗತಕಾಲದಲ್ಲಿ ಸಂಭವಿಸಿದ ಪ್ರಮುಖ ಘಟನೆಗಳು, ಸ್ಥಳೀಯವಾಗಿ, ರಾಷ್ಟ್ರೀಯವಾಗಿ ಮತ್ತು ಜಾಗತಿಕವಾಗಿ ಜನಜೀವನವನ್ನು ಮುಟ್ಟಿದ ಹಾಗೂ ಪ್ರಭಾವಿಸಿದ ನಿರಂತರ ಉಳಿದು ಬಂದಿರುವ ವಿಚಾರಗಳು ಮತ್ತು ವ್ಯಕ್ತಿಗಳು  ಇವೆಲ್ಲವನ್ನು ಅರ್ಥಮಾಡಿಕೊಳ್ಳಲು ಈ ಜ್ಞಾನವು ವಿದ್ಯಾರ್ಥಿಗಳನ್ನು ಸಮರ್ಥರನ್ನಾಗಿ ಮಾಡುತ್ತದೆ. ಅಲ್ಲದೆ ಭಿನ್ನ ಭಿನ್ನ ಸಮಾಜಗಳು ಹೇಗೆ ಸಂರಚನೆಗೊಳ್ಳುತ್ತವೆ, ನಿರ್ವಹಿಸಲ್ಪಡುತ್ತವೆ ಮತ್ತು ಶಾಸನಕ್ಕೆ ಒಳಪಡುತ್ತವೆ ಎಂಬುದನ್ನು ಗ್ರಹಿಸಲೂ ಸಹ ಇದು ನೆರವಾಗುತ್ತದೆ. ತತ್ಫಲವಾಗಿ, ವಿದ್ಯಾರ್ಥಿಗಳು ಜಗತ್ತಿನಲ್ಲಿ ತಮ್ಮ ಸ್ಥಾನವೇನೆಂದು ತಿಳಿಯಲು ಸಹಾಯವಾಗುತ್ತದೆ.

ನಮ್ಮ ಭೂಮಿ, ಸೌರವ್ಯೂಹ, ಭೂಮಿಯ ಮೇಲ್ಮೈನ ಸಹಜ ಲಕ್ಷಣಗಳು, ಜಲಸಂಪನ್ಮೂಲಗಳು, ಪ್ರಾಕೃತಿಕ ಸಸ್ಯವರ್ಗ ಮತ್ತು ವನ್ಯಜೀವಿ ಸಂಪನ್ಮೂಲಗಳು, ಪ್ರಕೃತಿ ವಿಕೋಪಗಳು, ವಿಪತ್ತು ನಿರ್ವಹಣೆ, ಪರಿಸರ ಮಾಲಿನ್ಯ ಮುಂತಾದವುಗಳನ್ನು ಕುರಿತ ಪಾಠಗಳು ವಿದ್ಯಾರ್ಥಿಗಳಿಗೆ ಬಾಹ್ಯಾಕಾಶ, ಭೂಮಿಯ ಮೇಲ್ಮೈನ ರೂಪಣ, ಪ್ರಾಣಿವಿಕಾಸ, ಸಸ್ಯವರ್ಗ, ಪ್ರಾಣಿವರ್ಗ ಮತ್ತು ಮಾನವ, ಜಲಸರೋವರಗಳು, ಲಭ್ಯ ಸಂಪನ್ಮೂಲಗಳು, ಅವುಗಳ ಯಥಾಸ್ಥಿತಿ ಕಾಪಾಡುವಿಕೆ ಮತ್ತು ಸಂರಕ್ಷಣೆಗಳ ಪ್ರಾಧಾನ್ಯತೆ, ಪ್ರಸ್ತುತ ಮಾನವ ಮತ್ತು ಪ್ರಾಣಿ ಜೀವನದ ಮೇಲೆ ಹಾಗೂ ಮುಂದಿನ ಪೀಳಿಗೆಗಳ ಮೇಲೆ ಪರಿಸರದ ಪ್ರಭಾವ ಇತ್ಯಾದಿಗಳ ಕುರಿತು ತಿಳಿದುಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತವೆ. ಅಂತಹ ವಿದ್ಯಾರ್ಥಿಗಳಿಗೆ ಅವರ ಸುತ್ತಮುತ್ತಲ ಪರಿಸರದ ಸಮಗ್ರತಾ ದೃಷ್ಟಿಯ ಅರಿವನ್ನು ತಂದುಕೊಡುತ್ತವೆಯಲ್ಲದೆ ಪ್ರಕೃತಿ ಮತ್ತು ಮಾನವ ವಸತಿಗಳ ನಡುವೆ ಇರುವ ಅಂತರ್‌ಸಂಬಂಧದ ಬಗ್ಗೆಯೂ ಅರಿವು ಮೂಡಿಸುತ್ತದೆ.

ಸಾಮಾಜಿಕ ವಿಜ್ಞಾನಗಳು ವಿಮರ್ಶಾತ್ಮಕ ಚಿಂತನಾ ಸಾಮರ್ಥ್ಯಗಳನ್ನು ವಿಕಾಸಗೊಳಿಸುತ್ತದೆ. ಸಾಮಾಜಿಕ ಅಧ್ಯಯನಗಳು, ಗ್ರಹಿಕೆ, ಅನ್ವಯನ, ವಿಶ್ಲೇಷಣೆ, ಯೋಗ್ಯತಾ ನಿರ್ಣಯ ಮತ್ತು ಸಂಶ್ಲೇಷಣೆ, ಸೃಜನಾತ್ಮಕತೆ ಇವೇ ಮುಂತಾದ ಉನ್ನತದರ್ಜೆಯ ಚಿಂತನಾ ಸಾಮರ್ಥ್ಯಗಳನ್ನು ಬೆಳೆಸುತ್ತದೆ. ಪ್ರಾಕೃತಿಕ ಸಂಪನ್ಮೂಲಗಳು, ಜಲಸಂಪನ್ಮೂಲಗಳು, ಸಂಚಾರಸಂಪರ್ಕ, ಜಾತಿವ್ಯವಸ್ಥೆ, ರಾಜನೈತಿಕ ವಿಚಾರಧಾರೆಗಳು, ಸಮಾಜ ಸುಧಾರಕರು, ನಮ್ಮ ಸಂಸ್ಕೃತಿಗಳು, ವಿಶ್ವಸಂಸ್ಥೆ, ಇತ್ಯಾದಿ ಭಿನ್ನ ವಿಷಯಗಳ ಕುರಿತು ಕಲಿಯುವುದರಿಂದ ವಿವಿಧ ಸಂದರ್ಭಗಳಲ್ಲಿ ಸೂಕ್ತ ಮಾಹಿತಿ ಮತ್ತು ದತ್ತಾಂಶಗಳು ವಿದ್ಯಾರ್ಥಿಗಳಿಗೆ ದೊರಕುತ್ತವೆ. ಹೀಗೆ ದೊರೆತ ಮಾಹಿತಿಯಿಂದ ವಿದ್ಯಾರ್ಥಿಗಳಿಗೆ ಸಮಂಜಸ ವೀಕ್ಷಣೆ ಕೈಗೊಳ್ಳಲು, ಸಮಾನತೆ ಭಿನ್ನತೆಗಳನ್ನು ಗುರುತಿಸಲು ಸಂಬಂಧಿತ ಪರಿಕಲ್ಪನೆಗಳು, ವಿಚಾರಗಳು ಮತ್ತು ಸಂಪನ್ಮೂಲಗಳ ನಡುವೆ ಸಂಬಂಧಗಳನ್ನು ಏರ್ಪಡಿಸಲು ಸಾಧ್ಯವಾಗುತ್ತದೆ. ಸೂಕ್ತ ಅನುಭವಗಳು, ಬೇರೆ ಬೇರೆ ವಿಷಯ ವಸ್ತುಗಳು, ವ್ಯಕ್ತಿಗಳಿಂದ ಅವರವರ ಜೀವನದ ಮೇಲೆ ಆಗುವ ಪ್ರಭಾವಗಳ ಬಗೆಗೆ ಅರಿತುಕೊಳ್ಳುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಹೆಚ್ಚಿಸುತ್ತವೆ. ಉದಾಹರಣೆಗೆ, ಸಮಾಜವನ್ನು ಬಡತನ ಹೇಗೆ ಪ್ರಭಾವಿಸುತ್ತದೆ ಎಂದು ತಿಳಿಯಲು ವಿದ್ಯಾರ್ಥಿಗಳಿಗೆ ಇತಿಹಾಸ, ಅರ್ಥಶಾಸ್ತ್ರ ಮತ್ತು ರಾಜನೀತಿ ವಿಷಯಗಳ ಅರಿವು ಅಗತ್ಯ. ವಿದ್ಯಾರ್ಥಿಗಳು ಮೊದಲು ಮಾಹಿತಿ ಸಂಗ್ರಹಿಸಿ ಸಂಪನ್ಮೂಲಗಳ ಹಂಚಿಕೆ, ರಾಜನೈತಿಕ ಆದ್ಯತೆಗಳ ಬಗೆಗೆ ಅರ್ಥಮಾಡಿಕೊಳ್ಳಬೇಕಾಗುತ್ತದೆ. ತರುವಾಯ ಆ ಪರಿಕಲ್ಪನೆಗಳು ಹಾಗೂ ಸಿದ್ಧಾಂತಗಳ ನಡುವೆ ಇರುವ ಸಂಬಂಧಗಳನ್ನು ಗ್ರಹಿಸಿ, ವಿಶ್ಲೇಷಿಸಿ, ಮೌಲ್ಯಮಾಪನ ಮಾಡಿ ದೇಶದಲ್ಲಿ ಕೆಲವು ನಿರ್ದಿಷ್ಟ ಜನಸಮುದಾಯವನ್ನು ಬಡತನ ಹೇಗೆ ಪ್ರಭಾವಿಸುತ್ತದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಈ ಜ್ಞಾನವನ್ನು ಮತ್ತಷ್ಟು ಸೃಜನಶೀಲತೆಯನ್ನು ಬೆಳೆಸಲು ಉಪಯೋಗಿಸಿಕೊಳ್ಳಬಹುದು. ಬಡತನವನ್ನು ನೀಗಿಸಲು ಮಾರ್ಗಗಳೇನೆಂದು ಚಿಂತಿಸಲು ಅಥವಾ ಹೊಸ ಪರಿಹಾರಗಳನ್ನು, ನೀತಿಗಳನ್ನು ರೂಪಿಸಲು ವಿದ್ಯಾರ್ಥಿಗಳಿಗೆ ಹೇಳಿದಾಗ ಅವರು ಈ ಜ್ಞಾನವನ್ನು ಬಳಸಿಕೊಳ್ಳಬಹುದು. ಚರ್ಚೆ, ಪ್ರಬಂಧ, ನಾಟಕದ ಪಾತ್ರ ಅಥವಾ ತರಗತಿಯ ಪ್ರಾಜೆಕ್ಟ್ ಇವೇ ಮುಂತಾದವುಗಳ ಮೂಲಕ ಅವರ ವಿಚಾರಗಳನ್ನು ಮುಂದಿಡಲು ಅವಕಾಶ ಕೊಡಬಹುದು.

ವಿದ್ಯಾರ್ಥಿಗಳ ಸಾಮಾಜಿಕ ತಿಳಿವಳಿಕೆಯನ್ನು ಹೆಚ್ಚಿಸುತ್ತದೆ: ಬೇರೆ ಬೇರೆ ವಯೋಮಾನದ ಗುಂಪಿನ ಮಕ್ಕಳಿಗೆ ಹೇಳಿಕೊಡುವ ಸಾಮಾಜಿಕ ಅಧ್ಯಯನಗಳ ಪಠ್ಯಕ್ರಮದಲ್ಲಿ ವಿವಿಧ ವಿಷಯಗಳನ್ನು ಸೇರಿಸುವುದರಿಂದ, ಉದಾಹರಣೆಗೆ ಭಾರತದ ಹಬ್ಬಗಳು, ವಿವಿಧ ರೀತಿಯ ಕುಟುಂಬಗಳು, ನಾವು ಧರಿಸುವ ವಸ್ತ್ರಗಳು, ನಾವು ಸೇವಿಸುವ ಆಹಾರಗಳು, ನಮ್ಮ ದೇಶ ಭಾರತದ ರಾಜ್ಯಗಳು, ತನ್ನ ಸಮುದಾಯ, ಸಾಮಾಜಿಕ–ಧಾರ್ಮಿಕ ಸುಧಾರಣೆಗಳು, ಜಾತಿವ್ಯವಸ್ಥೆಗೆ ಸವಾಲೆಸಗುವುದು, ವಿದ್ಯಾರ್ಥಿಗಳಿಗೆ ಮಾನವನ ವರ್ತನೆ, ಮೌಲ್ಯಗಳು ಮತ್ತು ಮನೋವೃತ್ತಿಗಳು, ಭಿನ್ನ ಭಿನ್ನ ಜನರ ನಡುವೆ ಇರುವ ಅಂತರ್‌ಸಂಬಂಧಗಳ ಬಗೆಗೆ ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ತಮ್ಮದಕ್ಕಿಂತ ಭಿನ್ನವಾದ ಪ್ರಪಂಚದಲ್ಲಿರುವ ವಿಭಿನ್ನ ಧರ್ಮ ಮತ್ತು ಸಂಸ್ಕೃತಿಗಳ ಬಗೆಗೆ ವಿದ್ಯಾರ್ಥಿಗಳು ತಿಳಿದುಕೊಳ್ಳುವಲ್ಲಿ ಸಮರ್ಥರಾಗುತ್ತಾರೆ. ಅಲ್ಲದೆ ಸಮಾಜದ ಸ್ತರಗಳು, ನಿಯಮಗಳ ಬಗ್ಗೆ ಕಲಿಯುವವರಲ್ಲದೆ ವಿವಿಧ ಆಡಳಿತ ಅಂಗಗಳು ಮತ್ತು ಇತರ ಸಂಸ್ಥೆಗಳ ಅವಶ್ಯಕತೆಯನ್ನು ಅರಿತುಕೊಳ್ಳುತ್ತಾರೆ. ತತ್ಫಲವಾಗಿ ವಿದ್ಯಾರ್ಥಿಗಳಿಗೆ ಸಮಾಜದ ಮಾನವ ಸ್ಥಿತಿಗತಿಗಳ ವಿಶಾಲ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲು ನೆರವು ಲಭಿಸುತ್ತದೆ.

ಇಷ್ಟು ಮಾತ್ರವಲ್ಲ, ಬೇರೆ ಬೇರೆ ಧರ್ಮಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ನಂಬಿಕೆಗಳು, ಜಾತಿಮತಗಳು, ರಾಷ್ಟ್ರೀಯತೆ ಮತ್ತು ಜನಾಂಗೀಯತೆ, ಮೌಲ್ಯಗಳು, ಭಾಷೆಗಳು, ಹಬ್ಬಗಳು, ಆಹಾರ ಉಡುಗೆತೊಡುಗೆಗಳು, ಕುಟುಂಬದ ವಿಧಗಳು ಇತ್ಯಾದಿಗಳ ಬಗ್ಗೆ ಕಲಿತುಕೊಳ್ಳುವುದರಿಂದ ವಿದ್ಯಾರ್ಥಿಗಳಿಗೆ ತಾವು ಜೀವಿಸುತ್ತಿರುವ ಈ ಸಮಾಜ ಅದೆಷ್ಟು ವೈವಿಧ್ಯಮಯ ಬಹುಸಂಸ್ಕೃತಿವುಳ್ಳದ್ದು, ಆದರೂ ಭಿನ್ನ ಭಿನ್ನ ಜನಗಳು, ಕುಟುಂಬಗಳು, ಸಂಸ್ಕೃತಿಗಳು, ಧರ್ಮಗಳು, ರಾಷ್ಟ್ರಗಳು ಅದೆಷ್ಟು ಪರಸ್ಪರ ಅವಲಂಬಿತ ಮತ್ತು ಅಂತರ್‌ಸಂಬಂಧಿತವಾಗಿವೆ ಎಂಬುದರ ಬಗ್ಗೆ ಅರಿವುಮೂಡುತ್ತದೆ. ಅನೇಕ ಸಂಸ್ಕೃತಿ, ವಿಚಾರಧಾರೆಗಳಿರುವ ಈ ಜಗತ್ತಿನಲ್ಲಿ ಜೀವಿಸುವಾಗ

ಸಿಗುವ ಲಾಭಗಳೇನು, ಎದುರಾಗುವ ಸವಾಲುಗಳೇನು ಎಂದು ಗುರುತಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತದೆ. ಈ ಅರಿವು ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವ, ಹಕ್ಕು ಸ್ವಾತಂತ್ರ್ಯಗಳ ಪ್ರಾಧಾನ್ಯತೆಯನ್ನು ಗ್ರಹಿಸಲು ನೆರವಾಗುವುದರ ಜೊತೆಗೆ ಶಾಂತಿಯುತ ಸಹಬಾಳ್ವೆಯನ್ನು ನಡೆಸಲು, ಶಾಂತಿಯುತವಾಗಿ ಜೀವಿಸಲು, ಪ್ರತಿಯೊಬ್ಬರೂ ಸಮಾಜದಲ್ಲಿ ಇರುವ ಭಿನ್ನ ಭಿನ್ನ ಅಭಿಪ್ರಾಯಗಳು, ಮೌಲ್ಯಗಳು ಮತ್ತು ಮನೋವೃತ್ತಿಗಳು, ಜೀವನ ಶೈಲಿಗಳು, ಸಂಸ್ಕೃತಿ ಮತ್ತು ಆಚರಣೆಗಳು ಹಾಗೂ ವಿಚಾರ ಧಾರೆಗಳನ್ನು ಗೌರವಿಸುವ ಅಗತ್ಯವಿದೆ ಎಂದು ತಿಳಿಯಲು ಸಹಾಯವಾಗುತ್ತದೆ.

ವಿದ್ಯಾರ್ಥಿಗಳು ಉತ್ತಮ ಪೌರರಾಗಲು ಸಹಾಯ ಮಾಡುತ್ತದೆ: ಅರ್ಥನೀತಿ, ರಾಜ್ಯಶಾಸ್ತ್ರ ಮತ್ತು ಇತಿಹಾಸಗಳಂತಂಹ ಸಾಮಾಜಿಕ ಅಧ್ಯಯನಗಳ ವಿಷಯಗಳು ವಿದ್ಯಾರ್ಥಿಗಳಿಗೆ ರಾಜನೈತಿಕ ವಿಚಾರಧಾರೆಗಳು, ಸಂವಿಧಾನಿಕ ನಿಯಮಗಳು, ಪೌರತ್ವ, ಹಕ್ಕು ಮತ್ತು ಸ್ವಾತಂತ್ರ್ಯಗಳು, ನೈತಿಕತೆ ಮತ್ತು ಸದ್ಗುಣಗಳು, ಸಾಮಾಜಿಕ ವರ್ತನೆಯ ಸಂಹಿತೆಗಳು ಮುಂತಾದವುಗಳ ಬಗ್ಗೆ ಶಿಕ್ಷಣ ನೀಡುತ್ತವೆ. ಇದರಿಂದಾಗಿ ಮಕ್ಕಳು ತಮ್ಮ ತಮ್ಮ ಪಾತ್ರಗಳ ಬಗ್ಗೆ, ಜವಾಬ್ದಾರಿಗಳ ಬಗ್ಗೆ, ವಿಶೇಷವಾಗಿ ಸಾಮಾಜಿಕ ಮತ್ತು ನಾಗರಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ, ಜಾಗೃತಿ ಮೂಡುವಂತಾಗುತ್ತದೆ. ಸೂಕ್ತ ಮಾಹಿತಿ ಮತ್ತು ಜ್ಞಾನ, ಕೌಶಲ್ಯಗಳು ಮತ್ತು ಅಭಿವೃತ್ತಿಗಳನ್ನು ಒದಗಿಸುವುದರ ಮೂಲಕ ಸಾಮಾಜಿಕ ಅಧ್ಯಯನಗಳು ವಿದ್ಯಾರ್ಥಿಗಳು ಸಮಾಜದ ಕ್ರಿಯಾಶೀಲ ಜವಾಬ್ಧಾರಿಯುತ ಮತ್ತು ಚಿಂತನಶೀಲ ಸದಸ್ಯರಾಗಿ ಬೆಳೆಯುವಂತೆ ಅವರನ್ನು ಸಜ್ಜುಗೊಳಿಸುತ್ತದೆ.

ಇಂದಿನ ಜಾಗತಿಕ ಆರ್ಥಿಕತೆ ಮತ್ತು ಜಗತ್ತಿನಲ್ಲಿ, ತಕ್ಷಣದ ಸಮುದಾಯದ ಪರಿಚಯವಾದರೆ ಮಾತ್ರ ಸಾಲದು. ವಿದ್ಯಾರ್ಥಿಗಳು ಸಾಮಾಜಿಕ ಸಮುದಾಯದ ಅಧ್ಯಯನಗಳ ಶಿಕ್ಷಣದ ಅಂಗಭಾಗಗಳಂತಿರುವ ಬೃಹತ್ ಸರಣಿಯ ಬಗ್ಗೆ ಅರಿವನ್ನು ಪಡೆಯುತ್ತಾರೆ. ಜಗತ್ತಿನ ಜನಸಂಖ್ಯೆಯನ್ನು ಐತಿಹಾಸಿಕ ಮತ್ತು ಸಮಾಜಶಾಸ್ತ್ರೀಯ ದೃಷ್ಟಿಗಳಿಂದ ಅಧ್ಯಯನ ಮಾಡುವುದರಿಂದ ವಿದ್ಯಾರ್ಥಿಗಳು ಸ್ವತಃ ತಮ್ಮ ಬಗೆಗೆ ಅರಿತುಕೊಳ್ಳುವುದರ ಜೊತೆಗೆ ಈ ಬೃಹತ್ ಪ್ರಪಂಚದಲ್ಲಿ ತಮ್ಮ ಪಾತ್ರವೇನೆಂದು ತಿಳಿದುಕೊಳ್ಳುತ್ತಾರೆ. ಇದಲ್ಲದೆ, ಅವರು ತಮ್ಮ ವೃತ್ತಿ ಜೀವನ ಪ್ರವೇಶಿಸಿದಾಗ ವಿಭಿನ್ನ ಸಾಂಸ್ಕೃತಿಕ ನೀತಿನಿಯಮ ಮಾನದಂಡಗಳ ತಕ್ಕಮಟ್ಟಿಗಿನ ಅರಿವಿನೊಂದಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಚೆನ್ನಾಗಿ ಸಜ್ಜಾಗಿರುತ್ತಾರೆ.

ಸಾಮಾಜಿಕ ಅಧ್ಯಯನಗಳ ತರಗತಿಗಳು ವಿದ್ಯಾರ್ಥಿಗಳನ್ನು ಒಳಗೊಂಡಂತೆ ಪೌರನೊಬ್ಬನಿಗೆ ಅವರವರ ಸಮುದಾಯಗಳಲ್ಲಿ ಜವಾಬ್ದಾರಿಗಳೇನು ಎಂದು ಅರ್ಥಮಾಡಿಕೊಳ್ಳಲು ನೆರವಾಗುತ್ತವೆ. ಸಾಮಾಜಿಕ ಅಧ್ಯಯನಗಳ ಮೂಲಕ ವಿದ್ಯಾರ್ಥಿಗಳು ಸರ್ಕಾರದ ಎಲ್ಲ ಸ್ತರಗಳು ಹೇಗೆ ಕಾರ್ಯ ಮಾಡುತ್ತವೆ ಎಂದು ಕಲಿಯುತ್ತಾರಲ್ಲದೆ ಕಾನೂನಾತ್ಮಕ ಹಾಗೂ ರಾಜಕೀಯ ಭೂ ದೃಶ್ಯದ ರೂಪಣದಲ್ಲಿ ಪ್ರಜೆಗಳ ಪಾತ್ರವೇನೆಂಬುದರ ಬಗ್ಗೆ ಪರಿಚಿತರಾಗುತ್ತಾರೆ. ವಿದ್ಯಾರ್ಥಿಗಳು ಭಿನ್ನ ಆಡಳಿತ ಶೈಲಿಗಳನ್ನು ಹೋಲಿಸಿ ಅವುಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವಲ್ಲಿಯೂ ಸಾಮರ್ಥ್ಯವನ್ನು ಗಳಿಸುತ್ತಾರೆ.

ಆದ್ದರಿಂದ ಶಾಲಾ ಪಠ್ಯಕ್ರಮದಲ್ಲಿ ಸಾಮಾಜಿಕ ವಿಜ್ಞಾನವು ಒಂದು ಪಠ್ಯವಿಷಯವಾಗಿ ಸೇರಿಸುವುದರ ಪ್ರಾಧಾನ್ಯತೆಯನ್ನು ಈ ಕೆಳಗಿನಂತೆ ಸಾರಾಂಶೀಕರಿಸಬಹುದು.

- ಪ್ರಜಾಪ್ರಭುತ್ವದ ದಕ್ಷ ಪೌರರನ್ನು ರೂಪಿಸಲು ನೆರವಾಗುತ್ತದೆ.
- ರಾಷ್ಟ್ರೀಯ ದೃಷ್ಟಿಕೋನವನ್ನು ಇದು ವಿಕಾಸಗೊಳಿಸುತ್ತದೆ.
- ಇದು ಮಾನವನನ್ನು ಕರ್ತವ್ಯನಿಷ್ಠನನ್ನಾಗಿಸುತ್ತದೆ.
- ಇದು ಪ್ರಗತಿಪಥವನ್ನು, ಅಭಿವೃದ್ಧಿ ಮಾರ್ಗವನ್ನು ತಿಳಿಸಿಕೊಡುತ್ತದೆ.
- ಇದು ಸಮಾಜದ ನೈತಿಕ ಮೌಲ್ಯವನ್ನು ಹೆಚ್ಚಿಸುತ್ತದೆ.
- ಮುಖ್ಯ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನೆರವು ನೀಡುತ್ತದೆ.

- ಇದು ಕಲ್ಪನಾಶಕ್ತಿ, ವಿಮರ್ಶಾತ್ಮಕ ಚಿಂತನೆಯ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುತ್ತದೆ.
- ಇದು ಮಾನವ ಸಮಾಜಕ್ಕೆ ಪ್ರಜೆಗಳ ಕರ್ತವ್ಯಗಳೇನೆಂದು ಸ್ಪಷ್ಟಪಡಿಸುತ್ತದೆ.
- ಇದು ಇಚ್ಛಿತ ಅಭಿವೃದ್ಧಿಗಳನ್ನು ಬೆಳೆಸುತ್ತದೆ.
- ಇದು ಮಾನವೀಯ ಗುಣಗಳನ್ನು ಬೆಳೆಸುತ್ತದೆ.
- ಸೂಕ್ತ ಸಾಮಾಜಿಕ ವರ್ತನೆಗಳಿಂದ ಪ್ರೋತ್ಸಾಹ ದೊರೆಯುತ್ತದೆ.
- ಇದು ತರ್ಕ ಮಾಡುವ ಶಕ್ತಿಯನ್ನು ವಿಕಸನಗೊಳಿಸುತ್ತದೆ.
- ಭ್ರಾತೃತ್ವದ ಭಾವನೆಯನ್ನು ಇದು ಮೂಡಿಸುತ್ತದೆ.
- ವ್ಯಕ್ತಿಯನ್ನು ಪರಿಸರದ ಅಗತ್ಯಗಳಿಗೆ ತಕ್ಕಂತೆ ರೂಪಿಸಲು ಇದು ಸಹಾಯ ಮಾಡುತ್ತದೆ.
- ಇದು ಒಳ್ಳೆಯ ಅಭ್ಯಾಸಗಳನ್ನು, ಸಾಮಾಜಿಕ ದಕ್ಷತೆಯನ್ನು ವರ್ಧಿಸುತ್ತದೆ.
- ಇದು ವಿದ್ಯಾರ್ಥಿಗಳನ್ನು ಸಮಾಜೀಕರಿಸುತ್ತದೆ.
- ಇದು ಸಾಮಾಜಿಕ ಮತ್ತು ನೈತಿಕ ಮೌಲ್ಯಗಳನ್ನು ಬೆಳೆಸುತ್ತದೆ.

## ಭಾಷೆಗಳು

ಕೋರ್ಸ್ 4.1 ರಲ್ಲಿ ನೀವು ಶಾಲಾ ಪಠ್ಯಕ್ರಮದಲ್ಲಿ ಭಾಷೆಯ ಪ್ರಾಮುಖ್ಯವೇನೆಂದು ಈಗಾಗಲೇ ಅಧ್ಯಯನ ಮಾಡಿರುವಿರಿ. ಭಾಷೆ ಜೀವನದ ಒಂದು ಅನಿವಾರ್ಯ ಅಂಗ. ಅಂತೆಯೇ ಪಠ್ಯಕ್ರಮದ ಭಾಗವೂ ಹೌದು.

ಭಾಷೆ ಕಲಿಕೆಯಲ್ಲಿ ಪ್ರಮುಖ ಪಾತ್ರವಹಿಸುವುದೆಂದು ಪರಿಗಣಿಸಲಾಗಿದೆ. ವಿಷಯ ಕ್ಷೇತ್ರ ಯಾವುದೇ ಆಗಿರಲಿ ವಿದ್ಯಾರ್ಥಿಗಳು ಅವರು ತಾವು ಕಲಿಯುವುದರ ಬಗ್ಗೆ ಕೇಳಿದಾಗ, ಮಾತನಾಡಿದಾಗ, ಓದಿದಾಗ, ಬರೆದಾಗ ಹೊಸ ಪರಿಕಲ್ಪನೆಗಳನ್ನು ಹೃದ್ಗತ ಮಾಡಿಕೊಳ್ಳುತ್ತಾರೆ. ಮಾತು ಮತ್ತು ಬರಹ ಚಿಂತನಾ ಪ್ರಕ್ರಿಯೆಯನ್ನು ಪ್ರತಿಬಿಂಬಿಸುತ್ತದೆ. ಭಾಷೆಯ ಮೂಲಕವೇ ವಿದ್ಯಾರ್ಥಿಗಳು ಕಲಿಯುವುದು. ಆದ್ದರಿಂದ ಭಾಷೆಯಲ್ಲಿ ದುರ್ಬಲರಾಗಿದ್ದರೆ ಕಲಿಕೆಯಲ್ಲಿಯೂ ವಿದ್ಯಾರ್ಥಿಗಳು ದುರ್ಬಲರಾಗಿರುತ್ತಾರೆ.

ಭಾಷೆ ಶಾಲಾ ಪಠ್ಯಕ್ರಮದಲ್ಲಿ ಮುಖ್ಯ ಸ್ಥಾನವನ್ನು ಹೊಂದಿದೆ. ಈ ಅಂಶವು ಪ್ರಾಥಮಿಕ ಸ್ತರದಲ್ಲಿ ಇನ್ನೂ ಮುಖ್ಯ. ಏಕೆಂದರೆ, ಈ ಹಂತದಲ್ಲಿ ಮಗು ಮೊದಲ ಬಾರಿಗೆ ಔಪಚಾರಿಕವಾಗಿ ಭಾಷೆಯ ಮೂಲಕವೇ ಶಿಕ್ಷಣವನ್ನು ಪಡೆಯುತ್ತದೆ. ಈ ಹಂತಕ್ಕೆ ಮೊದಲು ಅದು ಮನೆಯಲ್ಲಿಯೇ ಭಾಷೆಯನ್ನು ಅನೌಪಚಾರಿಕವಾಗಿ ಕಲಿಯುತ್ತಿರುತ್ತದೆ. ಮಗು ಇನ್ನಿತರ ವಿಷಯಗಳನ್ನು ಭಾಷೆಯ ಮೂಲಕವೇ ಕಲಿಯುವುದರಿಂದ, ಭಾಷೆಯಲ್ಲಿ ಕೊಡಲಾಗುವ ಔಪಚಾರಿಕ ಶಿಕ್ಷಣ ಮಗು ಇತರ ಪಠ್ಯಕ್ಷೇತ್ರಗಳಲ್ಲಿ ಕಲಿಯಲು ಸಾಧ್ಯವಾಗುತ್ತದೆ. ಇದಲ್ಲದೆ, ಶಾಲೆಯಲ್ಲಿ ಇತರ ವಿಷಯಗಳನ್ನು ಕಲಿಯಲು ಮಾಧ್ಯಮ ರೂಪದಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿರುವ ಭಾಷೆಯು ಮಗುವಿಗೆ ಸಂವಹನ ಮತ್ತು ತನ್ನನ್ನು ತಾನು ಅಭಿವ್ಯಕ್ತಗೊಳಿಸಿಕೊಳ್ಳುವಿಕೆಯಲ್ಲಿಯೂ ನೆರವಾಗುತ್ತದೆ. ಮಕ್ಕಳು ಬೆಳೆದಂತೆ ಅವರು ತಮ್ಮ ವಿಚಾರಗಳನ್ನು, ಭಾವನೆಗಳನ್ನು ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಾಗುತ್ತದೆ. ಈ ಸ್ವಯಂ–ಅಭಿವ್ಯಕ್ತಿ ಮಗುವಿನ ಸ್ವಂತಿಕೆ, ಅದರ ವ್ಯಕ್ತಿತ್ವ ಮತ್ತು ವೈಯಕ್ತಿಕತೆಗಳಿಗೆ ಆಧಾರವಾಗಿದೆ. ಹೀಗೆ, ಭಾಷೆಯು ಕಲಿಕಾರ್ಥಿಗಳಿಗೆ ಈ ಕೆಳಗಿನವುಗಳಲ್ಲಿ ನೆರವಿಗೆ ಬರುತ್ತದೆ.

1. ಅವರ ಶಾಲಾ ಪಠ್ಯವಿಷಯಗಳನ್ನು ಕಲಿಯುವುದರಲ್ಲಿ,
2. ಶಾಲೆಯಲ್ಲಿ ಮತ್ತು ಶಾಲೆಯ ಹೊರಗೆ ಇತರರೊಂದಿಗಿನ ಸಂವಹನದಲ್ಲಿ,
3. ಅವರ ದೈನಂದಿನ ಜೀವನದ ಪರಿಸ್ಥಿತಿಗಳಲ್ಲಿ,
4. ಅನ್ಯ ಕ್ಷೇತ್ರಗಳಲ್ಲಿನ ಪರಿಕಲ್ಪನೆಗಳನ್ನು ಕಲಿಯುವಲ್ಲಿ.

ಸರಿಯಾದ ಭಾಷಾ ಕಲಿಕೆ ಎಂದರೆ ನಾಲ್ಕು ಮೂಲಭೂತ ಭಾಷಾ ಕೌಶಲ್ಯಗಳನ್ನು ಕಲಿಯುವುದೇ ಆಗಿದೆ. ಅಂದರೆ ಶ್ರವಣ (ಕೇಳುವಿಕೆ), ಮಾತು, ಓದು ಮತ್ತು ಬರಹ. ಭಾಷೆಯ ಕಲಿಕೆ ಪಠ್ಯಕ್ರಮದಾದ್ಯಂತ ವಿದ್ಯಾರ್ಥಿಗಳ ಕಾರ್ಯಸಾಧನೆಯನ್ನು ಬಹಳವಾಗಿ ಹೆಚ್ಚಿಸುವುದು ಕಂಡುಬಂದಿದೆ. ಭಾಷಾ ಕಲಿಕೆ ವಿದ್ಯಾರ್ಥಿಯ ಸಂಜ್ಞಾನಾತ್ಮಕ ಕಾರ್ಯಕ್ಷಮತೆಯನ್ನು, ಸಮಸ್ಯಾ ಪರಿಹಾರ ಕೌಶಲ್ಯವನ್ನು ಸೇರಿದಂತೆ ಆದರೆ ಇದಕ್ಕೆ ಮಾತ್ರ ಸೀಮಿತವಾಗಿರದೆ, ಸುಧಾರಿಸುತ್ತದೆಯಲ್ಲದೆ, ಭಾಷಿಕ ಮತ್ತು ಅವಕಾಶೀಯ ಸಾಮರ್ಥ್ಯಗಳನ್ನು, ಸ್ಮರಣ ಕಾರ್ಯವನ್ನು ಸುಧಾರಿಸುತ್ತದೆ ಮತ್ತು ಸೃಜನಾತ್ಮಕ ಚಿಂತನಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

ಆದ್ದರಿಂದ, ಶಾಲಾ ಪಠ್ಯಕ್ರಮದಲ್ಲಿ ಭಾಷೆಯ ಪಾತ್ರದ ಪ್ರಾಧಾನ್ಯತೆಯನ್ನು ಈ ಕೆಳಗಿನಂತೆ ಸಾರಾಂಶೀಕರಿಸಬಹುದು.

- ಇದು ಜೀವನದಲ್ಲಿ ಬೇಕಾದ ಮೂಲಭೂತ ಕೌಶಲ್ಯಗಳನ್ನು ಬೆಳೆಸುತ್ತದೆ. ಅಂದರೆ, ಮಾತನಾಡುವಿಕೆ, ಓದು ಮತ್ತು ಬರಹ (ಭಾಷಣ, ವಾಚನ ಮತ್ತು ಲೇಖನ).
- ಇದು ಪರಿಕಲ್ಪನೆಗಳನ್ನು ವಿಕಾಸಗೊಳಿಸುತ್ತದೆ.
- ಇದು ಚಿಂತನೆಯ ಮಾಧ್ಯಮವಾದ್ದರಿಂದ ಚಿಂತನೆಯನ್ನು ಇದು ಪ್ರೋತ್ಸಾಹಿಸುತ್ತದೆ. ಇದು ಉನ್ನತ ಮಟ್ಟದ ಚಿಂತನಾ ಕೌಶಲ್ಯಗಳ ಒಂದು ಅಂಗವಾಗಿದೆ.
- ಇದು ದೈನಂದಿನ ಜೀವನದ ಒಂದು ಬಹುಮುಖ್ಯ ಉಪಕರವಾಗಿದೆ.
- ಶಾಲಾ ಪಠ್ಯಕ್ರಮ, ವಿವಿಧ ವ್ಯಾಸಂಗ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಮೂಲಭೂತ ಮಾಧ್ಯಮವಾಗಿದೆ.
- ವಿಷಯವೊಂದನ್ನು ಅರ್ಥೈಸಲು ಇದು ಒಂದು ಉಪಕರಣವಾಗಿದೆ.
- ಇದು ವಿದ್ಯಾರ್ಥಿಗಳ ಕಲಿಕೆಯ ಫಲಿತಗಳನ್ನು ಮೌಲ್ಯಮಾಪನ ಮಾಡಲು ಬೇಕಾದ ಶೋಧಕವಾಗಿದೆ.

## 1.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

ನೀವು ಗಣಿತ, ವಿಜ್ಞಾನ, ಸಾಮಾಜಿಕ ವಿಜ್ಞಾನ ಮತ್ತು ಭಾಷೆ ಮುಂತಾದ ಭಿನ್ನಭಿನ್ನ ಶಾಲಾ ಪಠ್ಯವಿಷಯಗಳ ಪ್ರಾಧಾನ್ಯತೆ ಏನೆಂದು ಅಧ್ಯಯನ ಮಾಡಿದ್ದೀರಿ. ನೀವು ಇವುಗಳಲ್ಲಿ ಒಂದು ವಿಷಯವನ್ನು ಬೋಧಿಸುತ್ತಿದ್ದೀರಿ. ನೀವು ಬೋಧಿಸಿದ ಪಠ್ಯವಿಷಯದ ಮೂಲಕ ನಿಮಗೆ ಕಂಡುಬಂದ ಫಲಿತವೇನೆಂದು ಉಲ್ಲೇಖಿಸಿ. ಆ ಫಲಿತ ಈಗಾಗಲೇ ಚರ್ಚಿಸಿದವುಗಳಲ್ಲಿ ಒಂದಾಗಿರಬಹುದು ಅಥವಾ ಇದುವರೆಗೆ ಚರ್ಚಿಸದೇ ಇರದ ಫಲಿತವಾಗಿರಬಹುದು. ನಿದರ್ಶನಗಳನ್ನು ಉದಾಹರಣೆಗಳನ್ನು ಉಲ್ಲೇಖಿಸಿರಿ.

## 1.5.4. ಸಾರಾಂಶಿಸೋಣ

- ಶಾಲೆಯಲ್ಲಿ ಹೇಳಿಕೊಡುವ ಪಠ್ಯವಿಷಯಗಳು ಬಹಳ ಮುಖ್ಯವಾದವುಗಳು. ಏಕೆಂದರೆ, ಇವು ಶಿಕ್ಷಣದ ಉದ್ದೇಶಗಳನ್ನು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಸಾಧಿಸಲು ಸಹಾಯ ಮಾಡುತ್ತವೆ. ವಿದ್ಯಾರ್ಥಿಗಳು ಶಾಲಾ ಪಠ್ಯವಿಷಯಗಳನ್ನು ಅನಿವಾರ್ಯವಾಗಿ ಕಲಿಯುವುದಕ್ಕೆ ಕಾರಣೀಭೂತವಾದ ಕೆಲವು ಅಂಶಗಳು ಹೀಗಿವೆ: ಇವು ಗುಣಾತ್ಮಕ ಜೀವನವನ್ನು ಬಾಳಲು ಬೇಕಾದ ಕೌಶಲ್ಯಗಳು ಮತ್ತು ದಕ್ಷತೆಗಳಿಂದ ವ್ಯಕ್ತಿಯನ್ನು ಸಜ್ಜುಗೊಳಿಸುತ್ತವೆ. ಪ್ರತಿನಿತ್ಯದ ಜೀವನಕ್ಕೆ ಅಗತ್ಯವಾದ ಸಂವಹನ ಸಮಸ್ಯಾ ಪರಿಹಾರಕ್ಕೆ ಬೇಕಾದ ವಿಶ್ಲೇಷಣಾತ್ಮಕ ಚಿಂತನೆ, ಅವು ಮೂಡಿಸುವ, ವ್ಯಕ್ತಿಯು ಜೀವಿಸುವ ಸುತ್ತಮುತ್ತಲ ಪರಿಸರದ ಬಗೆಗೆ ಜಾಗೃತಿ.

- ಶಾಲೆಯಲ್ಲಿ ಬೋಧಿಸಲಾಗುವ ಗಣಿತ, ವಿಜ್ಞಾನ, ಭಾಷೆ ಮತ್ತು ಸಾಮಾಜಿಕ ವಿಜ್ಞಾನಗಳಂತಹ ಪಠ್ಯವಿಷಯಗಳು ನಿರ್ದಿಷ್ಟ ಉದ್ದೇಶಗಳನ್ನು ಸಾದಿಸಲು ನೆರವಾಗುತ್ತವೆ. ಪ್ರತಿಯೊಂದು ವಿಷಯವೂ ತನ್ನದೇ ಆದ ರೀತಿಯಲ್ಲಿ ಕೊಡುಗೆ ನೀಡುತ್ತದೆ.

## 1.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು– 1 ಮತ್ತು 2

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

ನಿಮ್ಮ ಅನುಭವಗಳನ್ನು ನಿಮ್ಮ ಸಹೋದ್ಯೋಗಿಗಳೊಡನೆ ಹಂಚಿಕೊಳ್ಳಿರಿ.

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –2

ನಿಮ್ಮ ಅನುಭವಗಳನ್ನು ನಿಮ್ಮ ಸಹೋದ್ಯೋಗಿಗಳೊಡನೆ ಹಂಚಿಕೊಳ್ಳಿರಿ.

## 1.5.6. ಘಟಕಾಂತ್ಯ ಅಭ್ಯಾಸಗಳು

1. ಶಾಲಾ ಪಠ್ಯವಿಷಯಗಳ ಪ್ರಾಮುಖ್ಯತೆಯನ್ನು ವಿವರಿಸಿರಿ.
2. ಶಾಲಾ ಪಠ್ಯಕ್ರಮದಲ್ಲಿ ಗಣಿತ, ವಿಜ್ಞಾನ, ಸಾಮಾಜಿಕ ವಿಜ್ಞಾನ ಮತ್ತು ಭಾಷೆ – ಇವುಗಳ ಪಾತ್ರವೇನೆಂದು ವಿವರಿಸಿರಿ.

## 1.5.7. ಪರಾಮರ್ಶನ ಸೂಚಿ


1. Subjects and academic disciplines. In A. Luke, A.Woods & K.Weir(Eds.), Curriculum, Syllabus design and equity: A primer and model. London: Routledge Publication.
2. Ivor F. Goodson and Colin J. Marsh (1996). Studying school subjects – Aguide.London: Routledge Publication.
3. https://academicpartnerships.uta.edu/articles/education/importance-of-science-education.aspx
4. https://www.piday.org/10-reasons-why-math-is-important-in-life/
5. https://www.progressiveteacher.in/the-importance-of-social-studies-in-the-school-curriculum/
6. https://www.orindaacademy.org/2014/07/10/the-importance-of-social-studies-in-schools/
7. http://egyankosh.ac.in/bitstream/123456789/7796/1/Unit-1.pdf


*********

# ಬ್ಲಾಕ್ 1 : ಜ್ಞಾನಶಿಸ್ತುಗಳು ಮತ್ತು ಶಾಲಾ ವಿಷಯಗಳಿಗೆ ಪೀಠಿಕೆ

## ಘಟಕ 6: ಶಾಲಾ ವಿಷಯಗಳ ಸ್ವರೂಪ ಮತ್ತು ಅವುಗಳಲ್ಲಿ ಅಡಕವಾಗಿರುವ ವಿಷಯಗಳು

### ಘಟಕದ ರಚನೆ


1.6.1. ಕಲಿಕೆಯ ಉದ್ದೇಶಗಳು

1.6.2. ಪೀಠಿಕೆ

1.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.6.3.1. ಜ್ಞಾನಶಿಸ್ತುಗಳ ನಿರ್ದಿಷ್ಟ ಪ್ರಕ್ರಿಯೆಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

1.6.3.2. ಶಾಲಾ ವಿಷಯಗಳು ಒಳಗೊಂಡಿರುವ ವಿಷಯಗಳು: ಭಾಷೆ, ಗಣಿತ, ಸಮಾಜ ವಿಜ್ಞಾನ ಮತ್ತು ವಿಜ್ಞಾನ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

1.6.3.3. ಶಾಲಾ ವಿಷಯಗಳು ಒಳಗೊಂಡಿರುವ ವಿಷಯಗಳು: ದೈಹಿಕ ಶಿಕ್ಷಣ, ಲಲಿತ ಕಲಾ ಶಿಕ್ಷಣ, ಶಾಂತಿ ಶಿಕ್ಷಣ ಮತ್ತು ಮೌಲ್ಯ ಶಿಕ್ಷಣ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–3

1.6.4. ಸಾರಾಂಶಿಸೋಣ

1.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

1.6.6. ಘಟಕಾಂತ್ಯ ಅಭ್ಯಾಸಗಳು

1.6.7. ಪರಾಮರ್ಶನ ಸೂಚಿ


### 1.6.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಭಾಷೆ, ಗಣಿತ, ಸಮಾಜ ವಿಜ್ಞಾನ ಮತ್ತು ವಿಜ್ಞಾನ–ಇವು ಒಳಗೊಂಡ ವಿಷಯಗಳನ್ನು ವಿವರಿಸುವರು;
- ದೈಹಿಕ ಶಿಕ್ಷಣ, ಲಲಿತ ಕಲಾ ಶಿಕ್ಷಣ, ಶಾಂತಿ ಶಿಕ್ಷಣ ಮತ್ತು ಮೌಲ್ಯ ಶಿಕ್ಷಣ– ಇವು ಒಳಗೊಂಡ ವಿಷಯಗಳನ್ನು ವಿವರಿಸುವರು; ಮತ್ತು
- ಜ್ಞಾನಶಿಸ್ತಿಗನುಗುಣವಾಗಿ ರೂಪುಗೊಂಡ ಶಾಲಾ ವಿಷಯಗಳ ಪ್ರಕ್ರಿಯೆಗಳನ್ನು ಗುರುತಿಸುವರು;

### 1.6.2. ಪೀಠಿಕೆ

ಶಾಲಾ ವಿಷಯಗಳು ನಮಗೆ ನಾವು ಇಂದು ಕಾಣುವ ರೀತಿಯಲ್ಲಿ ದೊರಕಿದುದಲ್ಲ; ಅವು ಶೈಕ್ಷಣಿಕ ಶಿಸ್ತುಗಳ ನೇರ ರೂಪಾಂತರಗಳೂ ಅಲ್ಲ. ಶಾಲಾ ವಿಷಯಗಳಿಗೂ ಶೈಕ್ಷಣಿಕ ಶಿಸ್ತುಗಳು ಮತ್ತು ಆನ್ವಯಿಕ ಕ್ಷೇತ್ರಗಳಿಗೂ ವಿಭಿನ್ನವಾದ ವಿವಿಧ ರೀತಿಯ ಸಂಬಂಧಗಳಿವೆ. ಶಾಲಾ ವಿಷಯಗಳು ಮಾನವ ರಚಿತವಾದವುಗಳು. ಸಾಮಾಜಿಕ,

ಆರ್ಥಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಾಸ್ತವಗಳು ಮತ್ತು ಅಗತ್ಯಗಳಿಗನುಗುಣವಾಗಿ, ಉದ್ದೇಶಪೂರ್ವಕವಾಗಿ ಅವುಗಳನ್ನು ರೂಪಿಸಲಾಗಿದೆ. ಅನನ್ಯವಾದ ರೀತಿಯಲ್ಲಿ ಉದ್ದೇಶಗಳ ಆಧಾರದ ಮೇಲೆ ಕಟ್ಟಲ್ಪಟ್ಟ ಶೈಕ್ಷಣಿಕ ಉದ್ಯಮದ ಅಂಶಗಳಿವು. ಶಿಕ್ಷಣದ ಉದ್ದೇಶಗಳ ಸಾಧನೆಗೆ ಶೈಕ್ಷಣಿಕ ಕಲ್ಪನೆಗಳ ಮೂಲಕ ವಿನ್ಯಾಸಗೊಂಡಿರುವಂತಹವು. ಒಂದು ಶಾಲಾ ವಿಷಯದ ರೂಪುಗೊಳ್ಳುವಿಕೆ ಅದರ ಅಂತರ್ ವಿಷಯದ ಕುರಿತಾದ ಒಂದು ತಾತ್ವಿಕತೆಯನ್ನು ಒಳಗೊಳ್ಳುತ್ತದೆ. ಅದೆಂದರೆ, ಆ ವಿಷಯಕ್ಕೆ ವಿಶಿಷ್ಟವಾದ ಮತ್ತು ಶೈಕ್ಷಣಿಕ ಉದ್ದೇಶಗಳಿಗೆ ಅನುಗುಣವಾದ ವಿಷಯಗಳ ಆಯ್ಕೆ, ಕಟ್ಟುವಿಕೆ ಮತ್ತು ರೂಪಾಂತರದ ವಿಶಿಷ್ಟ ಕ್ರಮ. ಹೀಗಾಗಿ ಒಂದು ಶಾಲಾವಿಷಯದ ಒಳವಿಷಯಗಳನ್ನು ಅರಿತುಕೊಳ್ಳುವುದೆಂದರೆ ಕೇವಲ ಅದರೊಳಗಿನ ವಿಷಯಗಳನ್ನು ಗ್ರಹಿಸುವುದಕ್ಕಿಂತ ಹೆಚ್ಚಿನದನ್ನು ಒಳಗೊಳ್ಳುತ್ತದೆ. ಇದು ಆಯಾ ವಿಷಯಗಳೊಳಗೆ ಅಡಗಿಕೊಂಡಿರುವ ಶೈಕ್ಷಣಿಕ ಅಂಶಗಳನ್ನು ಅನಾವರಣಗೊಳಿಸುವುದಕ್ಕೆ ಅತಿ ಮುಖ್ಯವಾದ ತಾತ್ವಿಕ ಅಂಶಗಳನ್ನು ಅರ್ಥಮಾಡಿಕೊಳ್ಳುವ ಅಂಶವನ್ನೂ ಒಳಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಶಾಲಾ ವಿಷಯಗಳ ಶೈಕ್ಷಣಿಕ ಅಂಶಗಳನ್ನು ಗ್ರಹಿಸುತ್ತಲೇ ಅವು ಒಳಗೊಂಡಿರುವ ಮೂಲ ಅಂಶಗಳನ್ನು ಈ ಘಟಕದಲ್ಲಿ ವಿಚಾರಮಾಡೋಣ.

## 1.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.6.3.1. ಜ್ಞಾನಶಿಸ್ತುಗಳ ನಿರ್ದಿಷ್ಟ ಪ್ರಕ್ರಿಯೆಗಳು

ಅಧ್ಯಾಪಕರು ಶಾಲಾವಿಷಯಗಳು ಒಳಗೊಂಡಿರುವ ಅಂಶಗಳನ್ನು ತಿಳಿದುಕೊಂಡರೆ ಸಾಕಾಗುವುದಿಲ್ಲ. ಅದರ ಜೊತೆಗೆ ಆಯಾ ಅಂಶಗಳು ಅನಾವರಣಗೊಳ್ಳುವ ಪ್ರಕ್ರಿಯೆಗಳನ್ನೂ ತಿಳಿಯಬೇಕು. ವಿಜ್ಞಾನ ಅಧ್ಯಾಪಕರು ವಿಜ್ಞಾನದ ವಿಷಯಗಳು ಅನಾವರಣಗೊಳ್ಳುವ ಪ್ರಕ್ರಿಯೆಗಳನ್ನು ತಿಳಿಯದಿದ್ದರೆ ಅದನ್ನು ಬೋಧಿಸುವ ವಿಧಾನವನ್ನು ತಿಳಿದುಕೊಳ್ಳುವುದು ಕಷ್ಟವಾಗುತ್ತದೆ. ಈ ಪ್ರಕ್ರಿಯೆಗಳು ಆಯಾ ಜ್ಞಾನಶಿಸ್ತಿನ ವಿಷಯಗಳು ಯಾವ ಪ್ರಕ್ರಿಯೆಗಳ ಮೂಲಕ ಬೆಳಕಿಗೆ ಬಂದವು ಎಂಬುದನ್ನು ಹೇಳುತ್ತವೆ. ಉದಾಹರಣೆಗೆ, ವಿಜ್ಞಾನದ ವಿಷಯಗಳು ಅನಾವರಣಗೊಂಡ ಮಾರ್ಗಗಳು ಯಾವುವು? ಪ್ರಮುಖವಾಗಿ ವೀಕ್ಷಣೆ ಮತ್ತು ಪ್ರಯೋಗಗಳ ಮೂಲಕ ವಿಜ್ಞಾನದ ವಿಷಯಗಳು ಬೆಳಕಿಗೆ ಬಂದವು. ಇವೇ ವಿಜ್ಞಾನದ ಪ್ರಕ್ರಿಯೆಗಳು. ಹೀಗೆ ಪ್ರತಿ ಜ್ಞಾನಶಿಸ್ತು ಅದರದ್ದೇ ಆದ ಪ್ರಕ್ರಿಯೆಗಳನ್ನು ಹೊಂದಿರುತ್ತದೆ. ಅವುಗಳ ಅರಿವು ಆಯಾ ವಿಷಯಗಳನ್ನು ಮಕ್ಕಳಿಗೆ ಯಾವ ರೀತಿಯಲ್ಲಿ ಮನಗಾಣಿಸಬೇಕು ಎಂಬ ಅಂಶದ ಕುರಿತು ಬೆಳಕು ಚೆಲ್ಲುತ್ತವೆ. ಆದ್ದರಿಂದ ವಿವಿಧ ಶಾಲಾ ವಿಷಯಗಳ ಪ್ರಕ್ರಿಯೆಗಳನ್ನು ತಿಳಿಯೋಣ.

**ವಿಜ್ಞಾನದ ಪ್ರಕ್ರಿಯೆಗಳು**

- ಸ್ವಾಭಾವಿಕ ವಿದ್ಯಮಾನದ ವಿಮರ್ಶಾತ್ಮಕ ವೀಕ್ಷಣೆ(ಸೇಬು ಕೆಳಗೆ ಹೇಗೆ ಮತ್ತು ಏಕೆ ಬಿತ್ತು ಎಂದು ನ್ಯೂಟನ್ ಆಲೋಚಿಸಿದುದನ್ನು ನೆನಪಿಸಿಕೊಳ್ಳಿ);
- ವೀಕ್ಷಿಸಬಹುದಾದ ವಿದ್ಯಮಾನಗಳ ಕುರಿತ ಶೋಧಗಳನ್ನು ಬೆಳೆಸುವುದು;
- ವೈಜ್ಞಾನಿಕ ವಿಚಾರಗಳು ಮತ್ತು ಭೌತಿಕ ವಿದ್ಯಮಾನಗಳ ನಡುವಿನ ಬೆಸುಗೆಯನ್ನು, ಸಹಸಂಬಂಧವನ್ನು ಸ್ಥಾಪಿಸುವುದು;
- ವೈಜ್ಞಾನಿಕ ಪ್ರಯೋಗಗಳಲ್ಲಿ ನಿರತರಾಗಿರುವುದು;
- ಘಟನೆಗಳು ಮತ್ತು ವಿಚಾರಗಳ ಸ್ವಾಭಾವಿಕ ಮತ್ತು ವೈಜ್ಞಾನಿಕ ಅನ್ವೇಷಣೆ ಮತ್ತು ಮೌಲ್ಯೀಕರಣ;
- ವೈಜ್ಞಾನಿಕ ಶೋಧಗಳ ಫಲಿತಾಂಶಗಳ ಮೌಲ್ಯೀಕರಣ
- ವೈಜ್ಞಾನಿಕ ಚಿಂತನೆ ಮತ್ತು ಸಂಕೀರ್ಣ ಪರಿಕಲ್ಪನೆಗಳನ್ನು ರೂಪಿಸುವ ಸಾಮರ್ಥ್ಯವನ್ನು ಬೆಳೆಸುವುದು

## ಸಮಾಜ ವಿಜ್ಞಾನದ ಪ್ರಕ್ರಿಯೆಗಳು

ಸಾಮಾಜಿಕ ವಿದ್ಯಮಾನಗಳ–ಉದಾಹರಣೆಗೆ, ಸಾಮಾಜಿಕ ಘಟನೆಗಳು, ಸಮಾಜದ ಮಾನಕಗಳು, ಅಂತರ್ ವ್ಯಕ್ತಿ ಸಂಬಂಧಗಳು, ಅಂತರ್ಗತತೆ, ಲಿಂಗತ್ವ, ಜಾತಿ ಮತ್ತು ವರ್ಗ, ಸಂಸ್ಕೃತಿ ಮತ್ತು ಧರ್ಮ ಇತ್ಯಾದಿ ಸಾಮಾಜಿಕ ವಿಚಾರಗಳು–ವಿಮರ್ಶಾತ್ಮಕ ವೀಕ್ಷಣೆ, ಸಾಮಾಜಿಕ ವಿಚಾರಣೆ, ಶೋಧಗಳಲ್ಲಿ ನಿರತರಾಗಿರುವುದು, ಸಮಾಜದ ಅಡ್ಡ ಸಾಂಸ್ಕೃತಿಕ (ಛಿಡಿಠಿ–ಛಿಣಟಣಡಿಚಿಟ) ಮತ್ತು ಅಡ್ಡವರ್ಗೀಯ (ಅಡಿಠಿ-ಜಭಿಣುಠಟಿಚಿಟ) ಆಯಾಮಗಳನ್ನು ಅರ್ಥಮಾಡಿಕೊಳ್ಳುವುದು. (ವಿವಿಧ ಸಂಸ್ಕೃತಿಗಳ ಜನರ ನಡುವಿನ ಅಂತರ್ ಕ್ರಿಯೆಗಳಿಗೆ ಸಂಬಂಧಿಸಿದುದು ಅಡ್ಡ ಸಾಂಸ್ಕೃತಿಕ ಮತ್ತು ಒಂದು ನಿರ್ದಿಷ್ಟ ಕಾಲಘಟ್ಟದ ದತ್ತಾಂಶಗಳನ್ನಾಧರಿಸಿದುದು ಅಡ್ಡ ವರ್ಗೀಯ)

- ಸಮಾಜದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಭಿನ್ನತೆಗಳನ್ನು ಅರ್ಥಮಾಡಿಕೊಳ್ಳುವುದು
- ವ್ಯಕ್ತಿಯ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಅರ್ಥಮಾಡಿಕೊಳ್ಳುವುದು;
- ಪೌರ ಜವಾಬ್ದಾರಿಗಳು, ನೈತಿಕ ರೂಢಿಗಳು, ಸರ್ವಜನ ಪ್ರೀತಿಯನ್ನು ಅರ್ಥಮಾಡಿಕೊಳ್ಳುವುದು.

## ಗಣಿತದ ಪ್ರಕ್ರಿಯೆಗಳು

- ಮಕ್ಕಳ ದೈನಂದಿಕ ಬದುಕಿಗೆ ಗಣಿತಾತ್ಮಕವಾದ ತತ್ವಗಳನ್ನು ಬೆಸೆಯುವುದು;
- ಮಕ್ಕಳು ತರ್ಕಬದ್ಧವಾಗಿ, ಅನುಗಮನಾತ್ಮಕವಾಗಿ ಮತ್ತು ನಿಗಮನಾತ್ಮಕವಾಗಿ ಆಲೋಚಿಸುವಂತೆ ಮಾಡುವುದು;
- ತಾರ್ಕಿಕ ವಿವೇಚನೆ ಬೆಳೆಸುವುದು ಮತ್ತು ಮಕ್ಕಳು ಗಣಿತಾತ್ಮಕವಾದ ಸಮಸ್ಯೆಗಳನ್ನು ಬಿಡಿಸುವಂತೆ ಮಾಡುವುದು;
- ಗಣಿತಾತ್ಮಕವಾದ ತತ್ವಗಳನ್ನು ವಿಶ್ಲೇಷಿಸುವ ಮತ್ತು ಸಂಶ್ಲೇಷಿಸುವ ಕೌಶಲಗಳನ್ನು ಬೆಳೆಸುವುದು.

## ಭಾಷೆಯ ಪ್ರಕ್ರಿಯೆಗಳು

- ವಿವಿಧ ಸನ್ನಿವೇಶಗಳಲ್ಲಿ ಮಕ್ಕಳು ಅಭಿವ್ಯಕ್ತಿಸುವಂತೆ ಮಾಡುವುದು;
- ಕೇಳುವ, ಮಾತನಾಡುವ, ಓದುವ ಮತ್ತು ಬರೆಯುವ ಕೌಶಲಗಳನ್ನು ಬೆಳೆಸುವುದು;
- ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವಂತೆ ಅದರ ಕುರಿತು ಆಲೋಚಿಸುವಂತೆ ಮಾಡುವುದು;
- ಸಾಹಿತ್ಯವನ್ನು ಪ್ರಶಂಸಿಸುವ ಮತ್ತು ಸೃಷ್ಟಿಸುವ ಕ್ರಿಯೆಗಳಲ್ಲಿ ತೊಡಗುವಂತೆ ಮಾಡುವುದು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

ಕೆಳಗಿನ ಪ್ರಕ್ರಿಯೆಗಳನ್ನು ವಿಷಯವಾರು (ವಿಜ್ಞಾನ–'ವಿ', ಸಮಾಜ ವಿಜ್ಞಾನ–'ಸ.ವಿ', ಗಣಿತ–'ಗ', ಭಾಷೆ–'ಭಾ') ವರ್ಗೀಕರಿಸಿ

1. ಮಕ್ಕಳು ತರ್ಕಬದ್ಧವಾಗಿ, ಅನುಗಮನಾತ್ಮಕವಾಗಿ ಮತ್ತು ನಿಗಮನಾತ್ಮಕವಾಗಿ ಆಲೋಚಿಸುವಂತೆ ಮಾಡುವುದು.
2. ಕೇಳುವ, ಮಾತನಾಡುವ, ಓದುವ ಮತ್ತು ಬರೆಯುವ ಕೌಶಲಗಳನ್ನು ಬೆಳೆಸುವುದು.
3. ಸಮಾಜದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಭಿನ್ನತೆಗಳನ್ನು ಅರ್ಥಮಾಡಿಕೊಳ್ಳುವುದು.
4. ವೀಕ್ಷಿಸಬಹುದಾದ ವಿದ್ಯಮಾನಗಳ ಕುರಿತ ಶೋಧಗಳನ್ನು ನಡೆಸುವುದು.

5. ವ್ಯಕ್ತಿಯ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಅರ್ಥಮಾಡಿಕೊಳ್ಳುವುದು.

6. ಸ್ವಾಭಾವಿಕ ವಿದ್ಯಮಾನದ ವಿಮರ್ಶಾತ್ಮಕ ವೀಕ್ಷಣೆ.

7. ವಿವಿಧ ಸನ್ನಿವೇಶಗಳಲ್ಲಿ ಮಕ್ಕಳು ಅಭಿವ್ಯಕ್ತಿಸುವಂತೆ ಮಾಡುವುದು.

8. ತಾರ್ಕಿಕ ವಿವೇಚನೆ ಬೆಳೆಸುವುದು ಮತ್ತು ಮಕ್ಕಳು ಗಣಿತಾತ್ಮಕವಾದ ಸಮಸ್ಯೆಗಳನ್ನು ಬಿಡಿಸುವಂತೆ ಮಾಡುವುದು.

## 1.6.3.2. ಶಾಲಾ ವಿಷಯಗಳು ಒಳಗೊಂಡಿರುವ ವಿಷಯಗಳು: ಭಾಷೆ, ಗಣಿತ, ಸಮಾಜ ವಿಜ್ಞಾನ ಮತ್ತು ವಿಜ್ಞಾನ

ವಿವಿಧ ಶಿಸ್ತುಗಳ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿ ಪ್ರತಿ ಶಾಲಾ ವಿಷಯವು ಒಳಗೊಂಡಿರುವ ಅಂಶಗಳನ್ನು ಗಮನಿಸೋಣ.

### ವಿಜ್ಞಾನ

- ವೈಜ್ಞಾನಿಕ ಸಾಕ್ಷರತೆ
- ದಿನನಿತ್ಯದ ಸನ್ನಿವೇಶದಲ್ಲಿ ವಿಜ್ಞಾನ
- ಸಾಮಾಜೋ ವೈಜ್ಞಾನಿಕ ವಿಚಾರಗಳು
- ತಿಳಿಯುವ ಚಿಂತಿಸುವ ಮತ್ತು ವರ್ತಿಸುವ ರೀತಿಯಾಗಿ ವಿಜ್ಞಾನ
- ನಮ್ಮ ಸುತ್ತಮುತ್ತಲಿನ ಪ್ರಪಂಚ
- ಶಾಲೆಯೊಳಗಿನ ಮತ್ತು ಹೊರಗಿನ ಸಂಪನ್ಮೂಲಗಳು
- ಅಣುಗಳು ಮತ್ತು ಪರಮಾಣುಗಳು
- ಜೀವಿವೈವಿಧ್ಯತೆ
- ಬಲ ಮತ್ತು ಚಲನೆಯ ನಿಯಮಗಳು
- ಕಾರ್ಯ ಮತ್ತು ಶಕ್ತಿ
- ಸ್ವಾಭಾವಿಕ ಸಂಪನ್ಮೂಲಗಳು ಮತ್ತು ಅವುಗಳ ನಿರ್ವಹಣೆ
- ಆಹಾರ ಸಂಪನ್ಮೂಲಗಳ ಉತ್ತಮಿಕೆ
- ಆಮ್ಲಗಳು ಮತ್ತು ರಾಸಾಯನಿಕ ಕ್ರಿಯೆಗಳು
- ಲೋಹಗಳು ಮತ್ತು ಅಲೋಹಗಳು
- ಜೀವ ಪ್ರಕ್ರಿಯೆಗಳು
- ಜೀವಿಗಳಲ್ಲಿ ಸಂತಾನೋತ್ಪತ್ತಿ
- ಅನುವಂಶೀಯತೆ ಮತ್ತು ವಿಕಾಸ
- ವಿದ್ಯುಚ್ಛಕ್ತಿ
- ವೈಜ್ಞಾನಿಕ ಸಂಶೋಧನೆ ಮತ್ತು ಶೋಧಗಳು

### ಸಮಾಜವಿಜ್ಞಾನ

- ಪೌರ ಶಿಕ್ಷಣ

- ಪ್ರತಿಫಲಿತ ಸಮಾಜೋ ರಾಜಕೀಯ ಸಮೀಕ್ಷೆ
- ಸಂವಿಧಾನಾತ್ಮಕ ಮೌಲ್ಯಗಳು
- ಸ್ಥಳೀಯ, ರಾಷ್ಟ್ರೀಯ ಮತ್ತು ಜಾಗತಿಕ ಸಂಸ್ಕೃತಿ
- ಜನ, ಸ್ಥಳ ಮತ್ತು ಪರಿಸರ
- ವ್ಯಕ್ತಿ ವಿಕಾಸ ಮತ್ತು ಅನನ್ಯತೆ
- ವ್ಯಕ್ತಿಗಳು, ಗುಂಪುಗಳು ಮತ್ತು ಸಂಸ್ಥೆಗಳು
- ಅಧಿಕಾರ, ಪ್ರಭುತ್ವ ಮತ್ತು ಆಡಳಿತ
- ಉತ್ಪಾದನೆ, ವಿತರಣೆ ಮತ್ತು ಸಮಾಜ
- ವಿಜ್ಞಾನ, ತಂತ್ರಜ್ಞಾನ ಮತ್ತು ಸಮಾಜ
- ಜಾಗತಿಕ ಸಂಬಂಧಗಳು
- ಪೌರತ್ವ ಸಂಬಂಧಿ ವಿಚಾರಗಳು ಮತ್ತು ರೂಢಿಗಳು
- ಸಾಮಾಜಿಕ ಸಂಶೋಧನೆ ಮತ್ತು ಶೋಧಗಳು

**ಗಣಿತ**

ಸಂಖ್ಯೆಗಳು, ನಾಲ್ಕು ಮೂಲಭೂತ ಕ್ರಿಯೆಗಳು, ಸಂಕ್ಷೇಪಿಸುವಿಕೆ, ಹಣ, ಮಾತೃಕೆಗಳು, ಓದುವ ಗಡಿಯಾರ, ರೇಖಾಗಣಿತದ ಮೂಲ ಪರಿಕಲ್ಪನೆಗಳು.

ಸಂಖ್ಯೆ, ಭಿನ್ನರಾಶಿಗಳು, ದಶಮಾಂಶಗಳು– ಹಣ, ಅಳತೆಗಳು, ಸರಳ ಜ್ಯಾಮಿತಿಗಳು, ಪದದ ಕಲ್ಪನೆ / ಪರಕಲ್ಪನೆಗಳು/ ಗುಣಲಕ್ಷಣಗಳು–ಏಕೀಕೃತ ವಿಧಾನ, ಸರಳಬಡ್ಡಿ, ಅನುಪಾತಗಳು.

ಸಾಮಾನ್ಯ ಗಣಿತ–ಸಂಖ್ಯಾ ಪದ್ಧತಿ, ಗಣಗಳು(ಮೂಲ ಕಲ್ಪನೆಗಳು), ಬೀಜಗಣಿತ–ಪದಗಳು, ಸಮೀಕರಣಗಳು, ಅಪವರ್ತನಗಳು– ರೇಖಾಗಣಿತ– ಕ್ಷೇತ್ರಗಣಿತ–ಪ್ರಮೇಯ, ಗುಣಲಕ್ಷಣಗಳು– ರಿಯಾಯತಿ, ಷೇರುಗಳು, ನಕ್ಷೆಗಳು– ಚಕ್ರಬಡ್ಡಿ– ಬ್ಯಾಂಕಿಂಗ್–ತ್ರಿಕೋನಮಿತಿಯ ಪ್ರಸ್ತಾವನೆ–ಸಂಖ್ಯಾಶಾಸ್ತ್ರ, ಸುಧಾರಿತ ಗಣಿತವು ಒಳಗೊಂಡ ಗಣಗಳು– ಭಿನ್ನರಾಶಿ–ಅಭಾಗಲಬ್ಧ ಸಂಖ್ಯೆ, ಸಂಕೀರ್ಣ ಸಂಖ್ಯೆ, ಸೂಚ್ಯಾಂಕಗಳು, ಲೋಗರಿತಮ್ಸ್–ಅಸಮಾನತೆ ಮತ್ತು ಅಸಮತೆ–ವರ್ಗಸಮೀಕರಣಗಳು–ರೇಖಾಗಣಿತ–ಸಾಧನೆ ಮತ್ತು ಅನ್ವಯ.

**ಭಾಷೆ**

- ಭಾಷಾ ಕಲಿಕೆಯಲ್ಲಿ ಕೌಶಲಗಳ ಬೆಳವಣಿಗೆ–ಕೇಳುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು
- ಸಾಹಿತ್ಯದ ವಿವಿಧ ಪ್ರಕಾರಗಳ ಬೋಧನೆ– ನಾಟಕ, ಗದ್ಯ, ಪದ್ಯ
- ಭಾಷೆ ಮತ್ತು ಸಾಹಿತ್ಯದ ಬರಹಗಳ ಪ್ರಶಂಸೆ ಮತ್ತು ರಚನೆ
- ಭಾಷೆಯಲ್ಲಿ ಬಹುಸಂಸ್ಕೃತಿಯ ಮತ್ತು ಅಡ್ಡ ಸಂಸ್ಕೃತಿಯ ವಿಚಾರಗಳು
- ಭಾಷಾ ಸಂಶೋಧನೆ ಮತ್ತು ಸದ್ಯದ ರೂಢಿಗಳು
- ಭಾಷಾ ಕಲಿಕೆಯಲ್ಲಿ ಸಮಾಜೋ ಸಾಂಸ್ಕೃತಿಕ ವಿಚಾರಗಳು
- ಎಳವೆಯಲ್ಲಿ ಭಾಷಾ ವಿಷಯಕವಾದ ಅರಿವನ್ನು ಮೂಡಿಸುವುದು

- ವಯೋಮಾನಕ್ಕನುಗುಣವಾದ ಭಾಷಾ ವಿಕಾಸ
- ಬಹುಭಾಷಿಕತೆ ಮತ್ತು ಭಾಷಾ ಕಲಿಕೆ

**ಶಾಲೆಯ ಭಾಷೆ ಮತ್ತು ಮನೆಯ ಭಾಷೆಯ ನಡುವಿನ ವ್ಯತ್ಯಾಸಗಳು**

- ಭಾಷೆಗಳ ಬಳಕೆ
- ಭಾಷಾ ಬೆಳವಣಿಗೆ ಮತ್ತು ಸಂಜ್ಞಾನಾತ್ಮಕ ಕೌಶಲಗಳು
- ವೈವಿಧ್ಯಮಯವಾದ ಸಾಮಾಜಿಕ ಕುಟುಂಬಗಳಲ್ಲಿ ಭಾಷೆಯ ಬಳಕೆ
- ಭಾಷಾ ಬೆಳವಣಿಗೆ

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

ನೀವು ಈಗಾಗಲೇ ಅನೇಕ ವಿಷಯಗಳನ್ನು ಬೋಧಿಸಿರುವಿರಿ. ಅನೇಕ ವಿಧಾನಗಳನ್ನು ಬಳಸಿರುವಿರಿ. ಅವು ಈಗ ನೀವು ಕಲಿತ ಪ್ರಕ್ರಿಯೆಗಳಿಗನುಗುಣವಾಗಿದೆಯೇ ಗಮನಿಸಿ. ಈ ಹಿನ್ನೆಲೆಯಲ್ಲಿ ನಿಮ್ಮ ಮುಂದಿನ ಬೋಧನಾ ತರಗತಿಗಳಲ್ಲಿ ನೀವು ಮಾಡಿಕೊಳ್ಳಬೇಕಾದ ಮಾರ್ಪಾಡುಗಳನ್ನು ಗುರುತಿಸಿಕೊಳ್ಳಿ

## 1.6.3.3. ಶಾಲಾ ವಿಷಯಗಳು ಒಳಗೊಂಡಿರುವ ವಿಷಯಗಳು: ದೈಹಿಕ ಶಿಕ್ಷಣ ಮತ್ತು ಲಲಿತ ಕಲೆ, ಶಾಂತಿಗಾಗಿ ಶಿಕ್ಷಣ ಮತ್ತು ಮೌಲ್ಯ ಶಿಕ್ಷಣ

**ದೈಹಿಕ ಶಿಕ್ಷಣ**

- ಮಾನವನ ಶರೀರ
- ಚಲನೆ ಮತ್ತು ಅರಿವು
- ಆಹಾರ ಮತ್ತು ಪೌಷ್ಟಿಕತೆ
- ಸುರಕ್ಷೆ ಮತ್ತು ಸುಭದ್ರತೆ
- ನಮ್ಮ ಪರಿಸರ
- ಸಾಮಾಜಿಕ ಸ್ವಾಸ್ಥ್ಯ ಮತ್ತು ಕ್ರೀಡಾ ಸೇವೆಗಳು
- ದೈಹಿಕ ದಾರ್ಢ್ಯತೆ
- ಕ್ರೀಡಾ ಕೌಶಲಗಳಿಗೆ ತರಬೇತಿ
- ದೈಹಿಕ ಶಿಕ್ಷಣ ಮತ್ತು ಕ್ರೀಡಾ ಶಿಕ್ಷಣಗಳಿಗೆ ತರಬೇತಿ

## ಲಲಿತಕಲಾ ಶಿಕ್ಷಣ

ಚಿತ್ರಕಲೆಯ ಉಪಕರಣಗಳ ಬಳಕೆ, ವರ್ಣಚಿತ್ರ, ಕೊಲಾಜ್, ಜೇಡಿ ಮಣ್ಣಿನಿಂದ ಮಾದರಿಗಳ ತಯಾರಿ, ಗೊಂಬೆಗಳ ತಯಾರಿ, ಕಲಾತ್ಮಕ ವಸ್ತುಗಳ ತಯಾರಿ, ದೃಶ್ಯ ಕಲೆಯ ಸರಳ ಪರಿಕಲ್ಪನೆಗಳು, ಪ್ರಸಿದ್ಧ ಕಲಾವಿದರ ಕೃತಿಗಳ ಪರಿಚಯ, ಪೋಸ್ಟರ್ ತಯಾರಿ, ಮಿಂಚುಪಟ್ಟಿಗಳ ತಯಾರಿ, ಆಹ್ವಾನ ಪತ್ರಿಕೆಗಳ ತಯಾರಿ.

ಚಿತ್ರಕಲೆ, ವರ್ಣಚಿತ್ರ, ಶಿಲ್ಪಕಲೆ, ನೃತ್ಯ, ನಾಟಕ, ಸಂಗೀತ ಮತ್ತು ಕೈಕೆಲಸ–ಇವುಗಳಿಗೆ ಸಂಬಂಧಿಸಿದ ವಿವಿಧ ಕಲಾತ್ಮಕ ಅಂಶಗಳು ಮತ್ತು ಸಂಬಂಧಪಟ್ಟ ಕೌಶಲಗಳ ಬೆಳವಣಿಗೆ.

### ಶಾಂತಿಗಾಗಿ ಶಿಕ್ಷಣ

ಶಾಂತಿ ಸಂಬಂಧಿತ ಪರಿಕಲ್ಪನೆಗಳು ಮತ್ತು ಕಾಳಜಿಗಳು: ಶಾಂತಿಯನ್ನು ಕುರಿತ ಅರಿವು, ಆಯ್ಕೆ, ಶಾಂತಿಯನ್ನು ಕುರಿತ ಘಟನೆಗಳು, ಶಾಂತಿಗೆ ಅಡ್ಡಿಯೊಡ್ಡುವ ಅಂಶಗಳು, ಶಾಂತಿಯನ್ನು ಕಟ್ಟುವಿಕೆ, ಅಂತರ್ ಶಾಂತಿ, ವಿವಿಧ ಹಂತಗಳಲ್ಲಿ ಶಾಂತಿ, ಪ್ರಕೃತಿಯೊಂದಿಗೆ ಸಾಮರಸ್ಯ.

ಸಂಘರ್ಷವನ್ನು ಕುರಿತ ಅರಿವು, ನಿರ್ವಹಣೆ, ಸಂಘರ್ಷದ ಮೂಲಗಳು, ಸಂಘರ್ಷದ ವಿಶ್ಲೇಷಣೆ, ಸಂಘರ್ಷದ ರಚನಾತ್ಮಕ ನಿರ್ವಹಣೆ, ಸಂಬಂಧಿತ ಮಾರ್ಗೋಪಾಯಗಳು ಮತ್ತು ಕೌಶಲಗಳು.

ಮಾನವೀಯತೆ: ಮಾನವ ಸಂಬಂಧಗಳೊಂದಿಗೆ ಬದುಕುವುದು, 'ಮಾನವನಾಗಿ ಬಾಳುವುದು' ಎಂಬುದರ ಅರ್ಥ, ಮಾನವೀಯತೆಯ ತಾತ್ವಿಕತೆಯ ಆಧಾರದ ಮೇಲೆ ಬದುಕಿನ ಗುರಿಗಳನ್ನು ರೂಪಿಸಿಕೊಳ್ಳುವುದು, ಗುರಿಸಾಧನೆಗೆ ಮಾರ್ಗೋಪಾಯಗಳು, ಮಾನವೀಯ ಪರಿಸರ ಸೃಷ್ಟಿ.

ಸ್ವ ಅರಿವು, ತಾನು ಮತ್ತು ಇತರರು, ತಾರತಮ್ಯ ಮತ್ತು ಪೂರ್ವಾಗ್ರಹಗಳಿಂದ ಹೊರಬರುವುದು, ಸ್ವ ಪ್ರತಿಫಲನ ಮತ್ತು ಆಂತರ್ಯದ ದನಿಯ ಆಲಿಸುವಿಕೆ.

### ಮೌಲ್ಯ ಶಿಕ್ಷಣ

ಮೌಲ್ಯದ ಪರಿಕಲ್ಪನೆ, ಮೌಲ್ಯಾಧಾರಿತ ಬದುಕಿನ ಅಗತ್ಯ, ಸಾರ್ವತ್ರಿಕ ಮಾನವೀಯ ಮೌಲ್ಯಗಳ ಬೆಳವಣಿಗೆ

ಭಾರತೀಯ ಸಂವಿಧಾನದ ಮೌಲ್ಯಗಳು.

ಸಮಕಾಲೀನ ಸವಾಲುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವುದು, ವ್ಯಕ್ತಿಯ ಸಂಪೂರ್ಣ ಬೆಳವಣಿಗೆ, ವ್ಯಕ್ತಿ ಮತ್ತು ಸಮಾಜಕ್ಕೆ ಸಂಬಂಧಿಸಿದ ಜವಾಬ್ದಾರಿಯುತ ಮನೋಭಾವ, ನೈತಿಕ ಉಪಕ್ರಮದ ಪೋಷಣೆ, ಸಹಕಾರಿ ಕೌಶಲಗಳು ಮತ್ತು ಮಾನವ ಹಕ್ಕುಗಳ ಕುರಿತ ಗೌರವ.

ಧನಾತ್ಮಕ ಆಲೋಚನೆ, ದಯೆ, ಆಂತರ್ಯದ ಶಾಂತಿಯನ್ನು ಕಂಡುಕೊಳ್ಳುವಿಕೆ, ಸಹಬಾಳ್ವೆ, ಮಾನವನ ಘನತೆಗೆ ಗೌರವ, ಆತ್ಮನಿಷ್ಠೆ, ವಿಮರ್ಶಾತ್ಮಕ ಚಿಂತನೆ, ಅಹಿಂಸಾಯುತವಾಗಿ ಸಂಘರ್ಷವನ್ನು ಪರಿಹರಿಸಿಕೊಳ್ಳುವಿಕೆ, ಸಮುದಾಯದಲ್ಲಿ ಶಾಂತಿ ಕಾಪಾಡುವಿಕೆ ಮತ್ತು ಭೂಮಿಯನ್ನು ಕುರಿತ ಕಾಳಜಿ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–3

ಮೌಲ್ಯಶಿಕ್ಷಣ, ದೈಹಿಕ ಶಿಕ್ಷಣ, ಕಲಾ ಶಿಕ್ಷಣ, ಶಾಂತಿಗಾಗಿ ಶಿಕ್ಷಣ– ಈ ವಿಷಯಗಳಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕಲಿಸುತ್ತಿರುವ ಅಂಶಗಳನ್ನು ಯಾವುದಾದರೂ ಮೂರು ಶಾಲೆಗಳಲ್ಲಿ ಗಮನಿಸಿ. ನಿಮ್ಮ ಗಮನಕ್ಕೆ ಬಂದ ಅಂಶಗಳನ್ನು ದಾಖಲಿಸಿ.

## 1.6.4. ಸಾರಾಂಶಿಸೋಣ

- ಶಾಲೆಗಳಲ್ಲಿ ಬೋಧಿಸಲಾಗುವ ವಿಷಯಗಳು ಅನನ್ಯ ಸ್ವರೂಪದವಾಗಿರುತ್ತವೆ.
- ಪ್ರತಿ ವಿಷಯದ ಬೋಧನೆಯ ಗುರಿ ಭಿನ್ನವಾಗಿರುತ್ತದೆ.
- ಅಧ್ಯಾಪಕರು ಪ್ರತಿ ವಿಷಯದ ಒಳ ಅಂಶಗಳನ್ನೂ ಆ ಶಿಸ್ತು ವಿಷಯಕವಾದ ಸ್ವರೂಪವನ್ನೂ ತಿಳಿದಿರಬೇಕು.
- ವಿಷಯದ ಸ್ವರೂಪವು ಅದರ ಬೋಧನಾ ಕ್ರಮವನ್ನು ನಿರ್ಧರಿಸುತ್ತದೆ.
- ವಿವಿಧ ವಿಷಯಗಳ ಸ್ವರೂಪವು ಭಿನ್ನವಾಗಿರುವುದರಿಂದ ಬೋಧನಾ ಕ್ರಮವೂ ಭಿನ್ನವಾಗಿರುತ್ತದೆ.

## 1.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು –1, 2 ಮತ್ತು 3

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

ಗ: 1,8; ಭಾ: 2,7; ವಿ: 4,6; ಸ.ವಿ:3,5

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

ನಿಮ್ಮ ಯೋಜನೆಗನುಗುಣವಾಗಿ ಬೋಧಿಸಿ, ನಿಮ್ಮ ಗಮನಕ್ಕೆ ಬಂದ ಅಂಶಗಳನ್ನು ದಾಖಲಿಸಿ. ಈ ವಿಷಯಗಳಿಗೆ ಸಂಬಂಧಿಸಿದಂತೆ, ನಿಮ್ಮ ಶಾಲೆಗೆ ಸೂಕ್ತ ಪಠ್ಯವಸ್ತುವನ್ನು ಗುರುತಿಸಿಕೊಳ್ಳಿ. ಇದನ್ನು ಶಾಲಾ ಸಭೆಯಲ್ಲಿ ಮಂಡಿಸಿ, ಅನ್ವಯಿಸಲು ಪ್ರಯತ್ನಿಸಿ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–3

ನೀವು ದಾಖಲಿಸಿದ ಅಂಶಗಳನ್ನು ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಿ.

## 1.6.6. ಘಟಕಾಂತ್ಯ ಅಭ್ಯಾಸಗಳು

1. ವಿವಿಧ ಶಾಲಾ ವಿಷಯಗಳ ಮೂಲ ಶಿಸ್ತುಗಳ ಪ್ರಕ್ರಿಯೆಗಳನ್ನು ವಿವರಿಸಿ.
2. ವಿವಿಧ ಶಾಲಾ ವಿಷಯಗಳ ಒಳ ವಿಷಯಗಳನ್ನು ತಿಳಿಸಿ.

## 1.6.7. ಪರಾಮರ್ಶನ ಸೂಚಿ


1. Deng, Z. (2013). School subjects and academic disciplines. In A. Luke, A.Woods & K.Weir(Eds.), Curriculum, Syllabus design and equity: A primer and model. London: Routledge Publication.
2. Ivor F. Goodson and Colin J. Marsh (1996). Studying school subjects – Aguide.London: Routledge Publication.
3. Grossman, P.L, Wilson, S.M. and Shulman, L.S. (1989). Teachers of substance: subject matter knowledge for teaching. In M.C. Reynolds (ed.), Knowledge Base for the Beginning Teacher. New York: Pergamon, 23-36.
4. NCERT (2005). New Curriculum Framework (2005). New Delhi: National Council of Educational Research and Training.
5. NCERT (2006). Teaching of Social Sciences - Position Paper National Focus Group. New Delhi: National Council of Educational Research and Training.
6. NCERT (2007). Work Education - Position Paper National Focus Group. New Delhi: National Council of Educational Research and Training.
7. NCTE (2009). National Curriculum Framework for Teacher Education - Towards Preparing Professional and Humane Teachers. New Delhi: National Council for Teacher Education.
8. http://www.ncert.nic.in/pdf_files/17.Mathematics%20Curriculum%2 0for%20 School%20Education%20_16.12.pdf


*************

# ಬ್ಲಾಕ್ 2 : ಜ್ಞಾನಶಿಸ್ತುಗಳ ವರ್ಗೀಕರಣ ಮತ್ತು ಜ್ಞಾನಶಿಸ್ತುವ್ಯಾಪಿ ಬೋಧನೆ

## ಘಟಕ 1 : ಜ್ಞಾನಶಿಸ್ತುಗಳ ವರ್ಗೀಕರಣ

### ಘಟಕದ ರಚನೆ


2.1.1. ಕಲಿಕೆಯ ಉದ್ದೇಶಗಳು

2.1.2. ಪೀಠಿಕೆ

2.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.1.3.1. ಜ್ಞಾನಶಿಸ್ತುಗಳ ವರ್ಗೀಕರಣದ ಅಗತ್ಯ ಮತ್ತು ಪ್ರಾಮುಖ್ಯತೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ-1

2.1.3.2. ಜ್ಞಾನಶಿಸ್ತುಗಳ ವರ್ಗೀಕರಣ

2.1.4. ಸಾರಾಂಶಿಸೋಣ

2.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

2.1.6. ಘಟಕಾಂತ್ಯ ಅಭ್ಯಾಸಗಳು

2.1.7. ಪರಾಮರ್ಶನ ಗ್ರಂಥಗಳು


### 2.1.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಜ್ಞಾನಶಿಸ್ತುಗಳ ವರ್ಗೀಕರಣ ಮಾಡುವರು;
- ಶಿಸ್ತುಗಳ ವರ್ಗೀಕರಣದ ಮಾನದಂಡಗಳ ವಿವರಣೆ ನೀಡುವರು;
- ಬಿಗ್ಲನ್‌ನ ಜ್ಞಾನಶಿಸ್ತುಗಳ ವರ್ಗೀಕರಣವನ್ನು ವಿವರಿಸುವರು; ಮತ್ತು
- ಬಿಗ್ಲನ್ ಬೆಕರನ ವರ್ಗೀಕರಣದ ಬಗ್ಗೆ ವಿವರಿಸುವರು.

### 2.1.2. ಪೀಠಿಕೆ

ನೀವು ಈಗಾಗಲೇ ಶಿಸ್ತು ಮತ್ತು ಜ್ಞಾನಶಿಸ್ತುಗಳ ಬಗ್ಗೆ ಈ ಕೋರ್ಸಿನ ಆರಂಭದಲ್ಲಿ ಕಲಿತಿರುವಿರಿ.ಈ ಜ್ಞಾನಶಿಸ್ತುಗಳು ಹೇಗೆ ಅಸ್ತಿತ್ವಕ್ಕೆ ಬಂದವು ಎಂಬುದನ್ನು ನೀವು ಒಮ್ಮೆಯದರೂ ಆಲೋಚಿಸಿರುವಿರಾ? ಅಧ್ಯಾಪನ ಮತ್ತು ಕಲಿಕೆಯ ಮೂಲಕಇಂದಿನ ದಿನಗಳಲ್ಲಿ ನಮ್ಮ ಶಾಲೆಗಳಲ್ಲಿ ಜ್ಞಾನವು ಈಗ ಬೋಧಿಸುತ್ತಿರುವ ರೀತಿಯಲ್ಲೇ ಇತ್ತು ಎಂದುಕೊಂಡಿದ್ದೀರಾ?. ಜ್ಞಾನವು ನಾವಿಂದು ಕಾಣುತ್ತಿರುವ ರೂಪದಲ್ಲಿರಲಿಲ್ಲ. ಅದು ಇಷ್ಟು ಅಗಾಧವಾಗಿ ಬೆಳೆದಿರಲೂ ಇಲ್ಲ! ಇಂದಿನಂತೆ ಜ್ಞಾನವನ್ನು ಭೌತಶಾಸ್ತ, ರಸಾಯನ ಶಾಸ್ತ್ರ, ಚರಿತ್ರೆ, ಇತ್ಯಾದಿಯಾಗಿ ಪ್ರತ್ಯೇಕವಾಗಿ ವಿಂಗಡಣೆ ಮಾಡದ ಒಂದು ಕಾಲವಿತ್ತು. ಹಿಂದಿನ ಕಾಲದಲ್ಲಿ ತತ್ವಶಾಸ್ತ್ರ ಎನ್ನುವ ಒಂದೇ ಹೆಸರಿನಲ್ಲಿ ಜ್ಞಾನವು ತಿಳಿಯಲ್ಪಡುತ್ತಿತ್ತು. ಭೌಗೋಳಿಕ ಅನ್ವೇಷಣೆಗಳಿಂದ ಮಾನವರು ಹೆಚ್ಚು ಹೆಚ್ಚು ಹೊಸ ಪ್ರದೇಶಗಳನ್ನು ಕಂಡುಹಿಡಿದಂತೆ

ಅವರ ಜ್ಞಾನಕ್ಷೇತ್ರವೂ ವಿಸ್ತಾರವಾಯಿತು. ಇದರಿಂದ ಜ್ಞಾನವೆಂಬುದು ಬಹಳ ವಿಸ್ತಾರವಾದುದು, ಓರ್ವ ಮನುಷ್ಯನಿಗೆ ತನ್ನ ಜೀವಿತಾವಧಿಯಲ್ಲಿ ಖಂಡಿತವಾಗಿಯೂ ಕಲಿತು ಮುಗಿಸಲು ಸಾಧ್ಯವಾಗುವಂತಹದ್ದಲ್ಲ, ಕೇವಲ ಅದರ ಒಂದು ಭಾಗವನ್ನು ಮಾತ್ರ ಅರಿತುಕೊಳ್ಳಲು ಸಾಧ್ಯ ಎಂಬುದನ್ನು ತಿಳಿಯಲು ಸಾಧ್ಯವಾಯಿತು. ಆದುದರಿಂದ ಜ್ಞಾನವನ್ನು ಬೇರೆ ಬೇರೆ ರೀತಿಯಿಂದ ವಿಂಗಡಿಸಲು ಆರಂಭಿಸಿದರು. ಹೀಗೆ ಅವರು ಒಂದೊಂದು ಜ್ಞಾನ ಶಾಖೆಯನ್ನೂ ವಿಂಗಡಿಸಿ ಪ್ರತ್ಯೇಕವಾಗಿ ಗುರುತಿಸತೊಡಗಿದರು. ಹೀಗೆ ಏಕಮಾತ್ರವಾಗಿದ್ದ ಜ್ಞಾನವು ಬೇರೆ ಬೇರೆ ವಿಭಾಗಗಳಲ್ಲಿ ವಿಭಿನ್ನ ಹೆಸರುಗಳಿಂದ ವಿಂಗಡಿಸಲ್ಪಟ್ಟಿತು. 'ಆಂಭಿಣಂಡಿ ಂಜಿ ಘುಟಥಂಖಿಥಿ' ಎನ್ನುವ ಪದವಿಯ ಬಗ್ಗೆ ನೀವು ತಿಳಿದಿರಬಹುದು. ಈ ಪದವಿಯನ್ನು ಗಣಿತ, ಇತಿಹಾಸ, ಭಾಷೆ ಹಾಗೂ ಇತರ ವಿಷಯಗಳಿಗೂ ನೀಡಲಾಗುತ್ತದೆ. ಏಕೆಂದರೆ ಹಿಂದೊಂದು ಕಾಲದಲ್ಲಿ ಎಲ್ಲಾ ವಿಷಯಗಳನ್ನೂ 'ಘುಟಥಂಖಿಥಿ'(ತತ್ವಶಾಸ್ತ್ರ) ಎನ್ನುವ ಶಿಸ್ತಿನಡಿಯಲ್ಲಿಯೇ ಅಧ್ಯಯನ ಮಾಡಲಾಗುತ್ತಿತ್ತು. "ಪೂರ್ಣ ಜ್ಞಾನ"ದ ವಿಂಗಡಣೆಯ ಈ ಕತೆಯು ಬಹಳ ಸ್ವಾರಸ್ಯವಾಗಿದೆ. ಈ ವಿಭಾಗದಲ್ಲಿ ನಾವು ಜ್ಞಾನವನ್ನು ಹೇಗೆ ವಿಂಗಡಿಸಲಾಗುತ್ತದೆ ಎಂಬುದನ್ನೂ ವಿಂಗಡಣೆಯ ಮಾನದಂಡಗಳನ್ನೂ ಕುರಿತು ವಿಚಾರ ಮಾಡೋಣ

## 2.1.3. ಕಲಿಕೆಯ ಅಂಶಗಳು ಹಾಗೂ ಕಲಿಕೆಯ ಚಟುವಟಿಕೆಗಳು

### 2.1.3.1. ಜ್ಞಾನಶಿಸ್ತುಗಳ ವರ್ಗೀಕರಣದ ಅಗತ್ಯ ಮತ್ತು ಪ್ರಾಮುಖ್ಯತೆ

ಜ್ಞಾನಶಿಸ್ತುಗಳನ್ನು ಹೇಗೆ ವರ್ಗೀಕರಿಸಲಾಗುತ್ತದೆ ಎಂಬುದನ್ನು ತಿಳಿಯುವುದಕ್ಕಿಂತಲೂ ಮೊದಲು, ಯಾವ ಕಾರಣಕ್ಕಾಗಿ ವರ್ಗೀಕರಣ ಮಾಡಲಾಗುತ್ತದೆ ಎಂಬುದನ್ನು ಅರಿಯೋಣ.

ವರ್ಗೀಕರಣ ಎಂಬುದು ಬಹಳ ಸಾಮಾನ್ಯವಾದ ಹಾಗೂ ಸಹಜವಾದ ಕ್ರಿಯೆಯಾಗಿದೆ. ನಾವು ಯಾವುದಾದರೂ ವಸ್ತುವನ್ನು, ವ್ಯಕ್ತಿ ಅಥವಾ ಸ್ಥಳಗಳನ್ನು ಕಂಡಾಗ ನಮ್ಮ ಈ ಹಿಂದಿನ ಅನುಭವದ ಹಿನ್ನೆಲೆಯಿಂದ ಅದನ್ನು ವಿಭಾಗಿಸಬಹುದು. ಇದು ಹಲವು ತೆರನಾಗಿ ನಮಗೆ ಸಹಾಯಕವಾಗುತ್ತದೆ. ಇದು ಹಿಂದಿನದನ್ನು ಮರುನೆನಪಿಸಿಕೊಳ್ಳಲು ಸಹಾಯಕವಾಗುತ್ತದೆ. ಈ ಕಾರಣದಿಂದ ನಮ್ಮ ಪೂರ್ವಿಕರು ಜ್ಞಾನಶಿಸ್ತುಗಳ ವರ್ಗೀಕರಣದ ಪ್ರಯೋಜನ ಹಾಗೂ ಮಹತ್ವವನ್ನು ಅರಿತು ಅದಕ್ಕಾಗಿ ಪ್ರಯತ್ನಿಸಿದರು.

**ವರ್ಗೀಕರಣ ಮತ್ತು ವಿಧಗಳು ಯಾಕೆ ಪ್ರಮುಖವಾಗಿದೆ ಎಂದರೆ:**

- ಅವು ಅಸ್ತವ್ಯಸ್ತವಾದ ಜಗತ್ತನ್ನು ನೇರ್ಪಡಿಸುತ್ತವೆ. ನಿಮ್ಮಲ್ಲಿ ಬಹಳಷ್ಟು ಮಾಹಿತಿಗಳು ಇವೆ ಮತ್ತು ನಿಮಗೆ ಅದರ ಕುರಿತು ಅಧ್ಯಯನ ಕೈಗೊಳ್ಳಬೇಕೆಂದಿದೆ ಎಂದಿಟ್ಟುಕೊಳ್ಳೋಣ. ಮೊದಲಿಗೆ ನೀವೇನು ಮಾಡುತ್ತೀರಿ? ನೀವು ಆ ಮಾಹಿತಿಗಳನ್ನು ಹೆಚ್ಚು ಅರ್ಥಪೂರ್ಣಗೊಳಿಸಲು ಅವುಗಳನ್ನು ಬೇರೆ ಬೇರೆ ಹೆಸರಿನಲ್ಲಿ ವಿಭಜಿಸುತ್ತೀರಿ.
- ವರ್ಗೀಕರಣಗಳು ವಿಷಯಗಳಿಗನುಗುಣವಾಗಿ ಅವುಗಳ ಸಂಬಂಧಗಳ ಹಾಗೂ ಪ್ರವೃತ್ತಿಗಳ ಹಿನ್ನೆಲೆಯಲ್ಲಿ ವರ್ಗೀಕರಣಗೊಳಿಸಲು ವಿದ್ವಾಂಸರಿಗೆ ಸಹಾಯಕವಾಗುತ್ತವೆ. ಉದಾಹರಣೆಗೆ, ನಿಮ್ಮಲ್ಲಿ ವಿವಿಧ ಪ್ರಾಣಿಗಳ ಬಗ್ಗೆ ಮಾಹಿತಿ ಇದ್ದರೆ, ಅವುಗಳನ್ನು ಕೆಲವು ಮಾನದಂಡಗಳಿಗನುಗುಣವಾಗಿ ನೀವು ವಿಭಜನೆ ಮಾಡಿದರೆ, ಅದರಿಂದ ನಿಮಗೆ ಅವುಗಳ ನಡುವಿನ ಭಿನ್ನತೆ ಮತ್ತು ಸಮಾನತೆಗಳನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಇದರಿಂದ ವಿವಿಧ ಪ್ರಾಣಿಗಳ ಸಂಬಂಧಗಳ ಆಧಾರದ ಮೇಲೆ ಅವುಗಳ ಬಣ್ಣ, ಆಹಾರ, ಗಾತ್ರ, ಭೌಗೋಳಿಕ ಸ್ಥಿತಿ, ಶಕ್ತಿ, ಚಲನಾವಿಧಾನ ಇತ್ಯಾದಿಗಳನ್ನು ಅರಿಯಲು ಸಹಾಯಕವಾಗುತ್ತದೆ.
- ನೂತನ ವಸ್ತುಗಳ ಅಥವಾ ವಿದ್ಯಮಾನಗಳ ಜೋಡಿಗಳ ಬಗೆಗಿನ ಆರಂಭಿಕ ವರ್ಗೀಕರಣವು ಈ ಹಿಂದೆ ಆವಿಷ್ಕಾರಗೊಳ್ಳದ ಹೊಸ ವಿಧಾನವನ್ನು ಪತ್ತೆಹಚ್ಚಲು ಮಾರ್ಗದರ್ಶನವನ್ನು ಮಾಡುತ್ತದೆ. ವರ್ಗೀಕರಣದ ಬಗೆಗಿನ ಹೆಚ್ಚಿನ ಅಧ್ಯಯನದಿಂದ ವಿಷಯವನ್ನು ಅರ್ಥಮಾಡಿಕೊಳ್ಳಲು ಇನ್ನಷ್ಟು

ಸಹಾಯಕವಾಗುತ್ತದೆ. ಒಂದು ವಿಷಯದ ಅಥವಾ ವಿದ್ಯಮಾನದ ಬಗ್ಗೆ ಆಳವಾಗಿ ತಿಳಿಯಲು ಇದರಿಂದ ಸಹಾಯಕವಾಗುತ್ತದೆ. ಆದರಿಂದ ಸಿದ್ಧಾಂತವನ್ನು ಸೂತ್ರೀಕರಿಸಿ ಹೆಚ್ಚಿನ ವೀಕ್ಷಣೆಗೆ ಹೋಗುವ ಪ್ರಯತ್ನವನ್ನು ಮಾಡಬಹುದು.

- ನಮ್ಮ ಅಧ್ಯಯನವನ್ನು ಹೆಚ್ಚು ಸರಳ ಹಾಗೂ ಸ್ಪಷ್ಟಗೊಳಿಸಲು ಇದರಿಂದ ಸಾಧ್ಯವಾಗುತ್ತದೆ.
- ನಿರ್ದಿಷ್ಟ ವಸ್ತುವಿನ ಕುರಿತು ಹೆಚ್ಚು ವಿಷಯಗಳನ್ನು ಒಟ್ಟುಹಾಕಲು ಇದರಿಂದ ಸಾಧ್ಯವಾಗುತ್ತದೆ.
- ವರ್ಗೀಕರಣವು ನಮ್ಮ ಅಧ್ಯಯನದ ಹಾದಿಯನ್ನು ಸುಗಮಗೊಳಿಸುತ್ತದೆ.
- ಈ ಮೂಲಕವಾಗಿ ಕಂಡುಕೊಂಡ ಹೋಲಿಕೆ, ವೈರುಧ್ಯಗಳ ಕುರಿತಾದ ಜ್ಞಾನದ ಮೂಲಕವಾಗಿ ಹೆಚ್ಚಿನ ಸಂಶೋಧನೆಗೆ ಸಹಾಯಕವಾಗುತ್ತದೆ.
- ವೈಜ್ಞಾನಿಕ ಹಾಗೂ ವೈಜ್ಞಾನಿಕವಲ್ಲದ ಕ್ಷೇತ್ರಗಳಲ್ಲಿ ದೈನಂದಿನ ಜೀವನದಂತೆ, ವರ್ಗೀಕರಣವು ಸಹಜವಾದ ಕ್ರಿಯೆಯಾಗಿದೆ. ವಿಷಯಗಳ ಬಗೆಗಿನ ಹೆಚ್ಚಿನ ಸ್ಪಷ್ಟೀಕರಣಕ್ಕಾಗಿ ಇದನ್ನು ಬಳಸಿಕೊಳ್ಳಲಾಗುತ್ತದೆ. ಶೈಕ್ಷಣಿಕ ಶಿಸ್ತುಗಳಲ್ಲಿ ಒಂದೇ ವಿಧದ ಸಾಮಾನ್ಯ ವರ್ಗೀಕರಣವೆನ್ನುವುದು ಇಲ್ಲ. ಸಂಶೋಧಕರು ಅವರವರ ಸಂಸ್ಥೆಗಳಲ್ಲಿ ಭಿನ್ನ ಭಿನ್ನ ಸಂಶೋಧನಾ ವಿಧಾನವನ್ನು ಬಳಸುತ್ತಾರೆ. ಆದರೆ ಹೆಚ್ಚಿನವುಗಳ ಗುಣಲಕ್ಷಣಗಳು ಮಾತ್ರ ಸಮಾನವಾಗಿರುತ್ತವೆ.

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ.–1

ಸರಿಯಾದ ಉತ್ತರವನ್ನು '✓' ಚಿಹ್ನೆಯಿಂದ ಗುರುತಿಸಿ.

ವರ್ಗೀಕರಣವು ಯಾಕೆ ಅಗತ್ಯವೆಂದರೆ ಅವು ----------

1. ಮತ್ತಷ್ಟು ಜ್ಞಾನವನ್ನು ಸಂಶೋಧನೆಗೈಯಲು ಅನುವು ಮಾಡಿಕೊಡುತ್ತದೆ.
2. ಸಂಬಂಧಗಳು ಹಾಗೂ ಪ್ರವೃತ್ತಿಗಳನ್ನು ಅರಿತುಕೊಳ್ಳಲು ಸಹಾಯಕವಾಗುತ್ತದೆ.
3. ನಿರ್ದಿಷ್ಟ ವಸ್ತುವಿನ ಬಗ್ಗೆ ಹೆಚ್ಚು ವಿವರಗಳನ್ನು ಕಲೆಹಾಕಲು ಸಹಾಯಮಾಡುತ್ತದೆ.
4. ಈ ಹಿಂದೆ ಕಂಡುಕೊಳ್ಳದ ಅನ್ವೇಷಣಾ ವಿಧಾನವನ್ನು ಪತ್ತೆ ಹಚ್ಚಲು ಮಾರ್ಗದರ್ಶನವನ್ನು ನೀಡುತ್ತದೆ.
5. ಪ್ರಾಯೋಗಿಕ ಸಂಗತಿಗಳನ್ನು ಅರಿತುಕೊಳ್ಳಲು ಸಹಾಯಕವಾಗುತ್ತದೆ.
6. ಮೌಲ್ಯಮಾಪನ ಮಾಡಲು ಇನ್ನಷ್ಟು ಸುಲಭವಾಗುತ್ತದೆ.

### 3.5.3.2. ಶೈಕ್ಷಣಿಕ ಶಿಸ್ತುಗಳ ವಿವಿಧ ವರ್ಗೀಕರಣಗಳು.

ಶೈಕ್ಷಣಿಕ ಶಿಸ್ತುಗಳನ್ನು ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಮಾನದಂಡಗಳಿಂದ ವಿಂಗಡಿಸಿದ್ದಾರೆ. ಈಗ ನಾವು ಅವುಗಳಲ್ಲಿ ಕೆಲವು ವಿಧಗಳನ್ನು ಅರಿತುಕೊಳ್ಳೋಣ.

ಅ. ಶೈಕ್ಷಣಿಕ ಶಿಸ್ತುಗಳ ಅಂದಾಜು ವರ್ಗೀಕರಣ

ಆ. ಅರಿಸ್ಟಾಟಲನ ವರ್ಗೀಕರಣ

ಇ. ಬಿಗ್ಲನನ ವರ್ಗೀಕರಣ

ಈ. ಬಿಗ್ಲನ್– ಬೆಕರ್‌ರ ಸಾಮಾನ್ಯ ವರ್ಗೀಕರಣ

## ಅ. ಶೈಕ್ಷಣಿಕ ಶಿಸ್ತುಗಳ ಅಂದಾಜು ವರ್ಗೀಕರಣ.

ಶೈಕ್ಷಣಿಕ ಶಿಸ್ತುಗಳ ವಿವಿಧ ವರ್ಗೀಕರಣದಲ್ಲಿ ಶಿಸ್ತುಗಳನ್ನು ಈ ತೆರನಾಗಿ ಗುಂಪುಗಳಾಗಿ ಮಾಡಲಾಗುತ್ತದೆ.

1. ಲಲಿತ ಕಲೆಗಳು; ಈ ಗುಂಪಿನಲ್ಲಿ ಕಲೆ, ಸಂಗೀತ, ರಂಗಭೂಮಿ, ದೃಶ್ಯಕಲೆ, ಮತ್ತು ಪ್ರಸ್ತುತಪಡಿಸುವ ಕಲೆಗಳನ್ನು ಗಮನಿಸಲಾಗುತ್ತದೆ. ಲಲಿತಕಲೆಗಳಲ್ಲಿ ಮಾನವ ಚಟುವಟಿಕೆಗಳನ್ನು ಸೌದರ್ಯಶಾಸ್ತ್ರದ ನೆಲೆಯಿಂದ ನೋಡಲಾಗುತ್ತದೆ.

2. ಮಾನವಿಕದಲ್ಲಿ ಇತಿಹಾಸ, ಭಾಷೆ, ಸಾಹಿತ್ಯ, ತತ್ವಶಾಸ್ತ್ರ, ಧರ್ಮ ಇತ್ಯಾದಿಗಳು ಒಳಗೊಳ್ಳುತ್ತವೆ. ಇದರಲ್ಲಿ ಮಾನವ ಜೀವಿಯನ್ನು ವಿಶಿಷ್ಟ ವಿದ್ಯಮಾನದ ಮೂಲಕ ಗ್ರಹಿಸಲಾಗುತ್ತದೆ.

3. ಸಮಾಜವಿಜ್ಞಾನದಲ್ಲಿ ಮಾನವಶಾಸ್ತ್ರ, ಪ್ರಾಚ್ಯಶಾಸ್ತ್ರ, ಸಂಸ್ಕೃತಿ ಮತ್ತು ಜನಾಂಗೀಯ ಅಧ್ಯಯನ, ಅರ್ಥಶಾಸ್ತ್ರ, ಲಿಂಗತ್ವ ಮತ್ತು ಲೈಂಗಿಕ ಅಧ್ಯಯನ, ಭೂಗೋಳ ಶಾಸ್ತ್ರ, ರಾಜಕೀಯ ಶಾಸ್ತ್ರ, ಮನಶ್ಶಾಸ್ತ್ರ, ಸಮಾಜಶಾಸ್ತ್ರ ಮುಂತಾದವು ಒಳಗೊಳ್ಳುತ್ತವೆ. ಮಾನವನ ಸಾಮಾಜಿಕ ಪಾತ್ರವನ್ನು ಅನ್ವೇಷಿಸಿ, ಆತನ ಚಟುವಟಿಕೆಗಳ ಫಲಿತಾಂಶವನ್ನು ಗುರುತಿಸುವುದು ಇದರ ಮುಖ್ಯ ಗುರಿ. ಸಮಾಜ ವಿಜ್ಞಾನಗಳನ್ನು 'ಸಾಮಾನ್ಯ' ಮತ್ತು 'ನಿಶ್ಚಿತ' ಎಂದು ವಿಂಗಡಿಸಲಾಗುತ್ತದೆ. ಸಾಮಾನ್ಯ ಶಿಸ್ತಿನಲ್ಲಿ ಮಾನವನ ಚಟುವಟಿಕೆಗಳನ್ನು ಅನ್ವೇಷಣೆ ಮಾಡಲಾಗುತ್ತದೆ. ನಿಶ್ಚಿತ ವಿಜ್ಞಾನದಲ್ಲಿ ನಿಶ್ಚಿತ ಸನ್ನಿವೇಶಗಳಲ್ಲಿ ಮಾನವನ ಚಟುವಟಿಕೆಯನ್ನು ಅವಲೋಕನ ಮಾಡಲಾಗುತ್ತದೆ.

4. ವಿಜ್ಞಾನದಲ್ಲಿ ರಸಾಯನ ಶಾಸ್ತ್ರ, ಖಗೋಳಶಾಸ್ತ್ರ, ಸಸ್ಯಶಾಸ್ತ್ರ, ಜೀವಶಾಸ್ತ್ರ, ಭೌತಶಾಸ್ತ್ರ ಮುಂತಾದವುಗಳು ಒಳಗೊಳ್ಳುತ್ತವೆ. ಇದರ ಕಾರ್ಯಬಾಹುಳ್ಯವು ಪ್ರಕೃತಿಯ ಕುರಿತು ವಿಚಾರಮಾಡುವುದು.

5. ಗಣಿತಶಾಸ್ತ್ರವು ಗಣಕ ವಿಜ್ಞಾನ, ತರ್ಕಶಾಸ್ತ್ರ, ಗಣಿತ ಮತ್ತು ಸಂಖ್ಯಾಶಾಸ್ತ್ರಗಳನ್ನು ಒಳಗೊಂಡಿದೆ. ವಿಚಾರಯುತವಾಗಿ ಮತ್ತು ಕ್ರಮಾನುಗತವಾಗಿ ಕಂಡುಕೊಂಡ ವಿಷಯಗಳ ಸಾರಾಂಶಗಳನ್ನು ವಿಂಗಡಣೆ ಮಾಡಿ, ಅವುಗಳ ನಡುವಿನ ಸಂಬಂಧಗಳನ್ನು ಅರಿತುಕೊಳ್ಳುವುದು ಇದರ ಗುರಿ.

## ಆ. ಅರಿಸ್ಟಾಟಲನ ವರ್ಗೀಕರಣ

ಅರಿಸ್ಟಾಟಲನು ಜ್ಞಾನಶಿಸ್ತುಗಳನ್ನು ಮೂರು ವಿಧವಾಗಿ ವಿಂಗಡಿಸಿದ್ದಾನೆ. ಪ್ರತಿಯೊಂದಕ್ಕೂ ಪ್ರತ್ಯೇಕವಾದ ಗುರಿ ಇದ್ದು, ಅದಕ್ಕೆ ವಿಶಿಷ್ಟ ವಿಷಯ, ವಸ್ತು ಹಾಗೂ ಸಾಕಷ್ಟು ಪರಿಶ್ರಮದ ಅಗತ್ಯವಿದೆ.

### ಸೈದ್ಧಾಂತಿಕ:

ಸೈದ್ಧಾಂತಿಕ ಆಧಾರದ ಶಿಸ್ತುಗಳ ಉದ್ದೇಶವು ತಿಳಿದುಕೊಳ್ಳುವುದು ಮತ್ತು ಅರ್ಥೈಸುವುದು. ಸೈದ್ಧಾಂತಿಕ ಶಿಸ್ತುಗಳಾದ ಗಣಿತಶಾಸ್ತ್ರ ಮತ್ತು ಪ್ರಾಕೃತಿಕ ವಿಜ್ಞಾನಗಳಿಗೆ, ಸೈದ್ಧಾಂತಿಕವಾಗಿ ಅವುಗಳ ಸಾರವನ್ನರಿತುಕೊಂಡು ವ್ಯವಹರಿಸಿ, ಗ್ರಹಿಸಿ ಅವುಗಳ ತತ್ವವನ್ನು ಬೆಳೆಸಲು ಬಲ್ಲಂತಹ ಅನ್ವೇಷಕರ ಅಗತ್ಯವಿದೆ. ಮಾತ್ರವಲ್ಲದೆ ಅಧ್ಯಯನದ ವಿಷಯಗಳಲ್ಲಿ ಸಾಪೇಕ್ಷ ಸ್ಥಾಯಿತ್ವ ಮತ್ತು ಏಕರೂಪತೆ ಇರಬೇಕಾಗುತ್ತದೆ. ಅದಕ್ಕಾಗಿಯೇ ಭೌತಶಾಸ್ತ್ರವು ಕೇವಲ ವ್ಯಷ್ಟಿ(ನಿರ್ದಿಷ್ಟ ಘಟನೆಗಳಲ್ಲಿ) ವಿಷಯದಲ್ಲಿ ಅಲ್ಲದೆ ಸಾಮಾನ್ಯ ವಿಷಯಗಳ ಜತೆಗೆ ವ್ಯವಹರಿಸುತ್ತದೆ ಎಂದು ಹೇಳಲಾಗುತ್ತದೆ. (ಅಸ್ಥಿರ ಸಂಬಂಧಗಳು).

### ಪ್ರಾಯೋಗಿಕ:

ಪ್ರಾಯೋಗಿಕ ಜ್ಞಾನದ ಉದ್ದೇಶ ಕಾರ್ಯಗತಗೊಳಿಸುವುದು ಅಥವಾ ಮಾಡಿ ತಿಳಿಯುವುದು. ಸೈದ್ಧಾಂತಿಕ ಜ್ಞಾನಶಿಸ್ತುಗಳಂತಲ್ಲದೆ, ಪ್ರಾಯೋಗಿಕ ಶಿಸ್ತುಗಳು ಬದಲಿಸಬಹುದಾದ ಅಥವಾ ಮಾರ್ಪಡಿಸಬಹುದಾದ ವಿಷಯಗಳನ್ನು ಕುರಿತದ್ದಾಗಿರುತ್ತದೆ. ಉದಾಹರಣೆಗೆ, ಮಾನವನ ಲಕ್ಷಣಗಳು ಮತ್ತು ಸಮಾಜದ ಲಕ್ಷಣಗಳು ಇತ್ಯಾದಿ. ಇವು

ಕಾಲಕಾಲಕ್ಕೆ ಬದಲಾಗುತ್ತವೆ. ಅರಿಸ್ಟಾಟಲನ ಪ್ರಕಾರ ಪ್ರಮುಖ ಪ್ರಾಯೋಗಿಕ ಶಿಸ್ತುಗಳೆಂದರೆ, ನೀತಿಶಾಸ್ತ್ರ, ರಾಜನೀತಿ ಮತ್ತು ಶಿಕ್ಷಣ. ಈ ಕ್ಷೇತ್ರದ ಪ್ರಯೋಗಶೀಲರಿಗೆ ಸೈದ್ಧಾಂತಿಕರಿಗಿಂತ ಭಿನ್ನವಾದ, ಅಥವಾ ಅದರಿಂದಾಚೆಗಿನ ಕೆಲವು ಕೌಶಲಗಳೂ ಸಾಮರ್ಥ್ಯಗಳೂ ಬೇಕಾಗುತ್ತವೆ.

### ಉತ್ಪಾದನಶೀಲ:

ಉತ್ಪಾದಕತೆಯ ಗುರಿ ತಯಾರಿಸುವುದು ಮತ್ತು ಸೃಷ್ಟಿಸುವುದರಲ್ಲಿದೆ. ಉತ್ಪಾದಕ ಘಟಕಗಳಾದ ಇಂಜಿನಿಯರಿಂಗ್, ಲಲಿತಕಲೆ ಮೊದಲಾದವುಗಳಿಗೆ ಹೆಚ್ಚು ಪಳಗಿದ ಕೌಶಲಗಳ ಅಗತ್ಯವಿದೆ. ಅರಿಸ್ಟಾಟಲನ ಸಿದ್ಧಾಂತವು ಇವತ್ತಿಗೂ ಅನ್ವಯಿಸುತ್ತದೆ. ಕೆಲವು ಸಾಂಪ್ರದಾಯಿಕ ಜ್ಞಾನಶಿಸ್ತುಗಳನ್ನೂ ಮೀರಿ, ಸಮಕಾಲೀನ ಉನ್ನತ ಶಿಕ್ಷಣ ಸಂಸ್ಥೆಗಳು ಆನ್ವಯಿಕ, ಕ್ರಿಯಾಶೀಲ ಮತ್ತು ಕಿರಿಯರಿಗೆ ಯೋಗ್ಯವಾದ ನಿರ್ವಹಣ(ಮೇನೇಜ್ಮೆಂಟ್), ಮಾಹಿತಿ ತಂತ್ರಜ್ಞಾನ(ಇನ್ಫಾರ್ಮೇಶನ್ ಟೆಕ್ನೋಲೆಜಿ), ಆಂತರಿಕ ವಿನ್ಯಾಸ(ಇನ್ಟೀರಿಯರ್ ಡಿಸೈನ್), ದಂತಗಳ ಆರೋಗ್ಯ ಮುಂತಾದ ವಿಷಯಗಳನ್ನು ಶಿಕ್ಷಣಗಳಲ್ಲಿ ಅಳವಡಿಸಿಕೊಂಡಿವೆ.

### ಇ) ಬಿಗ್ಲಿನನ(1970) ಶೈಕ್ಷಣಿಕ ಶಿಸ್ತುಗಳ ವಿವಿಧ ವರ್ಗೀಕರಣಗಳು.

1970ರ ಆದಿಭಾಗದಲ್ಲಿ ಬಿಗ್ಲಿನನು ಶಿಕ್ಷಕರ ವಿವೇಚನಾ ಸಾಮರ್ಥ್ಯವನ್ನು ಕುರಿತು ತಿಳಿದುಕೊಳ್ಳಲು, ವಿಭಿನ್ನ ಶೈಕ್ಷಣಿಕ ಕ್ಷೇತ್ರಗಳ ಸಮಾನ ಅಂಶಗಳ ಮತ್ತು ವಿಭಿನ್ನತೆಗಳ ಕುರಿತಾದ ಅಧ್ಯಯನವನ್ನು ಕೈಗೊಂಡನು.

ಇದರ ಒಳನೋಟವನ್ನು ಹೀಗೆ ವಿಂಗಡಿಸಲಾಗಿದೆ.

1. ಶುದ್ಧ ಹಾಗೂ ಆನ್ವಯಿಕ
2. ಕಠಿಣ ಹಾಗೂ ಮೃದು
3. ಜೈವಿಕ ವ್ಯವಸ್ಥೆಯುಳ್ಳವು ಮತ್ತು ಇಲ್ಲದವು

## 1. ಶುದ್ಧ ಹಾಗೂ ಆನ್ವಯಿಕ ಶಿಸ್ತುಗಳು

**ಶುದ್ಧ ಶಿಸ್ತು:** ಶುದ್ಧ ಶಿಸ್ತು ಎಂದರೆ ಕೇವಲ ಜ್ಞಾನಕ್ಕಾಗಿ ಒಂದು ಜ್ಞಾನಶಿಸ್ತನ್ನು ಅಧ್ಯಯನ ಮಾಡುವುದೇ ಹೊರತು ಅದನ್ನು ಅನ್ವಯಿಸಿಕೊಳ್ಳುವುದಲ್ಲ. ಉದಾಹರಣೆಗೆ; ಗಣಿತಶಾಸ್ತ್ರವು ಒಂದು ಶುದ್ಧ ಶಿಸ್ತು. ಅದರಲ್ಲಿ ನಾವು ಸಮಸ್ಯೆಗಳ ಪರಿಹಾರವನ್ನು ಮಾಡುತ್ತೇವೆ, ವಿಷಯಗಳನ್ನು ಅರಿತುಕೊಂಡು ಪ್ರಶ್ನೆಗಳಿಗೆ ಉತ್ತರಿಸುತ್ತೇವೆ. ಅದಕ್ಕಾಗಿ ಸುತ್ತಲಿನ ಜಗತ್ತನ್ನು ಅವಲಂಬಿಸಬೇಕಾಗಿಲ್ಲ. ಆದರೆ ಅದರ ನಿಯಮಗಳನ್ನು ಮಾತ್ರ ಅವಲಂಬಿಸಬೇಕಾಗುತ್ತದೆ. ಆದುದರಿಂದಲೇ ಅದರ ಕೆಲವು ಸಿದ್ಧಾಂತಗಳು ಮತ್ತು ನಿಯಮಗಳು ನಮಗೆ ಅಸ್ಪಷ್ಟವಾಗಿ ಅರ್ಥವಿಸಿಕೊಳ್ಳಲು ಕಷ್ಟವಾಗುತ್ತದೆ. ಗಣಿತದ ಸಂಶೋಧನೆಯಿಂದ ದೊರೆತ ಫಲಿತಾಂಶಗಳು ಗಣಿತಶಾಸ್ತ್ರದ ಕ್ಷೇತ್ರಕ್ಕೆ ಹೆಚ್ಚಿನ ಜ್ಞಾನವನ್ನು ಒದಗಿಸುತ್ತದೆ. ಪ್ರತಿಯೊಂದು ಜ್ಞಾನವೂ ತನ್ನ ಸುತ್ತಲಿನ ಜಗತ್ತಿಗೆ ನೇರವಾಗಿ ಅನ್ವಯವಾಗಬೇಕೆಂದಿಲ್ಲ. ಆದುದರಿಂದ ಶುದ್ಧಶಿಸ್ತುಗಳೆಂದರೆ ಮೂಲ ಸಂಶೋಧನೆಯ ಕಡೆಗೆ ಕೊಂಡೊಯ್ಯುವಂತಹವುಗಳು ಎಂದು ಹೇಳಬಹುದು. ಹೀಗೆ ಅಪೂರ್ವ ವಿಷಯಗಳ ನಿಯಮಬದ್ಧ ವೀಕ್ಷಣೆಯ ಮೂಲಕ ಪೂರ್ಣವಾಗಿ ಅರಿವಿಗೆ ಬಾರದ ವಿಷಯಗಳನ್ನು ಬೆಳಕಿಗೆ ತಂದು ತತ್ವಗಳನ್ನು ಬೆಳೆಸಲು ಸಾಧ್ಯವಾಗುತ್ತದೆ. ಇದು ನೂತನ ಜ್ಞಾನಕ್ಕೆ ಪೂರಕವಾಗುತ್ತದೆ. ಶುದ್ಧಶಿಸ್ತನ್ನು ಕೇವಲ ಜ್ಞಾನಕ್ಕಾಗಿಯೇ ಇರಿಸಬೇಕಲ್ಲದೆ, ಅನ್ವಯಿಸಿಕೊಳ್ಳುವುದಕ್ಕಲ್ಲ. ಉದಾಹರಣೆಗೆ ಶುದ್ಧ ಭೌತಶಾಸ್ತ್ರ, ಶುದ್ಧ ಇತಿಹಾಸ, ಶುದ್ಧ ರಸಾಯನ ಶಾಸ್ತ್ರ ಇತ್ಯಾದಿ.

ಆನ್ವಯಿಕ ಶಿಸ್ತುಗಳು ಹೆಸರೇ ಸೂಚಿಸುವಂತೆ ನಮ್ಮ ವಾಸ್ತವ ಜಗತ್ತಿನ ಸಂದರ್ಭಗಳ ಜ್ಞಾನಕ್ಕೆ ಸಂಬಂಧಿಸಿದವುಗಳಾಗಿರುತ್ತವೆ. ಈ ತೆರನಾದ ಶಿಸ್ತುಗಳು ಅವುಗಳ ಸೈದ್ಧಾಂತಿಕ ನೆಲೆಯ ಅಧ್ಯಯನಗಳ ಮೂಲಕವಾಗಿ ಜಗತ್ತಿಗೆ ವಿಶಿಷ್ಟವಾದ ಕೊಡುಗೆಗಳನ್ನು ಕೊಡುತ್ತವೆ. ಆನ್ವಯಿಕ ಶಿಸ್ತುಗಳು ಒಂದಕ್ಕಿಂತ ಅಧಿಕ ಶಿಸ್ತುಗಳ ಜ್ಞಾನವನ್ನು

ಬಳಸಿಕೊಳ್ಳುತ್ತವೆ. ಸುತ್ತಲಿನ ಜಗತ್ತಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹಾರ ಮಾಡುವುದು ಅವುಗಳ ಮುಖ್ಯ ಉದ್ದೇಶ. ಉದಾಹರಣೆಗೆ, ಆನ್ವಯಿಕ ಶಿಸ್ತಿಗೆ ಒಳಪಟ್ಟ, ಮಾನವ ಸಂಪನ್ಮೂಲ ಅಭಿವೃದ್ಧಿಯು ಬಹಳಷ್ಟು ವಿಷಯಗಳನ್ನು ಮನಶ್ಶಾಸ್ತ್ರ ಮತ್ತು ಸಮಾಜ ಶಾಸ್ತ್ರದಿಂದ ಪಡೆದುಕೊಂಡಿದೆ. ಅದೇ ರೀತಿಯಲ್ಲಿ ಆನ್ವಯಿಕ ಶಿಸ್ತಿಗೆ ಒಳಪಟ್ಟ ಇಂಜಿನಿಯರಿಂಗ್ ಶುದ್ಧವಿಜ್ಞಾನಕ್ಕೆ ಸಂಬಂಧಿಸಿದ ಗಣಿತವನ್ನೂ ಅವಲಂಬಿಸುತ್ತದೆ. ಅಂತೆಯೇ, ಶಿಕ್ಷಣದಲ್ಲಿ ನಾವು ಮೂಲ ವಿಷಯಗಳಾದ ತತ್ವಶಾಸ್ತ್ರ, ಮನಶ್ಶಾಸ್ತ್ರ, ಸಮಾಜಶಾಸ್ತ್ರ ಮತ್ತು ಇತಿಹಾಸದ ಕಡೆಗೂ ನಮ್ಮ ಗಮನವನ್ನು ಹರಿಸಿ ಅವುಗಳನ್ನು ಶಿಕ್ಷಣಕ್ಷೇತ್ರದ ಜ್ಞಾನಕ್ಕೆ ಸೇರಿಸಿಕೊಳ್ಳಬೇಕಾಗುತ್ತದೆ. ಆದುದರಿಂದ ಶಿಕ್ಷಣವು ಒಂದು ಆನ್ವಯಿಕ ಶಿಸ್ತಾಗಿದೆ.

## 2. ಕಠಿಣ ಹಾಗೂ ಮೃದುಶಿಸ್ತುಗಳು

**ಕಠಿಣ ಶಿಸ್ತುಗಳು:** ಭೌತಶಾಸ್ತ್ರ, ಇಂಜಿನಿಯರಿಂಗ್, ಕಂಪ್ಯೂಟರ್ ಮತ್ತು ರಸಾಯನಶಾಸ್ತ್ರಗಳಂತಹ ವಿಷಯಗಳು ಪರಿಮಾಣಾತ್ಮಕ ದತ್ತಾಂಶಗಳನ್ನು ಬಳಸಿಕೊಳ್ಳಲೇಬೇಕಾಗುತ್ತದೆ. ಭವಿಷ್ಯದಲ್ಲಿ ಕಾಪಿಡುವ ಪ್ರಾಯೋಗಿಕ ವಿಧಾನದ ಇವುಗಳನ್ನು 'ಕಠಿಣ ಶಿಸ್ತುಗಳು' ಎಂದು ಹೇಳಲಾಗುತ್ತದೆ. ಈ ಕಠಿಣ ಶಿಸ್ತುಗಳು ಜ್ಞಾನದ ಭಂಡಾರಗಳಿಗಾಗಿ ಪ್ರಾಯೋಗಿಕ ವಿಧಾನಗಳನ್ನು ಬಳಸಿಕೊಳ್ಳುತ್ತವೆ. ಬ್ರಾಕ್ಸನ್ (1995) ಕಠಿಣ ಶಿಸ್ತುಗಳನ್ನು ಔದ್ಯೋಗಿಕ ಬೆಳವಣಿಗೆ ಮತ್ತು ಸಂಜ್ಞಾನಾತ್ಮಕ ಗುರಿಗಳ ಕಾಳಜಿಗಳನ್ನುಳ್ಳವು ಎಂದು ಗುರುತಿಸಿದ್ದಾನೆ.

**ಮೃದು ಶಿಸ್ತುಗಳು:** ಮೃದುಶಿಸ್ತುಗಳು ಗುಣಾತ್ಮಕ ದತ್ತಾಂಶಗಳನ್ನು ಒಳಗೊಂಡಿರುತ್ತವೆ. ಪಾಯೋಗಿಕ ವಿಧಾನವನ್ನು ಇದರಲ್ಲಿ ಬಳಸಲಾಗುವುದಿಲ್ಲ. ಮೃದು ಶಿಸ್ತುಗಳಿಗೆ ಭಾಷೆಗಳು, ಕಾನೂನು, ಮಾನವಶಾಸ್ತ್ರ ಮತ್ತು ಶಿಕ್ಷಣಗಳನ್ನು ಉದಾಹರಿಸಬಹುದು. ಮೃದುಶಿಸ್ತುಗಳ ವಿಶಿಷ್ಟತೆಯು ಸಾಮಾನ್ಯ ಶಿಕ್ಷಣದ ಬೆಳವಣಿಗೆಯೊಂದಿಗೆ, ಗುಣಮಟ್ಟದ ಬೆಳವಣಿಗೆ, ಗಂಭೀರ ಚಿಂತನೆ ಮತ್ತು ಪಾಂಡಿತ್ಯಪೂರ್ಣ ಚಟುವಟಿಕೆಗಳಿಗೆ ಪೂರಕವಾದುದು (ಸಂಶೋಧನೆಗೆ ಸಂಬಂಧಿಸಿದ ಲೇಖನಗಳ ಓದು ಮುಂತಾದವು).

## 3. ಜೈವಿಕ ವ್ಯವಸ್ಥೆಯುಳ್ಳವು ಮತ್ತು ಇಲ್ಲದವು

ಶೈಕಣಿಕ ಶಿಸ್ತುಗಳ ಮೂರನೆಯ ವಿಂಗಡಣೆಯನ್ನು ಬಿಗ್ಲಿನ್ (1970) ಜೀವನ ವಿಧಾನದ ಬಗ್ಗೆ ಕಾಳಜಿ ಹಾಗೂ ಕಾಳಜಿರಹಿತ ಜೀವನ ವಿಧಾನದ ಹಿನ್ನೆಲೆಯಿಂದ ಮಾಡಿದ್ದಾನೆ. ಶೈಕ್ಷಣಿಕ ಶಿಸ್ತುಗಳಾದ ಜೀವಶಾಸ್ತ್ರ ಮತ್ತು ಮನಶ್ಶಾಸ್ತ್ರಗಳನ್ನು ಸಜೀವಿಗಳ ಜೀವನ ವಿಧಾನದ ಒಂದು ಗುಂಪನ್ನಾಗಿಯೂ ಶೈಕ್ಷಣಿಕ ಶಿಸ್ತುಗಳಾದ ಭೌತಶಾಸ್ತ್ರ, ಗಣಿತ, ಭೂಗೋಳ ಶಾಸ್ತ್ರ ಮುಂತಾದವುಗಳನ್ನು ನಿರ್ಜೀವ ಶಿಸ್ತುಗಳನ್ನಾಗಿಯೂ ವಿಂಗಡಿಸಿದ್ದಾನೆ.

### ಜ್ಞಾನಗಳ ಸಮನ್ವಯತೆ ಮತ್ತು ಪ್ರಯೋಗದ ಹಿನ್ನೆಲೆಯಿಂದ ಶೈಕ್ಷಣಿಕ ಶಿಸ್ತುಗಳ ಪ್ರಾಧಾನ್ಯತೆ

ಮುಂದೆ ಸ್ಮಾರ್ಟ್ ಮತ್ತು ಎತಿಂಗ್‌ಟನ್‌ರವರ ಅಧ್ಯಯನ(1995)ವು, ಪದವಿ ಶಿಕ್ಷಣದ ಗುರಿಯ ಕುರಿತು ನಿರಂತರವಾಗಿ ಪದವಿ ತರಗತಿಗಳಿಗೆ ಬೋಧನೆ ಮಾಡಿದ 4000 ಮಂದಿ ವಿಶ್ವವಿದ್ಯಾನಿಲಯದ ಅಧ್ಯಾಪಕರ ಅಭಿಪ್ರಾಯಗಳ ವರದಿಯನ್ನು ಒಳಗೊಂಡಿದೆ. ಇವೆಲ್ಲವುಗಳ ಕೊನೆಯ ನಿರ್ಣಯಗಳು ಜ್ಞಾನದ ಗಳಿಕೆಯಲ್ಲಿ ಮೃದು ಹಾಗೂ ಆನ್ವಯಿಕ ಶಿಸ್ತುಗಳ ಪಾಧಾನ್ಯತೆಯು ಹೆಚ್ಚಿನದ್ದೆಂಬುದನ್ನೂ ಕಠಿಣ ಶಿಸ್ತುಗಳು ಜ್ಞಾನದ ಬಳಕೆಯಲ್ಲಿ ಹೆಚ್ಚಿನ ಕಾಳಜಿ ವಹಿಸುತ್ತವೆ ಎಂಬುದನ್ನೂ ತಿಳಿಸುತ್ತವೆ. ಜ್ಞಾನದ ಸಮನ್ವಯತೆ ಮತ್ತು ಪ್ರಯೋಗಗಳೆರಡರ ಅರಿವಿನ ವಿಷಯದಲ್ಲಿ ಆನ್ವಯಿಕ ಶಿಸ್ತು ಶುದ್ಧಶಿಸ್ತಿಗಿಂತಲೂ ಪ್ರಮುಖವಾಗಿದೆ.

### ಬಿಗ್ಲನ್ ಮತ್ತು ಬೆಕರ್‌ನ ವರ್ಗೀಕರಣ ತತ್ವ (Biglan-Becher typology)

ಬಿಗ್ಲನ್‌ನ ಕೆಲಸಗಳು ಶಿಸ್ತುಗಳ ಸಂಜ್ಞಾನಾತ್ಮಕ ಆಯಾಮಕ್ಕೆ ಕೇಂದ್ರೀಕೃತವಾಗಿದ್ದರೆ ಬೆಕರ್ 1989ರಲ್ಲಿ ಶೈಕ್ಷಣಿಕ ಶಿಸ್ತುಗಳ ಗಮನವನ್ನು ಸಾಮಾಜಿಕ ಆಯಾಮಗಳೆಡೆಗೆ ಸೆಳೆದನು. ಇವರಿಬ್ಬರ ತತ್ವಗಳು ಒಟ್ಟುಗೂಡಿ ಬಿಗ್ಲನ್ ಮತ್ತು ಬೆಕರ್‌ನ ವಿಧಾನ ತತ್ವ (ಃಜಛಿಜಡಿ ಣಥಿಠಿಂಟಂರಿಥಿ)ವು ಹುಟ್ಟಿಕೊಂಡಿತು.

ಇದರ ಪ್ರಕಾರವಾಗಿ ನಾಲ್ಕು ವಿಧದ ಪ್ರಮುಖ ಗುಂಪುಗಳು ಸಾಧ್ಯವಾಗಿವೆ.

1. ಕಠಿಣ ಮತ್ತು ಶುದ್ಧ ಶಿಸ್ತುಗಳು
2. ಕಠಿಣ ಮತ್ತು ಆನ್ವಯಿಕ ಶಿಸ್ತುಗಳು
3. ಮೃದು ಹಾಗೂ ಶುದ್ಧ ಶಿಸ್ತುಗಳು
4. ಮೃದು ಹಾಗೂ ಆನ್ವಯಿಕ ಶಿಸ್ತುಗಳು

## 1. ಕಠಿಣ ಮತ್ತು ಶುದ್ಧ ಶಿಸ್ತುಗಳು

ಇವು ಸಾಮಾನ್ಯ ಕ್ಷೇತ್ರಗಳಲ್ಲಿ ಮಾನವನನ್ನು ಅರ್ಥವಿಸಿಕೊಂಡು ಕೆಲವೇ ಕೆಲವು ಗುಂಪುಗಳ ಸಮಸ್ಯೆಗಳನ್ನು ಮಾತ್ರ ಒಳಗೊಳ್ಳುತ್ತವೆ. ಈ ಶಿಸ್ತುಗಳ ಜ್ಞಾನದ ಗುಣಲಕ್ಷಣಗಳು ಸಂಚಿತ ಮತ್ತು ಅಸಾಧಾರಣವಾಗಿ ವಿಶ್ವವ್ಯಾಪಿಯಾಗಿರುತ್ತದೆ. ಈ ಜ್ಞಾನದ ಫಲಿತಾಂಶದಿಂದ ನೂತನವಾದ ಯಾವುದೋ ಒಂದು ಆವಿಷ್ಕಾರಗೊಳ್ಳುವುದರೊಂದಿಗೆ ಈ ವೇಳೆಗಾಗಲೇ ಇರುವ ಜ್ಞಾನವನ್ನು ವಿಸ್ತರಿಸುತ್ತದೆ. ಸ್ಫಟಿಕವು ಬೆಳೆಯುತ್ತಿರುವಂತೆ ಹೆಚ್ಚು ಹೆಚ್ಚು ಅಣುಗಳು ಅದನ್ನು ಸೇರಿಕೊಳ್ಳುವಂತೆ, ಇಂತಹ ಶಿಸ್ತುಗಳ ಗುಂಪಿನಲ್ಲೂ ಸಂಭವಿಸುತ್ತದೆ. ಹೊಸ ಜ್ಞಾನಗಳು ಸೇರುತ್ತಾ ಹೋದಂತೆ ಹಳೆಯ ಜ್ಞಾನವು ವೃದ್ಧಿಯಾಗುತ್ತಾ ಹೋಗುತ್ತದೆ. ಹೇಗೆಂದರೆ, ಅಣುಗಳ ಕುರಿತಾದ ನಮ್ಮ ಜ್ಞಾನವು ಅವುಗಳ ಕುರಿತಾದ ಅಧ್ಯಯನವು ಸಾಗಿದಂತೆ ಇನ್ನಷ್ಟು ಪ್ರಗತಿಯನ್ನು ಹೊಂದುತ್ತಾ ಸಾಗಿತಲ್ಲವೇ, ಹಾಗೆ. ಜ್ಞಾನ ಸಂಪಾದಿಸುವವನಿಗೂ ಜ್ಞಾನಕ್ಕೂ ನಡುವಿನ ಸಂಬಂಧವು ನಿಷ್ಪಕ್ಷಪಾತವಾದುದು ಮತ್ತು ಬಹಳಷ್ಟು ವಸ್ತುನಿಷ್ಠವಾದುದು. ಈ ತೆರನಾದ ಶಿಸ್ತುಗಳ ಜ್ಞಾನವನ್ನು ಪರಿಶೀಲಿಸಲೋಸುಗವೇ ಬಹಳಷ್ಟು ನಿರ್ದಿಷ್ಟವಾದ ಮಾನದಂಡಗಳು ಇವೆ. ಉದಾಹರಣೆಗೆ ಇಬ್ಬರು ವಿಜ್ಞಾನಿಗಳು ಉಷ್ಣಾಂಶದ ಪರಿಣಾಮಗಳ ಬಗ್ಗೆ ಅಧ್ಯಯನ ಮಾಡುತ್ತಿದ್ದಾರೆ ಎಂದುಕೊಳ್ಳೋಣ. ಅವರ ಫಲಿತಾಂಶಗಳು ಸಮಾನವಾಗಿರುತ್ತವೆ. ಅವರು ಭೂಮಿಯ ಯಾವ ಭಾಗದಲ್ಲಿ ಪ್ರಯೋಗಗಳನ್ನು ಮಾಡಿದ್ದಾರೆ ಎಂಬುದು ಇಲ್ಲಿ ಮುಖ್ಯವಲ್ಲ. ಶೈಕ್ಷಣಿಕ ಸಮುದಾಯಗಳಲ್ಲಿ ಕಠಿಣ-ಶುದ್ಧ ಶಿಸ್ತುಗಳು ಬಹಳ ಕ್ರಮಬದ್ಧವಾಗಿ ಜೋಡಿಸಲ್ಪಟ್ಟಿರುತ್ತವೆ. ಅದರ ಕೆಲಸಗಳು ಬಹಳಷ್ಟು ಸ್ಪರ್ಧಾತ್ಮಕವಾಗಿದ್ದು ಪ್ರಕಟಣೆಗಳೂ ಉನ್ನತ ಮಟ್ಟದ್ದಾಗಿರುತ್ತವೆ.

## 2. ಕಠಿಣ ಮತ್ತು ಆನ್ವಯಿಕ ಶಿಸ್ತುಗಳು

ಇವು ಯಾವುದಾದರೂ ನಿರ್ದಿಷ್ಟ ಉದ್ದೇಶವನ್ನು ಇರಿಸಿಕೊಂಡವುಗಳಾಗಿರುತ್ತವೆ. ಇವುಗಳ ಮಹತ್ವವು ತತ್ವಗಳ ಪ್ರಯೋಗಗಳ ಮೂಲಕ ಸೃಷ್ಟಿಸುವ ತಂತ್ರಗಳು ಹಾಗೂ ಉತ್ಪನ್ನಗಳ ಮೂಲಕ ಗೋಚರವಾಗುತ್ತವೆ. ಇವುಗಳು ಪ್ರಾಯೋಗಿಕ ಹಾಗೂ ಸಮಸ್ಯೆಗಳ ಪರಿಹಾರವನ್ನು ಒಳಗೊಂಡವುಗಳಾಗಿರುತ್ತವೆ. ಪಂಥಾಹ್ವಾನವನ್ನು ನೀಡಿ, ತನ್ನ ಸುತ್ತಲಿನ ಪರಿಸರವನ್ನು ತನ್ನ ಅಂಕೆಯಲ್ಲಿ ಇರಿಸಿಕೊಳ್ಳುವ ಗುಣ ಇದಕ್ಕಿದೆ. ಅನ್ವಯಗಳ ಕಡೆಗೆ ಇವುಗಳು ಗಮನವಿರುವುದರಿಂದ ಈ ಶಿಸ್ತುಗಳಲ್ಲಿ ಶೋಧನಾ ಉಪಕ್ರಮಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಇವು ಗುಣಾತ್ಮಕ ಮತ್ತು ಪರಿಮಾಣಾತ್ಮಕ ಉಪಕ್ರಮಗಳೆರಡನ್ನೂ ಬಳಸಿಕೊಳ್ಳುತ್ತವೆ. ಈ ಶಿಸ್ತಿಗೆ ಒಳಪಟ್ಟ ಉತ್ಪನ್ನಗಳ ಬಗ್ಗೆ ತೀರ್ಪು ನೀಡಬೇಕಾದ ಮಾನದಂಡಗಳು ಕ್ರಿಯಾಶೀಲವಾಗಿರುತ್ತದೆ. ಈ ರೀತಿಯ ಶಿಸ್ತುಗಳಿಂದ ನೂತನ ತಂತ್ರಜ್ಞಾನ ಮತ್ತು ಉತ್ಪನ್ನಗಳು ಹುಟ್ಟಿಕೊಳ್ಳಲು ಸಹಾಯಕವಾಗುತ್ತದೆ.

ಉದಾಹರಣೆಗೆ ಇಂಜಿನಿಯರಿಂಗ್ ಒಂದು ಕಠಿಣ – ಆನ್ವಯಿಕ ಶಿಸ್ತು. ಅದು ಗಣಿತ, ಭೌತಶಾಸ್ತ್ರ, ಮತ್ತು ರಸಾಯನಶಾಸ್ತ್ರಗಳನ್ನು ತನ್ನೊಂದಿಗೆ ಸೇರಿಸಿಕೊಳ್ಳುತ್ತದೆ. ಔಷಧಾಲಯ ಶಾಸ್ತ್ರ (Clinical Medicine) ಕಠಿಣ – ಆನ್ವಯಿಕ ಶಿಸ್ತು. ಅದು ಜೀವಶಾಸ್ತ್ರ ಮತ್ತು ರಸಾಯನ ಶಾಸ್ತ್ರವನ್ನು ಅವಲಂಬಿಸಿದೆ. ಇಂತಹ ಶಿಸ್ತುಗಳ ಆಸಕ್ತಿ ಉದ್ಯಮಾತ್ಮಕವಾಗಿದ್ದು ಔದ್ಯೋಗಿಕ ಮೌಲ್ಯಗಳಿಂದ ನಿರ್ದೇಶಿಸಲ್ಪಡುತ್ತದೆ. ಇವುಗಳ ಹಕ್ಕುಪತ್ರಗಳು ಪ್ರಕಟಣೆಗಳಾಗಿ ಮಂಡಿಸಲ್ಪಡುತ್ತವೆ.

## 3. ಮೃದು ಹಾಗೂ ಶುದ್ಧ ಶಿಸ್ತುಗಳು

ಇವು ಅಸಾಧಾರಣಗಳನ್ನು ಅರಿತುಕೊಳ್ಳಲು ಮತ್ತು ವ್ಯಾಖ್ಯಾನಿಸಲು ಒತ್ತುನೀಡುತ್ತವೆ. ಇಂತಹ ಶಿಸ್ತುಗಳಲ್ಲಿ ಜ್ಞಾನವು, ಕೆಲವೊಮ್ಮೆ ವಿಭಿನ್ನ ಸಂದರ್ಭಗಳಲ್ಲಿ ಪರಿಶೀಲನೆಗೆ ಒಳಪಡಿಸಿದಾಗ ಪುನರಾವರ್ತನೆಗೊಳ್ಳುತ್ತವೆ. ಇವುಗಳಲ್ಲಿ ಸಾಮಾನ್ಯವಾದುದಕ್ಕಿಂತಲೂ ಹೆಚ್ಚಾಗಿ, ನಿರ್ದಿಷ್ಟವಾದ ಸಂಭವಗಳು ಒಳಗೊಂಡಿರುತ್ತವೆ. ಕಠಿಣ ವಿಜ್ಞಾನಕ್ಕಿಂತಲೂ ಇದರಲ್ಲಿ ದತ್ತಾಂಶವು ಗುಣಾತ್ಮಕವಾಗಿರುತ್ತದೆ. ಸಂಶೋಧಕನಿಗೂ ಜ್ಞಾನಕ್ಕೂ ನಡುವೆ ವೈಯಕ್ತಿಕ ಸಂಬಂಧವು ಹಂಚಿಕೆಯಾಗುತ್ತದೆ. ಮಾಹಿತಿಗಳ ಪರಿಶೀಲನೆಯ ಸಂದರ್ಭದಲ್ಲಿ ವಿಭಿನ್ನ ನೋಟಗಳು ಕಾಣಬಹುದು. ವಿಶ್ಲೇಷಣೆಯನ್ನು ಮಾಡುವ ಸಂದರ್ಭದಲ್ಲಿ ಚಿಂತನೆಗಳು ಉನ್ನತ ಮಟ್ಟದವುಗಳಾಗಿರಬಹುದು. ಮಹತ್ವಪೂರ್ಣ ಪ್ರಶ್ನೆಗಳಿಗೆ ಹೇಗೆ ಉತ್ತರಿಸಬೇಕು ಎನ್ನುವ ನಿರ್ದಿಷ್ಟತೆ ಇರಲಾರದು. ಮಾನವಶಾಸ್ತ್ರ ಹಾಗೂ ಇತಿಹಾಸಗಳನ್ನು ಇಂತಹ ಶಿಸ್ತುಗಳಿಗೆ ಉದಾಹರಿಸಬಹುದು. ಇಂತಹ ಶಿಸ್ತುಗಳ ಶೈಕ್ಷಣಿಕ ಸಮುದಾಯಗಳ ರಚನಾಕ್ರಮವು ಉಳಿದ ಕಠಿಣ–ಶುದ್ಧ ಶಿಸ್ತಿಗೆ ಹೋಲಿಸಿದರೆ ಕನಿಷ್ಟವಾಗಿ ಕಂಡುಬರಬಹುದು. ಇವರ ಪ್ರಕಟಣೆಗಳ ಮಟ್ಟವೂ ಕನಿಷ್ಟವಾಗಿರುತ್ತವೆ. ಕುತೂಹಲದ ವಿಷಯವೆಂದರೆ, ಸಮಾಜಶಾಸ್ತ್ರದಂತಹ ವಿಷಯಗಳು ಮೃದು–ಶುದ್ಧ ಶಿಸ್ತಿಗೆ ಸೇರಿದ್ದಾದರೂ ಅದರ ಉಪವಿಭಾಗವಾದ ಸಮಾಜಮಿತಿ ಶಾಸ್ತ್ರವು (Sociometric) ಕಠಿಣ–ಮೃದು ಶಿಸ್ತಾಗಿದೆ.

## 4. ಮೃದು ಹಾಗೂ ಅನ್ವಯಿಕ ಶಿಸ್ತುಗಳು

ಇವು ಶಿಷ್ಟಾಚಾರದ ಪ್ರಕ್ರಿಯೆಗಳಿಗೆ ಒತ್ತು ಕೊಡುತ್ತದೆ. ಇವುಗಳು ಕ್ರಿಯಾತ್ಮಕ ಹಾಗೂ ಪ್ರಯೋಜನಕಾರಿಗಳಾಗಿದ್ದು, ವೃತ್ತಿಪರ ಕ್ಷೇತ್ರಗಳ ವರ್ಧನೆಗೆ ಸಂಬಂಧಪಟ್ಟವುಗಳಾಗಿರುತ್ತವೆ. ಅವುಗಳ ಸ್ಥಿತಿ ಯಾವತ್ತೂ ಸ್ಥಿರವಲ್ಲ. ಅವುಗಳು ಬೌದ್ಧಿಕವಾಗಿ ರೂಪಿತವಾಗುವಂತಹವು. ಇವು ತಮ್ಮ ಬೆಳವಣಿಗೆಗೆ, ಗುಣಾತ್ಮಕ ಹಾಗೂ ಪರಿಮಾಣಾತ್ಮಕ ದತ್ತಾಂಶಗಳನ್ನು ಬೆರೆಸಿಕೊಂಡಿರುತ್ತವೆ. ಉದಾಹರಣಾ ಪರಿಶೀಲನಾ ಅಧ್ಯಯನವು ಇವುಗಳ ಪ್ರಮುಖ ಆಯುಧವಾಗಿವೆ. ಇವುಗಳಿಗೆ ಉದಾಹರಣೆಯಾಗಿ, ಕಾನೂನು ಮತ್ತು ಶಿಕ್ಷಣ ವಿಷಯಗಳನ್ನು ತೆಗೆದುಕೊಳ್ಳಬಹುದು. ಶಿಕ್ಷಣವು ಮನಶ್ಶಾಸ್ತ್ರ, ತತ್ವಶಾಸ್ತ್ರಗಳನ್ನು ಅವಲಂಬಿಸಿರುವಂತಹದು. ಪ್ರಕಟಣಾ ಮಟ್ಟವು ಇದರಲ್ಲಿ ಬಹಳ ಕನಿಷ್ಟ ಮಟ್ಟದ್ದಾಗಿರುತ್ತದೆ.

## ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–2

ಈ ಕೆಳಗೆ ಅಪೂರ್ಣವಾದ ವಾಕ್ಯಗಳನ್ನು ನೀಡಲಾಗಿದೆ. ಸೂಕ್ತ ಉತ್ತರಗಳಿಂದ ಅವುಗಳನ್ನು ಭರ್ತಿಮಾಡಿ.

1. ವೃತ್ತಿಪರರು ಶಿಸ್ತುಗಳನ್ನು ವರ್ಗೀಕರಿಸಲು ಆಧಾರ________________

   ಅ. ವಿಷಯ

   ಆ. ಸ್ವಭಾವ

   ಇ. ಗುಣಲಕ್ಷಣಗಳು

   ಈ. ಹೋಲಿಕೆಗಳು

2. ಶುದ್ಧಶಿಸ್ತಿನ ಅಧ್ಯಯನವನ್ನು ನಡೆಸುವ ಉದ್ದೇಶ________________

   ಅ. ಕೇವಲ ಜ್ಞಾನಕ್ಕಾಗಿ

   ಆ. ಕೇವಲ ಅನ್ವಯಿಸಿಕೊಳ್ಳಲು

   ಇ. ಕೇವಲ ಜ್ಞಾನಕ್ಕಾಗಿ ಮತ್ತು ಅನ್ವಯಿಸಿಕೊಳ್ಳಲು

   ಈ. ಜ್ಞಾನಕ್ಕಾಗಿಯೂ ಅಲ್ಲ ಕೇವಲ ಅನ್ವಯಿಸಿಕೊಳ್ಳಲೂ ಅಲ್ಲ

3. ಆನ್ವಯಿಕ ಶಿಸ್ತುಗಳ ಒಟ್ಟು ಉದ್ದೇಶ ______________

ಅ. ಜ್ಞಾನದ ಶರೀರಕ್ಕೆ ಇನ್ನಷ್ಟು ಸೇರಿಸುವುದು

ಆ. ಪ್ರಸ್ತುತ ಇರುವ ಜ್ಞಾನವನ್ನು ನಿಜ ಜೀವನದಲ್ಲಿ ಅಳವಡಿಸಿಕೊಳ್ಳುವುದು

ಇ. ಮೇಲೆ ಹೇಳಿದ ಅ ಮತ್ತು ಆ.

ಈ. ಜ್ಞಾನವನ್ನು ಒಂದಕ್ಕಿಂತ ಅಧಿಕ ಶಿಸ್ತುಗಳಿಂದ ಸೆಳೆಯುವುದು

4. ಕಠಿಣ–ಶುದ್ಧ ಶಿಸ್ತುಗಳಲ್ಲಿನ ಜ್ಞಾನದ ಗುಣಗಳು ______________

ಅ. ಸಂಚಿತ ಮತ್ತು ವಿಶ್ವದ ವಿದ್ಯಮಾನಗಳಿಗೆ ಸಂಬಂಧಿಸಿದವುಗಳಾಗಿರುತ್ತವೆ.

ಆ. ತತ್ವಗಳನ್ನು ಅನ್ವಯಿಸಿಕೊಳ್ಳಲೋಸುಗ

ಇ. ನಿರ್ದಿಷ್ಟ ಸಂಭವಗಳಿಗೆ ಅನ್ವಯಿಸಿಕೊಳ್ಳಲು

ಈ. ಉಪಯೋಗಿಸಲು ಯೋಗ್ಯವಾದುದು

5. ಕಠಿಣ ಶಿಸ್ತಿನಲ್ಲಿ ಉಪಯೋಗವಾಗುವಂತಹುದು______________

ಅ. ಗುಣಾತ್ಮಕ ದತ್ತಾಂಶ

ಆ. ಪರಿಮಾಣಾತ್ಮಕ ದತ್ತಾಂಶ

ಇ. ಗುಣಾತ್ಮಕ ಮತ್ತು ಪರಿಣಾಮಾತ್ಮಕ ಎರಡೂ

ಈ. ಎರಡೂ ಅಲ್ಲ.

6. ಮೃದು ಶಿಸ್ತಿನಲ್ಲಿ ಉಪಯೋಗವಾಗುವಂತಹುದು ______________

ಅ. ಗುಣಾತ್ಮಕ ದತ್ತಾಂಶ

ಆ. ಪರಿಮಾಣಾತ್ಮಕ ದತ್ತಾಂಶ

ಇ. ಗುಣಾತ್ಮಕ ಮತ್ತು ಪರಿಣಾಮಾತ್ಮಕ ಎರಡೂ

ಈ. ಎರಡೂ ಅಲ್ಲ.

## 2.1.4. ಸಾರಾಂಶಿಸೋಣ.

- ವರ್ಗೀಕರಣಗಳು ಅಥವಾ ವೈವಿಧ್ಯೀಕರಣಗಳು ಹಲವಾರು ಕಾರಣಗಳಿಂದ ಪ್ರಮುಖವಾಗುತ್ತವೆ. ಅವು ಕ್ರಮಬದ್ಧತೆಯನ್ನು ತರುತ್ತವೆ, ಸಂಬಂಧಗಳನ್ನು ಅರಿತುಕೊಳ್ಳಲು ಸಹಾಯಮಾಡುತ್ತವೆ, ಈ ಹಿಂದೆ ಆವಿಷ್ಕಾರಗೊಳ್ಳದ ವಿಧಾನಗಳನ್ನು ಬೆಳಕಿಗೆ ತರುತ್ತವೆ ಮತ್ತು ತತ್ವಗಳನ್ನು ಉತ್ಪಾದಿಸುತ್ತವೆ. ನಮ್ಮ ಅಧ್ಯಯನಗಳನ್ನು ಸರಳ ಹಾಗೂ ಸುಲಭವಾಗಿಸುತ್ತವೆ. ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ವಿವರಗಳನ್ನು ಕ್ರೋಢೀಕರಿಸುತ್ತವೆ, ನಮ್ಮ ಅಧ್ಯಯನದ ಹಾದಿಯನ್ನು ಸುಗಮಗೊಳಿಸುತ್ತವೆ, ಜ್ಞಾನಕ್ಷೇತ್ರದ ಮುಂದಿನ ಹುಡುಕಾಟಕ್ಕೆ ಮತ್ತು ಅಧ್ಯಯನದ ಹೋಲಿಕೆ, ವೈರುದ್ಧ್ಯತೆ, ಮತ್ತು ಕಂಡುಕೊಂಡ ಜ್ಞಾನವನ್ನು ಅನ್ವಯಿಸಿಕೊಳ್ಳುವ ಪ್ರಕ್ರಿಯೆಗಳಿಗೆ ಅನುವು ಮಾಡಿಕೊಡುತ್ತವೆ.

- ಶೈಕ್ಷಣಿಕ ಶಿಸ್ತುಗಳು ಹಲವಾರು ಸಂದರ್ಭಗಳಲ್ಲಿ ಹಲವರಿಂದ ಹಲವು ಮಾನದಂಡಗಳಿಗನುಗುಣವಾಗಿ ವಿಂಗಡಿಸಲ್ಪಟ್ಟಿದೆ. ಅವುಗಳಲ್ಲಿ ಕೆಲವು, ಶೈಕ್ಷಣಿಕ ಶಿಸ್ತುಗಳ ಅಂದಾಜು ವರ್ಗೀಕರಣ, ಅರಿಸ್ಟಾಟಲನ ವರ್ಗೀಕರಣ, ಬಿಗ್ಲನನ ವರ್ಗೀಕರಣ(1970) ಬಿಗ್ಲನ ಮತ್ತು ಬೆಕರನ ವರ್ಗೀಕರಣ.
- ಶೈಕ್ಷಣಿಕ ಶಿಸ್ತುಗಳ ಯಾವುದೇ ವರ್ಗೀಕರಣವೂ ಪೂರ್ಣ ಹಾಗೂ ಅಂತಿಮವಲ್ಲ.

## 2.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

1 ರಿಂದ 4 – '✓'

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2

1–ಅ, 2–ಅ, 3–ಆ, 4–ಅ, 5–ಆ, 6–ಆ, 7–ಆ, 8–ಇ, 9–ಈ

## 2.1.6. ಘಟಕಾಂತ್ಯ ಅಭ್ಯಾಸಗಳು

1. ಜ್ಞಾನಶಿಸ್ತುಗಳ ವರ್ಗೀಕರಣವನ್ನು ವಿವರಿಸಿ.
2. ಯಾವುದಾದರೂ ಎರಡು ಜ್ಞಾನಶಿಸ್ತುಗಳ ವರ್ಗೀಕರಣವನ್ನು ವಿವರಿಸಿ.

## 2.1.7. ಪರಾಮರ್ಶನ ಸೂಚಿ


1. Academic Disciplines: Disciplines and the Structure of Higher Education, Discipline Classification Systems, Discipline Differences- https://education.stateuniversity.com/pages/1723/Academic-Disciplines.html#targetText=Discipline%20is%20defined%20by%20the,academic%20world%20inhabited%20by%20scholars.
2. Outline of academic disciplines: https://en.wikipedia.org/wiki/Outline_of_academic_disciplines
3. What are Academic Disciplines?:
4. http://eprints.ncrm.ac.uk/783/1/what_are_academic_disciplines.pdf


**************

# ಬ್ಲಾಕ್ 2 : ಜ್ಞಾನಶಿಸ್ತುಗಳ ವರ್ಗೀಕರಣ ಮತ್ತು ಜ್ಞಾನಶಿಸ್ತುವ್ಯಾಪಿ ಬೋಧನೆ

## ಘಟಕ 2 : ಅಂತರ್ಶಿಸ್ತೀಯ ಮತ್ತು ಬಹುಶಿಸ್ತೀಯ ಬೋಧನೆ ಮತ್ತು ಕಲಿಕೆ

### ಘಟಕದ ರಚನೆ


2.2.1. ಕಲಿಕೆಯ ಉದ್ದೇಶಗಳು

2.2.2. ಪೀಠಿಕೆ

2.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.2.3.1. ಅಂತರ್ಶಿಸ್ತೀಯ ಮತ್ತು ಬಹುಶಿಸ್ತೀಯ ಬೋಧನೆ ಮತ್ತು ಕಲಿಕೆ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –1

2.2.3.2. ಅಂತರ್ಶಿಸ್ತೀಯ ಮತ್ತು ಬಹುಶಿಸ್ತೀಯ ಬೋಧನೆ ಮತ್ತು ಕಲಿಕೆಯ ಶೈಕ್ಷಣಿಕ ನಿಹಿತಾರ್ಥಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –2

2.2.4. ಸಾರಾಂಶಿಸೋಣ

2.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು– 1 ಮತ್ತು 2

2.1.6. ಘಟಕಾಂತ್ಯ ಅಭ್ಯಾಸಗಳು

2.1.7. ಪರಾಮರ್ಶನ ಸೂಚಿ


### 2.2.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ/ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಅಂತರ್ಶಿಸ್ತೀಯ ಬೋಧನೆ ಮತ್ತು ಕಲಿಕೆಗಳ ಅರ್ಥವನ್ನು ವಿವರಿಸುವರು;
- ಅಂತರ್ಶಿಸ್ತೀಯ ಕಲಿಕೆಗಳ ಲಕ್ಷಣಗಳನ್ನು ಗುರುತಿಸುವರು;
- ಬಹುಶಿಸ್ತೀಯ ಕಲಿಕೆಯ ಪರಿಕಲ್ಪನೆಯನ್ನು ವಿವರಿಸುವರು;
- ಬಹುಶಿಸ್ತೀಯ ಕಲಿಕೆಗಳ ಲಕ್ಷಣಗಳನ್ನು ತಿಳಿಸುವರು;
- ಅಂತರ್ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಯ ನಡುವಿನ ವ್ಯತ್ಯಾಸಗಳನ್ನು ಗುರುತಿಸುವರು;
- ಅಂತರ್ಶಿಸ್ತೀಯ ಕಲಿಕೆ ಮತ್ತು ಬಹುಶಿಸ್ತೀಯ ಕಲಿಕೆಯಲ್ಲಿನ ಮಹತ್ವದ ಬಗ್ಗೆ ಸಮರ್ಥನೆ ನೀಡಬಲ್ಲರು; ಮತ್ತು
- ಅಂತರ್ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಯ ಮಾರ್ಗೋಪಾಯಗಳನ್ನು ವಿವರಿಸುವರು.

## 2.2.2. ಪೀಠಿಕೆ

ಈ ಹಿಂದಿನ ಘಟಕದಲ್ಲಿ ನೀವು ಶೈಕ್ಷಣಿಕ ಶಿಸ್ತುಗಳ ಅರ್ಥ ಮತ್ತು ಅವುಗಳ ವರ್ಗೀಕರಣಗಳ ಬಗ್ಗೆ ತಿಳಿದುಕೊಂಡಿರುವಿರಿ. ಶಿಸ್ತುಗಳ ಬಗ್ಗೆ ಕಲಿಯುವಾಗ ನೀವು ಕಲಿತ ಒಂದು ಶಿಸ್ತಿನ ಜತೆಗೆ ಇತರ ಜ್ಞಾನಶಿಸ್ತುಗಳ ಅರಿವು ಎಷ್ಟರಮಟ್ಟಿಗೆ ಸಹಾಯಕವಾಗುತ್ತವೆ ಅಥವಾ ನೀವು ಕಲಿತ ಒಂದು ಜ್ಞಾನಶಿಸ್ತಿಗೆ ನೀವು ಕಲಿಯುತ್ತಿರುವ ಇನ್ನೊಂದು ಜ್ಞಾನಶಿಸ್ತು ಜತೆಗೆ ಹೇಗೆ ಸೇರಿಕೊಂಡಿದೆ ಎಂಬುದು ನಿಮಗೆ ತಿಳಿದಿದೆಯೇ? ಜ್ಞಾನವನ್ನು ವಿವಿಧ ಶಿಸ್ತುಗಳ ಜತೆಗೆ ಸೇರಿಸುವಲ್ಲಿ ಎರಡು ರೀತಿಯ ಮಾರ್ಗಗಳನ್ನು ನಾವು ಗುರುತಿಸಬಹುದು. ಅವೇ ಅಂತರ್ಶಿಸ್ತೀಯ ಕಲಿಕೆ ಮತ್ತು ಬಹುಶಿಸ್ತೀಯ ಕಲಿಕೆ. ಅಂತರ್ಶಿಸ್ತೀಯ ಕಲಿಕೆ ಮತ್ತು ಬಹುಶಿಸ್ತೀಯ ಕಲಿಕೆಯ ಮಾರ್ಗಗಳನ್ನು ಎರಡು ರೂಪಕಗಳ ಬಳಕೆಯ ಮೂಲಕ ಮೋತಿ ನಿಸ್ಸಾನಿಯವರು ವಿವರಿಸಿದ್ದಾರೆ. ಬಹುಶಿಸ್ತೀಯ ಮಾರ್ಗವು ಹಲವು ಹಣ್ಣುಗಳನ್ನು ಬೆರೆಸಿದ ಪಾತ್ರೆಯಂತಿರುತ್ತದೆ. ಒಂದೊಂದು ಶಿಸ್ತು ಒಂದೊಂದು ಹಣ್ಣನ್ನು ಪ್ರತಿನಿಧಿಸುತ್ತದೆ. ಇನ್ನೊಂದು ರೀತಿಯಲ್ಲಿ ಅಂತರ್ಶಿಸ್ತೀಯ ಕಲಿಕೆಯು ನುಣ್ಣನೆ ಅರೆದ ಹಣ್ಣುಗಳ ಹಾಗೆ ಮೃದುವಾಗಿ ಒಂದಕ್ಕೊಂದು ಬೆರೆತುಕೊಂಡು ಒಂದು ಹಣ್ಣಿನ ಪರಿಮಳವನ್ನು ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಿಲ್ಲದಂತಿರುತ್ತದೆ. ಬಹುಶಿಸ್ತೀಯವು ಎರಡು ಅಥವಾ ಎರಡಕ್ಕಿಂತಲೂ ಅಧಿಕ ಶಿಸ್ತುಗಳನ್ನು ಜತೆ ಜತೆಗೇ ಇರಿಸಿ ಅವುಗಳ ಒಳನೋಟವನ್ನು ಗಮನಿಸುತ್ತದೆ. ಇಲ್ಲಿ ವಿಭಿನ್ನ ಶಿಸ್ತುಗಳು, ಕಲಿಯಬೇಕಾದ ವಿಷಯವನ್ನು ವಿಸ್ತೃತವಾಗಿ ಅರಿತುಕೊಳ್ಳಲು ಸಹಾಯಕವಾಗುತ್ತವೆ. ಈ ಶಿಸ್ತುಗಳು ಹೇಗಿದ್ದರೂ ಅಂತರ್ಶಿಸ್ತೀಯ ಕಲಿಕೆಗಿಂತ ಭಿನ್ನವಾದ ರೀತಿಯ ಕೊಡುಗೆಗಳನ್ನು ನೀಡುತ್ತವೆ. ಬಹುಶಿಸ್ತೀಯ ಮಾರ್ಗದಂತೆ ಇವುಗಳ ನಡುವೆ ಯಾವುದೇ ರೀತಿಯ ಹೊಂದಾಣಿಕೆಯನ್ನು ಕಂಡುಕೊಳ್ಳಲು ಸಾಧ್ಯವಿಲ್ಲ.

## 2.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

## 2.3.1. ಅಂತರ್ಶಿಸ್ತೀಯ ಮತ್ತು ಬಹುಶಿಸ್ತೀಯ ಬೋಧನೆ ಮತ್ತು ಕಲಿಕೆ: ಅರ್ಥ, ಮಹತ್ವ ಮತ್ತು ಸ್ವರೂಪ

### ಅಂತರ್ಶಿಸ್ತೀಯ ಮತ್ತು ಬಹುಶಿಸ್ತೀಯ ಬೋಧನೆ ಮತ್ತು ಕಲಿಕೆ:

ಈ ಮೊದಲೇ ನಾವು ತಿಳಿದಿರುವಂತೆ ಕಲಿಕೆಯ ಸಾಂಪ್ರದಾಯಿಕ ಮಾರ್ಗವು ಗಣ್ಯತೆಯ ಆಧಾರಗಳ ಮೇಲೆ ವಿಷಯಗಳ ಗಡಿಗಳನ್ನು ಗುರುತಿಸಿಕೊಳ್ಳುತ್ತದೆ. ಅಂತರ್ಶಿಸ್ತೀಯ ಮತ್ತು ಬಹುಶಿಸ್ತೀಯ ಮಾರ್ಗಗಳಲ್ಲಿ ವಿಷಯಗಳು ಪ್ರಶ್ನೆಗಳ, ವಿಷಯಗಳ, ಸಮಸ್ಯೆಗಳ ಮತ್ತು ಯೋಜನೆಗಳ ಸುತ್ತಲೂ ತಿರುಗುತ್ತವೆ. ಅಂತರ್ಶಿಸ್ತೀಯ ಮತ್ತು ಬಹುಶಿಸ್ತೀಯ ಮಾರ್ಗಗಳು ಶಿಕ್ಷಣದ ಅನುಭವಗಳನ್ನು ಅಧಿಕೃತಗೊಳಿಸುತ್ತವೆ. ಪಠ್ಯಗಳು ನಿಜಜೀವನದ ಮೇಲೆ ಬೆಳಕು ಚೆಲ್ಲುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚು ಅರ್ಥಪೂರ್ಣವೆಂದೆನಿಸುತ್ತವೆ. ವಿದ್ಯಾರ್ಥಿಗಳು ವಿಷಯದ ವ್ಯಾಪ್ತಿಯು ಹಾದುಹೋಗುವ ಸಹಜ ಮತ್ತು ತಾತ್ವಿಕ ಸಂಬಂಧಗಳನ್ನು ನೋಡಲು ಸಮರ್ಥರಾಗುತ್ತಾರೆ.

### ಅಂತರ್ಶಿಸ್ತೀಯ ಮತ್ತು ಬಹುಶಿಸ್ತೀಯ ಬೋಧನೆ ಮತ್ತು ಕಲಿಕೆ – ಅರ್ಥ

ಹೈಡಿ ಜೇಕಬರವರು ಅಂತರ್ಶಿಸ್ತೀಯ ಕಲಿಕೆಯನ್ನು ಹೀಗೆ ಸೂತ್ರೀಕರಿಸಿದ್ದಾರೆ. "ಕೇಂದ್ರೀಕರಿಸಿದ ಒಂದು ಧ್ಯೇಯ, ವಿಚಾರ, ಸಮಸ್ಯೆ ಅಥವಾ ಅನುಭವವನ್ನು ಪರೀಕ್ಷಿಸಲು ಒಂದಕ್ಕಿಂತ ಹೆಚ್ಚು ಜ್ಞಾನಶಿಸ್ತುಗಳಿಂದ ವಿಧಾನ ಮತ್ತು ಭಾಷೆ ಎರಡನ್ನೂ ಪ್ರಜ್ಞಾಪೂರ್ವಕವಾಗಿ ಅನ್ವಯಿಸುವ ಜ್ಞಾನದ ಒಂದು ನೋಟ ಅಥವಾ ಉಪಕ್ರಮ."

ಕೇತ್ ಬಾರ್ಟನ್ ಮತ್ತು ಸ್ಮಿತ್‌ರವರು ಈ ರೀತಿಯ ಸಲಹೆ ನೀಡುತ್ತಾರೆ: "ಅಂತರ್ಶಿಸ್ತೀಯ ಕಲಿಕೆಯು ಆರಂಭಿಕ ಕಾಲದಲ್ಲಿ ಯಾಕೆ ಪ್ರಮುಖವೆಂದರೆ, ಇವು ವಿದ್ಯಾರ್ಥಿಗಳಿಗೆ ಅಧಿಕೃತವಾದ ಅನುಭವಗಳನ್ನು ಒಂದಕ್ಕಿಂತಲೂ ಅಧಿಕ ಕ್ಷೇತ್ರಗಳಲ್ಲಿ ನೀಡುತ್ತವೆ, ವಿಶಾಲವಾದ ವ್ಯಾಪ್ತಿಯ ಕಲಿಕೆಯ ಅನುಭವಗಳನ್ನು ವಿದ್ಯಾರ್ಥಿಗಳಿಗೆ ನೀಡುತ್ತವೆ ಮತ್ತು ವಿದ್ಯಾರ್ಥಿಗಳು ಕೈಗೊಳ್ಳುವ ಯೋಜನೆಗಳಿಗೆ ಬೇಕಾದ ಆಯ್ಕೆಗಳನ್ನು ಒದಗಿಸುವುದರೊಂದಿಗೆ

ಅವರು ಕಲಿತುದನ್ನು ಪ್ರದರ್ಶಿಸಲು ಅವಕಾಶ ಮಾಡಿಕೊಡುತ್ತವೆ."

ಈ ಅಂತರ್ಶಿಸ್ತೀಯ ಘಟಕಗಳನ್ನು ತರಗತಿಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಹೆಚ್ಚು ಆಳವಾಗಿ ಶಿಕ್ಷಕರು ವಿವರಿಸಿದಾಗ, ವಿದ್ಯಾರ್ಥಿಗಳಿಗೆ ವಿಷಯದ ಆಳ ಮತ್ತು ವ್ಯಾಪ್ತಿಯನ್ನು ಅರಿತುಕೊಂಡು ಅಧಿಕೃತವಾಗಿ ಕಾರ್ಯದಲ್ಲಿ ತೊಡಗಿಕೊಳ್ಳಲು ಅವಕಾಶವನ್ನು ಒದಗಿಸಲು ಸಾಧ್ಯವಾಗುತ್ತದೆ.

ಹೊಸ ಜ್ಞಾನವನ್ನು ಬಿತ್ತಲು ಶೈಕ್ಷಣಿಕ ಶಿಸ್ತುಗಳು ಉತ್ತಮ ವೇದಿಕೆಗಳು. ಆದರೆ ಈ ಅಂತರ್ಶಿಸ್ತೀಯ ಕಲಿಕೆಯು ಸಂಕೀರ್ಣ ಸಮಸ್ಯೆಗಳನ್ನು ನಿವಾರಿಸಲು ಬೇಕಾಗುತ್ತದೆ ಮತ್ತು ಸಂಕೀರ್ಣ ಸಮಸ್ಯೆಯೊಂದನ್ನು ಅರ್ಥಮಾಡಿಕೊಳ್ಳುವಲ್ಲಿ, ಒಂದು ಶಿಸ್ತಿನ ಸಾಮರ್ಥ್ಯವನ್ನೂ ಮೀರಿ ಸಮಗ್ರವಾಗಿ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಸಹಾಯಕವಾಗುತ್ತದೆ.

ಒಟ್ಟಿನಲ್ಲಿ ಹೇಳುವುದಿದ್ದರೆ, ಅಂತರ್ಶಿಸ್ತೀಯ ಕಲಿಕೆಯೆಂದರೆ, ಪ್ರಶ್ನೆಗಳಿಗೆ ಉತ್ತರಿಸುವ ಪ್ರಕ್ರಿಯೆ, ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಪ್ರಕ್ರಿಯೆ, ಅಥವಾ ಬಹಳ ವ್ಯಾಪಕ ಹಾಗೂ ಸಂಕೀರ್ಣ ವಿಷಯವನ್ನು ನಿರ್ದಿಷ್ಟವಾಗಿ ಒಂದೇ ಶಿಸ್ತಿನ ಮೂಲಕವಾಗಿ ವ್ಯವಹರಿಸುವ, ಮತ್ತು ಶಿಸ್ತುಗಳನ್ನು ಒಂದುಗೂಡಿಸುವ ಗುರಿ ಇರಿಸಿ, ಅವುಗಳ ಒಳನೋಟವನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳುವ ಪ್ರಕ್ರಿಯೆ.

**ಅಂತರ್ಶಿಸ್ತೀಯ ಉಪಕ್ರಮದಲ್ಲಿ ಎರಡು ವಿಭಿನ್ನ ರೀತಿಯ ವಿಧಾನಗಳಿವೆ:**

i. ಏಕೀಕರಣದ ವಿಧಾನವು ಕಲ್ಪನೆ, ಮಾಹಿತಿ, ವಿಧಾನ ಮತ್ತು ಉಪಕರಣಗಳಿಗನುಗುಣವಾಗಿ ಎರಡು ಅಥವಾ ಹೆಚ್ಚಿನ ಶಿಸ್ತುಗಳನ್ನು ಕೂಡಿಸಿ, ಸಂಶ್ಲೇಷಿಸಿ ಮಿಶ್ರಣಗೊಳಿಸುವ ಪ್ರಕ್ರಿಯೆಯನ್ನು ಒಳಗೊಳ್ಳುತ್ತದೆ.

ii. ಸಾಮಾಜೀಕರಣದ ವಿಧಾನದಲ್ಲಿ ಎರಡಕ್ಕಿಂತಲೂ ಅಧಿಕ ಶಿಸ್ತುಗಳ ಜತೆಗೆ ಸಂಪರ್ಕ ಮತ್ತು ಸಂವಾದವಿರುತ್ತದೆ. ಆದರೆ ಒಂದಕ್ಕೊಂದು ಮಿಶ್ರಣಗೊಳ್ಳುವುದಿಲ್ಲ. ಕೆಲವರು ಇದನ್ನು ಬಹುಶಿಸ್ತೀಯವೆಂದೂ ಪರಿಗಣಿಸುತ್ತಾರೆ.

## ಅಂತರ್ಶಿಸ್ತೀಯದ ಕಲಿಕೆಯ ಗುಣಲಕ್ಷಣಗಳು

1. ಅಂತರ್ಶಿಸ್ತೀಯದ ಕಲಿಕೆಯು ಒಂದಕ್ಕಿಂತ ಅಧಿಕ ಶಿಸ್ತುಗಳಿಂದ ತನಗೆ ಬೇಕಾದುದನ್ನು ಸೆಳೆದುಕೊಳ್ಳುತ್ತದೆ.

   ಉದಾಹರಣೆಗೆ ಯುದ್ಧದ ಕುರಿತಾದ ಅಧ್ಯಯನ ನಡೆಸುವಾಗ, ಇತಿಹಾಸ (ಯುದ್ಧಗಳು ಯಾವಾಗ ನಡೆದವು ಎಂಬುದರ ಬಗ್ಗೆ ತಿಳಿದುಕೊಳ್ಳಲು) ಅರ್ಥಶಾಸ್ತ್ರ (ಯುದ್ಧವು ಆರ್ಥಿಕ ಸ್ಥಿತಿಯ ಮೇಲೆ ಬೀರಿದ ಪರಿಣಾಮಗಳ ಬಗ್ಗೆ ಅರಿಯಲು), ಭೂಗೋಳ ಶಾಸ್ತ್ರ (ಯಾವ ಪ್ರದೇಶಗಳು ಯುದ್ಧದಿಂದ ಬಾಧಿತವಾಗಿರುವ ಪ್ರದೇಶಗಳ ಬಗ್ಗೆ), ಸಾಹಿತ್ಯ(ಕವಿಗಳು ಮತ್ತು ಬರಹಗಾರರು ಯುದ್ಧದ ಬಗ್ಗೆ ಏನು ಬರೆದಿದ್ದಾರೆ), ರಾಜಕಿಯ ಶಾಸ್ತ್ರ (ರಾಜಕೀಯ ಸಂಗತಿಗಳು ಯುದ್ಧವನ್ನು ಹೇಗೆ ಕಂಡುಕೊಂಡಿವೆ)–ಹೀಗೆ ವಿವಿಧ ಶಿಸ್ತುಗಳು ಅಂತರ್ ಶಿಸ್ತುಗಳ ಅಧ್ಯಯನಕ್ಕೆ ಮಾಹಿತಿಗಳನ್ನು ಒದಗಿಸುತ್ತವೆ. ವಿವಿಧ ಶಿಸ್ತುಗಳಿಂದ ತೆಗೆದುಕೊಂಡ ಮಾಹಿತಿಗಳು ಕಲಿಯುವವನಿಗೆ ವಿಭಿನ್ನ ದೃಷ್ಟಿಕೋನಗಳಿಂದ ಸಂಶೋಧನೆ ಗೈಯಲು ಸಹಾಯಕವಾಗುತ್ತದೆ.

2. ಅಂತರ್ಶಿಸ್ತೀಯದ ಕಲಿಕೆಯಲ್ಲಿ ನಿರ್ದಿಷ್ಟವಾದ ಕೇಂದ್ರೀಕೃತ ನೋಟವಿರಬೇಕು. ಅಂತರ್ಶಿಸ್ತೀಯದ ಕಲಿಕೆಯಲ್ಲಿ, ಒಂದೇ ಆಯಾಮವು ಪೂರ್ಣವಾದ ಅರ್ಥವನ್ನು ನೀಡಲು ಸಮರ್ಥವಾಗಿರುವುದಿಲ್ಲ. ಉದಾಹರಣೆಗೆ "ಆರೋಗ್ಯ" ಎನ್ನುವ ವಿಷಯ ಕೇವಲ ವಿಜ್ಞಾನಕ್ಕೆ ಸಂಬಂಧಿಸಿದುದಲ್ಲ. ಅದರಲ್ಲಿ ಬಹಳಷ್ಟು ವಿಷಯಗಳು ಭೂಗೋಳಕ್ಕೆ(ವಾತಾವರಣಕ್ಕನುಗುಣವಾಗಿ ಆರೋಗ್ಯ) ಮತ್ತು ಅರ್ಥಶಾಸ್ತ್ರ (ಕೆಲವು ರೋಗಗಳಿಗೆ ಅರ್ಥವ್ಯವಸ್ಥೆಯೂ ಕಾರಣವಾಗುತ್ತದೆ)ಕ್ಕೆ ಸಂಬಂಧಿಸಿದವುಗಳಾಗಿರುತ್ತವೆ.

3. ಅಂತರ್ಶಿಸ್ತೀಯದ ಕಲಿಕೆಯ ಪ್ರಾಯೋಗಿಕ ಉಪಕ್ರಮದ ಅರ್ಥವೇನೆಂದರೆ, ತಾನು ಅನ್ವೇಷಿಸಬೇಕಾದ ವಿಷಯದಲ್ಲಿ ಅದು ಹೊಸ ಅರ್ಥವನ್ನು ಅಥವಾ ಪರಿಹಾರವನ್ನು ಪ್ರಚಾರಗೊಳಿಸುವಂತಿರಬೇಕು. ಅಂತರ್ಶಿಸ್ತೀಯ ಕಲಿಕೆಯನ್ನು ಅಳವಡಿಸಿಕೊಂಡ ವಿದ್ಯಾರ್ಥಿಗಳು ಸಮಸ್ಯೆಗಳ ಪರಿಹಾರದ ಬಗ್ಗೆ ಆಸಕ್ತಿ ವಹಿಸಿದವರಾಗಿರಬೇಕು.

4. ಅಂತರ್ಶಿಸ್ತೀಯದ ಕಲಿಕೆಯು ಆಡುಭಾಷೆಯ ಪ್ರಕ್ರಿಯೆಯಾಗಿದ್ದು, ಇದಕ್ಕೆ ವಿಭಿನ್ನ ಶಿಸ್ತುಗಳ ಅಧ್ಯಯನ ನಡೆಸುವ ವ್ಯಕ್ತಿಗಳನ್ನು ಒಳಗೊಂಡ ಸಮೂಹ ಪ್ರಯತ್ನದ ಅಗತ್ಯವು ಇದೆ. ಇದರಲ್ಲಿ ವಿವಿಧ ಶಿಸ್ತುಗಳ ಕಲ್ಪನೆಗಳ ಮತ್ತು ಅಭಿಪ್ರಾಯಗಳ ತಾತ್ವಿಕ ಚರ್ಚೆ ಇರುತ್ತದೆ. ವಿಭಿನ್ನ ದೃಷ್ಟಿಕೋನಗಳಿಂದ ಒಂದು ವಿಷಯದ ಅರ್ಥವನ್ನು ಪಡೆದುಕೊಳ್ಳಲು, ವಿವಿಧ ಕ್ಷೇತ್ರಗಳ ಜನರ ಜತೆಗೆ ಸಂವಾದಗಳನ್ನು ನಡೆಸಬೇಕಾಗುತ್ತದೆ. ಇದರಿಂದ ತಾತ್ವಿಕವಾಗಿ ಮತ್ತು ಹೆಚ್ಚು ನಿರ್ದಿಷ್ಟವಾಗಿ ಅಂತಿಮ ನಿರ್ಧಾರಕ್ಕೆ ಬರಲು ಸಹಾಯಕವಾಗುತ್ತದೆ.

5. ಅಂತರ್ಶಿಸ್ತೀಯ ಕಲಿಕೆಯು ಸಮನ್ವಯಾತ್ಮಕವಾಗಿದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಶಿಸ್ತುಗಳ ದೃಷ್ಟಿಕೋನಗಳನ್ನು ಉದ್ದೇಶಪೂರ್ವಕವಾಗಿ ಮತ್ತು ಉತ್ಪಾದನಾತ್ಮಕವಾಗಿ ಸಮನ್ವಯಗೊಳಿಸುತ್ತಾರೆ. ವಿವಿಧ ಶಿಸ್ತುಗಳ ಅಂಶಗಳನ್ನು(ಜ್ಞಾನ, ಅರ್ಥೈಸುವಿಕೆ ಮತ್ತು ಕೌಶಲ್ಯ) ಒಂದು ಉತ್ಪಾದಕದ ಜತೆಗೆ ಇನ್ನೊಂದನ್ನು ಒಟ್ಟುಗೂಡಿಸಿ, ಅಧ್ಯಯನದ ಮೂಲಕ ವಿದ್ಯಾರ್ಥಿಗಳಿಗೆ ಹೊಸತೊಂದನ್ನು ಆಳವಾಗಿ ಮತ್ತು ವಿಶಾಲವಾಗಿ ವಿಶ್ಲೇಷಿಸಿ ವಿಷಯವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವಂತೆ ಮಾಡುತ್ತಾರೆ.

ಟೆಕ್ಸಾಸ್ ವಿಶ್ವವಿದ್ಯಾನಿಲಯದ ಅಂತರ್ಶಿಸ್ತೀಯ ಕಾರ್ಯಕ್ರಮಗಳ ನಿರ್ದೇಶಕ ಅಲ್ಲೆನ್ ರೆಪ್ಕೊ, ಅಂತರ್ಶಿಸ್ತೀಯದ ಕಲಿಕೆಯಲ್ಲಿನ ನಾಲ್ಕು ಸಂಜ್ಞಾನಾತ್ಮಕ ಸಾಮರ್ಥ್ಯಗಳನ್ನು ಕೆಳಗಿನಂತೆ ತಿಳಿಸಿದ್ದಾನೆ:

ಅ. ದೃಷ್ಟಿಕೋನವನ್ನಾಧರಿಸಿದ ತಂತ್ರ: ಬಹು ದೃಷ್ಟಿಕೋನಗಳ ಮೂಲಕ ಕೊಟ್ಟಿರುವ ವಿಷಯವನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯ ಸುಧಾರಿಸುತ್ತದೆ. ವಿದ್ಯಾರ್ಥಿಗಳು ಗೌರವದಿಂದ ವಿಭಿನ್ನ ಶಿಸ್ತುಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಿ, ಸಮಸ್ಯೆಗಳನ್ನು ಯಾವ ದೃಷ್ಟಿಕೋನಗಳಿಂದ ಹೇಗೆ ಪ್ರವೇಶಿಸಬಹುದು ಎನ್ನುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ.

ಆ. ರಚನಾತ್ಮಕ ಜ್ಞಾನದ ಬೆಳವಣಿಗೆ: ಸಮಸ್ಯೆಯ ಪರಿಹಾರಕ್ಕೆ ಘೋಷಣಾತ್ಮಕ ಜ್ಞಾನ ಮತ್ತು ಕಾರ್ಯವಿಧಾನ ಜ್ಞಾನದ (declarative knowledge and procedural knowledge) ಅಗತ್ಯವಿದೆ. ಘೋಷಣಾತ್ಮಕ ಜ್ಞಾನವು ಸಮಸ್ಯೆಯ ವಾಸ್ತವಿಕ ಮಾಹಿತಿಗೆ ಸಂಬಂಧಿಸಿದ್ದಾಗಿದ್ದರೆ, ಕಾರ್ಯವಿಧಾನ ಜ್ಞಾನವು ಯಾವ ಪ್ರಕ್ರಿಯೆಯನ್ನು ಒಳಗೊಂಡಿದೆ ಎಂಬುದನ್ನು ಹೇಳುತ್ತದೆ. ಇವೆರಡೂ ಅಂತರ್ಶಿಸ್ತೀಯದ ಕಲಿಕೆಯಿಂದ ವರ್ಧಿಸಲ್ಪಡುತ್ತವೆ.

ಇ. ಸಂಘರ್ಷವನ್ನುಂಟುಮಾಡುವ ಒಳನೋಟಗಳ ಏಕೀಕರಣ: ಬೇರೆ ಬೇರೆ ಶಿಸ್ತುಗಳ ವಿಭಿನ್ನ ಕಲ್ಪನೆಗಳು ಅಂತರ್ಶಿಸ್ತೀಯ ಪ್ರವೇಶಗಳಲ್ಲಿ ಸಂಯೋಜಿಸಲ್ಪಡುತ್ತವೆ. ಒಂದು ಶಿಸ್ತಿನ ಪ್ರವೇಶದ ಬಳಕೆಯಿಂದ, ವಿದ್ಯಾರ್ಥಿಗಳು ಅದರಿಂದ ಹೊರತಾದ ಬೇರೆ ಶಿಸ್ತುಗಳ ಕಡೆಗೆ ಗಮನಹರಿಸುವಂತಾಗಿ ಅವರ ಒಳನೋಟಗಳು ವರ್ಧಿಸುತ್ತವೆ.

ಈ. ಅಂತರ್ಶಿಸ್ತೀಯ ಗ್ರಹಿಕೆ ವರ್ಧನೆಯಾಗಿ ಆ ಮೂಲಕ ಸಮಗ್ರ ಆಲೋಚನೆ ಹುಟ್ಟಿಕೊಳ್ಳುತ್ತದೆ.

ಇದರಿಂದ ಚಿಂತನೆಯ ಮಟ್ಟವು ವೃದ್ಧಿಯಾಗಿ, ಸೃಜನಶೀಲತೆ, ನಿರ್ಣಾಯಕ ಮತ್ತು ಸಮರ್ಪಕ ಚಿಂತನೆ,

ಸಂಶ್ಲೇಷಣೆ, ಮೌಲ್ಯಮಾಪನ ಮತ್ತು ವಿಶ್ಲೇಷಣಾ ಸಾಮರ್ಥ್ಯವು ವೃದ್ಧಿಯಾಗುತ್ತದೆ.

## ಅಂತರ್ಶಿಸ್ತೀಯ ಕಲಿಕೆ ಮತ್ತು ಸಮಕಾಲೀನ ಶಿಕ್ಷಣ

21ನೇ ಶತಮಾನದಲ್ಲಿ ಅಂತರ್ಶಿಸ್ತೀಯ ಕಲಿಕೆಗೆ ವಿಶೇಷವಾದ ಪ್ರಾಧಾನ್ಯವು ಲಭಿಸಿದೆ. ಅಂತರ್ಶಿಸ್ತೀಯ ಕಲಿಕೆಯ ಮೂಲಕ ವಿದ್ಯಾರ್ಥಿಗಳು ಒಂದಕ್ಕಿಂತ ಅಧಿಕ ಶಿಸ್ತುಗಳ ಕುರಿತಾದ ಜ್ಞಾನವನ್ನು ತಿಳಿದುಕೊಳ್ಳಲು ಪ್ರೋತಾಹಿಸುತ್ತದೆ ಮತ್ತು ಈ ಮೂಲಕ ಅವುಗಳನ್ನು ಒಂದುಗೂಡಿಸಲು ಮತ್ತು ಹೊಸತಾಗಿ ಅರಿತುಕೊಳ್ಳಲು ಸಹಾಯಮಾಡುತ್ತದೆ.

ವಿದ್ಯಾರ್ಥಿಗಳು ತಾವು ಅಂತರ್ಶಿಸ್ತೀಯ ಅರ್ಥಗಳನ್ನು ಪ್ರದರ್ಶಿಸುವ ಸಂದರ್ಭದಲ್ಲಿ, ವಿಷಯಗಳನ್ನು ಒಟ್ಟು ಸೇರಿಸಿದರೆ, ಒಂದಕ್ಕಿಂತ ಹೆಚ್ಚಿನ ಶಿಸ್ತುಗಳಿಂದ ಪಡೆದುಕೊಂಡ ಸಂವಹನದ ರೀತಿ ಅಥವಾ ಈ ವೇಳೆಗಾಗಲೇ ಸ್ಥಾಪಿತವಾದ ಕ್ಷೇತ್ರಗಳ ಪರಿಣತಿಯಿಂದ ಅವರಿಗೆ ಒಂದು ವಿದ್ಯಮಾನವನ್ನು ವಿವರಿಸಲು, ಸಮಸ್ಯೆಯನ್ನು ಪರಿಹರಿಸಿಕೊಳ್ಳಲು, ವಸ್ತುವೊಂದನ್ನು ನಿರ್ಮಿಸಲು, ಒಂದು ಶಿಸ್ತಿನ ಮೂಲಕ ಭಿನ್ನವಾದ ಪ್ರಶ್ನೆಯೊಂದು ಹುಟ್ಟಿಕೊಳ್ಳುವ ಮಾರ್ಗವನ್ನು ತೆರೆದುಕೊಳ್ಳುವಂತಾಗುತ್ತದೆ.

ರಾಷ್ಟ್ರೀಯ ಪಠ್ಯದ ರೂಪುರೇಷೆ 2005 ಪಠ್ಯಗಳ ಅಭಿವೃದ್ಧಿಗಾಗಿ ಐದು ಮಾರ್ಗದರ್ಶಕ ಸೂತ್ರಗಳನ್ನು ಹೇಳಿದೆ.

1. ಬೋಧಿಸುವ ಜ್ಞಾನವನ್ನು ಶಾಲೆಯ ಹೊರಗಿನ ಬದುಕಿನ ಜತೆಗೆ ಬೆಸೆಯುವುದು;
2. ಕಲಿಕೆಯು ಕುರುಡುಪಾಠ ಪದ್ಧತಿಗಳಿಂದ ಭಿನ್ನವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು;
3. ಪಠ್ಯಪುಸ್ತಕವನ್ನು ಮೀರುವಂತೆ, ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು;
4. ಪರೀಕ್ಷೆಗಳನ್ನು ಹೆಚ್ಚು ನಮ್ಯವಾಗಿಸಿ, ಅದನ್ನು ತರಗತಿಯ ಬದುಕಿನೊಂದಿಗೆ ಸಂಯೋಜಿಸುವುದು;
5. ನಮ್ಮ ದೇಶದ ಪ್ರಜಾಸತ್ತಾತ್ಮಕ ನೀತಿಯನ್ನು ಒಳಗೊಂಡು, ಇತರರನ್ನು ಕುರಿತ ಸಂವೇದನೆಯ ಕಾಳಜಿಯನ್ನು ಒಳಗೊಂಡ ಅನನ್ಯತೆಯೊಂದನ್ನು ಪೋಷಿಸುವುದು.

ಈ ತತ್ವಗಳನ್ನು ಅಂತರ್ಶಿಸ್ತೀಯ ಕಲಿಕೆಯ ಮೂಲ ಅಂಶಗಳಲ್ಲಿ ಪ್ರತಿಪಾದಿಸಲಾಗಿದೆ. ಈ ವಿಶೇಷ ದಾಖಲೆಯಲ್ಲಿ "ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ವಿಷಯಗಳ ಗಡಿರೇಖೆಗಳನ್ನು ಆದಷ್ಟೂ ಸರಳಗೊಳಿಸಲು ಶಿಫಾರಸು ಮಾಡುತ್ತದೆ. ಈ ಮೂಲಕ ಮಕ್ಕಳು ಸಂಯೋಜಿತ ಜ್ಞಾನದ ರುಚಿಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಮತ್ತು ಅರ್ಥವಿಸಿಕೊಳ್ಳುವ ಆನಂದವನ್ನು ಅನುಭವಿಸುತ್ತಾರೆ." ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಈ ದಾಖಲೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಅದು ಅಂತರ್ಶಿಸ್ತೀಯ ಕಲಿಕೆಯನ್ನು ಹೇಗೆ ಪ್ರೋತ್ಸಾಹಿಸುತ್ತದೆ ಎಂಬುದು ತಿಳಿದುಬರುತ್ತದೆ.

"ವಲಸೆ" ಎನ್ನುವ ವಿಷಯವನ್ನು ಕುರಿತಂತೆ ಅಂತರ್ಶಿಸ್ತೀಯ ಕಲಿಕೆಯನ್ನು ಹೇಗೆ ಕಂಡುಕೊಳ್ಳಬಹುದು ಎಂಬುದನ್ನು ಗಮನಿಸೋಣ.

## ಬಹುಶಿಸ್ತೀಯ ಕಲಿಕೆ

| ಪರಿಶೀಲಿಸಬೇಕಾದ ವಿಷಯ<br>"ವಲಸೆ" | ಹಂತ<br>ತರಗತಿ IX ಅಥವಾ X | |
|---|---|---|
| **ಇತಿಹಾಸ** | **ಭೂಗೋಳಶಾಸ್ತ್ರ** | **ಅರ್ಥಶಾಸ್ತ್ರ** |
| ವಿದ್ಯಾರ್ಥಿಗಳು ವಲಸೆಯನ್ನು ಕುರಿತಂತೆ ವಿವಿಧ ಕಾಲಘಟ್ಟಗಳಲ್ಲಿ ವಿವಿಧ ದೇಶಗಳಲ್ಲಿದ್ದ ಒಲವುಗಳನ್ನು ಅನ್ವೇಷಿಸುವರು. | ವಿದ್ಯಾರ್ಥಿಗಳು ವಲಸೆಯ ವಿಧಾನಗಳನ್ನು, ಕಾರಣಗಳನ್ನು, ವಿಧಗಳನ್ನು (ದೇಶದ ಒಳಗೆ ಮತ್ತು ಹೊರಗೆ) ಅನ್ವೇಷಿಸುವರು. | ವಿದ್ಯಾರ್ಥಿಗಳು ವಲಸೆಯು ಯಾವ ರೀತಿ ಜೀವನವಿಧಾನ, ಜನಸಂಖ್ಯೆಗಳ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ಕಲಿಯುವರು. ವಲಸಿಗರು ನೆಲೆಸಿದ ದೇಶದ ಮೇಲೆ ವಲಸೆಯ ಪ್ರಭಾವ ವವೇನು ಎಂಬುದನ್ನು ಕಲಿಯುವರು. |
| **ವಿಜ್ಞಾನ** | **ಸಾಹಿತ್ಯ** | **ರಾಜಕೀಯ ಶಾಸ್ತ್ರ** |
| ವಿದ್ಯಾರ್ಥಿಗಳು ಪ್ರಾಣಿಗಳ ವಲಸೆಯ ಬಗ್ಗೆ ತಿಳಿಯುವರು. ವಲಸೆಯ ವಿಧಾನಗಳನ್ನು ಕಲಿಯುವರು. ಮಾನವರು ಹಾಗೂ ಪ್ರಾಣಿಗಳ ವಲಸೆಗಳ ನಡುವಿನ ಭಿನ್ನತೆ ಹಾಗೂ ಸಾಮ್ಯತೆಗಳ ಕಡೆಗೆ ಗಮನ ಹರಿಸುವರು. | ವಲಸೆಗಳಿಂದಾಗಿ ಪ್ರಾದೇಶಿಕ ಜನರ ಭಾಷೆಯ ಮೇಲೆ ಆಗುವ ಪ್ರಭಾವವನ್ನು ಮನಗಾಣುವರು. | ವಿದ್ಯಾರ್ಥಿಗಳು ರಾಜಕೀಯದ ಮೇಲೆ ವಲಸೆಯ ಪ್ರಭಾವಗಳನ್ನು ತಿಳಿಯುವರು. |

ಬಹುಶಿಸ್ತೀಯ ಕಲಿಕೆಯು ಒಂದಕ್ಕಿಂತ ಹೆಚ್ಚಿನ ಶಿಸ್ತುಗಳ ಒಳನೋಟಗಳನ್ನು, ಒಂದರ ಜತೆಗೆ ಇನ್ನೊಂದನ್ನು ಇರಿಸಿ ಪರಾಮರ್ಶಿಸುತ್ತದೆ. ಇಲ್ಲಿ ವಿವಿಧ ಶಿಸ್ತುಗಳು, ಕಲಿಕೆಯಲ್ಲಿ ಬೇಕಾದ ವಿಷಯದ ವಿಸ್ತೃತ ತಿಳಿವಳಿಕೆಯನ್ನು ಬೆಳೆಸಿಕೊಳ್ಳಲು ಸಹಾಯಕವಾಗುತ್ತವೆ. ಈ ಶಿಸ್ತುಗಳು, ಅಂತರ್ ಶಿಸ್ತು ಕಲಿಕೆಯು ಪರಸ್ಪರ ಸಂಬಂಧಗಳ ಮೂಲಕವಾಗಿ ನೀಡುವ ಒತ್ತುಗಳಿಗಿಂತ ಭಿನ್ನವಾದ ಕೊಡುಗೆಗಳನ್ನು ಕೊಡುತ್ತವೆ.

ಬಹುಶಿಸ್ತೀಯ ಕಲಿಕೆಯ ಪ್ರವೇಶವು ಸೂಕ್ತ ಬಹುಶಿಸ್ತೀಯವನ್ನು ಒಳಗೊಂಡು ಸಮಸ್ಯೆಗಳನ್ನು ಸಾಮಾನ್ಯ ವ್ಯಾಪ್ತಿಯನ್ನು ಮೀರಿ ಮರು ವ್ಯಾಖ್ಯಾನಕ್ಕೆ ಒಳಪಡಿಸುವುದರೊಂದಿಗೆ, ಪರಿಹಾರಗಳನ್ನು ಹೊಸ ತಿಳಿವಳಿಕೆಗಳೊಂದಿಗೆ ಸಂಕೀರ್ಣ ಸಂದರ್ಭಗಳಲ್ಲಿ ಒದಗಿಸುತ್ತದೆ.

ಲಂಗಾ ಮತ್ತು ಯೋಸ್ಟರ ಪ್ರಕಾರವಾಗಿ, ಬಹುಶಿಸ್ತೀಯ ನಿರ್ದೇಶನವು ಆಲೋಚನಾತ್ಮಕವಾಗಿ ಸಂಯೋಜನೆ ಮತ್ತು ಹಲವು ಶಿಸ್ತುಗಳ ಮುಖ್ಯ ಪರಿಕಲ್ಪನೆ ಹಾಗೂ ಕೌಶಲ್ಯಗಳನ್ನು ಸೇರಿಸಿಕೊಂಡು ಒಂದು ಘಟಕದಲ್ಲಿ ಸೇರಿಸಿ ಪ್ರಸ್ತುತಪಡಿಸುವ ಒಂದು ವಿಧಾನವಾಗಿದೆ.

ಗಾರ್ನರನ ಪ್ರಕಾರವಾಗಿ(1995), ಬಹುಶಿಸ್ತೀಯ ಉಪಕ್ರಮವು ವಿವಿಧ ಶಿಸ್ತುಗಳ ಜೋಡಣೆಯಾಗಿದ್ದು,

ಸ್ವತಂತ್ರ ಹಾಗೂ ಕಲಿಕೆಯ ಬೇರೆ ಬೇರೆ ಘಟಕಗಳಾಗಿದ್ದುಕೊಂಡು, ವಿದ್ಯಾರ್ಥಿಗಳಿಗೆ ಶಿಸ್ತುಗಳ ಒಳಗಿನಿಂದಲೇ ಕೆಲಸ ಮಾಡುವಂತೆ ಮಾಡಿ, ನಿರ್ದಿಷ್ಟ ಮಾನದಂಡಗಳ ಮೂಲಕ ಶಿಸ್ತಿನ ನಿರ್ದಿಷ್ಟ ಗುರಿಯನ್ನು ಕಂಡುಕೊಳ್ಳಲು ಸಹಾಯಮಾಡುತ್ತದೆ.

## ಬಹುಶಿಸ್ತೀಯ ಕಲಿಕೆಯ ಗುಣಲಕ್ಷಣಗಳು

ಅಂತರ್ ಶಿಸ್ತೀಯ ಕಲಿಕೆಯ ಹೆಚ್ಚಿನ ಗುಣಲಕ್ಷಣಗಳು ಬಹುಶಿಸ್ತೀಯ ಕಲಿಕೆಯಲ್ಲೂ ಕಂಡುಬರುತ್ತದೆ.

1. ಬಹು ಶಿಸ್ತೀಯ ಕಲಿಕೆಯು ಕಲಿಯುವವನಿಗೆ ವಿಷಯದ ಬಗ್ಗೆ ವಿಭಿನ್ನ ದೃಷ್ಟಿಕೋನಗಳನ್ನು ನೀಡುತ್ತದೆ. ವಿವಿಧ ಶಿಸ್ತುಗಳು ಕಲಿಕೆಯ ಉತ್ಕೃಷ್ಟತೆಗಾಗಿ ಕೊಡುಗೆಗಳನ್ನು ನೀಡುತ್ತವೆ. ಉದಾಹರಣೆಗೆ: ನೀರಿನ ಕುರಿತಾದ ವಿಷಯದ ಕಲಿಕೆಯಲ್ಲಿ, ಕಲಿಯುವಾತನಿಗೆ ರಾಸಾಯನಿಕ ಸಂಯೋಜನೆ ಹಾಗೂ ಗುಣಲಕ್ಷಣಗಳ ಬಗ್ಗೆ ಕಲ್ಪನೆಗಳನ್ನು ವಿಜ್ಞಾನದ ಮೂಲಕ ನೀಡಿದರೆ ಭೂಗೋಳ ಶಾಸ್ತ್ರವು ಭೂಮಿಯ ಮೇಲೆ ನೀರಿನ ಹಂಚುವಿಕೆಯ ಬಗ್ಗೆ ಮತ್ತು ನೀರಿನ ಮೂಲದ ಬಗ್ಗೆ ಬೆಳಕು ಚೆಲ್ಲುತ್ತದೆ.

2. ಮೊದಲಿಗೆ ವಿವಿಧ ಶಿಸ್ತುಗಳಿಂದ ಒಟ್ಟುಹಾಕಲಾದ ವಿಷಯಗಳು ತಮ್ಮ ವಿಶಿಷ್ಟ ಛಾಪುಗಳನ್ನು ಉಳಿಸಿಕೊಳ್ಳಬಹುದು. ಆದರೆ ಕಲಿಯುವಾತನಿಗೆ ಅದು ಹೆಚ್ಚು ಸಂಯೋಜನಾತ್ಮಕ ನೋಟವನ್ನು ಕಂಡುಕೊಳ್ಳಲು ಸಹಾಯಕವಾಗುತ್ತದೆ.

3. ಬಹುಶಿಸ್ತೀಯ ಕಲಿಕೆಯು ಮೊದಲಿಗೆ ಸಂಯೋಜನಾತ್ಮಕವಾಗಿರಲಾರದು. ಪ್ರತಿಯೊಂದು ಶಿಸ್ತು ಕೂಡಾ ತನ್ನದೇ ಆದ ಅನನ್ಯತೆಯನ್ನು ಬಹುಶಿಸ್ತೀಯ ಕಲಿಕೆಯಲ್ಲಿ ಉಳಿಸಿಕೊಳ್ಳುತ್ತದೆ. ವಿಷಯವನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಇದರಲ್ಲಿ ಭಿನ್ನ ದೃಷ್ಟಿಕೋನಗಳನ್ನು ಪ್ರಜ್ಞಾಪೂರ್ವಕವಾಗಿ ಬೆಸೆಯುವ ಪ್ರಯತ್ನಗಳು ಕಾಣುವುದಿಲ್ಲ.

## ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆ ನಡುವಿನ ವ್ಯತ್ಯಾಸಗಳು

- ಅಂತರ ಶಿಸ್ತೀಯ ಕಲಿಕೆಯಲ್ಲಿ ಶಿಸ್ತುಗಳು ಹಾಗೂ ಅವುಗಳ ಒಳನೋಟಗಳ ಆಯ್ಕೆಯು ಉದ್ದೇಶಪೂರ್ವಕವಾಗಿದ್ದು ಅಂತಿಮ ಉತ್ಪನ್ನದ ಬಗ್ಗೆ ಸ್ಪಷ್ಟ ಚಿತ್ರಣವಿರುತ್ತದೆ. ಆದರೆ ಬಹುಶಿಸ್ತೀಯ ಕಲಿಕೆಯಲ್ಲಿ, ಶಿಸ್ತು ಹಾಗೂ ಕಲಿಕೆಯ ವಿಧಾನಗಳನ್ನು ಉದ್ದೇಶಪೂರ್ವಕವಾಗಿ ಆಯ್ಕೆ ಮಾಡಿಕೊಳ್ಳಲು ಸಾಧ್ಯವಿಲ್ಲ.

- ಬಹುಶಿಸ್ತೀಯ ಕಲಿಕೆಯಲ್ಲಿ, ಪ್ರತಿಯೊಂದು ಶಿಸ್ತುಗಳ ಕೊಡುಗೆಗಳು ವಿಶಿಷ್ಟವಾಗಿರುತ್ತದೆ. ಆದರೆ ಅಂತರ್ ಶಿಸ್ತೀಯ ಕಲಿಕೆಯಲ್ಲಿ ಚಿಂತನೆಗಳನ್ನು ಬೇಕಾದ ರೀತಿಯಲ್ಲಿ ಮಿಶ್ರಮಾಡಿಕೊಳ್ಳಲು ಸಾಧ್ಯವಿದ್ದು ಶಿಸ್ತಿನ ಒಳನೋಟದಲ್ಲಿ ಹಲವು ಶಿಸ್ತುಗಳು ಒಂದಕ್ಕೊಂದು ಮಿಶ್ರಣಗೊಂಡಿರುತ್ತದೆ. ಬಹುಶಿಸ್ತೀಯ ಉಪಕ್ರಮಕ್ಕೆ ಹೋಲಿಸಿದರೆ ಅಂತರ್ ಶಿಸ್ತೀಯ ಕಲಿಕೆಯು, ಇತರ ಶಿಸ್ತುಗಳನ್ನೂ ಸೇರಿಸಿಕೊಂಡು ಅವುಗಳ ಜತೆಗೆ ಸಂವಾದಗಳನ್ನು ನಡೆಸುವುದರ ಕಡೆಗೆ ಕೇಂದ್ರಿತವಾಗಿರುತ್ತದೆ.

- ಬಹುಶಿಸ್ತೀಯ ಕಲಿಕೆಯ ಮುಖ್ಯಾಂಶಗಳು ವೈವಿಧ್ಯಮಯ ಶಿಸ್ತುಗಳಲ್ಲಿನ ವಿಷಯಗಳನ್ನು ಕಲಿಯುವುದರಲ್ಲಿದೆ. ಆದರೆ ಅಂತರಶಿಸ್ತೀಯ ಕಲಿಕೆಯು ವಿವಿಧ ಶಿಸ್ತುಗಳ ಮಿಶ್ರಣವನ್ನಾಧರಿಸಿಕೊಂಡು ಸಮಸ್ಯೆಗಳ ಪರಿಹಾರವನ್ನು ಕಾಣುವ ಪ್ರಯತ್ನ ಮಾಡುತ್ತದೆ. ಅಂತರ್‌ಶಿಸ್ತೀಯ ಕಲಿಕೆಯಲ್ಲಿ, ಒಂದು ವಿಷಯದಲ್ಲಿ ಒಬ್ಬ ಶಿಕ್ಷಕನು ತೊಡಗಿಕೊಳ್ಳಬಹುದು. ಬಹುಶಿಸ್ತೀಯ ಕಲಿಕೆಯಲ್ಲಿ ವಿವಿಧ ಶಿಸ್ತುಗಳ ಹಲವಾರು ತಜ್ಞರು ಒಳಗೊಳ್ಳಬೇಕಾಗುತ್ತದೆ.







ಬಹುಶಿಸ್ತೀಯ ಕಲಿಕೆಯನ್ನು ಮೊದಲನೆಯ ಚಿತ್ರವು ಸ್ಪಷ್ಟಪಡಿಸುತ್ತದೆ.

ಚಿತ್ರದಲ್ಲಿ ಕಾಣುವಂತೆ ೦ ಮತ್ತು ಃ ಶಿಸ್ತುಗಳ ಒಳನೋಟಗಳಾಗಿದ್ದು ಅವುಗಳು ಪರಸ್ಪರ ಕೂಡಿಕೊಂಡಿಲ್ಲ.

ಎರಡನೆಯ ಚಿತ್ರದಲ್ಲಿ ಅಂತರಶಿಸ್ತೀಯ ಮಾದರಿಯನ್ನು ಕಾಣಬಹುದು. ಇಲ್ಲಿ ೦ಮತ್ತು ಃಗಳು ಒಂದನ್ನೊಂದು ಸೇರಿಕೊಂಡು ಹೆಚ್ಚು ಸಮಗ್ರವಾದ ಅರ್ಥವನ್ನು ಕಟ್ಟಿಕೊಡುತ್ತದೆ.

## ಅಂತರ್ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಯ ಮಹತ್ವ

ಅಂತರ್ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆ ಹಲವಾರು ಸಮಾನ ಲಕ್ಷಣಗಳನ್ನು ಪರಸ್ಪರ ಹಂಚಿಕೊಳ್ಳುತ್ತವೆ.

- ಅಂತರ್ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಗಳು ವಿಸ್ತೃತವಾದ ಮೇಲ್ನೋಟವನ್ನು ಪ್ರಚುರಗೊಳಿಸಿ ಒಂದಕ್ಕಿಂತಲೂ ಅಧಿಕ ಶಿಸ್ತುಗಳಿಂದ ಪಡೆದುಕೊಂಡ ದೃಷ್ಟಿಕೋನಗಳನ್ನು ಕಲಿಯುವಾತನಲ್ಲಿ ಜಾಗೃತಿಗೊಳ್ಳುವಂತೆ ಮಾಡುತ್ತದೆ. ಅಂತರ್ಶಿಸ್ತೀಯ ಶಿಸ್ತುಗಳನ್ನು ಅಧ್ಯಯನ ಮಾಡುವಂತಹ ವಿದ್ಯಾರ್ಥಿಗಳಿಗೆ ಆ ಶಿಸ್ತು ವೈವಿಧ್ಯಮಯ ದೃಷ್ಟಿಕೋನಗಳನ್ನು ಅರಿತುಕೊಳ್ಳುವಂತಹ ಅವಕಾಶಗಳನ್ನು ನೀಡುತ್ತದೆ. ವಿವಿಧ ವಿಷಯಗಳು ಅಥವಾ ಶಿಸ್ತುಗಳ ನಡುವಿನ ಸಂಬಂಧಗಳನ್ನು ಅರಿತುಕೊಂಡು ತೀರ್ಪುನೀಡುವ ಸಾಮರ್ಥ್ಯವನ್ನು ಬೆಳೆಸುತ್ತದೆ. ಒಂದೇ ಶಿಸ್ತನ್ನೂ ಮೀರಿ ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳುವ ಅವಕಾಶಗಳನ್ನು ನೀಡಿ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲೂ ತೀರ್ಮಾನಗಳನ್ನು ತೆಗೆದುಕೊಳ್ಳಲೂ ಕಂಡುಕೊಂಡ ನೂತನ ವಿಷಯಗಳನ್ನು ಮಂಡಿಸಲೂ ಇರುವ ಸಾಮರ್ಥ್ಯವನ್ನು ಬೆಳೆಸುತ್ತದೆ.
- ಒಂದೇ ಶಿಸ್ತಿನ ಕಡೆಗೆ ಇರುವ ಸಂಕೀರ್ಣ ದೃಷ್ಟಿಯನ್ನು ತಡೆಯುತ್ತದೆ. ಒಂದೇ ಶಿಸ್ತನ್ನು ಅರ್ಥಮಾಡಿಕೊಳ್ಳುವುದರಿಂದ ಸಂಕೀರ್ಣ ವಿಷಯಗಳ ಕಲಿಕೆ ಅಪರಿಪೂರ್ಣವಾಗಬಹುದು. ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಎರಡರ ಕಡೆಗೂ ಬಾಗುವ ಮನಸ್ಸು ತನ್ನ ಮೂಲಕವಾಗಿ ಇತರ ಶಿಸ್ತುಗಳ ವಿಷಯಗಳೆಡೆಗೆ ಬಲವಂತವಾಗಿಯಾದರೂ ಒಂದು ನೋಟವನ್ನು ಬೀರುವಂತೆ ಮಾಡುತ್ತದೆ.
- ಅದು ನೈಜ ಜೀವನದ ಸಮಸ್ಯೆಗಳನ್ನು ಸಮಗ್ರವಾಗಿ ನೋಡುವುದನ್ನು ಉತ್ತೇಜಿಸುತ್ತದೆ. ನೈಜ ಜೀವನದ ಸಮಸ್ಯೆಗಳು ಒಂದೇ ಶಿಸ್ತಿಗೆ ಸೀಮಿತಗೊಂಡುದಲ್ಲ. ಓರ್ವನಿಗೆ ಸಮಸ್ಯೆಗಳಿಗೆ ಪರಿಣಾಮಕಾರಿಯಾದ ಪರಿಹಾರವನ್ನು ಕಂಡುಕೊಳ್ಳಬೇಕೆಂದಾದರೆ ಆತನು ಹಲವು ಶಿಸ್ತುಗಳಲ್ಲಿರುವ ಸಮಸ್ಯೆಗಳನ್ನು ಪರೀಕ್ಷಿಸಿ ನೋಡಬೇಕಾಗುತ್ತದೆ.
- ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಯು ಇತರ ಶಿಸ್ತುಗಳನ್ನು ಇಷ್ಟಪಟ್ಟು, ಗೌರವದಿಂದ ಕಾಣುವುದನ್ನು ಕಲಿಸುತ್ತದೆ. ಇತರ ಶಿಸ್ತುಗಳ ಬಗ್ಗೆ ಹೆಚ್ಚು ಹೆಚ್ಚು ತಿಳಿದುಕೊಳ್ಳುವುದರಿಂದ, ಇತರ ಶಿಸ್ತುಗಳ ಬಗೆಗಿನ ನಮ್ಮ ಜ್ಞಾನವೂ ಬೆಳೆಯುತ್ತದೆ. ಉದಾಹರಣೆಗೆ, ಮಾನವರ ಪ್ರಗತಿಯ ಕುರಿತಾದ ವಿಷಯವನ್ನು ಕುರಿತು ಚರ್ಚಿಸಲಾಗುತ್ತದೆ ಎಂದಾಗ, ವಿಜ್ಞಾನದ ವ್ಯಕ್ತಿಯು ಕಲೆಯು ಮಾನವ ಪ್ರಗತಿಗೆ ನೀಡಿದ ಕೊಡುಗೆಗಳನ್ನೂ ಇಷ್ಟದಿಂದ ನೋಡುತ್ತಾನೆ. ಕೇವಲ ವಿಜ್ಞಾನದ ದೃಷ್ಟಿಯಿಂದ ನೋಡಿದರೆ, ಕೇವಲ ಮಾನವ ಪ್ರಗತಿಯ ಒಂದು ಪಾರ್ಶ್ವನೋಟ ಮಾತ್ರ ಲಭಿಸಬಹುದು.
- ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಯ ವಿಧಾನದಿಂದ ನೈಜ ಜಗತ್ತು ಹೇಗೆ ನಡೆಯುತ್ತದೆ ಎನ್ನುವುದರ ಕಡೆಗೆ ಬೆಳಕು ಚೆಲ್ಲಲು ಸಾಧ್ಯವಾಗುತ್ತದೆ. ಇದರಿಂದ ನಮ್ಮ ದೈನಂದಿನ ಬದುಕಿನಲ್ಲಿ

ಸಂಕೀರ್ಣ ವಿದ್ಯಮಾನಗಳು ಬೀರುವ ಪರಿಣಾಮಗಳನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಉದಾಹರಣೆಗೆ, ಅಂತರ ದೇಶೀಯ ವ್ಯಾಪಾರವನ್ನು ಕುರಿತು ಪರಿಶೀಲಿಸುವ ಸಂದರ್ಭದಲ್ಲಿ ರಾಜಕೀಯ ಶಾಸ್ತ್ರ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರಗಳ ದೃಷ್ಟಿಕೋನಗಳನ್ನೂ ಒಳಗೊಳ್ಳಬೇಕಾಗುತ್ತದೆ.

- ಇಂತಹ ಸಂದರ್ಭದಲ್ಲಿ ನೀತಿಯುಕ್ತ ವಿಷಯಗಳ ಕಡೆಗೆ ಸಂವೇದನೆಗಳನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ದಯಾಮರಣವನ್ನು ತೆಗೆದುಕೊಂಡರೆ, ಓರ್ವನ ಮಿದುಳು ನಿಷ್ಕ್ರಿಯವಾಗಿದ್ದರೆ ಆತನನ್ನು ಬದುಕಲು ಬಿಡಬೇಕೇ ಬೇಡವೇ? ಎನ್ನುವ ಪ್ರಶ್ನೆ ಏಳುತ್ತದೆ. ಇಂತಹ ಪ್ರಶ್ನೆಗಳಿಗೆ ವಿಜ್ಞಾನ, ಕಾನೂನು, ಧರ್ಮ, ಸಮಾಜಶಾಸ್ತ್ರ ಮುಂತಾದವುಗಳ ಹಿನ್ನೆಲೆಯಿಂದ ಉತ್ತರವನ್ನು ಕಂಡುಕೊಳ್ಳಬೇಕಾಗುತ್ತದೆ. ಇಲ್ಲಿ ನೀತಿಯನ್ನು ಕೇವಲ ಒಂದೇ ಶಿಸ್ತಿನ ಹಿನ್ನೆಲೆಯಿಂದ ನೀಡಲಾಗುವುದಿಲ್ಲ.
- ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಯು ಮಾಹಿತಿಗಳ ಸಂಶ್ಲೇಷಣಾ ಸಾಮರ್ಥ್ಯವನ್ನು ವರ್ಧಿಸುತ್ತದೆ. ಈ ಸನ್ನಿವೇಶದಲ್ಲಿ ಹಲವಾರು ಶಿಸ್ತುಗಳಿಂದ ತೆಗೆದುಕೊಂಡ ಮಾಹಿತಿಗಳನ್ನು ಬಳಸಿ ಪರಿಣಾಮಕಾರಿಯಾಗಿ ವಿಶ್ಲೇಷಿಸಲಾಗುತ್ತದೆ.
- ಅಸಾಂಪ್ರದಾಯಿಕ ಹಾಗೂ ಮೂಲ ಆಲೋಚನೆಗಳು ವರ್ಧಿಸುತ್ತದೆ. ಏಕಶಿಸ್ತು ಒಂದೇ ಆಲೋಚನೆಗೆ ದಾರಿಮಾಡಿಕೊಡಬಹುದು. ಒಂದಕ್ಕಿಂತಲೂ ಅಧಿಕ ಶಿಸ್ತುಗಳು ವಿವಿಧ ತೆರನಾದ ವಿಧಾನಗಳನ್ನು ಬಳಸಿಕೊಳ್ಳುವಂತೆ ಮಾಡಿ, ಅಸಾಂಪ್ರದಾಯಿಕ ಆಲೋಚನಾ ವಿಧಾನಕ್ಕೆ ದಾರಿಮಾಡಬಹುದು.
- ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಯು ವಿದ್ಯಾರ್ಥಿಗಳಿಗೆ ಈಗಿರುವಂತಹ ಶಿಸ್ತುಗಳ ಬಗ್ಗೆ ಜಾಗೃತಿಯನ್ನು ಬೆಳೆಸಿಕೊಳ್ಳಲು ಸಹಾಯಮಾಡುವುದರೊಂದಿಗೆ, ಅವುಗಳ ಜತೆಗಿನ ಅರ್ಥಪೂರ್ಣವಾದ ಸಂಬಂಧಗಳನ್ನು ಅರಿತುಕೊಳ್ಳಲು ಸಹಾಯಕವಾಗುತ್ತದೆ. ಕೇವಲ ನೈಜ ಜೀವನದಲ್ಲಿ ಅಲ್ಪ ಸ್ವಲ್ಪ ಜ್ಞಾನದಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಅಲ್ಲಿಂದಿಲ್ಲಿಂದ ನಿಜವಾದ ಜ್ಞಾನವನ್ನು ಅರಿವನ್ನು ಪಡೆದುಕೊಂಡು ಜ್ಞಾನಕ್ಷೇತ್ರವನ್ನು ವಿಸ್ತರಿಸಿಕೊಳ್ಳಬೇಕು. ಅಂತರ ಶಿಸ್ತೀಯ ಕಲಿಕೆಯ ಮೂಲಕ ಜ್ಞಾನದ ರುಚಿಯನ್ನು ಜೀವನದುದ್ದಕ್ಕೂ ಬೆಳೆಸಿಕೊಳ್ಳಬಹುದು.

## ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–2

ಈ ಕೆಳಗೆ ಅಪೂರ್ಣವಾದ ವಾಕ್ಯಗಳನ್ನು ನೀಡಲಾಗಿದೆ. ಸೂಕ್ತ ಉತ್ತರಗಳಿಂದ ಅವುಗಳನ್ನು ಭರ್ತಿಮಾಡಿ.

1. ಅಂತರ ಶಿಸ್ತೀಯ ಕಲಿಕೆಯೆಂದರೆ ______________

   a) ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು

   b) ಹೊಸ ಜ್ಞಾನವನ್ನು ವರ್ಧಿಸುತ್ತದೆ

   c) ಪಠ್ಯವನ್ನು ಹೆಚ್ಚಿಸುವುದು

   d) ಮೇಲಿನ ಎಲ್ಲವೂ

2. ಅಂತರ ಶಿಸ್ತೀಯ ತಿಳುವಳಿಕೆಯಿಂದ ಹೆಚ್ಚುವ ಸಾಮರ್ಥ್ಯ ______________

   a) ಸಮಸ್ಯೆಗೆ ಪರಿಹಾರ

   b) ಉನ್ನತ ಮಟ್ಟದ ಚಿಂತನೆ

   c) ಅನ್ವಯಗೊಳಿಸುವಿಕೆ

   d) ಮೇಲೆ ಹೇಳಿದ ಯಾವುದೂ ಅಲ್ಲ.

3. ವಿಭಿನ್ನ ಶಿಸ್ತುಗಳಿಂದ ಶೇಖರಿಸಲ್ಪಟ್ಟ ವಿಷಯಗಳು ಅವುಗಳ ಗುರುತುಗಳನ್ನು ಉಳಿಸಬಹುದಾದುದು ______________

a) ಅಂತರ ಶಿಸ್ತೀಯ ಕಲಿಕೆಯಿಂದ

b) ಶೈಕ್ಷಣಿಕ ಶಿಸ್ತಿನಿಂದ

c) ಬಹು ಶಿಸ್ತೀಯ ಕಲಿಕೆಯಿಂದ

d) ಮೇಲೆ ಹೇಳಿದ ಯಾವುದೂ ಅಲ್ಲ

4. ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಯು ಹೆಚ್ಚಿಸುವ ಅಂಶ______________

a) ಮೂಲ ಚಿಂತನೆ

b) ಅನ್ವಯಗೊಳಿಸುವಿಕೆ

c) ಸ್ಮರಣೆ

d) ಮೇಲೆ ಹೇಳಿದ ಯಾವುದೂ ಅಲ್ಲ

5. ಅಂತರ ಶಿಸ್ತೀಯ ಕಲಿಕೆಯನ್ನು ಪ್ರಚುರಪಡಿಸುವ ಒಂದು ತಂತ್ರ ______________

a) ಸ್ವಯಂಕಲಿಕೆ

b) ಚಿಕ್ಕದರಿಂದ ಆರಂಭಿಸು

c) ಶೈಕ್ಷಣಿಕ ಕಲಿಕೆ

d) ಮೇಲೆ ಹೇಳಿದ ಯಾವುದೂ ಅಲ್ಲ

## 2.2.3.2. ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಉಪಕ್ರಮಗಳ ಶೈಕ್ಷಣಿಕ ನಿಹಿತಾರ್ಥಗಳು

**ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಗಳನ್ನು ಅಳವಡಿಸಿಕೊಳ್ಳುವಲ್ಲಿ ಸಂಸ್ಥೆಗಳ ಪಾತ್ರ**

ಇಂದು ಅಂತರಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಯು ಬಹಳಷ್ಟು ವ್ಯಾಪಕವಾಗಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಕಲಿಯುವವರಿಗೆ ನೈಜ ಜಗತ್ತಿನಲ್ಲಿ ಜ್ಞಾನವು ಯಾವ ಸ್ವರೂಪದಲ್ಲಿದೆ ಎನ್ನುವ ಸಮಗ್ರವಾದ ನೋಟವನ್ನು ನೀಡುತ್ತದೆ. ಇದರ ಪ್ರಯೋಜನವು ಬಹಳಷ್ಟು ವ್ಯಾಪಕವಾಗಿದ್ದು, ವಿದ್ಯಾರ್ಥಿಗಳಿಗೆ ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಯಲ್ಲಿ ತೊಡಗಿಕೊಳ್ಳಲು ಬೇಕಾದ ಅರ್ಥಪೂರ್ಣವಾದ ಪರಿಸರಗಳನ್ನು ಒದಗಿಸಲು ಸಂಸ್ಥೆಗಳು ಬೇಕಾದ ಪ್ರಯತ್ನವನ್ನು ಮಾಡಲು ಸಾಧ್ಯವಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

ಈಗ ನಾವು ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಗಳನ್ನು ಪರಿಣಾಮಕಾರಕವಾಗಿ ಅಳವಡಿಸಿಕೊಳ್ಳುವುದರಲ್ಲಿ ಸಂಸ್ಥೆಗಳ ಪಾತ್ರಗಳ ಕುರಿತು ತಿಳಿದುಕೊಳ್ಳೋಣ.

**ಅಂತರ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಸಂಸ್ಥೆಗಳ ಮುಖ್ಯಸ್ಥರ ಪಾತ್ರ**

- ವಿಷಯಗಳ ಆಯ್ಕೆಗಳನ್ನು ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ವೈವಿಧ್ಯತೆಗಳು ಲಭ್ಯವಿದೆಯೇ ಎನ್ನುವುದನ್ನು ಸಂಸ್ಥೆಗಳ ಮುಖ್ಯಸ್ಥರು ಖಚಿತಪಡಿಸಿಕೊಳ್ಳಬೇಕು. ಇದು ಅಂತರ ಶಿಸ್ತೀಯ ಕಲಿಕೆಯ ಕಡೆಗೆ ಮನಸ್ಸನ್ನು ತಿರುಗಿಸುತ್ತದೆ. ಶಾಲಾ ಹಂತದಲ್ಲಿ ಶಾಲೆಯು ಯಾವ ಶಾಲಾ ಬೋರ್ಡ್‌ಗೆ ಸಂಯೋಜಿಸಲ್ಪಟ್ಟಿದೆಯೋ ಅದರಿಂದ ಈ ಮೊದಲೇ ನಿರ್ಧರಿಸಲ್ಪಟ್ಟ ವಿಷಯಗಳು ಕಲಿಕೆಗೆ ಲಭ್ಯವಾಗಿರುತ್ತದೆ. ಆದರೆ ಉನ್ನತ ಶಿಕ್ಷಣದಲ್ಲಿ ಅವರವರ ಇಚ್ಛೆಯ ಪ್ರಕಾರವಾಗಿ ವಿವಿಧ ವಿಷಯಗಳು ಕಲಿಕೆಗೆ ಲಭ್ಯವಿರುತ್ತವೆ.

- ವಿವಿಧ ಶಿಸ್ತುಗಳ ಪ್ರತಿಯೊಂದು ವಿಭಾಗಗಳನ್ನು ಗಟ್ಟಿಗೊಳಿಸಬೇಕು. ವಿವಿಧ ನಿಯತಕಾಲಿಕೆಗಳಿಗೆ ಚಂದಾದಾರರಾಗುವ ಮೂಲಕ ಇದನ್ನು ಸಾಧಿಸಬಹುದು. ತನ್ನದೇ ವಿಭಾಗದ ಶಿಸ್ತಿಗೆ ಒಬ್ಬನು ಗಟ್ಟಿಯಾದ ಅಡಿಪಾಯವನ್ನು ಹಾಕಿದರೆ, ಇದು ಅಂತರ ಶಿಸ್ತೀಯ ಮತ್ತು ಬಹುಶಿಸ್ತೀಯ ಪ್ರಯತ್ನಗಳಿಗೆ ಉತ್ತಮ ಕೊಡುಗೆಗಳನ್ನು ನೀಡಲು ಸಹಾಯಕವಾಗುತ್ತದೆ.
- ವಿಭಾಗಗಳಿಗೆ ಶಿಕ್ಷಕರನ್ನು ಆಯ್ಕೆ ಮಾಡುವಾಗ, ಸಂಸ್ಥೆಯ ಮುಖ್ಯಸ್ಥರು, ತಾವು ಆಯ್ಕೆ ಮಾಡಿಕೊಳ್ಳುವ ವ್ಯಕ್ತಿಗೆ ವಿಷಯದ ಬಗ್ಗೆ ಆಳವಾದ ಜ್ಞಾನವಿದೆಯೇ? ತನ್ನ ಶಿಸ್ತಿನ ಬಗ್ಗೆ ಆತ ಎಲ್ಲವನ್ನೂ ಸರಿಯಾಗಿ ತಿಳಿದುಕೊಂಡಿದ್ದಾನೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಅವರು ಪ್ರಮುಖವಾಗಿ ಅಂತರ ಶಿಸ್ತೀಯ ಮತ್ತು ಬಹುಶಿಸ್ತೀಯ ಉಪಕ್ರಮಗಳ ಬಗ್ಗೆ ತಿಳಿದುಕೊಂಡಿರಬೇಕು. ಇತರ ಶಿಸ್ತುಗಳನ್ನು ಚೆನ್ನಾಗಿ ಅರ್ಥೈಸಿಕೊಳ್ಳುವುದರಿಂದ ಯಾವಾಗಲೂ ಬಹಳಷ್ಟು ಪ್ರಯೋಜನವಿರುತ್ತದೆ.
- ಆಗಾಗ ತರಬೇತಿಗಳನ್ನು ನೀಡುವುದರಿಂದ ಶಿಕ್ಷಕರಿಗೆ ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಗಳ ಅನುಭವಗಳನ್ನು ಪಡೆದುಕೊಂಡು, ಯೋಜನೆಗಳನ್ನು ಹಾಕಿಕೊಳ್ಳಲು ಸಹಕಾರಿಯಾಗುತ್ತದೆ, ಅಂತರ್ ಶಿಸ್ತೀಯ ಘಟಕಗಳನ್ನು ಪ್ರತಿಯೊಬ್ಬ ಶಿಕ್ಷಕರೂ ಹಂಚಿಕೊಳ್ಳಬೇಕು. ಇದರಿಂದ ಅವರಿಗೆ ತಮ್ಮ ಜ್ಞಾನವನ್ನು ಹಾಗೂ ಕೌಶಲ್ಯವನ್ನು ಕೊಡುಗೆಯಾಗಿ ನೀಡಲು ಸಾಧ್ಯವಾಗುತ್ತದೆ.
- ವೇಳಾಪಟ್ಟಿಯಲ್ಲಿ ಬದಲಾವಣೆಗೆ ಅವಕಾಶಗಳು ನೀಡಿದರೆ ಶಿಕ್ಷಕರು ಪರಸ್ಪರ ಹೊಂದಾಣಿಕೆ ಮಾಡಿಕೊಂಡು ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಗಳ ಅನುಭವಗಳನ್ನು ಒಟ್ಟುಗೂಡಿಸುತ್ತಾರೆ.
- ಮಾಹಿತಿ ತಂತ್ರಜ್ಞಾನವು ಅಂತರ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಯನ್ನು ಪ್ರಚುರಗೊಳಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸಂಸ್ಥೆಯ ವೆಬ್‌ಸೈಟ್‌ನ ಮೂಲಕ ಅದಕ್ಕೆ ಜೋಡಿಸಲ್ಪಟ್ಟ ಸೈಟ್‌ಗಳಿಗೆ ಹೋಗಿ ಕಲಿಯಲು ಉತ್ತೇಜನವನ್ನು ನೀಡಬಹುದು. ಸಂಯೋಜನಾ ದಾಖಲೆಗಳನ್ನು ನಿರ್ಮಿಸಿ, ಸಂಪನ್ಮೂಲಗಳನ್ನು ಹಂಚಿಕೊಳ್ಳಬಹುದು. ಅಂತರ್ಜಾಲಗಳ ವೇದಿಕೆಗಳ ಮುಖಾಂತರ ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಯನ್ನು ಪ್ರಚುರಗೊಳಿಸಬಹುದು.
- ಸಂಸ್ಥೆಯು ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಉಪಕ್ರಮಗಳಲ್ಲಿನ ವಿಧಾನಗಳ ಉತ್ತಮ ಅಭ್ಯಾಸಗಳನ್ನು ದಾಖಲು ಮಾಡುವುದರ ಮೂಲಕವಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಈ ಅನುಭವಗಳಿಂದ ಕಲಿತುಕೊಳ್ಳಲು ಸಾಧ್ಯವಾಗುತ್ತದೆ.
- ಇದರ ಪ್ರಯೋಜನವನ್ನು ಪಡೆದುಕೊಂಡಂತಹವರು ಉದ್ಯಮಗಾರರಾಗಿ, ನಿರೀಕ್ಷಿತ ಉದ್ಯೋಗಿಗಳಾಗಿ, ಅಂತರಶಿಸ್ತೀಯ ಕಲಿಕೆಯ ಯೋಜನೆ, ಮತ್ತು ವಹಿವಾಟುಗಳಂತಹ ಚಟುವಟಿಕೆಗಳಲ್ಲಿ ತೊಡಗಿಕೊಂಡರೆ, ಅದರಿಂದ ಪಡೆದುಕೊಂಡಂತಹ ಜ್ಞಾನವನ್ನು ನೈಜ ಜೀವನದಲ್ಲಿ ಅಳವಡಿಕೊಂಡಂತಹ ಅವರ ಅನುಭವ ಮತ್ತು ದೃಷ್ಟಿಕೋನಗಳನ್ನು ಕಲಿಯುವವರಿಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.
- ಆರೋಗ್ಯಯುತ ಕ್ಯಾಂಪಸ್(ಆವರಣ) ಸಂಸ್ಕೃತಿಯ ಜತೆಗೆ ಪ್ರತಿಯೊಂದು ಶಿಸ್ತನ್ನೂ ಗೌರವದಿಂದ ಕಾಣುವ, ಪರಸ್ಪರ ಹಂಚಿಕೊಳ್ಳುವ ಮತ್ತು ಒಂದುಗೂಡಿಸುವ ನೀತಿಯು ಅಂತರ್‌ಶಿಸ್ತೀಯ ಕಲಿಕೆಗೆ ಪರಿಣಾಮಕಾರಿ ಕೊಡುಗೆಯನ್ನು ನೀಡಬಲ್ಲದು.

## ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಶಿಕ್ಷಕರ ಪಾತ್ರ

- ಶಿಕ್ಷಕರು ಪಠ್ಯಗಳನ್ನು ರೂಪುಗೊಳಿಸಿ, ಅಳವಡಿಸಿಕೊಳ್ಳುವ ಸಂದರ್ಭದಲ್ಲಿ ಶಿಸ್ತುಗಳನ್ನು ಕ್ರಮಪ್ರಕಾರವಾಗಿ ಅವಕಾಶಗಳಿಗೆ ಅನುಗುಣವಾಗಿ ಹೊಂದಿಸಿ, ವಿದ್ಯಾರ್ಥಿಗಳು ತಮಗೆ ಬೇಕಾದ ಹಾಗೆ ಅದನ್ನು ನವೀಕರಣಗೊಳಿಸಿಕೊಳ್ಳಲು ಸಾಧ್ಯವಾಗುವಂತೆ ಮಾಡಬೇಕು.
- ಶಿಕ್ಷಕರು ವಿಷಯಗಳನ್ನು ಆಯ್ಕೆ ಮಾಡುವಾಗ ಅಂತರ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಗಳಲ್ಲಿ ಅಳವಡಿಸಿಕೊಳ್ಳಲು ಯೋಗ್ಯವಾದವುಗಳನ್ನು ಆಯ್ಕೆಮಾಡಬೇಕು. ಒಂದು ಪೂರ್ತಿ ವರ್ಷ ಒಂದೇ ತರಗತಿಗೆ ಬೋಧಿಸುವ ಶಿಕ್ಷಕರಾಗಿದ್ದರೆ, ಸಾಮಾನ್ಯವಾದ ವಿಷಯಗಳನ್ನು ಅಂತರ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಯ ವಿಧಾನಗಳ ಮೂಲಕ ವ್ಯವಹರಿಸಲು ಸಾಧ್ಯವಾಗುವಂತೆ ನೋಡಿಕೊಳ್ಳಬೇಕು. ವಿವಿಧ ತೆರನಾದ ವಿಧಾನಗಳನ್ನೂ ತಂತ್ರಗಳನ್ನೂ ಅಂತರ ಶಿಸ್ತೀಯ ಕಲಿಕೆಯಲ್ಲಿ ಅಳವಡಿಸಿಕೊಳ್ಳಬೇಕು. ಇಂದಿನ ಹೆಚ್ಚಿನ ಪಠ್ಯಗಳು ಯೋಜನಾ ಕೇಂದ್ರಿತ ವಾಗಿವೆ. ಇವು ಒಂದು ರೀತಿಯಲ್ಲಿ ಅಂತರಶಿಸ್ತೀಯ ಕಲಿಕೆಗೆ ಒಳ್ಳೆಯ ಅವಕಾಶಗಳನ್ನು ಒದಗಿಸುತ್ತವೆ. ಶ್ರೇಣೀಕೃತ ಪಠ್ಯಗಳನ್ನು ಒದಗಿಸುವುದರಿಂದ ಮೂಲ ಶಿಸ್ತು ಹಾಗೂ ಅಂತರ ಶಿಸ್ತು ಕಲಿಕೆಗಳ ದೃಷ್ಟಿಕೋನಗಳ ಅನುಭವಗಳನ್ನು ಪ್ರತಿಫಲಿಸಿಕೊಳ್ಳಲು ಸಾಧ್ಯವಾಗುತ್ತದೆ. ಶಿಸ್ತುಗಳಲ್ಲಿನ ಮೂಲ ತಳಪಾಯ ಅಂತರ ಶಿಸ್ತುಗಳ ಅಧ್ಯಯನವನ್ನು ಮುಂದುವರಿಸಲು ಬೇಕಾದುದನ್ನು ನೀಡುತ್ತವೆ.
- ಶಿಕ್ಷಕರು ಇನ್ನಿತರ ಶಿಸ್ತುಗಳ ವಿವಿಧ ಕಾರ್ಯಾಗಾರಗಳಲ್ಲಿ ಹಾಗೂ ವಿಚಾರಸಂಕಿರಣಗಳಲ್ಲಿ ಪಾಲುಗೊಳ್ಳುವುದರಿಂದ ಅವುಗಳ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ತಾವು ಕಲಿತ ಮೂಲ ಶಿಸ್ತನ್ನೂ ಮೀರಿ ಆಲೋಚಿಸಲು ಅವರಿಗೆ ಸಾಧ್ಯವಾಗುತ್ತದೆ.
- ಶಿಕ್ಷಕರು ಅಂತರ ಶಿಸ್ತೀಯ ಮತ್ತು ಬಹುಶಿಸ್ತೀಯ ಸಂಶೋಧನೆಗಳನ್ನು ಕೈಗೊಳ್ಳುವ ಮೂಲಕವಾಗಿ, ಶಿಸ್ತುಗಳಿಂದ ಆಚೆಗೆ ಚಿಂತಿಸಲು ಶಿಕ್ಷಕರಿಗೆ ಸಾಧ್ಯವಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನವನ್ನು ನೀಡಲೂ ಸಾಧ್ಯ.
- ಕೇವಲ ಆಲೋಚನೆ ಮಾಡುವುದರಿಂದ ಏನೂ ಲಾಭವಿಲ್ಲ. ಶಿಕ್ಷಕರು ವಿದ್ಯಾರ್ಥಿಗಳಿಗೆ ಜ್ಞಾನ ಕೇಂದ್ರಿತವಾದ ಪ್ರಶ್ನೆಗಳನ್ನು ಹಾಕುತ್ತಿರಬೇಕು. "ಜ್ಞಾನವೆಂದರೇನು?" "ನಮಗೇನು ತಿಳಿದಿದೆ?" " ಜ್ಞಾನವನ್ನು ನೈಜ ಜೀವನದಲ್ಲಿ ನಾವು ಹೇಗೆ ಸೇರಿಸಿಕೊಳ್ಳಬಹುದು?" ಇತ್ಯಾದಿ. ಕ್ರಿಯಾತ್ಮಕ ವಿಧಾನವು (ವಿದ್ಯಾರ್ಥಿಗಳು ಕಲಿಕೆಯ ಜವಾಬ್ದಾರಿಯನ್ನು ತಮಗೆ ತಾವೇ ವಹಿಸಿಕೊಳ್ಳುವುದು) ಅಂತರಶಿಸ್ತೀಯ ಕಲಿಕೆಯಲ್ಲಿ ಬಹಳ ಪರಿಣಾಮಕಾರಿಯಾದುದು.
- ಶಿಕ್ಷಕರು ವಿಷಯಗಳಿಗೆ ಸಂಬಂಧಿಸಿದಂತೆ ಹೊರಗಿನಿಂದ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಅವರ ಅನುಭವಗಳನ್ನು ವಿದ್ಯಾರ್ಥಿಗಳಿಗೆ ಒದಗುವಂತೆ ಮಾಡಬಹುದು. ಉದಾಹರಣೆಗೆ, "ಮಾಲಿನ್ಯತೆ" ಎನ್ನುವ ವಿಷಯದಲ್ಲಿ ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ಅಧಿಕಾರಿಗಳನ್ನು, ವೈದ್ಯರನ್ನು, ಪರಿಸರ ತಜ್ಞರನ್ನು ಕರೆಸಿ ಸಂವಾದಗಳನ್ನು ಏರ್ಪಡಿಸಬಹುದು.

## ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಗಳಲ್ಲಿ ವಿದ್ಯಾರ್ಥಿಗಳ ಪಾತ್ರ

- ವಿದ್ಯಾರ್ಥಿಗಳು ಇನ್ನಿತರ ಶಿಸ್ತುಗಳ ಬಗ್ಗೆ ಆರೋಗ್ಯಕರ ಭಾವನೆಗಳನ್ನು ಬೆಳೆಸಿಕೊಳ್ಳಬೇಕು. ಒಂದು ಶಿಸ್ತು ಶ್ರೇಷ್ಠ ಇನ್ನೊಂದು ಕನಿಷ್ಠ ಎಂಬ ಭಾವನೆ ಒಂದು ವಿಷಯವನ್ನು ತಿಳಿದುಕೊಳ್ಳುವಲ್ಲಿ ಕೇವಲ ಪಾರ್ಶ್ವನೋಟವನ್ನು ನೀಡಬಲ್ಲದು.

- ಓದು ಮತ್ತು ಅದರ ಪ್ರತಿಫಲನವು ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಗೆ ಉತ್ತಮ ಹಾದಿಯನ್ನು ಒದಗಿಸಬಹುದು. ವಿವಿಧ ಶಿಸ್ತುಗಳಿಗೆ ಸಂಬಂಧಿಸಿದ ಲೇಖನಗಳನ್ನು ಓದುವುದರಿಂದ ಒಂದು ಶಿಸ್ತು ಏನನ್ನು ಒಳಗೊಂಡಿದೆ ಎನ್ನುವುದನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಇದರಿಂದ ಅರ್ಥಪೂರ್ಣ ಕಲಿಕೆಯು ಸಾಧ್ಯವಾಗುತ್ತದೆ.
- ಬಾಹ್ಯಕಲಿಕೆಯ ಪ್ರದೇಶಗಳಾದ ಪ್ರಾಚ್ಯ ವಸ್ತುಸಂಗ್ರಹಾಲಯಗಳು, ಸ್ಮಾರಕಗಳು, ಪ್ರಯೋಗಾಲಯಗಳು, ವಿಜ್ಞಾನ ಕೇಂದ್ರಗಳು ಪುಸ್ತಕಾಲಯಗಳು ಅಂತರ ಶಿಸ್ತೀಯ ಕಲಿಕೆಯಲ್ಲಿ ಬಹು ಮುಖ್ಯ ಪಾತ್ರಗಳನ್ನು ವಹಿಸುತ್ತವೆ. ಇವನ್ನು ಮನೋರಂಜನಾತ್ಮಕ ದೃಷ್ಟಿಯಿಂದ ನೋಡಬಾರದು. ಕಲಿಕೆಯ ಭಾಗವಾಗಿ ಕಾಣಬೇಕು.
- ಸಾಧ್ಯವಾದರೆ ವಿದ್ಯಾರ್ಥಿಗಳು ಅಂತರ್ ಶಿಸ್ತೀಯ ಘಟಕಗಳ ಯೋಜನೆ ಹಾಗೂ ಬೆಳವಣಿಗೆಯಲ್ಲಿ ಪಾಲುಗೊಳ್ಳಬೇಕು. ಇದು ಉನ್ನತ ಶಿಕ್ಷಣದಲ್ಲಿ ಸಾಧ್ಯ. ಏಕೆಂದರೆ ಅಲ್ಲಿನ ವಿದ್ಯಾರ್ಥಿಗಳು ಸಾಕಷ್ಟು ಪ್ರೌಢರಾಗಿರುತ್ತಾರೆ.

ಹೀಗೆ ಅಂತರ್ ಶಿಸ್ತೀಯ ಬಹುಶಿಸ್ತೀಯ ಕಲಿಕೆಯಲ್ಲಿ ಪಠ್ಯ ರೂಪುಗೊಳಿಸುವವರರಿಗೆ, ಸಂಸ್ಥೆಯ ಮುಖ್ಯಸ್ಥರಿಗೆ, ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಜಂಟಿ ಜವಾಬ್ದಾರಿಗಳಿವೆ. ಅದರೊಂದಿಗೆ, ವಿಷಯತಜ್ಞರು, ಸಂಶೋಧಕರು ತಮ್ಮದೇ ರೀತಿಯ ಕೊಡುಗೆಗಳನ್ನು ನೀಡುತ್ತಾರೆ.

## ಅಂತರ್ ಶಿಸ್ತೀಯ ಕಲಿಕೆಯನ್ನು ಅಳವಡಿಸಿಕೊಳ್ಳಲು ಬಳಸಿಕೊಳ್ಳಲಾಗುವ ತಂತ್ರಗಳು

ಅಂತರ್ ಶಿಸ್ತೀಯ ಕಲಿಕೆಯಲ್ಲಿ ಹಲವು ವಿನ್ಯಾಸಗಳಿವೆ. ಅವುಗಳಲ್ಲಿ ಕೆಲವು ಅಂತರ್ ಶಿಸ್ತೀಯವನ್ನು ಒಂದೇ ಕಲಿಕೆಯಲ್ಲಿ ಅಳವಡಿಸಿಕೊಳ್ಳುವುದು. ಬೇರೆ ಕೆಲವು ಕಲಿಕೆಗಳಲ್ಲಿ ವಿಭಿನ್ನ ಕಲಿಕಾ ವಿಷಯಗಳನ್ನು ಒಂದೇ ಕಡೆ ಕಟ್ಟಿಕೊಡಲಾಗುತ್ತದೆ. ಯಾವ ವಿಧಾನವನ್ನು ಬಳಸಿದ್ದಾರೆ ಎನ್ನುವುದಕ್ಕಿಂತಲೂ ವಿನ್ಯಾಸದ ಮೂಲಕ ಜೋಡಿಸಿಕೊಳ್ಳುವುದು ಮೊದಲನೆಯ ಹಂತವಾಗಿದೆ. ಕೆಳಗೆ ನೀಡಿದ ಉದಾಹರಣೆಗಳು ಅಂತರಶಿಸ್ತೀಯ ಕಲಿಕೆಯಲ್ಲಿ ಬಳಸಲಾಗುವ ವಿಧಾನಗಳ ಬಗ್ಗೆ ಕೆಲವು ಕಲ್ಪನೆಗಳನ್ನು ಮೂಡಿಸಬಲ್ಲವು.

## "ಮರುವಿನ್ಯಾಸ" ಎಂಬ ಸೂತ್ರವನ್ನು ಅಳವಡಿಸುವುವುದು

ಅಂತರ್ ಶಿಸ್ತೀಯ ಬೋಧನೆಗಾಗಿ ವಿದ್ಯಾರ್ಥಿ, ವಿಭಾಗ, ಹಾಗೂ ಸಂಸ್ಥೆಯು "ಮರುವಿನ್ಯಾಸ" ಮಾರ್ಗೋಪಾಯವನ್ನು ಅಭಿವೃದ್ಧಿಯ ಚಟುವಟಿಕೆಗಳಲ್ಲಿ ಮತ್ತು ಕಲಿಕಾ ವಿಭಾಗಗಳಲ್ಲಿ ಮೊದಲ ಹೆಜ್ಜೆಯಾಗಿ ತೆಗೆದುಕೊಳ್ಳಬೇಕು. ಸಾಂಸ್ಥಿಕ ನೆಲೆಯಲ್ಲಿ, ಕಲಿಕೆಯ ವಿಷಯಗಳ ಮರುವಿನ್ಯಾಸ ಮತ್ತು ಪಠ್ಯದಲ್ಲಿ ಅಂತರಶಿಸ್ತೀಯ ಬೋಧನೆಯನ್ನು ಅಳವಡಿಸಿಕೊಳ್ಳುವುದರಿಂದ ಸಂಸ್ಥೆಗೆ ಸೇರ್ಪಡೆಗೊಳ್ಳುವವರ ಸಂಖ್ಯೆಯು ವರ್ಧಿಸುತ್ತದೆ ಎನ್ನುವುದನ್ನು ಆಡಳಿತಗಾರರ ಗಮನಕ್ಕೆ ತರಬೇಕು. ಮುಂದೆ, ಏಕ ಶಿಸ್ತುಗಳಲ್ಲಿ ವಿದ್ಯಾರ್ಥಿಗಳ ಸೇರ್ಪಡೆ ಹೆಚ್ಚಿಸಲು, ಅಂತರ ಶಿಸ್ತೀಯ ಬೋಧನೆಯಲ್ಲಿ ಜೀವವಿಜ್ಞಾನ, ಇಂಜಿನಿಯರಿಂಗ್, ನೀತಿ ಶಿಕ್ಷಣ, ಶಿಕ್ಷಣ, ಮತ್ತು ಇತರ ಮುಖ್ಯ ವಿಷಯಗಳನ್ನು ಸೇರಿಸಿ, ವಿಸ್ತರಿಸಿಕೊಳ್ಳಬಹುದು. ವಿದ್ಯಾರ್ಥಿಗಳ ಮಟ್ಟದಲ್ಲಿ ಅಂತರಶಿಸ್ತೀಯ ಬೋಧನೆಯು ಬಹುಶಿಸ್ತೀಯ ವಿಷಯಗಳಲ್ಲಿ ಆಸಕ್ತ ವಿದ್ಯಾರ್ಥಿಗಳಿಗೆ ಹೆಚ್ಚು ಪರಿಣಾಮಕಾರಿಯಾಗಿ ಕಂಡುಬರುವುದರೊಂದಿಗೆ, ಅಂತರ ಶಿಸ್ತೀಯ ಉಪಕ್ರಮದ ಮೂಲಕವಾಗಿ ನೈಜ ಬದುಕಿನಲ್ಲಿ ಬರುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವುದು ಹೇಗೆ ಎನ್ನುವುದನ್ನು ಅರಿಯಲು ಸಹಾಯವಾಗುತ್ತದೆ.

## "ಕಿರು ಪ್ರಮಾಣದಲ್ಲಿ ಆರಂಭಿಸಿ" ಎಂಬ ಸೂತ್ರ

ಕಿರುಪ್ರಮಾಣದ ಅನುಷ್ಠಾನಗಳನ್ನು ಮತ್ತು ಪಾಯೋಗಿಕ ತರಬೇತಿಗಳನ್ನು ಸಂಯೋಜಿಸಿಕೊಳ್ಳುವುದರ ಮೂಲಕ ಅಂತರಶಿಸ್ತೀಯ ಬೋಧನೆಯನ್ನು ತರಗತಿಗಳೊಳಗೆ ಸಾಧ್ಯವಾಗಿಸಬಹುದು. ಶಿಸ್ತುಗಳನ್ನು ಸಂಯೋಜಿಸುವ

ಸಂದರ್ಭದಲ್ಲಿ ಸವಾಲುಗಳು ಮತ್ತು ತಡೆಗಳು ಅಧ್ಯಾಪಕರ ಪರಿಣತಿಯನ್ನೂ ಮೀರಿ ಎದುರಾಗಬಹುದು. ಆದರೆ ಈ ಕಿರುಪ್ರಮಾಣದ ಬದಲಾವಣೆಗಳು ಶಿಸ್ತುಗಳ ನಡುವಿನ ಬೇಧಗಳ ನಡುವೆ ಸೇತುವೆಗಳನ್ನು ನಿರ್ಮಿಸಿ, ಸವಾಲುಗಳನ್ನು ಪರಿಹರಿಸಿಕೊಳ್ಳುವ ದಾರಿಯನ್ನು ತೋರಿಸಿಕೊಡುತ್ತವೆ.

ಕಿರುಪ್ರಮಾಣದ ಬದಲಾವಣೆಗಳು ಈ ಕೆಳಗಿನವುಗಳನ್ನು ಒಳಗೊಳ್ಳುತ್ತವೆ.

- ನಿಮ್ಮನ್ನು ಇತರ ವಿಭಾಗಗಳೊಂದಿಗೆ, ಉದ್ಯಮಗಳೊಂದಿಗೆ, ಸಮೂಹದೊಂದಿಗೆ ಜೋಡಿಸುತ್ತದೆ. ಅನೌಪಚಾರಿಕವಾಗಿ ಅವರಲ್ಲಿ ಮಾತನಾಡಿ, ಅವರೇನು ಮಾಡುತ್ತಾರೆ ಎಂಬುದನ್ನು ಕಲಿಯಿರಿ, ಅವುಗಳನ್ನು ನಿಮ್ಮ ಬೋಧನೆಗಳಲ್ಲಿ ಅಳವಡಿಸಬೇಕು.
- ಅತಿಥಿ ಉಪನ್ಯಾಸಕರನ್ನು ಪ್ರಸ್ತುತಿಗೆ ಆಹ್ವಾನಿಸಿ. ಅತಿಥಿ ಉಪನ್ಯಾಸಕರು, ನಿಮಗೂ ನಿಮ್ಮ ವಿದ್ಯಾರ್ಥಿಗಳಿಗೂ ವಿಷಯಗಳನ್ನು ಹೇಗೆ ಕಲಿಯಬಹುದು ಎಂಬುದನ್ನು ನಿಮ್ಮ ಅನುಭವಕ್ಕಿಂತಲೂ ಹೊರತಾಗಿ ನೀಡಬಹುದು. ಸಮಾಜದ ಅಥವಾ ಉದ್ಯಮದಲ್ಲಿ ತೊಡಗಿಸಿಕೊಂಡ ಇತರ ಭಾಷಣಗಾರರು, ವಿದ್ಯಾರ್ಥಿಗಳು ತರಗತಿಗಳಲ್ಲಿ ಹೇಗೆ ಮತ್ತು ಏನನ್ನು ಕಲಿಯುತ್ತಾರೋ ಅದನ್ನು ತಮ್ಮ ಬದುಕಿನಲ್ಲಿ ಹೇಗೆ ಅಳವಡಿಸಿಕೊಳ್ಳಬಹುದು ಎನ್ನುವುದಕ್ಕೆ ಮಾದರಿಯಾಗುತ್ತಾರೆ ಮತ್ತು ಸಂಸ್ಕೃತಿಯನ್ನು ಕಟ್ಟಲೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲೂ ಬೇಕಾದ ಮಾದರಿಗಳಾಗುತ್ತಾರೆ.
- ಇತರ ಶಿಸ್ತುಗಳ ಜೊತೆಗಾರರು ಯೋಜನೆಗಳನ್ನು ಅಭಿವೃದ್ಧಿಪಡಿಸಲು ವಿವಿಧ ಶಿಸ್ತುಗಳಿಂದ ಉತ್ತಮ ಅಂಶಗಳನ್ನು ನೀಡಬಹುದು.
- ಶಿಕ್ಷಣಶಾಸ್ತ್ರಗಳನ್ನು ಬಳಸಿ. ಅವು ಅಂತರ ಶಿಸ್ತೀಯ ಬೋಧನೆಗೆ ಬೇಕಾದುದನ್ನು ತಾವಾಗಿಯೇ ನೀಡುತ್ತವೆ. ಸೇವಾ ಕಲಿಕೆ, ಸ್ಥಳೀಯ ಪರಿಸರ/ ಆವರಣ, ಬೋಧನೆಯ ವಿಧಾನಗಳ ಬಗ್ಗೆ ಆಲೋಚಿಸುವುದು ಮತ್ತು ನೈಜ ಜಗತ್ತಿನ ಉದಾಹರಣೆಯೊಂದಿಗೆ ಬೋಧನೆ ಇವು ಈ ದಿಶೆಯಲ್ಲಿ ಸಹಾಯಕವಾಗುತ್ತವೆ.

## "ಗುಂಪು ಬೋಧನೆ" ಸೂತ್ರ

ಸಂಭಾವ್ಯವಾಗಿ ದುಬಾರಿಯಾದರೂ ನಿಜವಾದ ಗುಂಪುಬೋಧನೆಯಲ್ಲಿ ಗಣನೀಯವಾದ ಮೌಲ್ಯವು ಇದೆ. ಸೂಚನೆಗಳನ್ನು ನೀಡುವಲ್ಲಿ ಹೆಚ್ಚಿನ ಪರಿಣತಿ ಅವಶ್ಯವೆಂಬುದು ಹೌದಾದರೂ ಗುಂಪು ಬೋಧನೆಯು ವಿದ್ಯಾರ್ಥಿಗಳಿಗೆ ಆಲೋಚನೆಗಳನ್ನು, ಗುಣಾತ್ಮಕ ಗ್ರಹಿಕೆಗಳನ್ನು, ಊಹೆಗಳನ್ನು ಮತ್ತು ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ದಾರಿಮಾಡಿಕೊಡುತ್ತದೆ. ಗುಂಪಿನ ಅಧ್ಯಾಪಕರು ಆದರ್ಶ ಮಾದರಿಗಳಾಗಿ ಅಂತರಶಿಸ್ತೀಯ ಹೊಂದಾಣಿಕೆಗಳನ್ನು ಪರಿಣಾಮಕಾರಿಯಾಗಿ ಪ್ರದರ್ಶಿಸಿ, ಸಮಸ್ಯೆಗಳನ್ನು ಪರಿಹಾರಗಳನ್ನು ಹೇಗೆ ನಿಭಾಯಿಸಬಹುದು ಎಂಬುದನ್ನು ತೋರಿಸಿಕೊಡುತ್ತಾರೆ.

ಸಾಂಪ್ರದಾಯಿಕ ಗುಂಪುಬೋಧನೆಯಲ್ಲಿ, ಒಬ್ಬರು ಅಥವಾ ಇಬ್ಬರು ಅಧ್ಯಾಪಕರು ಒಂದೇ ಕಲಿಕೆ (course) ಯ ಬೋಧನೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡಿರುತ್ತಾರೆ. ಈ ಪ್ರಸಿದ್ಧ ವಿಧಾನದಲ್ಲಿ, ಅಂತರಶಿಸ್ತೀಯ ರಚನೆಯಲ್ಲಿ, ಒಂದೇ ವಿಭಾಗದ ವಿವಿಧ ವಿಶಿಷ್ಟತೆಗಳನ್ನು ಪಡೆದುಕೊಂಡವರನ್ನು ಅಥವಾ ಬೇರೆ ವಿಭಾಗದಿಂದ ಮಾರ್ಗದರ್ಶಕರನ್ನು ಸೇರಿಸಿಕೊಳ್ಳಬಹುದು. ಆದರೆ ನಿಗದಿತ ಪಠ್ಯಕ್ರಮವು ಸಾಮಾನ್ಯವಾಗಿ ಒಂದೇ ತರಗತಿಯಲ್ಲಿ ಒಂದೇ ಪಠ್ಯವಸ್ತುವಿನ ಪ್ರಕಾರವಾಗಿ ಒಟ್ಟಾಗಿ ನಡೆಯುತ್ತದೆ. ಈ ವಿಷಯದ ಕಲಿಕೆಯ ಫಲಿತಾಂಶವನ್ನು ಇಬ್ಬರು ಮೌಲ್ಯಮಾಪಕರು ಒಬ್ಬೊಬ್ಬ ಶಿಕ್ಷಕನನ್ನು ಮೌಲ್ಯಮಾಪನಕ್ಕೆ ಒಳಪಡಿಸಿ ತಿಳಿದುಕೊಳ್ಳಬಹುದು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2

a) ಅಂತರಶಿಸ್ತೀಯ ಕಲಿಕೆಯನ್ನು ಪ್ರಚುರಗೊಳಿಸಲು, ಸಂಸ್ಥೆಯ ಮುಖ್ಯಸ್ಥರು ಖಚಿತಪಡಿಸಿಕೊಳ್ಳಬೇಕಾದ ಅಂಶ ____________________

b) ವಿವಿಧ ಶಿಸ್ತುಗಳ ಪ್ರತಿಯೊಂದು ವಿಭಾಗವೂ ____________________

c) ಅಂತರಶಿಸ್ತೀಯ ಕಲಿಕೆಯ ಶಕ್ತಿಯುತವಾಗಬೇಕಾದರೆ ಶಿಕ್ಷಕನು, ಆಳವಾದ ಜ್ಞಾನವನ್ನು ಪಡೆದುಕೊಂಡಿರಬೇಕಾದುದು ವಿಷಯ ____________________

d) ಶಿಕ್ಷಕರ ಸಹಾಯಕ್ಕಾಗಿ ತರಬೇತಿ ಅಧಿವೇಶನಗಳನ್ನು ಹಮ್ಮಿಕೊಳ್ಳುವ ಉದ್ದೇಶ____________________

## 2.2.4. ಸಾರಾಂಶಿಸೋಣ

ಈ ಕೆಳಗಿನ ಪಟ್ಟಿಕೆಯಂತೆ ಬಹುಶಿಸ್ತೀಯ ಮತ್ತು ಅಂತರ ಶಿಸ್ತೀಯ ಮತ್ತು ಶಿಸ್ತೀಯ ಕಲಿಕೆಗಳನ್ನು ನಾವು ಸಾರಾಂಶಿಸೋಣ.

| ಕಲಿಕಾ ವಿಧಾನ | ಅಂತರ್ ಕ್ರಿಯೆ | ವಿದ್ಯಾರ್ಥಿಗಳ ಲಕ್ಷಣ | ಶಿಕ್ಷಕರ ಲಕ್ಷಣ |
|---|---|---|---|
| ಏಕ ಶಿಸ್ತೀಯ ಕಲಿಕೆ | ವಿಷಯಚಾಲಿತ ಅಥವಾ ವಿಷಯಕ್ಕನುಗುಣವಾಗಿ | ಜ್ಞಾನವನ್ನು ಸ್ವೀಕರಿಸುವವನು ಮಿತಿಯುಳ್ಳ ಆಯ್ಕೆಯೊಂದಿಗೆ | ಜ್ಞಾನವನ್ನು ನೀಡುವವನು |
| ಬಹು ಶಿಸ್ತೀಯ ಕಲಿಕೆ | ತಮ್ಮತನವನ್ನು ಉಳಿಸಿಕೊಂಡ ಶಿಸ್ತುಗಳು. ವಿಭಿನ್ನ ಶಿಸ್ತುಗಳಿಂದ ಪಡೆದ ಜ್ಞಾನಕ್ಕೆ ಸಂಶ್ಲೇಷಣೆಗೆ ಒತ್ತುನೀಡಬೇಕು. | ಜ್ಞಾನವನ್ನು ಬಳಸಿಕೊಳ್ಳುವವನಿಗೆ ವಿಷಯಗಳಲ್ಲಿ ಆಯ್ಕೆ ಇರುವುದಿಲ್ಲ. | ಜ್ಞಾನವನ್ನು ಸುಗಮಗೊಳಿಸುವನು |
| ಅಂತರ ಶಿಸ್ತೀಯ ಕಲಿಕೆ | ಶಿಸ್ತುಗಳ ನಡುವೆ ಸಂಯೋಜನೆಯನ್ನು ಉಂಟುಮಾಡಬೇಕು.ಜ್ಞಾನವನ್ನು ಒಟ್ಟುಗೂಡಿಸುವಿಕೆ ಮತ್ತು ಸಮಸ್ಯೆಯ ಪರಿಹಾರಕ್ಕೆ ಹೆಚ್ಚಿನ ಒತ್ತು ಕೊಡಬೇಕು. | ಜ್ಞಾನದ ಹೊಂದಿಕೆ ಮತ್ತು ವಿಷಯಗಳ ಆಯ್ಕೆ ಅಗಣಿತವಾದುದು. ಜ್ಞಾನವನ್ನು ಒಟ್ಟುಗೂಡಿಸುವುದರಲ್ಲಿ ಯಾವುದೇ ಮಿತಿಯಿಲ್ಲ. | ಕಲಿಕೆಯನ್ನು ವಿನ್ಯಾಸಗೊಳಿಸುವವನು. |

## 2.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

A,b,c,a,b

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2

a. ವಿದ್ಯಾರ್ಥಿಗಳಿಗೆ ವೈವಿಧ್ಯಮಯವಾದ ವಿಷಯಗಳು ಸಿಗುತ್ತವೆ

b. ಹೆಚ್ಚು ಶಕ್ತಿಯುತವಾಗಿರಬೇಕು

c. ಅವನ ಪರಿಣತಿಯ ಶಿಸ್ತು

d. ಅಂತರ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆಗೆ ಬೇಕಾದ ಅನುಭವ ಗಳಿಸಲು ಸಹಾಯಮಾಡುವುದು

## 2.2.6. ಘಟಕಾಂತ್ಯ ಚಟುವಟಿಕೆಗಳು

1. ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯಗಳ ಶಿಕ್ಷಣ ಮತ್ತು ಕಲಿಕೆಗಳ ಅರ್ಥ, ಮಹತ್ವ ಮತ್ತು ಗುಣಲಕ್ಷಣಗಳನ್ನು ವಿವರಿಸಿ.
2. ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಕಲಿಕೆ ಮತ್ತು ಬೋಧನೆಗಳ ನಿಹಿತಾರ್ಥಗಳನ್ನು ವಿವರಿಸಿ.

## 2.2.7. ಪರಾಮರ್ಶನ ಸೂಚಿ


1. https://serc.carleton.edu/integrate/teaching_materials/interdisciplinary_format.html
2. https://www.cmich.edu/office_provost/AcademicAffairs/InterDisciplinary/Pages/Benefits.aspx
3. https://education.gov.scot/Documents/cfe-briefing-4.pdf
4. https://www.edutopia.org/blog/a-cornucopia-of-multidisciplinary-teaching-vincent-mastro
5. https://serc.carleton.edu/econ/interdisciplinary/why.html
6. https://learningandteaching-navitas.com/multidisciplinary-teaching-approach-active-learning/
7. https://en.wikipedia.org/wiki/Interdisciplinarity
8. https://www.researchgate.net/post/What_is_the_difference_between_interdisciplinary_and_multidisciplinary_research


**************

# ಬ್ಲಾಕ್ 2 : ಜ್ಞಾನಶಿಸ್ತುಗಳ ವರ್ಗೀಕರಣ ಮತ್ತು ಜ್ಞಾನಶಿಸ್ತುವ್ಯಾಪಿ ಬೋಧನೆ

## ಘಟಕ 3 : ಶಾಲಾ ಪಠ್ಯಕ್ರಮದಲ್ಲಿ ಮಾನವಿಕ ಮತ್ತು ಸಮಾಜ ವಿಜ್ಞಾನ ವಿಷಯಗಳು

### ಘಟಕದ ರಚನೆ


2.3.1. ಕಲಿಕೆಯ ಉದ್ದೇಶಗಳು

2.3.2. ಪೀಠಿಕೆ

2.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.3.3.1. ಮಾನವಿಕ ವಿಷಯಗಳ ಅರ್ಥ, ಶಾಖೆಗಳು ಮತ್ತು ಪ್ರಾಮುಖ್ಯತೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

2.3.3.2. ಶಾಲಾ ಪಠ್ಯಕ್ರಮದಲ್ಲಿ ಸಮಾಜವಿಜ್ಞಾನ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

2.3.4. ಸಾರಾಂಶಿಸೋಣ

2.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

2.3.6. ಘಟಕಾಂತ್ಯ ಅಭ್ಯಾಸಗಳು

2.3.7. ಪರಾಮರ್ಶನ ಸೂಚಿ


### 2.3.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಮಾನವಿಕ ಮತ್ತು ಸಮಾಜವಿಜ್ಞಾನಗಳ ಅರ್ಥವನ್ನು ವಿವರಿಸುವರು;
- ಮಾನವಿಕ ವಿಷಯಗಳ ಶಾಖೆಗಳನ್ನು ಹೆಸರಿಸುವರು;
- ಶಾಲಾ ಪಠ್ಯಕ್ರಮದಲ್ಲಿ ಮಾನವಿಕ ಮತ್ತು ಸಮಾಜವಿಜ್ಞಾನಗಳ ಪ್ರಾಮುಖ್ಯತೆಯನ್ನು ವಿವರಿಸುವರು; ಮತ್ತು
- ಸಮಾಜವಿಜ್ಞಾನಗಳಲ್ಲಿ ವಿಷಯಸಂಘಟನಾ ಉಪಕ್ರಮಗಳನ್ನು ವಿವರಿಸುವರು.

### 2.3.2. ಪೀಠಿಕೆ

ಮಾನವಿಕ ವಿಭಾಗಗಳ ಒಂದು ಶಾಖೆಯಾಗಿ ಸಮಾಜ ವಿಜ್ಞಾನದ ಅರ್ಥ ಹಾಗೂ ಪ್ರಕ್ರಿಯೆಗಳ ಬಗ್ಗೆ ನಾವು ಈಗಾಗಲೇ ಚರ್ಚಿಸಿದ್ದೇವೆ. ಅಧ್ಯಾಪಕರು ವಿಷಯದ ಒಳ ಅಂಶವನ್ನು ತಿಳಿಯುವುದು ಮಾತ್ರವಲ್ಲ, ಒಳ ಅಂಶಕ್ಕೆ ಸರಿಹೊಂದುವ ಬೋಧನಶಾಸ್ತ್ರೀಯ ಪ್ರಕ್ರಿಯೆಗಳು ಯಾವುವೆಂದು ತೀರ್ಮಾನಿಸಲಾಗುವಂತೆ ಅವರು ಆ

ವಿಷಯಗಳ ಸ್ವರೂಪವನ್ನೂ ತಿಳಿಯಬೇಕು ಎಂದು ಸಹ ನಾವು ತಿಳಿದಿದ್ದೇವೆ. ಆಯಾ ವಿಷಯಗಳ ಸ್ವರೂಪವನ್ನು ಅವರು ಒಮ್ಮೆ ತಿಳಿದುಕೊಂಡರೆ, ಆ ನಿರ್ದಿಷ್ಟ ವಿಷಯದ ಪಠ್ಯಕ್ರಮದಲ್ಲಿ ಆ ಒಳ ಅಂಶವನ್ನು ಸೂಕ್ತವಾಗಿ ಸೇರಿಸಲು ಸುಲಭ. ಆದ್ದರಿಂದ, ಈ ಘಟಕದಲ್ಲಿ ಮಾನವಿಕ ವಿಷಯಗಳು ಹಾಗೂ ಸಮಾಜ ವಿಜ್ಞಾನ ವಿಷಯಗಳ ಸ್ವರೂಪವನ್ನೂ ಹಾಗೂ ಅವುಗಳ ವ್ಯವಸ್ಥೆಗೆ ಸಂಬಂಧಿಸಿದ ನಿಹಿತಾರ್ಥಗಳನ್ನೂ ತಿಳಿಯೋಣ.

## 2.3.3. ಕಲಿಕಾ ಅಂಶಗಳು ಹಾಗೂ ಕಲಿಕಾ ಚಟುವಟಿಕೆಗಳು

ಮಾನವಿಕ ವಿಭಾಗವು ಪ್ರಧಾನವಾಗಿ ಮಾನವ ನಡವಳಿಕೆ ಹಾಗೂ ಸಮಾಜದ ಮೇಲೆ ಅದರ ಪರಿಣಾಮಗಳ ಬಗ್ಗೆ ವ್ಯವಹರಿಸುವ ಒಂದು ಅಧ್ಯಯನ ಸರಣಿಯಾಗಿದೆ. ಮಾನವನ ನಡೆವಳಿಕೆ, ಮನೋವಿಜ್ಞಾನ, ತತ್ತ್ವಶಾಸ್ತ್ರ, ಅಪರಾಧಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಇವೇ ಮೊದಲಾದ ಅನೇಕ ಕ್ಷೇತ್ರಗಳನ್ನು ಅದು ಒಳಗೊಳ್ಳುತ್ತದೆ. ಸಾಮಾಜಿಕ ಅಂತಸ್ತು–ವ್ಯವಸ್ಥೆಗಳು, ಸಮಾಜಶಾಸ್ತ್ರೀಯ ಸಿದ್ಧಾಂತ ಹಾಗೂ ಸಾಮಾಜಿಕ ಧೋರಣೆಗಳ ಬಗ್ಗೆ ಒಂದು ಪ್ರೌಢವಾದ ತಿಳುವಳಿಕೆಯನ್ನು ಅದು ಒದಗಿಸುತ್ತದೆ. ಮಾನವಿಕ ವಿಭಾಗ ಹಾಗೂ ಸಮಾಜ ವಿಜ್ಞಾನಗಳೆರಡೂ ಸಾಮಾಜಿಕ, ಸಾಂಸ್ಕೃತಿಕ, ಪಾರಿಸರಿಕ, ಆರ್ಥಿಕ ಹಾಗೂ ರಾಜಕೀಯ ಸಂದರ್ಭಗಳಲ್ಲಿ ಮಾನವನ ನಡವಳಿಕೆ ಹಾಗೂ ವ್ಯವಹಾರದ ಕುರಿತಾದ ಅಧ್ಯಯನವಾಗಿರುತ್ತವೆ. ಮಾನವಿಕ ವಿಭಾಗ ಹಾಗೂ ಸಮಾಜ ವಿಜ್ಞಾನಗಳು, ವೈಯಕ್ತಿಕದಿಂದ ವಿಶ್ವವ್ಯಾಪಕ ಸಂದರ್ಭಗಳವರೆಗೆ, ಐತಿಹಾಸಿಕವಾದ ಹಾಗೂ ಸಮಕಾಲೀನವಾದ ಗಮನವನ್ನು ನೀಡುತ್ತವೆ, ಮತ್ತು ಭವಿಷ್ಯತ್ತಿನ ಸವಾಲುಗಳನ್ನೂ ಪರಿಗಣಿಸುತ್ತವೆ.

ಪಠ್ಯಕ್ರಮದಲ್ಲಿ, ಮಾನವಿಕ ವಿಭಾಗ ಹಾಗೂ ಸಮಾಜ ವಿಜ್ಞಾನಗಳ ಕಲಿಕೆಯ ವ್ಯಾಪ್ತಿಯು ಇತಿಹಾಸ, ಭೂಗೋಳಶಾಸ್ತ್ರ, ಪೌರನೀತಿ, ಪೌರತ್ವ, ಅರ್ಥಶಾಸ್ತ್ರ, ವ್ಯವಹಾರಶಾಸ್ತ್ರ, ಇವೇ ಮುಂತಾದ ಅನೇಕ ವಿಷಯಗಳ ಅಧ್ಯಯನವನ್ನು ಒಳಗೊಳ್ಳುತ್ತದೆ. ಮಾನವಿಕ ವಿಭಾಗ ಹಾಗೂ ಸಮಾಜ ವಿಜ್ಞಾನಗಳ ಅಧ್ಯಯನದ ಮೂಲಕ, ವಿದ್ಯಾರ್ಥಿಗಳು ಪ್ರಶ್ನೆ ಮಾಡಲು, ವಿಮರ್ಶಾತ್ಮಕವಾಗಿ ಆಲೋಚಿಸಲು, ಸಮಸ್ಯೆಗಳನ್ನು ಪರಿಹರಿಸಲು, ಪರಿಣಾಮಕಾರಿಯಾಗಿ ಸಂವಹನ ಮಾಡಲು, ನಿರ್ಣಯಗಳನ್ನು ಮಾಡಲು ಹಾಗೂ ಬದಲಾವಣೆಗಳಿಗೆ ಹೊಂದಿಕೊಳ್ಳಲು ಬೇಕಾದ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ. ಮಾನವಿಕ ವಿಭಾಗ ಹಾಗೂ ಸಮಾಜ ವಿಜ್ಞಾನದ ವಿಷಯಗಳು ಪಠ್ಯಕ್ರಮದಲ್ಲಿದ್ದರೆ ಅವು ನಾವು ಬದುಕುತ್ತಿರುವ ಜಗತ್ತಿನ ಬಗ್ಗೆ, ಮತ್ತು ಜನರು 21ನೆಯ ಶತಮಾನಕ್ಕೆ ಆವಶ್ಯಕವಾದ ಉನ್ನತಮಟ್ಟದ ಕೌಶಲಗಳೊಂದಿಗೆ ಸಕ್ರಿಯರೂ ಹಾಗೂ ತಿಳುವಳಿಕೆಯ ಪೌರರಾಗಿ ಹೇಗೆ ಭಾಗವಹಿಸಬಹುದು ಎಂಬ ಬಗ್ಗೆ, ಒಂದು ವಿಸ್ತೃತವಾದ ತಿಳುವಳಿಕೆಯನ್ನು ಒದಗಿಸುತ್ತವೆ.

### 2.3.3.1. ಮಾನವಿಕ ವಿಭಾಗದ ಅರ್ಥ, ಶಾಖೆಗಳು ಹಾಗೂ ಮಹತ್ವ

ವಿವಿಧ ಅರ್ಥ ವಿವರಣೆಗಳ ಮೂಲಕ ಮಾನವಿಕ ವಿಭಾಗದ ಸ್ವರೂಪವನ್ನು ತಿಳಿಯಲು ಪ್ರಯತ್ನಿಸೋಣ.

ಮಾನವಿಕ ವಿಭಾಗವು ಶೈಕ್ಷಣಿಕ ಅಧ್ಯಯನ ವಿಭಾಗಗಳ ಪ್ರಧಾನ ಸಮೂಹಗಳಲ್ಲಿ ಒಂದು. ಇತಿಹಾಸ, ಕಲೆ, ಸಂಗೀತ, ಧರ್ಮ ಹಾಗೂ ಸಂಸ್ಕೃತಿಗಳು ಆಧುನಿಕ ಜಗತ್ತನ್ನು ಹೇಗೆ ರೂಪುಗೊಳಿಸಿವೆ ಎಂಬುದನ್ನು ಅಧ್ಯಯನದ ಈ ಕ್ಷೇತ್ರವು ವಿದ್ಯಾರ್ಥಿಗಳಿಗೆ ಕಲಿಸುತ್ತದೆ. ಒಂದು ಕಡೆ ಮಾನವಿಕ ವಿಭಾಗವು ಕಲೆ, ಸಂಗೀತ ಹಾಗೂ ಸಾಹಿತ್ಯದ ಮೇಲೆ ಗಮನ ಹರಿಸಿದರೆ, ಇನ್ನೊಂದು ಕಡೆ ಸಮಾಜ ವಿಜ್ಞಾನಗಳು ಮಾನವಶಾಸ್ತ್ರ, ಪೂರ್ವೇತಿಹಾಸಶಾಸ್ತ್ರ ಹಾಗೂ ರಾಜನೀತಿಶಾಸ್ತ್ರಗಳ ಕಡೆಗೆ ಗಮನ ಹರಿಸುತ್ತವೆ. ಆದ್ದರಿಂದಲೇ, ಈ ಎರಡೂ ಅಧ್ಯಯನ ಸರಣಿಗಳು ಬೇರೆ ಬೇರೆಯಾಗಿದ್ದರೂ ಅವು ಒಂದಕ್ಕೊಂದು ಪೂರಕವಾಗಿರುವುದರಿಂದ ಅವುಗಳನ್ನು ಹೆಚ್ಚಾಗಿ ಒಟ್ಟಿಗೇ ಅಧ್ಯಯನ ಮಾಡಲಾಗುತ್ತದೆ.

ಮಾನವಿಕ ವಿಭಾಗಗಳೆಂದರೆ ಮಾನವ ಸಮಾಜ ಹಾಗೂ ಸಂಸ್ಕೃತಿಯ ಅಂಶಗಳನ್ನು ಅಧ್ಯಯನ ಮಾಡುವಂತಹ ಶೈಕ್ಷಣಿಕ ಅಧ್ಯಯನ ಶಾಖೆಗಳು. ಭೌತವಿಜ್ಞಾನಗಳ ಪ್ರಯೋಗಪ್ರಧಾನ ಕ್ರಮಗಳಿಗಿಂತ ಭಿನ್ನವಾಗಿ, ವಿಜ್ಞಾನವಿಷಯಗಳಂತೆ ಒಂದು ಕೇಂದ್ರೀಕೃತ ಅಧ್ಯಯನಶಾಖೆಯನ್ನು ಹೊಂದದೆ, ಇವುಗಳು ಪ್ರಾಥಮಿಕವಾಗಿ ವಿಮರ್ಶಾತ್ಮಕವಾದ,

ಅಥವಾ ಊಹಾತ್ಮಕವಾದ, ಕ್ರಮಗಳನ್ನು ಬಳಸುತ್ತವೆ. ಮಾನವಿಕ ವಿಭಾಗಗಳಲ್ಲಿ ಪ್ರಾಚೀನ ಹಾಗೂ ಆಧುನಿಕ ಭಾಷೆಗಳು, ಸಾಹಿತ್ಯ, ತತ್ತ್ವಶಾಸ್ತ್ರ, ಇತಿಹಾಸ, ಮಾನವ ಭೂಗೋಳಶಾಸ್ತ್ರ, ವ್ಯವಹಾರಧರ್ಮಶಾಸ್ತ್ರ (ಕಾನೂನು), ರಾಜನೀತಿಶಾಸ್ತ್ರ, ಧರ್ಮ ಹಾಗೂ ಕಲೆಗಳು ಇರುತ್ತವೆ.

ಮಾನವಿಕ ವಿಭಾಗಗಳು ಸಾಹಿತ್ಯ, ತತ್ತ್ವಶಾಸ್ತ್ರ ಹಾಗೂ ಇತಿಹಾಸದಂತಹ ಮಾನವ ಸಂಸ್ಕೃತಿಯ ಕುರಿತ ಅಧ್ಯಯನಗಳು. ಮಾನವಿಕ ವಿಭಾಗಗಳನ್ನು ಅಧ್ಯಯನ ಮಾಡುವುದರಿಂದ ಸಾಮಾನ್ಯ ಜ್ಞಾನವು ದೊರಕುತ್ತದೆ, ಆದರೆ ಪ್ರಾಯೋಗಿಕವಾದ ಒಂದು ವ್ಯಾಪಾರವು ದೊರಕುವುದಿಲ್ಲ.

ವಿದ್ಯಾರ್ಥಿಗಳು ಹೆಚ್ಚಾಗಿ ವಿಶ್ಲೇಷಣಾತ್ಮಕವಾದ, ವಿಮರ್ಶಾತ್ಮಕವಾದ ಅಥವಾ ಅನ್ವೇಷಣಾತ್ಮಕವಾದ ವಿಧಾನಗಳನ್ನು ಬಳಸುತ್ತಾ ಮಾನವ ವ್ಯವಹಾರದ ವಿವಿಧ ಪ್ರಕಾರಗಳನ್ನು ಅಧ್ಯಯನ ಮಾಡಲಾಗುವ ಒಂದು ದೊಡ್ಡ ಶೈಕ್ಷಣಿಕ ಕ್ಷೇತ್ರವೇ ಮಾನವಿಕ ವಿಭಾಗ. ಮಾನವಜೀವಿಗಳು ಹಾಗೂ ಸಮಾಜವು ವಿವಿಧ ಪ್ರಕಾರದ ಅಧ್ಯಯನದ ಮೇಲೆ ಗಮನ ಹರಿಸುವಂತಹ ಅನೇಕ ಅಧ್ಯಯನಶಾಖೆಗಳಿಗೇ ಮಾನವಿಕ ವಿಭಾಗವು ಸಹಾಯ ಮಾಡುವುದಾದ್ದರಿಂದ, ಅನ್ವೇಷಣೆಗಾಗಿ ಒಂದು ಸುವ್ಯಕ್ತವಾದುದನ್ನೇ (ಅವ್ಯಕ್ತವಾದುದನ್ನಲ್ಲ) ಅದು ತನ್ನಲ್ಲಿ ಒಳಗೊಳ್ಳುತ್ತದೆ. 'ಈ ಕೆಳಕಂಡ ವಿಷಯಗಳ ಅಧ್ಯಯನ' ಎಂದು ಮಾನವಿಕ ವಿಭಾಗ ಸರಣಿಯನ್ನು ಪರಿಚಯಿಸುವ ರೀತಿಯಲ್ಲಿ ಅದನ್ನು 'ಸಮಗ್ರ ಮಾನವಿಕ ವಿಭಾಗ' ಎಂದು ಸಹ ಉಲ್ಲೇಖಿಸಲಾಗುತ್ತದೆ.

- ಇತಿಹಾಸ
- ಭೂಗೋಳಶಾಸ್ತ್ರ
- ಧಾರ್ಮಿಕ ಶಿಕ್ಷಣ
- ಸಮಾಜಶಾಸ್ತ್ರ
- ಮನೋವಿಜ್ಞಾನ
- ಸರಕಾರ ಹಾಗೂ ರಾಜನೀತಿ
- ವ್ಯವಹಾರಧರ್ಮಶಾಸ್ತ್ರ (ಕಾನೂನು)

## ಮಾನವಿಕ ವಿಭಾಗದ ಶಾಖೆಗಳು

ಮಾನವಿಕ ವಿಭಾಗದ ವಿವಿಧ ಶಾಖೆಗಳು ಸಾಹಿತ್ಯ, ಕಲೆ, ಸಂಗೀತ, ತತ್ತ್ವಶಾಸ್ತ್ರ, ಧರ್ಮ ಹಾಗೂ ಭಾಷೆಗಳನ್ನು ಒಳಗೊಂಡಿವೆ. ಜನರು ಮಾನವಿಕ ವಿಭಾಗದ ವಿಷಯಗಳನ್ನು ಮಾನವ ಅನುಭವಗಳನ್ನು ದಾಖಲಿಸಲು ಹಾಗೂ ಅನ್ವೇಷಿಸಲು ಬಳಸುತ್ತಾರೆ, ಮತ್ತು ವೈಜ್ಞಾನಿಕ ಜಗತ್ತಿನ ಒಳಗೆ ಪ್ರವೇಶಿಸುವ ಹೆಚ್ಚುವರಿ ಶಾಖೆಗಳೂ ಇಲ್ಲಿವೆ.

ಸಾಹಿತ್ಯವು, ಲಿಖಿತ ಕೃತಿಗಳ ಒಂದು ಸಂಕುಲ. ಪರಿಮಿತ ಅರ್ಥದಲ್ಲಿ, ಭಾಷೆಯನ್ನು ಸಾಮಾನ್ಯ ಬಳಕೆಗಿಂತ ಭಿನ್ನವಾದ ರೀತಿಗಳಲ್ಲಿ ಬಳಸುವ ಕಾರಣಕ್ಕಾಗಿ, ಕಲಾತ್ಮಕವಾದ ಅಥವಾ ಬೌದ್ಧಿಕ ಮೌಲ್ಯವುಳ್ಳದ್ದೆಂದು ಪರಿಗಣಿಸಲಾದ ಒಂದು ಕಲಾಪ್ರಕಾರವೋ ಅಥವಾ ಒಂದು ಪ್ರತ್ಯೇಕ ಕೃತಿಯೋ ಆಗಿರುವಂತಹದಕ್ಕೂ ಸಾಹಿತ್ಯವು ಸಂಬಂಧಪಡುತ್ತದೆ.

## ಶಾಲಾಪಠ್ಯಕ್ರಮದಲ್ಲಿ ಮಾನವಿಕ ವಿಭಾಗದ ಪ್ರಾಮುಖ್ಯತೆ

- ಮಾನವಿಕ ವಿಭಾಗದ ವಿಷಯಗಳು ಇತರರನ್ನು ಅವರ ಭಾಷೆಗಳು, ಇತಿಹಾಸಗಳು ಹಾಗೂ ಸಂಸ್ಕೃತಿಗಳ ಮೂಲಕ ತಿಳಿಯಲು ಸಹಾಯ ಮಾಡುತ್ತವೆ.
- ಸಾಮಾಜಿಕ ನ್ಯಾಯ ಹಾಗೂ ಸಮಾನತೆಯನ್ನು ಅವು ಪೋಷಿಸುತ್ತವೆ.

- ಜನರು ಜಗತ್ತಿಗೆ ಒಂದು ನೈತಿಕ, ಆಧ್ಯಾತ್ಮಿಕ ಹಾಗೂ ಬೌದ್ಧಿಕ ಅರ್ಥವನ್ನು ನೀಡಲು ಹೇಗೆ ಪ್ರಯತ್ನಿಸಿರುವರೆಂಬುದನ್ನು ಬಹಿರಂಗಪಡಿಸುತ್ತವೆ.
- ಮಾನವಿಕ ವಿಭಾಗದ ವಿಷಯಗಳು ಸಹಾನುಭೂತಿಯನ್ನು ಕಲಿಸುತ್ತವೆ.
- ವ್ಯಕ್ತಿಗತ, ಸಂಕೀರ್ಣ, ಅಪರಿಪೂರ್ಣ ಮಾಹಿತಿಯೊಂದಿಗೆ ವಿಮರ್ಶಾತ್ಮಕವಾಗಿ ಹಾಗೂ ತಾರ್ಕಿಕವಾಗಿ ಹೇಗೆ ವ್ಯವಹರಿಸಬೇಕೆಂಬುದನ್ನು ಅವು ನಮಗೆ ಕಲಿಸುತ್ತವೆ.
- ಸಾಕ್ಷ್ಯಗಳನ್ನು ಪರೀಕ್ಷಕದೃಷ್ಟಿಯಿಂದ ಹೇಗೆ ಪ್ರಮಾಣಪರೀಕ್ಷೆ ಮಾಡಬೇಕೆಂಬುದನ್ನು ಮತ್ತು ಪ್ರತಿಯೊಂದು ಜಿಜ್ಞಾಸೆಯ ಒಂದಕ್ಕಿಂತ ಹೆಚ್ಚಿನ ಆಯಾಮಗಳನ್ನು ಪರಿಗಣಿಸುವುದು ಹೇಗೆಂಬುದನ್ನು ಅವು ನಮಗೆ ಕಲಿಸುತ್ತವೆ.
- ಮಾನವಿಕ ವಿಭಾಗ ವಿಷಯಗಳು ಬರವಣಿಗೆ ಹಾಗೂ ವಿಮರ್ಶಾತ್ಮಕ ಓದುವಿಕೆಗೆ ಬೇಕಾದ ಕೌಶಲವನ್ನು ವರ್ಧಿಸುತ್ತವೆ.
- ಮಾನವಿಕ ವಿಭಾಗ ವಿಷಯಗಳು ರಚನಾತ್ಮಕವಾಗಿ ಆಲೋಚಿಸಲು ನಮಗೆ ಪ್ರೋತ್ಸಾಹ ನೀಡುತ್ತವೆ. ನಾವು ಮಾನವರಾಗಿರುವ ಬಗ್ಗೆ ವಿವೇಚನೆ ಮಾಡಲು ಹಾಗೂ ನಮ್ಮ ಜಗತ್ತಿನ ಬಗ್ಗೆ ಪ್ರಶ್ನೆಗಳನ್ನು ಕೇಳಲು ನಮಗೆ ಕಲಿಸುತ್ತವೆ.
- ಮಾನವಿಕ ವಿಭಾಗ ವಿಷಯಗಳು ನಮ್ಮನ್ನು ತಿಳುವಳಿಕೆಯುಳ್ಳ ಹಾಗೂ ವಿಮರ್ಶೆಯುಳ್ಳ ಪೌರರನ್ನಾಗಿ ಬೆಳೆಸುತ್ತವೆ. ಮಾನವಿಕ ವಿಭಾಗ ವಿಷಯಗಳಿಲ್ಲದಿದ್ದರೆ, ಪ್ರಜಾಪ್ರಭುತ್ವವು ಏಳಿಗೆ ಹೊಂದುತ್ತಿರಲಿಲ್ಲ.
- ವಿವಿಧ ವಿಷಯಗಳು ಹಾಗೂ ಪ್ರಕರಣಗಳ ಬಗ್ಗೆ ಒಂದು ಒಳನೋಟವನ್ನು ಹೊಂದಲು ಆಗುವಂತೆ ಮಾನವಿಕ ವಿಭಾಗ ವಿಷಯಗಳು ನಮಗೆ ವಿಮರ್ಶಾತ್ಮಕವಾಗಿ ಯೋಚಿಸಲು ಸಹಾಯ ಮಾಡುತ್ತವೆ ಮತ್ತು ಚೆನ್ನಾಗಿ ವಿವೇಚನೆ ಮಾಡಲು ಸಹಾಯ ಮಾಡುತ್ತವೆ.
- ಪ್ರಾಚೀನ ಗ್ರೀಸ್ ಕಾಲದಿಂದಲೂ ಮಾನವಿಕ ವಿಭಾಗ ವಿಷಯಗಳು ಒಂದು ಮುಖ್ಯ ಅಧ್ಯಯನ ಕ್ಷೇತ್ರವಾಗಿವೆ, ಮತ್ತು ಅವುಗಳ ಜ್ಞಾನವನ್ನು ಕಾವ್ಯ, ಇತಿಹಾಸ, ಸಂಸ್ಕೃತಿ ಹಾಗೂ ಕಲೆಗಳ ಅನ್ವೇಷಣೆಗಾಗಿ ಬಳಸಲಾಗುತ್ತಿತ್ತು.
- ಮಾನವಿಕ ವಿಭಾಗ ವಿಷಯಗಳು ವಿಮರ್ಶಾತ್ಮಕ ಆಲೋಚನೆ, ವಿಶ್ಲೇಷಣೆ ಹಾಗೂ ರಚನಾತ್ಮಕತೆಯಂತಹ ಮೂಲಭೂತ ಕೌಶಲಗಳನ್ನು ಕಲಿಸುತ್ತವೆ. ಈ ಕೌಶಲಗಳು ಪದವೀ ಮಟ್ಟದ ಶಿಕ್ಷಣವನ್ನು ಅಥವಾ ಸ್ನಾತಕೋತ್ತರ ಪದವಿಗಳನ್ನು ಕುರಿತು ಯೋಚಿಸುವವರಿಗೆ ಮಾತ್ರವಲ್ಲದೆ, ವ್ಯವಹಾರದಲ್ಲಿ ಉದ್ಯೋಗಾವಕಾಶಗಳನ್ನು ಕುರಿತು ಯೋಚಿಸುವವರಿಗೂ ಉಪಯುಕ್ತವಾಗಿವೆ.
- ಮಾನವಿಕ ವಿಭಾಗ ವಿಷಯಗಳು ಮನುಷ್ಯನ ಜೀವನದಲ್ಲಿ, ಜಗತ್ತನ್ನು ಕುರಿತ ವಿಸ್ತೃತವಾದ ಒಳನೋಟವನ್ನು ಒದಗಿಸುತ್ತದೆ, ಭೂತ ಭವಿಷ್ಯತ್ತುಗಳ ಬಗ್ಗೆ ಉತ್ತಮ ತಿಳುವಳಿಕೆ ಹೊಂದಲು ಸಹಾಯ ಮಾಡುತ್ತದೆ, ಮತ್ತು ಸಹಾನುಭೂತಿಯ ಒಂದು ಸಂವೇದನೆಯನ್ನು ಪೋಷಿಸುತ್ತದೆ. ಒಟ್ಟಾರೆಯಾಗಿ ವ್ಯಾಖ್ಯಾನಿಸುವುದಾದರೆ, ಕಲೆ, ಸಾಹಿತ್ಯ, ತತ್ತ್ವಶಾಸ್ತ್ರ, ಸಂಗೀತ ಹಾಗೂ ಭಾಷೆಗಳ ಮೂಲಕ ಮಾನವಿಕ ವಿಭಾಗ ವಿಷಯಗಳು ಮಾನವ ಸಂಸ್ಕೃತಿ ಅಧ್ಯಯನವೇ ಆಗಿದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ಶಾಲಾ ಪಠ್ಯಕ್ರಮದಲ್ಲಿ ಮಾನವಿಕ ವಿಭಾಗ ವಿಷಯಗಳ ಅರ್ಥ ಹಾಗೂ ಮಹತ್ತ್ವವನ್ನು ವಿವರಿಸಿರಿ.

## 3.3.3.2. ಸಮಾಜ ವಿಜ್ಞಾನ ಪಠ್ಯಕ್ರಮ

ಪಠ್ಯಕ್ರಮವು ಯಾವುದೇ ಶಿಕ್ಷಣಪದ್ಧತಿಯ ಒಂದು ಮಹತ್ತ್ವದ ಘಟಕ. ಪಠ್ಯಕ್ರಮವನ್ನು ಅಧ್ಯಯನದ ಇಡೀ ಅವಧಿಗಾಗಿ, ಅಂತೆಯೇ, ವಿವಿಧ ವಿಷಯಗಳಿಗಾಗಿ ಯೋಜಿಸಲಾಗುತ್ತದೆ. ಶಾಲೆಗಳಲ್ಲಿ ಕಲಿಸಲಾಗುವ ವಿವಿಧ ವಿಷಯಗಳ ಗುರಿಗಳು ಹಾಗೂ ಉದ್ದೇಶ್ಯಗಳನ್ನು ಸಾಧಿಸುವ ಮೂಲಕ ಶಿಕ್ಷಣದ ಒಟ್ಟಾರೆ ಗುರಿಗಳನ್ನು ಸಾಧಿಸಲಾಗುತ್ತದೆ. ಗುರಿಗಳನ್ನು ಸಾಧಿಸುವಲ್ಲಿನ ಯಶಸ್ಸು ಪಠ್ಯಕ್ರಮದ ರೂಪವ್ಯವಸ್ಥೆಗೆ ಕಾರಣವಾದ ಪ್ರಕ್ರಿಯೆಯ ಔಚಿತ್ಯದ ಮೇಲೆ ಅವಲಂಬಿಸಿದೆ. ಆದ್ದರಿಂದ, ಸಮಾಜವಿಜ್ಞಾನದ ಉದ್ದೇಶಗಳನ್ನು ಸಾಧಿಸಲು, ಉತ್ತಮವಾಗಿ ರೂಪಿಸಲಾದ ಒಂದು ಪಠ್ಯಕ್ರಮವು ಅನಿವಾರ್ಯವೆಂದು ಸಿದ್ಧವಾಗುತ್ತದೆ. ಪಠ್ಯಕ್ರಮವು ಲಕ್ಷ್ಯಾಧಾರಿತ ಶಿಕ್ಷಣಪ್ರಕ್ರಿಯೆಯನ್ನು ಮಾರ್ಗದರ್ಶನ ಮಾಡುವ ಯೋಜನೆಯಾಗಿದೆಯೆಂಬುದೇ ಇದಕ್ಕೆ ಕಾರಣ. ಈ ಯೋಜನೆಯು ನಾಲ್ಕು ಮುಖ್ಯವಾದ ಘಟಕಗಳನ್ನು ಒಳಗೊಳ್ಳುತ್ತದೆ. ಅವು ಈ ಕೆಳಗಿನಂತಿವೆ:




**(ಉದ್ದೇಶಗಳು – ವಿಷಯ ಬೋಧನಾ ಮಾರ್ಗೋಪಾಯಗಳು – ಮೌಲ್ಯಮಾಪನ ತಂತ್ರಗಳು)**

ಸಮಾಜವಿಜ್ಞಾನದ ಪಠ್ಯಕ್ರಮವು ಕೆಲವು ಮುಖ್ಯವಾದ ಕಾರ್ಯಗಳನ್ನು ಪೂರೈಸುವುದೆಂದು ಭಾವಿಸಲಾಗಿದೆ. ಅವು ಈ ಕೆಳಗಿನಂತಿವೆ:

- ಬದುಕು ಮತ್ತು ಕಲಿಕೆಯ ವಿಷಯಗಳ ನಡುವೆ ಸಾಮರಸ್ಯ
- ಜ್ಞಾನದ ಗ್ರಹಿಕೆ ಮತ್ತು ಸಶಕ್ತೀಕರಣ
- ಸಂಪೂರ್ಣ ವಿಕಾಸ
- ವಿದ್ಯಾರ್ಥಿಗಳ ಅಗತ್ಯಗಳ ಪೂರೈಕೆ
- ಮೌಲ್ಯಗಳ ವಾಸ್ತವೀಕರಣ
- ವ್ಯಕ್ತಿ ಮತ್ತು ಸಮಾಜದ ಸಾಮರಸ್ಯ
- ಪ್ರಜಾಪ್ರಭುತ್ವ ಮೌಲ್ಯಗಳ ಬೆಳವಣಿಗೆ
- ಸೂಕ್ತ ಪರಿಸರ ನಿರ್ಮಾಣ

## ಸಮಾಜವಿಜ್ಞಾನದಲ್ಲಿ ಪಠ್ಯಕ್ರಮದ ಸಂಯೋಜನೆಯ ಉಪಕ್ರಮಗಳು:

ಸಮಾಜವಿಜ್ಞಾನದಲ್ಲಿ ಪಠ್ಯಕ್ರಮದ ಸಂಯೋಜನೆಗೆ ಅನೇಕ ಉಪಕ್ರಮಗಳು ಇವೆಯಾದರೂ ಯಾವುದೇ ಒಂದು ಉಪಕ್ರಮವೂ ಪರಿಪೂರ್ಣವಾಗಿದೆ ಹಾಗೂ ಸಮಗ್ರವಾಗಿದೆ ಎಂದು ಸಿದ್ಧವಾಗಿಲ್ಲ. ಪ್ರತಿಯೊಂದು ಉಪಕ್ರಮದಲ್ಲಿಯೂ ಗುಣಾಂಶಗಳೂ ಇವೆ ಹಾಗೂ ಮಿತಿಗಳೂ ಇವೆ. ಅಧ್ಯಾಪಕರು ವಿದ್ಯಾರ್ಥಿಗಳ ಬೌದ್ಧಿಕಸ್ತರ ಹಾಗೂ ಆವಶ್ಯಕತೆಗಳಿಗೆ ಸೂಕ್ತವಾದ ಉಪಕ್ರಮಗಳನ್ನು ಆಯ್ದುಕೊಳ್ಳಬೇಕಾಗುತ್ತದೆ. ಸಮಾಜವಿಜ್ಞಾನದ ಪಠ್ಯಕ್ರಮದ ಸಂಯೋಜನೆಯ ವಿಷಯದಲ್ಲಿರುವ ವಿವಿಧ ಉಪಕ್ರಮಗಳನ್ನು ತಿಳಿಯೋಣ.

## ಸುರುಳಿ ಉಪಕ್ರಮ

ಸಮಾಜ ವಿಜ್ಞಾನದ ವಿಷಯವಸ್ತುವನ್ನು ಶಿಕ್ಷಣದ ವಿವಿಧ ಹಂತಗಳಲ್ಲಿ ಅವ್ಯಾಹತವಾದ ಹಾಗೂ ಎಡೆಬಿಡದ ಕಲಿಕೆಯನ್ನು ಪೋಷಿಸುವಂತಹ ತಂತ್ರವನ್ನು ರೂಪಿಸುವುದೇ ಸುರುಳಿಯಾಕಾರದ ಪ್ರಸ್ತಾವನೆ. ಈ ಉಪಕ್ರಮದ ಪ್ರಕಾರ, ಪ್ರಾಥಮಿಕ ಶಾಲೆಯ ಮಕ್ಕಳು ಮನುಷ್ಯನು ತನ್ನ ದೈನಂದಿನ ಚಟುವಟಿಕೆಗಳನ್ನು ನಡೆಸುವುದರ ಬಗ್ಗೆ ಸರಳವಾದ ಸಾಮಾನ್ಯೀಕರಣವನ್ನು ಬೆಳೆಸಿಕೊಳ್ಳುತ್ತಾರೆ. ಅವರು ಹೆಚ್ಚು ಹೆಚ್ಚು ಸಂಕೀರ್ಣವಾದ ಮಾಹಿತಿಗಳೊಂದಿಗೆ ಕೆಲಸ ಮಾಡುತ್ತಾರೆ ಮತ್ತು ಅದರಿಂದಾಗಿ ಈ ಹಿಂದೆ ಆಗಲೇ ಬೆಳೆಸಿಕೊಂಡಿದ್ದ ಸಂಬಂಧಿತ ಸಾಮಾನ್ಯೀಕರಣವನ್ನು ಆಳಗೊಳಿಸುತ್ತಾ ಹಾಗೂ ರೂಪಾಂತರಗೊಳಿಸುತ್ತಾ ಹೋಗುತ್ತಾರೆ. ಉದಾಹರಣೆಗೆ, ಮಕ್ಕಳು ತಮ್ಮ ಪ್ರಾಥಮಿಕ ತರಗತಿಗಳಲ್ಲಿಯೇ ನಮ್ಮ ಸ್ವಾತಂತ್ರ್ಯ ಚಳುವಳಿಯ ಕುರಿತು ತಿಳಿಯುವುದು ಬಹಳ ಮುಖ್ಯ. ಈ ಘಟಕದ ಕುರಿತು ಮಾಹಿತಿಯನ್ನು ಮಹಾತ್ಮಾ ಗಾಂಧಿ, ಜವಾಹರಲಾಲ ನೆಹರು, ಬಾಲಗಂಗಾಧರ ತಿಲಕರು ಹಾಗೂ ಬಿ. ಆರ್. ಅಂಬೇಡ್ಕರ್ ಅಂತಹ ಕೆಲವು ಮಹಾನ್ ನಾಯಕರ ಜೀವನ ವೃತ್ತಾಂತದ ಮೂಲಕ ನೀಡಲಾಗುತ್ತದೆ. ಮಧ್ಯದ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ರಚನೆ, ಬಂಗಾಳದ ವಿಭಜನೆ, ಅಸಹಕಾರ ಆಂದೋಳನ, ಭಾರತ ಬಿಟ್ಟು ತೊಲಗಿ ಆಂದೋಳನ ಇತ್ಯಾದಿ ಘಟನೆಗಳ ಮೂಲಕ ನೀಡಲಾಗುತ್ತದೆ. ಮಾಧ್ಯಮಿಕ ಹಂತದಲ್ಲಿ ಸಹ, ವಿದ್ಯಾರ್ಥಿಗಳು ಜಗತ್ತಿನ ಇತರ ದೇಶಗಳ ಜೊತೆಗೆ ನಮ್ಮ ದೇಶದ ಸ್ವಾತಂತ್ರ್ಯ ಚಳುವಳಿಯ ಹೋಲಿಕೆ ಹಾಗೂ ವ್ಯತ್ಯಾಸಗಳನ್ನು ಮಾಡಿನೋಡಲು ಮತ್ತು ಕಾರಣ ಕಾರ್ಯ ಸಂಬಂಧಗಳನ್ನು ಸ್ಥಾಪಿಸುವ ಮೂಲಕ ಅವುಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಲು ಕಲಿಯುತ್ತಾರೆ.

ಈ ಉಪಕ್ರಮವನ್ನು ಅನ್ವಯ ಮಾಡುವುದರಿಂದ ಒಬ್ಬ ಸಾಮಾನ್ಯ ವಿದ್ಯಾರ್ಥಿಗೂ ಸಹ ಸಮಾಜವಿಜ್ಞಾನವನ್ನು ಸಮೀಪದ ಹಾಗೂ ನಿಜವಾದ ಆಸಕ್ತಿಯ ವಿಷಯವಾಗಿ ಮಾಡಲಾಗುತ್ತದೆ. ವಿದ್ಯಮಾನಗಳನ್ನು ಹಾಗೂ ಸಮೀಪದ ಮಾನವಜೀವನದ ಆಗುಹೋಗುಗಳನ್ನು ಥಳುಕು ಹಾಕಿ ನೋಡುವುದಕ್ಕೆ ಅದು ಆಧಾರವಾಗುತ್ತದೆ ಮತ್ತು ಹೆಚ್ಚು ಬುದ್ಧಿವಂತರಾದವರಿಗೆ ಶೈಕ್ಷಣಿಕ ಒಳನೋಟಗಳು ಹಾಗೂ ಸಂಬಂಧಿಸಿದ ಅಧ್ಯಯನಶಾಖೆಯಲ್ಲಿ ವಿಶೇಷಾಧ್ಯಯನ ಮಾಡಲೆತ್ನಿಸಲು ಇದು ಆಧಾರವಾಗಬಹುದು.

ಪಠ್ಯಕ್ರಮ ಸಂಯೋಜಕರು ವಿಷಯವನ್ನು ಬರೀ ಪುನರುಚ್ಚಾರ ಮಾಡದೆ ನಿಧಾನವಾಗಿ ವಿಸ್ತರಿಸುವ ಬಗ್ಗೆ ಎಚ್ಚರ ವಹಿಸದಿದ್ದರೆ ಮತ್ತು ಅಧ್ಯಾಪಕರು ಮನೋವೈಜ್ಞಾನಿಕವಾಗಿ ಸಮರ್ಥವಾದ ಹಾಗೂ ಸಹಜವಾದ ರೀತಿಯಲ್ಲಿ ಅಧ್ಯಯನದ ವ್ಯಾಪ್ತಿಯನ್ನು ಜಾಗರೂಕರಾಗಿ ವಿಸ್ತರಿಸದೆ ಇದ್ದರೆ, ಮಾಹಿತಿಯ ಪುನರುಚ್ಚಾರದ ದೆಸೆಯಿಂದಾಗಿ ಈ ಪ್ರಸ್ತಾವನೆಯು ಏಕತಾನತೆಯನ್ನೂ ಆಸಕ್ತಿಯ ಕೊರತೆಯನ್ನೂ ಉಂಟುಮಾಡಬಹುದು. ಆರಂಭಿಕ ಹಂತದಲ್ಲಿ ಎಲ್ಲಾ ವಿವರಗಳನ್ನು ನೀಡುವುದು ಹಾಗೂ ಅದರ ಸಮಗ್ರತೆಯಲ್ಲಿ ಅದನ್ನು ಪರಿಗಣಿಸುವುದರ ಮೂಲಕ ಈ ಸಮಸ್ಯೆಯ ಸ್ಪಷ್ಟ ಚಿತ್ರಣವನ್ನು ನೀಡುವುದು ಕಷ್ಟ.

## ವರ್ತುಲ ಉಪಕ್ರಮ

ಈ ಉಪಕ್ರಮದಲ್ಲಿ ಇಡೀ ಪಠ್ಯಕ್ರಮವನ್ನು ಹಲವು ವರ್ಷಗಳ ಅವಧಿಗೆ ಹರಡಲಾಗುತ್ತದೆ. ಸರಳವಾಗಿ ಹೇಳುವುದಾದರೆ ಆರಂಭದಲ್ಲಿ ಬಹುತೇಕ ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಂದು ಸರ್ವಸಾಮಾನ್ಯವಾದ

ಚಿತ್ರವನ್ನು ಕೊಡಲು ಪ್ರಯತ್ನಿಸಲಾಗುತ್ತದೆ ಮತ್ತು ವಿದ್ಯಾರ್ಥಿಯ ಬೌದ್ಧಿಕ ಬೆಳವಣಿಗೆಯನ್ನು ಅನುಸರಿಸಿ ಮುಂದುಮುಂದಿನ ವರ್ಷದಲ್ಲಿ ಅದನ್ನು ಹೆಚ್ಚಿಸಲಾಗುತ್ತದೆ. ನಂತರದ ವರ್ಷಗಳಲ್ಲಿ ಅದರ ಭಾಗಗಳ ಹೆಚ್ಚು ಹೆಚ್ಚು ವಿವರಗಳನ್ನು ಕ್ರಮೇಣ ಸೇರಿಸಲಾಗುತ್ತದೆ. ಅದು 'ಸಮಷ್ಟಿಯಿಂದ ವ್ಯಷ್ಟಿಗೆ, ಸರಳದಿಂದ ಸಂಕೀರ್ಣಕ್ಕೆ, ಸುಲಭವಾದ್ದರಿಂದ ಕಷ್ಟಕರವಾದದ್ದಕ್ಕೆ' ಎಂಬಂತಹ ಬೋಧನೆಯ ಸೂತ್ರಗಳನ್ನು ಅನುಸರಿಸುತ್ತದೆ. ಆಧುನಿಕ ಕಾಲದ ಶಿಕ್ಷಣತಜ್ಞರಲ್ಲಿ ಬ್ರೂನರ್ ಅವರು, ಸಂಶೋಧನಾತ್ಮಕ ಕಲಿಕೆಯು ಈ ಉಪಕ್ರಮದಿಂದ ಮಾತ್ರ ಸಾಧ್ಯ ಎಂದು ಭಾವಿಸುವುದರಿಂದಾಗಿ, ಈ ಉಪಕ್ರಮದ ಪ್ರಮುಖ ಪ್ರತಿಪಾದಕರಾಗಿದ್ದಾರೆ. ಮತ್ತು ಈ ಉಪಕ್ರಮವು ಏಕಕೇಂದ್ರಿತ ಪ್ರಸ್ತಾವನೆ ಎಂದು ಉಲ್ಲೇಖಿತವಾಗಿದೆ.

## ವಿಷಯಾಧಾರಿತ/ಧ್ಯೇಯಾಧಾರಿತ ಉಪಕ್ರಮ

ಈ ಪ್ರಸ್ತಾವನೆಯಲ್ಲಿ, ಮಕ್ಕಳ ವಯಸ್ಸು, ಸಾಮರ್ಥ್ಯ ಹಾಗೂ ಆಸಕ್ತಿಗಳಿಗೆ ಸೂಕ್ತವಾದ ಆಯ್ದ ಅಧ್ಯಯನ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸಲಾಗುತ್ತದೆ ಮತ್ತು ಪ್ರತಿಯೊಂದು ವಿಷಯವನ್ನು ಇಡಿಯಾಗಿ ಗ್ರಹಿಸಿ ಪ್ರಸ್ತುತಪಡಿಸಲಾಗುತ್ತದೆ. ಇಲ್ಲಿ ಪ್ರತಿಯೊಂದು ಹೊಸ ವಿಷಯಗಳನ್ನು ಅಧ್ಯಾಪಕರು ಪಾಠಕೊಂಡಿಗಳಿಂದ ಜೋಡಿಸುತ್ತಾರೆ. ಈ ಉಪಕ್ರಮವು ಹದಿಮೂರಕ್ಕೂ ಹೆಚ್ಚು ವಯಸ್ಸಿನ ಮಕ್ಕಳಿಗೆ ಸೂಕ್ತವಾದುದು.

ಪಠ್ಯಕ್ರಮ ಕರ್ತರು ಬೋಧನೆಯ ವಿವಿಧ ಸ್ತರಗಳಲ್ಲಿ ಸಮಾಜವಿಜ್ಞಾನದ ಕಲಿಕೆಯ ಮುಖ್ಯ ವಸ್ತುವಾಗಿ ಕೆಲವು ನಿರ್ದಿಷ್ಟ ವಿಷಯಗಳನ್ನು ಕೈಗೆತ್ತಿಕೊಳ್ಳುತ್ತಾರೆ. ಪ್ರತಿಯೊಂದು ಹಂತದಲ್ಲಿಯೂ ವಿಷಯಗಳು ಮಕ್ಕಳ ಸಾಮರ್ಥ್ಯ ಹಾಗೂ ಆಸಕ್ತಿಗಳಿಗೆ ಅನುಸಾರವಾಗಿ ಬದಲಾಗುತ್ತವೆ. ಪ್ರಾಥಮಿಕ ತರಗತಿಗಳಲ್ಲಿ, ಆಹಾರ, ವಸ್ತ್ರ, ವಸತಿ ಹಾಗೂ ವಾಹನಗಳಂತಹ ಇಂದ್ರಿಯಗೋಚರ ಹಾಗೂ ಪರಿಚಿತವಾದ ವಸ್ತುವಿನ ಅಧ್ಯಯನವನ್ನು ಆರಂಭಿಸಬಹುದು. ಮಧ್ಯದ ತರಗತಿಗಳಲ್ಲಿ, ಪ್ರಸಿದ್ಧ ವ್ಯಕ್ತಿಗಳ ಬೋಧನೆಗಳು ಹಾಗೂ ಸರಕಾರ  ಇಂತಹ ವಿಷಯಗಳನ್ನು ಪರಿಚಯಿಸಬಹುದು. ಮಾಧ್ಯಮಿಕ ತರಗತಿಗಳಲ್ಲಿ, ಸಮತಾವಾದ, ಸಮಾಜವಾದ, ಬಂಡವಾಳಶಾಹಿ, ಮುಂತಾದ ಸಿದ್ಧಾಂತಗಳ ಕುರಿತು ಆಲೋಚನೆಗಳನ್ನು ಒದಗಿಸಬಹುದು. ಈ ಉಪಕ್ರಮದಲ್ಲಿ ಒಂದು ಸಮಸ್ಯೆಯನ್ನು ಸಮಗ್ರವಾಗಿ ಅರಿಯಲು ಮತ್ತು ಅದರ ಕುರಿತಾಗಿ ಒಂದು ಸಮಗ್ರ ದೃಷ್ಟಿಯನ್ನು ನೀಡಲು ಸಾಧ್ಯವಾಗುತ್ತದೆ.

ವಿಸ್ತೃತವಾದ ವಸ್ತುವನ್ನು ಒಂದು ತಾರ್ಕಿಕವಾದ ಹಾಗೂ ವಿವೇಚನಾತ್ಮಕವಾದ ರೀತಿಯಲ್ಲಿ ನೋಡಿಕೊಳ್ಳಲು ಈ ಉಪಕ್ರಮವು ಒಂದು ಕಾರ್ಯಯೋಜನೆಯನ್ನು ಒದಗಿಸುತ್ತದೆ. ಇದು ವಿದ್ಯಾರ್ಥಿಗಳಿಗೆ ತಮ್ಮ ವ್ಯವಸ್ಥೆಯ ಸತ್ಯಾಂಶಗಳನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಈ ಉಪಕ್ರಮವನ್ನು ಮಕ್ಕಳ ವಯಸ್ಸು, ಸಾಮರ್ಥ್ಯ ಹಾಗೂ ಅರ್ಹತೆಗಳಿಗೆ ಅನುಸಾರವಾಗಿ ಹೊಂದಾಣಿಕೆ ಮಾಡಬಹುದು. ಒಂದು ಸಮಗ್ರ ಗ್ರಹಿಕೆಗೆ ಇದು ಸಹಕಾರಿಯಾಗಿರುವುದರಿಂದ ವಿದ್ಯಾರ್ಥಿಗಳಿಗೆ ಏನನ್ನು ಮತ್ತು ಏಕೆ ಕಲಿಯುತ್ತಿದ್ದೇವೆ ಎಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ. ಈ ಉಪಕ್ರಮವು ಅಧ್ಯಾಪಕನಿಗೆ ವಿಷಯವಸ್ತುವಿನ ಮೇಲೆ ನಿಯಂತ್ರಣ ಹೊಂದಲು ಹಾಗೂ ವಿದ್ಯಾರ್ಥಿಗಳ ಬದಲಾಗುವ ಆವಶ್ಯಕತೆಗಳಿಗೆ ತಕ್ಕಂತೆ ಅದನ್ನು ಹೊಂದಿಸಲು ಅನುವು ಮಾಡಿಕೊಡುತ್ತದೆ. ವಿಷಯವಸ್ತುವಿನ ಅನೂಚಾನತೆಗೆ ಅಡ್ಡಿಯಾಗುವ ಸಾಧ್ಯತೆ ಇಲ್ಲಿದೆ. ಒಂದು ನಿರ್ದಿಷ್ಟ ವಿಷಯದೊಳಗಿನ ಅಂಶಗಳು ಕೆಳಗಿನ ತರಗತಿಗಳ ವಿದ್ಯಾರ್ಥಿಗಳ ಗ್ರಹಣಸಾಮರ್ಥ್ಯಕ್ಕೆ ಮೀರಿದವುಗಳಾದಾಗ ಒಂದು ವಿಷಯದ ಸಂಪೂರ್ಣ ಗ್ರಹಿಕೆ ಸಾಧ್ಯವಾಗದೆ ಹೋಗಬಹುದು.

ಸಾಮಾನ್ಯವಾಗಿ ಹೇಳುವುದಾದರೆ, ಒಂದು ಧ್ಯೇಯ/ವಿಷಯವು ಸಂಕೀರ್ಣವಾಗಿದ್ದಾಗ ಹಾಗೂ ಬಹಳ ವಿಸ್ತಾರವಾಗಿದ್ದಾಗ ಹಾಗೂ ಕಾಠಿಣ್ಯದ ವಿವಿಧ ಮಜಲುಗಳನ್ನು ಮುಂದಿಡುವಂತಹ ಘಟಕಗಳನ್ನು ಒಳಗೊಂಡಿದ್ದಾಗ, ಘಟಕದ ವಿಷಯವನ್ನು ಸ್ವೀಕರಿಸುವುದು ಅಪೇಕ್ಷಣೀಯವಾಗಬಹುದು. ಪ್ರಮುಖವಾದ ವಿಷಯವೇನೆಂದರೆ, ಅವಕಾಶಗಳು ಬಂದಂತೆಲ್ಲಾ ಅದೇ ಪ್ರಕರಣದ ಎಲ್ಲಾ ಘಟಕಗಳನ್ನು ಪರಿಣಾಮಕಾರಿಯಾಗಿ ಜೋಡಿಸುವಲ್ಲಿ ಎಚ್ಚರಿಕೆ ವಹಿಸಬೇಕು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ಈ ಕೆಳಗಿನ ಗುಣಲಕ್ಷಣಗಳನ್ನು ಸುರುಳಿಯಾಕಾರದ, ಏಕಕೇಂದ್ರಿತ ಹಾಗೂ ವಿಷಯಾತ್ಮಕ ಉಪಕ್ರಮಗಳ ಅಡಿಯಲ್ಲಿ ವರ್ಗೀಕರಿಸಿರಿ.(ಸು, ಏ , ವಿ)

1. ಸಮಾಜವಿಜ್ಞಾನದ ವಿಷಯವಸ್ತುವಿನ ಅವ್ಯಾಹತವಾದ ಹಾಗೂ ಎಡೆಬಿಡದ ಕಲಿಕೆಯನ್ನು ಪೋಷಿಸುವಂತಹ ತಂತ್ರ.
2. ಇಡೀ ಪಠ್ಯವಿಷಯವನ್ನು ಹಲವು ವರ್ಷಗಳವರೆಗೆ ಹರಡಲಾಗುತ್ತದೆ.
3. ಸರಳವಾದ ಸಾಮಾನ್ಯೀಕರಣದ ಮೇಲೆ ಗಮನ ಹರಿಸಲಾಗುತ್ತದೆ.
4. ವಿದ್ಯಾರ್ಥಿಯ ಮಾನಸಿಕ ಬೆಳವಣಿಗೆಯ ಅನುಸಾರ ಸಂಯೋಜಿಸಲಾಗುತ್ತದೆ.
5. ವಿಸ್ತೃತವಾದ ವಸ್ತುವಿನೊಂದಿಗೆ ವ್ಯವಹರಿಸಲು ಬೇಕಾದ ಒಂದು ಕಾರ್ಯಯೋಜನೆಯನ್ನು ಒದಗಿಸುತ್ತದೆ.
6. ವಿವರಗಳು ಕ್ರಮೇಣ ಸೇರಿಸಲ್ಪಡುತ್ತವೆ.
7. ವಿದ್ಯಾರ್ಥಿಗಳಿಗೆ ಇಷ್ಟವಾಗುವಂತಹ ನಿರೂಪಣಾ ವಿಷಯಗಳನ್ನು ಆಯ್ದುಕೊಳ್ಳಲಾಗುತ್ತದೆ.
8. ಒಬ್ಬ ಸರಾಸರಿ ವಿದ್ಯಾರ್ಥಿಗೂ ಸಮಾಜ ವಿಜ್ಞಾನವನ್ನು ಸಮೀಪದ ಹಾಗೂ ನಿಜವಾದ ಆಸಕ್ತಿಯ ವಿಷಯವನ್ನಾಗಿ ಮಾಡುತ್ತದೆ.
9. ತಾರ್ಕಿಕವಾದ ಹಾಗೂ ವಿವೇಚನಾಯುಕ್ತವಾದ ಪ್ರಕ್ರಿಯೆಗಳನ್ನು ಒಳಗೊಳ್ಳುತ್ತದೆ.

## 2.3.4. ಸಾರಾಂಶಿಸೋಣ

- ಮಾನವಿಕ ವಿಭಾಗವು ಪ್ರಾಥಮಿಕವಾಗಿ ಮಾನವ ನಡವಳಿಕೆಯ ಅಂಶಗಳು ಹಾಗೂ ಸಮಾಜದ ಮೇಲೆ ಅದರ ಪರಿಣಾಮಗಳ ಕುರಿತಾಗಿ ವ್ಯವಹರಿಸುವ ಅಧ್ಯಯನ ಸರಣಿ. ಇದು ಮಾನವ ನಡೆವಳಿಕೆ, ಮನೋವಿಜ್ಞಾನ, ತತ್ತ್ವಶಾಸ್ತ್ರ, ಅಪರಾಧಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಇವೇ ಮೊದಲಾದ ಕ್ಷೇತ್ರಗಳನ್ನು ಒಳಗೊಳ್ಳುತ್ತದೆ.
- ಪಠ್ಯಕ್ರಮದಲ್ಲಿ, ಮಾನವಿಕ ವಿಭಾಗ ಹಾಗೂ ಸಮಾಜ ವಿಜ್ಞಾನಗಳ ಕಲಿಕೆಯ ವ್ಯಾಪ್ತಿಯು ಇತಿಹಾಸ, ಭೂಗೋಳಶಾಸ್ತ್ರ, ಪೌರನೀತಿ, ಪೌರತ್ವ, ಅರ್ಥಶಾಸ್ತ್ರ, ವ್ಯವಹಾರಶಾಸ್ತ್ರ, ಇವೇ ಮುಂತಾದ ಅನೇಕ ವಿಷಯಗಳ ಅಧ್ಯಯನವನ್ನು ಒಳಗೊಳ್ಳುತ್ತದೆ.
- ಮಾನವಿಕ ವಿಭಾಗವು ಮಾನವ ಸಮಾಜ ಹಾಗೂ ಸಂಸ್ಕೃತಿಯ ಅಂಶಗಳನ್ನು ಅಧ್ಯಯನ ಮಾಡುವ ಶೈಕ್ಷಣಿಕ ಅಧ್ಯಯನಶಾಖೆಯಾಗಿದೆ.
- ಪಠ್ಯಕ್ರಮದ ರೂಪಸಂಯೋಜನೆ ಮಾಡುವಾಗ, ಅದು ಪೂರೈಸಬೇಕಾದ ಕಾರ್ಯಗಳನ್ನು ತಿಳಿದುಕೊಳ್ಳುವುದು ಮುಖ್ಯ.
- ಸಮಾಜವಿಜ್ಞಾನದ ಪಠ್ಯಕ್ರಮವನ್ನು ಸಂಯೋಜಿಸುವುದು ಒಂದು ಕರಾರುವಾಕ್ಕಾಗಿ ಮಾಡಬೇಕಾದ ಕೆಲಸ. ಅದು ಉದ್ದೇಶಗಳು, ಬೋಧನಶಾಸ್ತ್ರೀಯ ತಂತ್ರಗಳು, ಒಳ ಆಂಶ ಹಾಗೂ ಮೌಲ್ಯಮಾಪನ ಪ್ರಕ್ರಿಯೆಗಳು ಎಂಬ ನಾಲ್ಕು ಅಂಶಗಳನ್ನು ಮುಖ್ಯವಾಗಿ ಹೊಂದಿದೆ.
- ಸಮಾಜ ವಿಜ್ಞಾನ ವಿಷಯಗಳ ಒಳ ಅಂಶಗಳನ್ನು ಸಂಘಟಿಸಲು ವಿವಿಧ ಉಪಕ್ರಮಗಳು ಇವೆ. ಅವೆಂದರೆ, ಸುರುಳಿಯಾಕಾರದ, ಏಕಕೇಂದ್ರಿತ ಹಾಗೂ ಪ್ರಕರಣಾತ್ಮಕ ಪ್ರಸ್ತಾವನೆಗಳು. ಪ್ರತಿಯೊಂದು ಪ್ರಸ್ತಾವನೆಯೂ ಗುಣಾಂಶಗಳು ಹಾಗೂ ಪರಿಮಿತಿಗಳನ್ನು ಹೊಂದಿದೆ. ಅಧ್ಯಾಪಕರು ವಿದ್ಯಾರ್ಥಿಗಳ ಬೌದ್ಧಿಕ ಸ್ತರ, ಆವಶ್ಯಕತೆ ಹಾಗೂ ಆಸಕ್ತಿಗಳ ಆಧಾರದ ಮೇಲೆ ಸೂಕ್ತವಾದ ಪ್ರಸ್ತಾವನೆಗಳನ್ನು ಆಯ್ಕೆಮಾಡಿಕೊಳ್ಳಬೇಕು.

## 2.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು –1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

ಸ್ವಕಲಿಕಾ ಸಾಮಗ್ರಿ ಭಾಗ 2.3.3.1 ಗಮನಿಸಿ

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2

ಸು: 1,3,8

ವ: 2,4,6

ವಿ: 5,7,9

## 2.3.6. ಘಟಕಾಂತ್ಯ ಅಭ್ಯಾಸಗಳು

1. ಮಾನವಿಕ ವಿಷಯಗಳ ಸ್ವರೂಪ ಮತ್ತು ಮಹತ್ವವನ್ನು ವಿವರಿಸಿ
2. ಶಾಲೆಗಳಲ್ಲಿ ಸಮಾಜವಿಜ್ಞಾನ ವಿಷಯದ ಪ್ರಾಮುಖ್ಯತೆಯನ್ನು ಪ್ರಸ್ತಾಪಿಸಿ
3. ಪಠ್ಯಕ್ರಮದಲ್ಲಿ ಸಮಾಜವಿಜ್ಞಾನ ವಿಷಯಗಳ ಸಂಘಟನೆಯ ಉಪಕ್ರಮಗಳನ್ನು ವಿವರಿಸಿ.

## 2.3.7. ಪರಾಮರ್ಶನ ಸೂಚಿ


1. 1. http://www.bdu.ac.in/cde/docs/ebooks/B-
2. www.bdu.ac.in › cde › docs › ebooks › B-Ed › TEACHING OF SOCIAL ..
3. Ed/I/TEACHING%20%20OF%20SOCIAL%20SCIENCE.pdf
4. https://www.google.com/search?sxsrf=ACYBGNRe Nwz5XOfanp BRI7mNGDw4CCZkSA%3A157163 4237807&ei=PTytXa T5MJ6Crto Pmpm L6AI& q=approaches+ of+organizing+social+science+ curriculum& oq=++social+science+curriculum&gs_l=psy-ab.1.2.0 i67j0i7i 3019.1133992.1133992..1150315...0.1..0.1749.1749.8-1......0....1. .gws-wiz.......0i71.tN1b_vwjlho
5. https://www.slideshare.net/Varshapadman/different-approaches-of-content-organization-in-social-science
6. https://www.academia.edu/179168/The_Social_Studies_ Curriculum_ Purposes_Problems_and_Possibilities_3rd_Edition_
7. http://abidavmc.blogspot.com/2015/10/concentric-spiral-and-topical-approaches.html#targetText=Diff erent%20 approaches% 20for%20 organizing%20 the,%2C%20concentric%2C%20an%20unit%2 0approach.&targetText=The% 20spiral%20approach% 20is%20 nothing,the%20 various%20wages%20of%20education.
8. https://k10outline.scsa.wa.edu.au/__data/assets/pdf_file/0008/34883/HASS-P-10-Skills-exemplification.PDF


*************

# ಬ್ಲಾಕ್ 2 : ವರ್ಗೀಕರಣ ಮತ್ತು ಜ್ಞಾನಶಿಸ್ತುಗಳ ಮೂಲಕವಾಗಿ ಬೋಧನೆ

## ಘಟಕ 4 : ಪಠ್ಯಕ್ರಮದಲ್ಲಿ ನೈಸರ್ಗಿಕ ವಿಜ್ಞಾನ

### ಘಟಕದ ರಚನೆ


2.4.1. ಕಲಿಕೆಯ ಉದ್ದೇಶಗಳು

2.4.2. ಪೀಠಿಕೆ

2.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.4.3.1. ನೈಸರ್ಗಿಕ ವಿಜ್ಞಾನದ ಅರ್ಥ, ಶಾಖೆಗಳು ಮತ್ತು ಕಲಿಕೆಯ ಪ್ರಾಮುಖ್ಯತೆಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

2.4.3.2. ವಿಭಿನ್ನ ಹಂತಗಳಲ್ಲಿ ವಿಜ್ಞಾನದ ಕಲಿಕೆಯ ಸ್ಥಾನ ಮತ್ತು ವಿಜ್ಞಾನ ಶಿಸ್ತಿನ ಬೋಧನೆಯಲ್ಲಿ ಎದುರಾಗುವ ಸವಾಲುಗಳು ಮತ್ತು ಸಮಸ್ಯೆಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2

2.4.3.3. ಶಾಲಾ ಪಠ್ಯಕ್ರಮದಲ್ಲಿ ವಿಜ್ಞಾನದ ಕಲಿಕೆಯ ಸ್ಥಾನ ಮತ್ತು ವಿಜ್ಞಾನ ಪಠ್ಯಕ್ರಮದ ರಚನೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –3

2.4.4. ಸಾರಾಂಶಿಸೋಣ

2.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1, 2 ಮತ್ತು 3

2.4.6. ಘಟಕಾಂತ್ಯ ಅಭ್ಯಾಸಗಳು

2.4.7. ಪರಾಮರ್ಶನ ಸೂಚಿ


### 2.4.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ/ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ನೈಸರ್ಗಿಕ ವಿಜ್ಞಾನದ ಅರ್ಥವನ್ನು ವಿವರಿಸುವರು;
- ನೈಸರ್ಗಿಕ ವಿಜ್ಞಾನದ ಶಾಖೆಗಳನ್ನು ಗುರುತಿಸುವರು;
- ಶಾಲೆಗಳಲ್ಲಿ ನೈಸರ್ಗಿಕ ವಿಜ್ಞಾನದ ಕಲಿಕೆಯ ಮಹತ್ವವನ್ನು ತಿಳಿಸುವರು; ಮತ್ತು
- ನೈಸರ್ಗಿಕ ವಿಜ್ಞಾನದ ಪಠ್ಯಕ್ರಮದಲ್ಲಿ ವಿಷಯ ಸಂಘಟನೆಯ ಪ್ರಮುಖ ಉಪಕ್ರಮಗಳನ್ನು ವಿವರಿಸುವರು.

## 2.4.2. ಪೀಠಿಕೆ

ನೈಸರ್ಗಿಕ ವಿಜ್ಞಾನವೆಂದರೇನು? ಅದರ ಶಾಖೆಗಳಾವುವು? ವಿಜ್ಞಾನವನ್ನು ಶಾಲೆಗಳಲ್ಲಿ ಕಲಿಸುವ ಉದ್ದೇಶವೇನು? ಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಷಯದಲ್ಲಿ ನಾವೇನು ಕಲಿಸುತ್ತೇವೆ? ಇವು ಶಿಕ್ಷಕರು ಹಾಕಿಕೊಳ್ಳಬೇಕಾದ ಮೂಲ ಪ್ರಶ್ನೆಗಳು ಮತ್ತು ಕಂಡುಕೊಳ್ಳಬೇಕಾದ ಉತ್ತರಗಳು. ಈ ಘಟಕದಲ್ಲಿ ನಾವು ನೈಸರ್ಗಿಕ ವಿಜ್ಞಾನದ ಪರಿಕಲ್ಪನೆ, ವಿಜ್ಞಾನವನ್ನು ಕಲಿಸುವ ಉದ್ದೇಶ ಮತ್ತು ಅದರ ಅರಿವಿನ ಅವಶ್ಯಕತೆ, ಮತ್ತು ಮಾನವನ ಮನೋಶಕ್ತಿಯನ್ನು ಹೆಚ್ಚಿಸುವಲ್ಲಿ ಅದರ ಪಾತ್ರ, ಜೊತೆಗೆ ಪಠ್ಯಕ್ರಮದಲ್ಲಿ ವಿಜ್ಞಾನ ವಿಚಾರಗಳನ್ನು ಸಂಘಟಿಸುವ ಉಪಕ್ರಮಗಳ ಕುರಿತು ವಿಚಾರಮಾಡೋಣ.

## 2.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

## 2.4.3.1. ನೈಸರ್ಗಿಕ ವಿಜ್ಞಾನದ ಅರ್ಥ, ಶಾಖೆಗಳು ಮತ್ತು ಕಲಿಕೆಯ ಪ್ರಾಮುಖ್ಯತೆ

### ನೈಸರ್ಗಿಕ ವಿಜ್ಞಾನದ – ಅರ್ಥ

ನೈಸರ್ಗಿಕ ವಿಜ್ಞಾನದ ಎಂದರೇನು? ನೈಸರ್ಗಿಕ ವಿಜ್ಞಾನವು ನಮ್ಮ ಸುತ್ತಲೂ ಇರುವ ವಿಶ್ವ ಮತ್ತು ಜಗತ್ತು ಎಂದರೇನು ಎನ್ನುವುದನ್ನು ಶೋಧಿಸುತ್ತದೆ. ನಮ್ಮ ಸುತ್ತಮುತ್ತಲಿನ ಪ್ರಪಂಚವನ್ನು ಅರಿಯುವ ಅದು ಹೇಗೆ ಕಾರ್ಯವೆಸಗುತ್ತದೆ ಎಂದು ತಿಳಿದುಕೊಳ್ಳುವುದರಲ್ಲಿಯೇ ಲೀನವಾಗಿರುವ ಶಿಸ್ತು ಇದು. ವೀಕ್ಷಣೆ ಮತ್ತು ಪ್ರಯೋಗಗಳ ಮೂಲಕವಾಗಿ ಪ್ರಾಯೋಗಿಕ ಸಾಕ್ಷ್ಯಗಳ ಆಧಾರವುಳ್ಳ ವಿವರಣೆ, ಊಹನೆಗಳು, ಪ್ರಾಕೃತಿಕ ಸನ್ನಿವೇಶಗಳ ಅರ್ಥೈಸುವಿಕೆ ಈ ಕಾಳಜಿಗಳನ್ನುಳ್ಳ ವಿಜ್ಞಾನದ ಒಂದು ಶಾಖೆ ಇದು.

### ನೈಸರ್ಗಿಕ ವಿಜ್ಞಾನದ ಶಾಖೆಗಳು

ನೈಸರ್ಗಿಕ ವಿಜ್ಞಾನವನ್ನು ಮುಖ್ಯವಾಗಿ ಎರಡು ತೆರನಾಗಿ ವಿಭಜಿಸಬಹುದು; ಜೀವ ವಿಜ್ಞಾನ ಮತ್ತು ಭೌತಿಕ ವಿಜ್ಞಾನ. ಜೀವ ವಿಜ್ಞಾನದಲ್ಲಿ ಸಸ್ಯ ಶಾಸ್ತ್ರ, ಪ್ರಾಣಿಶಾಸ್ತ್ರ; ಭೌತಿಕ ವಿಜ್ಞಾನದಲ್ಲಿ ಮತ್ತೆ ಮರುವಿಂಗಡಣೆಯಾಗಿ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಖಗೋಳ ಶಾಸ್ತ್ರ, ಮತ್ತು ಭೂಗೋಳ ಶಾಸ್ತ್ರವೆಂದು ವಿಭಜಿಸಲ್ಪಡುತ್ತದೆ. ನೈಸರ್ಗಿಕ ವಿಜ್ಞಾನದ ಈ ಶಾಖೆಗಳು ಮತ್ತೆ ಪುನರ್ ವಿಂಗಡಣೆಯಾಗಿ, ಕೆಲವು ಪರಿಣತ ಶಾಖೆಗಳಾಗಿವೆ. ಪ್ರಾಯೋಗಿಕ ವಿಜ್ಞಾನದಂತೆ ನೈಸರ್ಗಿಕ ವಿಜ್ಞಾನವೂ ಔಪಚಾರಿಕ ವಿಜ್ಞಾನದಿಂದ ಎಂದರೆ, ಗಣಿತ, ತತ್ವಶಾಸ್ತ್ರ, ಮುಂತಾದವುಗಳಿಂದ ತನಗೆ ಬೇಕಾದ ಸಾಧನಗಳನ್ನು ಬಳಸಿಕೊಳ್ಳುತ್ತದೆ. ಮಾಹಿತಿಯನ್ನು ಪರಿಮಾಣಾತ್ಮಕವಾಗಿ ಪ್ರಸ್ತುತಪಡಿಸುತ್ತದೆ. ಇದನ್ನು 'ಪ್ರಕೃತಿ ನಿಯಮಗಳು' ಎಂಬುದಾಗಿ ವಿವರಿಸಬಹುದು.

### ಜೀವ ವಿಜ್ಞಾನ (Life Science)

ಜೀವಶಾಸ್ತ್ರವು (Biology) ಜೀವವಿಜ್ಞಾನದ ಒಂದು ಶಾಖೆಯಾಗಿದೆ. ಜೀವಿಗಳ ಬಗ್ಗೆ, ಅಣುವಿನಿಂದ ತೊಡಗಿ, ಇತರ ಜೀವಿಗಳೊಂದಿಗೆ ಮತ್ತು ಪರಿಸರದೊಂದಿಗೆ ಅವುಗಳ ಅಂತರ್ ಕ್ರಿಯೆಗಳನ್ನು ಇದು ಗಮನಿಸುತ್ತದೆ. ಈ ಕ್ಷೇತ್ರವು ಶಿಸ್ತುಗಳ ಒಂದು ಸಮೂಹವನ್ನೇ ಒಳಗೊಂಡಿದ್ದು ಅವು ಜೀವಿಗಳಿಗೆ ಸಂಬಂಧಿಸಿದ ವಿದ್ಯಮಾನಗಳನ್ನು ಅಧ್ಯಯನಮಾಡುತ್ತವೆ. ಇದರ ವ್ಯಾಪ್ತಿ ಭೌತಶಾಸ್ತ್ರದ ಒಂದು ಭಾಗವಾದ ಜೀವಿ ಭೌತಶಾಸ್ತ್ರದಿಂದ ಹಿಡಿದು ಸಂಕೀರ್ಣವಾದ ಪರಿಸರ ವಿಜ್ಞಾನದವರೆಗೆ ಚಾಚಿಕೊಂಡಿರುತ್ತದೆ. ಜೀವವಿಜ್ಞಾನವು ಜೀವಿಗಳ ವೈಲಕ್ಷಣ್ಯಗಳು, ವರ್ಗೀಕರಣ ಮತ್ತು ವರ್ತನೆಗಳನ್ನೂ ಜೀವಿಗಳ ಉಗಮ ಮತ್ತು ಜೀವಿಗಳ ನಡುವಿನ ಮತ್ತು ಜೀವಿ ಮತ್ತು ಪರಿಸರದ ನಡುವಿನ ಅಂತರ್ ಕ್ರಿಯೆಯನ್ನೂ ವಿಚಾರಮಾಡುತ್ತದೆ.

ಜೀವಶಾಸ್ತ್ರದ ಕ್ಷೇತ್ರಗಳಾದ, ಸಸ್ಯಶಾಸ್ತ್ರ, ಜೀವಶಾಸ್ತ್ರ, ಮತ್ತು ಔಷಧಗಳು ನಾಗರಿಕತೆಯನ್ನು ಬಹಳಷ್ಟು ಹಿಂದಕ್ಕೆ ಕೊಂಡೊಯ್ಯುತ್ತವೆ. ಆದರೆ ಅಣು ಜೀವಶಾಸ್ತ್ರವು ಸೂಕ್ಷ್ಮ ದರ್ಶಕವನ್ನು ಕಂಡುಹಿಡಿದ ಮೇಲೆ, 17ನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದಿತು. ಏನಿದ್ದರೂ 19ನೇ ಶತಮಾನದ ಅನಂತರವೇ ಜೀವಶಾಸ್ತ್ರವನ್ನು ಒಂದು

ಏಕೀಕೃತ ವಿಜ್ಞಾನವಾಗಿ ಗುರುತಿಸಲಾಯಿತು. ವಿಜ್ಞಾನಿಗಳು ಯಾವಾಗ ಎಲ್ಲಾ ಜೀವಿಗಳಲ್ಲೂ ಸಮಾನಾಂಶಗಳನ್ನು ಗುರುತಿಸಿಕೊಂಡರೋ ಅಂದಿನಿಂದ ಅದೆಲ್ಲವನ್ನೂ ಒಟ್ಟಾಗಿ ಅಧ್ಯಯನ ಮಾಡಲು ಪ್ರಾರಂಭಿಸಿದರು.

ಅನುವಂಶೀಯತೆ, ನೈಸರ್ಗಿಕ ಆಯ್ಕೆಯಿಂದ ವಿಕಾಸ, ರೋಗಗಳ ಸೂಕ್ಷ್ಮಾಣು ಸಿದ್ಧಾಂತ ಮತ್ತು ಅಣು ಅಥವಾ ಸಾವಯವ ಅಣುಗಳ ಹಂತಗಳಲ್ಲಿ ರಸಾಯನ ಶಾಸ್ತ್ರ ಮತ್ತು ಭೌತಶಾಸ್ತ್ರಗಳ ತಂತ್ರಗಳ ಅನ್ವಯ ಮೊದಲಾದವು ಜೀವ ಜೀವವಿಜ್ಞಾನದ ಕೆಲವು ಪ್ರಮುಖ ಬೆಳವಣಿಗೆಗಳು.

ಆಧುನಿಕ ಜೀವಶಾಸ್ತ್ರವನ್ನು ಜೀವಿಗಳ ವಿಧಗಳ ಮತ್ತು ಅಧ್ಯಯನ ನಡೆಸಬೇಕಾದ ಶ್ರೇಣಿಗಳ ಆಧಾರದ ಮೇಲೆ ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಅಣು ಜೀವಶಾಸ್ತ್ರದ ಅಧ್ಯಯನವು, ಜೀವನದ ಮೂಲ ರಸಾಯನಶಾಸ್ತ್ರದ ಕಲಿಕೆ. ಆದರೆ ಕೋಶಗಳ ಅಧ್ಯಯನವು ಕೋಶಗಳನ್ನು ಪರೀಕ್ಷಿಸುವುದಾಗಿದೆ. ಇದು ಎಲ್ಲಾ ಜೀವಿಗಳ ಮೂಲ ತಳಪಾಯವಾಗಿದೆ. ಉನ್ನತಮಟ್ಟದಲ್ಲಿ, ಶರೀರಶಾಸ್ತ್ರವು ಜೀವಿಯ ಆಂತರಿಕ ರಚನೆಗಳು, ಅವುಗಳ ಕಾರ್ಯಚಟುವಟಿಕೆಗಳು ಇವುಗಳನ್ನು ಕುರಿತು ಅಧ್ಯಯನ ಮಾಡುತ್ತದೆ. ಆದರೆ, ಪರಿಸರ ಶಾಸ್ತ್ರವು ಜೀವಿಗಳ ಪರಸ್ಪರ ಸಂಬಂಧಗಳ ಕುರಿತು ಅಧ್ಯಯನ ಮಾಡುತ್ತದೆ.

## ಭೌತಿಕವಿಜ್ಞಾನ

ಭೌತಶಾಸ್ತ್ರವು ಒಂದು ವಸ್ತುವಿನ ಭೌತಿಕ ಗುಣಲಕ್ಷಣಗಳು ಹಾಗೂ ಶಕ್ತಿಯ ಕಡೆಗೆ ಬೆಟ್ಟುಮಾಡಿ ತೋರಿಸುತ್ತದೆ. ಅವುಗಳೊಳಗಿನ ಸಂಬಂಧಗಳು, ಮತ್ತು ಅವುಗಳ ಭೌತಿಕ ವಿದ್ಯಮಾನಗಳನ್ನು ತಿಳಿಸಲು ಬೇಕಾದ ಗಣಿತಾತ್ಮಕ ಮಾದರಿಗಳನ್ನು ಬೆಳೆಸುವ ಪ್ರಯತ್ನಗಳನ್ನು ಮಾಡಲಾಗುತ್ತದೆ. ಹೀಗೆ, ಭೌತಶಾಸ್ತ್ರವು ವಿಶ್ವದ ಮೂಲ ಘಟಕಗಳ ಅಧ್ಯಯನವನ್ನು ಸಾಕಾರಗೊಳಿಸುತ್ತದೆ, ಅವುಗಳ ಶಕ್ತಿ ಮತ್ತು ಅವುಗಳ ನಡುವೆ ನಡೆಯುವ ವಿನಿಮಯ, ಅವುಗಳ ಮೂಲಕವಾಗಿ ದೊರೆಯುವ ಫಲಿತಾಂಶಗಳನ್ನು ತಿಳಿಸುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ, ಭೌತಶಾಸ್ತ್ರವನ್ನು ಮೂಲಭೂತ ವಿಜ್ಞಾನವನ್ನಾಗಿ ಪರಿಗಣಿಸಲಾಗಿದೆ. ಯಾಕೆಂದರೆ ಉಳಿದೆಲ್ಲಾ ನೈಸರ್ಗಿಕ ವಿಜ್ಞಾನಗಳು ಇದರ ಸಿದ್ಧಾಂತಗಳನ್ನು ಒಪ್ಪಿಕೊಂಡು ಅನ್ವಯಿಸಿಕೊಳ್ಳುತ್ತವೆ. ತತ್ವಗಳ ನಿರೂಪಣೆ ಮತ್ತು ಪರಿಮಾಣೀಕರಣಗಳಿಗೆ ತಾರ್ಕಿಕ ಚೌಕಟ್ಟಾಗಿ ಭೌತಶಾಸ್ತ್ರವು ಗಣಿತವನ್ನು ಅವಲಂಬಿಸಿದೆ.

ವಿಶ್ವಸಿದ್ಧಾಂತಗಳ ಅಧ್ಯಯನಕ್ಕೆ ಬಹಳ ದೀರ್ಘವಾದ ಚರಿತ್ರೆಯಿದೆ ಮತ್ತು ಅದನ್ನು ನೇರವಾದ ವೀಕ್ಷಣೆ ಮತ್ತು ಪ್ರಯೋಗಗಳಿಂದ ಕಂಡುಕೊಳ್ಳಲಾಗಿದೆ. ವಿಶ್ವವನ್ನು ಆಳುವ ಸಿದ್ಧಾಂತವನ್ನು ರೂಪೀಕರಿಸುವ ಸಂದರ್ಭದಲ್ಲಿ, ಕೇಂದ್ರವಾಗಿ ಭೌತಶಾಸ್ತ್ರವನ್ನು ಬಹಳ ಹಿಂದಿನಿಂದಲೇ ಪರಿಗಣಿಸಲಾಗುತ್ತಿತ್ತು. ಕ್ರಮೇಣ ತತ್ವಶಾಸ್ತ್ರದೊಂದಿಗೆ, ಕ್ರಮಬದ್ಧ, ಪರಿಮಾಣಾತ್ಮಕ ಪರೀಕ್ಷೆಗಳು ಮತ್ತು ವೀಕ್ಷಣೆಗಳನ್ನು ಮೌಲ್ಯಮಾಪನಕ್ಕಾಗಿ ಬಳಸಲಾಗುತ್ತಿತ್ತು. ಭೌತಶಾಸ್ತ್ರದ ಪ್ರಮುಖ ಬೆಳವಣಿಗೆಯ ಚರಿತ್ರೆಯಲ್ಲಿ ನ್ಯೂಟನನ ಸಾರ್ವತ್ರಿಕ ಗುರುತ್ವ ಶಕ್ತಿಯ ಸಿದ್ಧಾಂತವನ್ನು ಮತ್ತು ಶಾಸ್ತ್ರೀಯ ಯಂತ್ರಶಾಸ್ತ್ರ, ವಿದ್ಯುತ್ತಿನ ಆವಿಷ್ಕಾರ ಮತ್ತು ಅದಕ್ಕೆ ಅಯಸ್ಕಾಂತೀಯತೆಯ ಜತೆಗೆ ಇರುವ ಸಂಬಂಧ, ಐನ್‌ಸ್ಟೈನನ ವಿಶಿಷ್ಟ ಮತ್ತು ಸಾಮಾಜಿಕ ಸಾಪೇಕ್ಷತಾ ಸಿದ್ಧಾಂತ, ಥರ್ಮೋಡೈನಾಮಿಕ್ಸ್‌ನ(ಸೌರಶಕ್ತಿ) ಬೆಳವಣಿಗೆ, ಪರಮಾಣುವಿಗೆ ಬೇಕಾದ ಪರಿಮಾಣ ಶಕ್ತಿಯ ಯಾಂತ್ರಿಕತೆ ಮಾದರಿ ಮತ್ತು ಉಪಪರಮಾಣು ಭೌತಶಾಸ್ತ್ರ ಇದೆಲ್ಲವೂ ಸೇರುತ್ತದೆ.

ಭೌತಶಾಸ್ತ್ರದ ಕ್ಷೇತ್ರವು ಬಹಳಷ್ಟು ವಿಶಾಲವಾದುದು, ಮತ್ತು ಅದರಲ್ಲಿ ವಿಭಿನ್ನ ಅಧ್ಯಯನ ವಿಷಯಗಳಾದ ಕ್ವಾಂಟಮ್ ಮೆಕ್ಯಾನಿಕ್ಸ್, ಸೈದ್ಧಾಂತಿಕ ಭೌತಶಾಸ್ತ್ರ, ಆನ್ವಯಿಕ ಭೌತಶಾಸ್ತ್ರ ಮತ್ತು ದೃಗ್ವಿಜ್ಞಾನ ಇವುಗಳು ಸೇರಿಕೊಳ್ಳುತ್ತದೆ. ಆಧುನಿಕ ಭೌತಶಾಸ್ತ್ರವು ಬಹಳಷ್ಟು ವಿಶಿಷ್ಟತೆಯನ್ನು ಪಡೆದುಕೊಂಡು ಬೆಳೆಯುತ್ತಿದೆ. ಇಲ್ಲಿ ಸಂಶೋಧಕರು ಬಹುಕ್ಷೇತ್ರಗಳಲ್ಲಿ ಕೆಲಸ ಮಾಡಿದ ಐಸಾಕ್ ನ್ಯೂಟನ್, ಆಲ್‌ಬರ್ಟ್ ಐನ್‌ಸ್ಟೈನ್ ಮತ್ತು ಲೆವ ಲಾಂಡವ್ ಮೊದಲಾದ 'ಸಾರ್ವತ್ರಿಕರಿ'ಗಿಂತ ವಿಭಿನ್ನವಾಗಿ ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಗಮನಕೇಂದ್ರೀಕರಿಸಿ ಕೆಲಸ ಮಾಡುತ್ತಿದ್ದಾರೆ.

## ರಸಾಯನ ಶಾಸ್ತ್ರ

ರಸಾಯನ ಶಾಸ್ತ್ರವು ಪರಮಾಣು ಮತ್ತು ಅಣು ಶ್ರೇಣಿಗಳ ವೈಜ್ಞಾನಿಕ ಅಧ್ಯಯನವನ್ನು ರೂಪಿಸುತ್ತದೆ. ಇದು ಪ್ರಾಥಮಿಕವಾಗಿ, ಪರಮಾಣುಗಳ ಸಂಗ್ರಹ, ಅನಿಲ, ಅಣು, ಸ್ಫಟಿಕ ಮತ್ತು ಲೋಹ ಮುಂತಾದವುಗಳ ಬಗ್ಗೆ ವ್ಯವಹರಿಸುತ್ತದೆ. ಇವುಗಳ ಸಂಯೋಜನೆ, ಸಂಖ್ಯಾಶಾಸ್ತ್ರೀಯ ಗುಣಲಕ್ಷಣಗಳು, ಬದಲಾವಣೆಗಳು ಮತ್ತು ಪ್ರತಿಕ್ರಿಯೆಗಳು ಮುಂತಾದವುಗಳನ್ನು ಅಧ್ಯಯನ ಮಾಡಲಾಗುತ್ತದೆ. ರಸಾಯನ ಶಾಸ್ತ್ರವು, ಪರಮಾಣು ಮತ್ತು ಅಣುಗಳ ಗುಣಲಕ್ಷಣಗಳನ್ನು ಹಾಗೂ ಪರಸ್ಪರ ಅಂತರ್ ಕ್ರಿಯೆಗಳನ್ನೂ ದೊಡ್ಡ ಪ್ರಮಾಣದಲ್ಲಿ ಅವುಗಳ ಅನ್ವಯಗಳನ್ನೂ ಒಳಗೊಳ್ಳುತ್ತದೆ.

ರಸಾಯನ ಶಾಸ್ತ್ರವು ನೈಸರ್ಗಿಕ ವಿಜ್ಞಾನದ ಒಂದು ಶಾಖೆಯಾಗಿದ್ದು, ಅದರೊಳಗೆ ಅಜೈವಿಕ ರಸಾಯನಶಾಸ್ತ್ರ, ಸಾವಯವ ರಸಾಯನಶಾಸ್ತ್ರ, ಭೌತಿಕ ರಸಾಯನಶಾಸ್ತ್ರ ಮತ್ತು ಜೈವಿಕ ರಸಾಯನಶಾಸ್ತ್ರವೆಂದು ಇನ್ನಷ್ಟು ಶಾಖೆಗಳಿವೆ. ರಸಾಯನಶಾಸ್ತ್ರವನ್ನು ವಿವಿಧ ದೃಷ್ಟಿಗಳಿಂದ ಅಧ್ಯಯನ ಮಾಡಬಹುದಾಗಿದೆ. ವಸ್ತುವಿನಲ್ಲಿರುವ ಘಟಕಗಳು, ಗುಣಲಕ್ಷಣಗಳು ಮತ್ತು ರಾಸಾಯನಿಕ ಬದಲಾವಣೆಗಳು ಮುಂತಾದವುಗಳು ಇದರಲ್ಲಿ ಸೇರುತ್ತವೆ.

## ಖಗೋಳ ಶಾಸ್ತ್ರ

ಈ ಶಿಸ್ತಿನಲ್ಲಿ, ಭೂಮಿಯ ಬಾಹ್ಯ ಪರಿಸರದಿಂದ ಹೊರತಾಗಿ, ಆಕಾಶದಲ್ಲಿ ಕಾಣುವ ವಸ್ತುಗಳ ವಿದ್ಯಮಾನಗಳ ಕುರಿತು ಅಧ್ಯಯನ ಮಾಡುತ್ತದೆ. ಇದು ಭೌತಶಾಸ್ತ್ರ, ರಸಾಯನ ಶಾಸ್ತ್ರ, ಹವಾಮಾನಶಾಸ್ತ್ರ ಮತ್ತು ಆಕಾಶ ಕಾಯಗಳ ಚಲನೆ ಮತ್ತು ವಿಶ್ವ ರೂಪುಗೊಂಡ ಹಾಗೂ ಬೆಳೆದ ಬಗೆಗಳ ಕುರಿತು ಹೇಳುತ್ತದೆ.

ಖಗೋಳ ಶಾಸ್ತ್ರವು ನಕ್ಷತ್ರಗಳ ಅಧ್ಯಯನ, ಪರಿಶೀಲನೆ ಹಾಗೂ ಮಾದರಿ, ಗ್ರಹಗಳು, ಧೂಮಕೇತುಗಳು, ಬ್ರಹ್ಮಾಂಡ ಮುಂತಾದವುಗಳನ್ನು ಒಳಗೊಳ್ಳುತ್ತದೆ. ಖಗೋಳ ಶಾಸ್ತ್ರಜ್ಞದ ಹೆಚ್ಚಿನ ಮಾಹಿತಿಗಳನ್ನು ಬಹಳ ದೂರದಿಂದ ಮಾಡಿದ ವೀಕ್ಷಣೆಗಳಿಂದ ಪಡೆದುಕೊಳ್ಳಲಾಗುತ್ತದೆ. ಅದರೊಂದಿಗೆ ಪ್ರಯೋಗಾಲಯಗಳಲ್ಲಿ ಆಕಾಶಗಳ ವಿದ್ಯಮಾನಗಳ ಮರುನಿರ್ಮಾಣಗಳನ್ನೂ ಮಾಡಿ ನೋಡಲಾಗುತ್ತದೆ. ಆಕಾಶಕಾಯಗಳ ಗುಣಲಕ್ಷಣಗಳು ಹಾಗೂ ವಿದ್ಯಮಾನಗಳನ್ನು ಅಧ್ಯಯನಗಳನ್ನು ಅತ್ಯಂತ ಪ್ರಾಚೀನ ಕಾಲದಲ್ಲಿ ಗುರುತಿಸಬಹುದಾದರೂ ಈ ಕ್ಷೇತ್ರದ ವೈಜ್ಞಾನಿಕ ವಿಧಾನವು 17ನೇ ಶತಮಾನದಿಂದ ಆರಂಭವಾಯಿತು ಎಂದು ಹೇಳಬಹುದು. ಇದರ ಮೂಲವು ಗೆಲಿಲಿಯೋನ ದೂರದರ್ಶಕ (ಟೆಲಿಸ್ಕೋಪ್)ದ ಆವಿಷ್ಕಾರದಿಂದ ಮೊದಲಾಯಿತು. ಇದರಿಂದ ರಾತ್ರಿಯ ಹೊತ್ತಿನಲ್ಲಿ ಆಕಾಶ ವೀಕ್ಷಣೆ, ಪರೀಕ್ಷೆಗಳನ್ನು ವಿವರವಾಗಿ ನಡೆಸಲು ಸಾಧ್ಯವಾಯಿತು.

ಖಗೋಳಶಾಸ್ತ್ರವನ್ನು ಗಣಿತದ ಹಿನ್ನೆಲೆಯಲ್ಲಿ ಪ್ರತಿನಿಧಿಸುವ ಪರಿಕ್ರಮ ನ್ಯೂಟನನ ಆಕಾಶದ ಯಾಂತ್ರಿಕತೆ ಮತ್ತು ಗುರುತ್ವಶಕ್ತಿಯ ಸಿದ್ಧಾಂತಗಳ ಜೊತೆಗೆ ಪ್ರಾರಂಭವಾಯಿತಾದರೂ ಇದು ಕೆಪ್ಲರ್ನಂತಹವರು ಈ ಹಿಂದೆ ನಡೆಸಿದ ಸಂಶೋಧನೆಗಳಿಂದಾಗಿ ಚುರುಕುಗೊಂಡಿತು. 19ನೇ ಶತಮಾನಕ್ಕಾಗುವಾಗ, ಖಗೋಳ ಶಾಸ್ತ್ರವು ಔಪಚಾರಿಕ ವಿಜ್ಞಾನವಾಗಿ ಬೆಳೆಯಿತು ಸ್ಪೆಕ್ಟ್ರೋಸ್ಕೋಪ್ ಮತ್ತು ಛಾಯಾಗ್ರಹಣ ಮುಂತಾದ ಉಪಕರಣಗಳು ಹುಟ್ಟಿಕೊಂಡವು. ಅದರೊಂದಿಗೆ ಹೆಚ್ಚು ಸುಧಾರಣೆ ಹೊಂದಿದ ದೂರದರ್ಶಕಗಳು, ಮತ್ತು ವೃತ್ತಿಪರ ವೀಕ್ಷಣಾಲಯಗಳು ಹುಟ್ಟಿಕೊಂಡವು.

## ಭೂವಿಜ್ಞಾನ

ಭೂವಿಜ್ಞಾನವು ವಿಜ್ಞಾನದ ಎಲ್ಲಾ ನಿಯಮಗಳನ್ನೂ ಒಳಗೊಂಡ, ಭೂಗ್ರಹಕ್ಕೆ ಸಂಬಂಧಿಸಿದ ವಿಜ್ಞಾನವಾಗಿದೆ. ಇದು ಭೂವಿಜ್ಞಾನ, ಭೂಭೌತಶಾಸ್ತ್ರ, ಹವಾಮಾನಶಾಸ್ತ್ರ, ಭೌತಿಕ ಭೌಗೋಳಿಕತೆ, ಸಾಗರ ಶಾಸ್ತ್ರ ಮತ್ತು ಮಣ್ಣಿನ ವಿಜ್ಞಾನ ಹೀಗೆ ಎಲ್ಲವನ್ನೂ ಒಳಗೊಂಡಿದೆ.

ಗಣಿಗಾರಿಕೆ ಮತ್ತು ಅಮೂಲ್ಯ ಹರಳುಗಳ ಬಗ್ಗೆ ಮಾನವರಿಗೆ ಬಹಳ ಪ್ರಾಚೀನ ಕಾಲದಿಂದಲೇ ಆಸಕ್ತಿ ಇತ್ತು ಎಂಬುದನ್ನು ನಮ್ಮ ನಾಗರಿಕತೆಯ ಚರಿತ್ರೆಯಲ್ಲಿ ನಾವು ಕಾಣುತ್ತೇವೆ. ಆದರೆ ಅದಕ್ಕೆ ಸಂಬಂಸಿದ ವಿಜ್ಞಾನಗಳಾದ

ಆರ್ಥಿಕ ಭೂಶಾಸ್ತ್ರ ಮತ್ತು ಖನಿಜಶಾಸ್ತ್ರಗಳು 18ನೇ ಶತಮಾನದವರೆಗೆ ಅಸ್ತಿತ್ವಕ್ಕೆ ಬಂದಿರಲಿಲ್ಲ. ಭೂಮಿಯ ಕುರಿತಾದ ಅಧ್ಯಯನ, ಅದರಲ್ಲೂ ಪಳೆಯುಳಿಕಾ ಶಾಸ್ತ್ರ 19ನೇ ಶತಮಾನದಲ್ಲಿ ಅರಳಿತು. ಇತರ ಶಿಸ್ತುಗಳಲ್ಲಿ ಒಂದಾದ ಭೂಭೌತಶಾಸ್ತ್ರ 20ನೇಶತಮಾನದಲ್ಲಿ ಬೆಳೆಯಿತು. ಇದರಿಂದಲಾಗಿ 1960ರಲ್ಲಿ ಪ್ಲೇಟ್ ಟೆಕ್ಟೋನಿಕ್ಸ್ ಬೆಳೆಯಲು ಸಾಧ್ಯವಾಯಿತು. ವಿಕಾಸದ ಸಿದ್ಧಾಂತವು ಭೂವಿಜ್ಞಾನಗಳ ಮೇಲೆ ಬೀರಿದ ಪರಿಣಾಮವನ್ನೇ ಸಸ್ಯಶಾಸ್ತ್ರದ ಮೇಲೂ ಬೀರಿತು. ಭೂವಿಜ್ಞಾನವು ಇಂದು ಪೆಟ್ರೋಲಿಯಂ ಮತ್ತು ಖನಿಜ ಸಂಪತ್ತು, ಹವಾಮಾನ ಸಂಶೋಧನೆಗಳು ಮತ್ತು ಪರಿಸರದ ಬಗ್ಗೆ ತಿಳಿದುಕೊಳ್ಳಲು ಸಮಸ್ಯೆಗಳಿಗೆ ಪರಿಹಾರವನ್ನು ಕಾಣಲೂ ಸಹಾಯಕವಾಗುತ್ತಿವೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

ಕೆಳಗೆ ಕೆಲವು ಅಪೂರ್ಣ ವಾಕ್ಯಗಳನ್ನು ಕೊಡಲಾಗಿದೆ. ಸೂಕ್ತ ಉತ್ತರಗಳಿಂದ ಅವುಗಳನ್ನು ಪೂರ್ಣಗೊಳಿಸಿ.

1. ನೈಸರ್ಗಿಕ ವಿಜ್ಞಾನವನ್ನು ಮುಖ್ಯವಾಗಿ ಎರಡು ತೆರನಾಗಿ ವಿಭಜಿಸಬಹುದು. ಅವೆಂದರೆ __________ಮತ್ತು __________
2. ಜೀವಂತ ಜೀವಿಗಳ ಬಗ್ಗೆ ಅಣುವಿನಿಂದ ತೊಡಗಿ, ಇತರ ಜೀವಿಗಳೊಂದಿಗೆ ಮತ್ತು ಪರಿಸರದೊಂದಿಗೆ ಅವುಗಳ ಅಂತರ್ ಕ್ರಿಯೆಗಳನ್ನು ವಿವರಿಸುವ ಶಾಸ್ತ್ರ __________
3. ವಸ್ತುವಿನ ಭೌತಿಕ ಗುಣಲಕ್ಷಣಗಳು ಹಾಗೂ ಶಕ್ತಿಯನ್ನು ಅಧ್ಯಯನಮಾಡುವ ವಿಜ್ಞಾನ __________
4. ಪರಮಾಣು ಮತ್ತು ಅಣು ಶ್ರೇಣಿಗಳ ವೈಜ್ಞಾನಿಕ ಅಧ್ಯಯನವನ್ನು ರೂಪಿಸುವ ಶಾಸ್ತ್ರ__________

## 2.4.3.2. ನೈಸರ್ಗಿಕ ವಿಜ್ಞಾನದ ಕಲಿಕೆಯ ಅವಶ್ಯಕತೆ

ಆರೋಗ್ಯವನ್ನು ಸಮಸ್ಥಿತಿಯಲ್ಲಿ ಇಡುವಲ್ಲಿ ವಿಜ್ಞಾನದ ಪಾತ್ರವನ್ನು ಈ ರೀತಿಯಲ್ಲಿ ಸಾರಾಂಶಗೊಳಿಸಬಹುದು.

- ಜೀವಿಗಳು ಒಂದನ್ನೊಂದು ಆಶ್ರಯಿಸಿಕೊಂಡು, ಭೌತಿಕ ಪರಿಸರವನ್ನು ಅವಲಂಬಿಸಿಕೊಂಡು ಬದುಕುವುದರ ಬಗ್ಗೆ ವಿವರಿಸುವುದು ಮತ್ತು ಒತ್ತು ನೀಡುವುದರ ಮೂಲಕ, ವಿಜ್ಞಾನವು ಒಂದು ವಿಧದ ಬುದ್ಧಿವಂತಿಕೆಯ ಗೌರವವನ್ನು ಪ್ರಕೃತಿಯ ಮೇಲೆ ತೋರಿಸುವಂತೆ ಮಾಡುತ್ತದೆ. ಇದರಿಂದ ಭೂಮಿಯ ಮೇಲೆ ಮನುಷ್ಯನಿಗಾಗಿ, ಮತ್ತು ಉಳಿದ ಜೀವಿಗಳಿಗಾಗಿ ತಾಂತ್ರಿಕತೆಯ ಪ್ರಯೋಗಗಳನ್ನು ಮಾಡುವಲ್ಲಿ ಸುಧಾರಣೆಯನ್ನೂ ಆ ಬಗೆಗಿನ ತೀರ್ಮಾನಗಳನ್ನು ತೆಗೆದುಕೊಳ್ಳುವುದರ ಬಗ್ಗೆಯೂ ತಿಳಿಸುತ್ತದೆ. ವಿಜ್ಞಾನದ ಬಗ್ಗೆ ಹೆಚ್ಚು ತಿಳಿದುಕೊಂಡವರು, ಸಮಾಜವನ್ನು ಶಕ್ತಿಯುತವನ್ನಾಗಿಸುವರು. ಅದರಲ್ಲೂ ವಿಜ್ಞಾನ ನೀಡುವ ಪಾಠಗಳು ಹಾಗೂ ಕೌಶಲ್ಯಗಳು ನಮ್ಮನ್ನು ಉತ್ತಮ ಪ್ರಜೆಗಳನ್ನಾಗಿಸುತ್ತವೆ, ಆರ್ಥಿಕವಾಗಿ ಸಮತೋಲನದಲ್ಲಿರಿಸುತ್ತದೆ, ಆರೋಗ್ಯಕರ ವಾತಾವರಣವನ್ನು ಉಂಟುಮಾಡುತ್ತದೆ ಮತ್ತು ಉಜ್ವಲವಾದ ಭವಿಷ್ಯವು ಪ್ರತಿಯೊಬ್ಬರಿಗೂ ಸಿಗುವಂತೆ ಮಾಡುತ್ತದೆ.
- ವಿಜ್ಞಾನವು ನಮ್ಮಲ್ಲಿ ಪರಿಸರದ ಸಮಸ್ಯೆಗಳ ಬಗ್ಗೆ ಜಾಗೃತಿಯನ್ನು ಮೂಡಿಸುತ್ತದೆ.
- ನಮ್ಮ ತಿಳಿವಿನ ಪರಿಧಿಯನ್ನು ವಿಸ್ತರಿಸುತ್ತದೆ. ಉದಾಹರಣೆಗೆ ಹವಾಮಾನದಲ್ಲುಂಟಾಗುವ ಬದಲಾವಣೆಗಳು, ಸಾಂಪತ್ತಿಕ ಬಳಕೆಗಳು, ಜನಸಂಖ್ಯಾ ಪ್ರವೃತ್ತಿಗಳು ಮತ್ತು ಪರಿಸರದ ತೊಂದರೆಗಳು ಮುಂತಾದವುಗಳ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.
- ತಂತ್ರಜ್ಞಾನದ ಬಳಕೆಯಿಂದ ದೂರದ ಸಂಗತಿಗಳ ಕುರಿತು ತಿಳಿಯುವುದು ಸಾಧ್ಯವಾಗಿದೆ. ಪರಿಸರದಲ್ಲುಂಟಾಗುವ ತೊಂದರೆಗಳನ್ನು ತಿಳಿದುಕೊಳ್ಳಲು ಉಖಖ ಸಹಾಯವಾಗುತ್ತದೆ.
- ಪ್ರಾಕೃತಿಕ ಸಂಪತ್ತುಗಳನ್ನು ಅರ್ಥಪೂರ್ಣವಾಗಿ ಬಳಕೆ ಮಾಡಲು ಸಹಾಯಕವಾಗುತ್ತದೆ.

- ಪರಿಸರ ಕಲುಷಿತಗೊಳ್ಳುವುದನ್ನು ಕಡಿಮೆಮಾಡಲು ಇರುವ ಪರಿಹಾರಗಳನ್ನು ವಿಜ್ಞಾನವು ತೋರಿಸಿಕೊಡುತ್ತದೆ.
- ಸ್ಥಿರವಾದ ಬೆಳವಣಿಗೆಯನ್ನು ಪಡೆದುಕೊಳ್ಳಲು ವಿಜ್ಞಾನದ ಜ್ಞಾನವನ್ನು ಬಳಸಿಕೊಳ್ಳಬಹುದು. ಭೂಮಿಯ ನಿಯಮಗಳಲ್ಲಿನ ಈಗಿನ ಸ್ಥಿತಿ ಹಾಗೂ ಭವಿಷ್ಯದಲ್ಲಿ ಏನಾಗಬಹುದು ಎನ್ನುವುದನ್ನು ವೈಜ್ಞಾನಿಕ ಮೌಲ್ಯಮಾಪನಗಳ ಮೂಲಕವಾಗಿ ತಿಳಿದುಕೊಳ್ಳಲು ಸಾಧ್ಯ.
- ಈ ತೆರನಾದ ಮೌಲ್ಯಮಾಪನಗಳಿಂದ ವಿಜ್ಞಾನದ ಒಳಗಿನಿಂದಲೇ ಈಗಿನ ಮತ್ತು ಮುಂದೆ ಬೆಳೆಯುವ ಆವಿಷ್ಕಾರಗಳ ಬಗ್ಗೆ ತಿಳಿದುಕೊಂಡು, ತೀರ್ಮಾನಗಳನ್ನು ತೆಗೆದುಕೊಳ್ಳುವ ಹಾಗೂ ಪರಸ್ಪರ ವಿನಿಮಯಗಳ ಮೂಲಕ ವಿಜ್ಞಾನ ಮತ್ತು ನೀತಿರಚನೆಗಳನ್ನು ಒಟ್ಟುಗೂಡಿಸಬಹುದು.
- ವಾತಾವರಣವನ್ನು ಕಾಪಾಡುವಲ್ಲಿ ಹಸುರು ಪರಿಹಾರಗಳನ್ನು, ಇಂದು ಜಗತ್ತನ್ನು ಕಾಡುತ್ತಿರುವ ಆಹಾರ ಮತ್ತು ಶಕ್ತಿಗೆ ಸಂಬಂಧಿಸಿದ ಸಮಸ್ಯೆಗಳನ್ನು, ವಿಜ್ಞಾನ, ತಂತ್ರಜ್ಞಾನ, ಸಂಶೋಧನೆ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಎಲ್ಲವನ್ನೂ ವಿಜ್ಞಾನದ ಮೂಲಕ ಅಭಿವೃದ್ಧಿಗೊಳಿಸಲು ಸಾಧ್ಯ.

## 2.4.3.2. ವಿವಿಧ ಹಂತಗಳಲ್ಲಿ ವಿಜ್ಞಾನ ಶಿಕ್ಷಣ ಮತ್ತು ವಿಜ್ಞಾನವನ್ನು ಬೋಧಿಸುವಾಗ ಎದುರಾಗುವ ಸಮಸ್ಯೆಗಳು ಹಾಗೂ ಸವಾಲುಗಳು

### ಪ್ರಾಥಮಿಕ ಹಂತದಲ್ಲಿ ವಿಜ್ಞಾನ ಶಿಕ್ಷಣ

ಪ್ರಾಥಮಿಕ ಹಂತದಲ್ಲಿ ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳು ಪರಿಸರ ಶಿಕ್ಷಣದ ಜತೆಗೆ ಸಂಯೋಜನೆಗೊಂಡಿರುತ್ತವೆ.

ಈ ಹಂತದಲ್ಲಿ ವಿಜ್ಞಾನ ಶಿಕ್ಷಣವು ಈ ರೀತಿಗಳಲ್ಲಿ ಸಹಾಯ ಮಾಡಬೇಕು:

- ಮಗುವಿನಲ್ಲಿ ಜಗತ್ತಿನ (ನೈಸರ್ಗಿಕ ಪರಿಸರ, ಕಲಾಕೃತಿಗಳು ಮತ್ತು ಮನುಷ್ಯರು) ಬಗ್ಗೆ ಆಸಕ್ತಿಯನ್ನು ಪೋಷಿಸುವಂತಿರಬೇಕು.
- ಮಗು ಪರಿಶೋಧನೆಗಳಲ್ಲಿ ಮತ್ತು ಕೈಗಳಿಂದ ಮಾಡುವ ವಿವಿಧ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಮಾಡಿ ಅದರ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳುವಂತಾಗಬೇಕು. ಮನೋಶಕ್ತಿಯ ಮೂಲಕವಾಗಿ, ವೀಕ್ಷಣೆ, ವರ್ಗೀಕರಣ, ತೀರ್ಮಾನ ಕೈಗೊಳ್ಳುವಂತೆ ಮಾಡಬೇಕು.
- ಮೂಲ ಭಾಷಾ ಕೌಶಲ್ಯವನ್ನು ಬೆಳೆಸಬೇಕು: ಮಾತನಾಡುವ, ಓದುವ, ಬರೆಯುವ ಕೌಶಲ್ಯಗಳು ವಿಜ್ಞಾನಕ್ಕೆ ಮಾತ್ರವಲ್ಲ ವಿಜ್ಞಾನದ ಮೂಲಕ ಎಲ್ಲವನ್ನೂ ಕಲಿಯಲು ಇದು ಅವಶ್ಯಕವಾಗಿದೆ.

### ಹಿರಿಯ ಪ್ರಾಥಮಿಕ ಮಟ್ಟದಲ್ಲಿ ವಿಜ್ಞಾನದ ಶಿಕ್ಷಣ

### ವೈಜ್ಞಾನಿಕ ವಿಧಾನ

- ಮಗು ವಿಜ್ಞಾನದ ಮೂಲ ತತ್ವಗಳನ್ನು ಕಲಿಯುವುದರಲ್ಲಿ ಮಗ್ನವಾಗಿರುತ್ತದೆ. ಅದಕ್ಕೆ ಪರಿಚಿತವಾದ ಅನುಭವಗಳು, ಸಣ್ಣ ಮತ್ತು ಸರಳ ತಾಂತ್ರಿಕ ವಿಷಯಗಳಜೊತೆಗೆ ಕೆಲಸಮಾಡವುದು, ಮಾದರಿಗಳನ್ನು ರಚಿಸುವುದು ಮುಂತಾದವುಗಳು.
- ಪರಿಸರ ಮತ್ತು ಆರೋಗ್ಯದ ಬಗ್ಗೆ ಕಲಿಯಲು ಆರಂಭಿಸುತ್ತದೆ. ಅದರೊಂದಿಗೆ ಲೈಂಗಿಕ ಮತ್ತು ಮರುಸೃಷ್ಟಿಗಳ ಬಗೆಗಿನ ಆರೋಗ್ಯದ ಬಗ್ಗೆ ಚಟುವಟಿಕೆಗಳು ಹಾಗೂ ಸರ್ವೇಕ್ಷಣಗಳ ಮೂಲಕ

ತಿಳಿದುಕೊಳ್ಳುತ್ತದೆ.

- ವಿಜ್ಞಾನದ ವಿಷಯಗಳ ಗ್ರಹಿಕೆಯು ಮುಖ್ಯವಾಗಿ, ಚಟುವಟಿಕೆಗಳು ಮತ್ತು ಪ್ರಯೋಗಗಳ ಮೂಲಕ ಸಾಗುತ್ತದೆ.
- ಗುಂಪು ಚಟುವಟಿಕೆಗಳು, ತಜ್ಞರ ಹಾಗೂ ಶಿಕ್ಷಕರ ಜತೆಗೆ ಚರ್ಚೆಗಳು, ಸರ್ವೇಕ್ಷಣಗಳು, ದತ್ತಾಂಶಗಳ ಸಂಯೋಜನೆ, ಅವುಗಳ ಪ್ರದರ್ಶನಗಳು ಇತ್ಯಾದಿಗಳನ್ನು ಶಾಲೆಗಳಲ್ಲಿ ಮತ್ತು ನೆರೆಕೆರೆಯಲ್ಲಿ ನಡೆಸುವುದು ಶಿಕ್ಷಣ ನೀತಿಯಲ್ಲಿ ಬಹು ಪ್ರಮುಖವಾದುದಾಗಿದೆ.

## ಪ್ರೌಢ ಶಾಲಾ ಮಟ್ಟದಲ್ಲಿ ವಿಜ್ಞಾನ ಶಿಕ್ಷಣ

ವಿಜ್ಞಾನದಲ್ಲಿ ಆಸಕ್ತರಾದ ವಿದ್ಯಾರ್ಥಿಗಳು ಈ ಕೆಳಗಿನ ವಿಷಯಗಳಲ್ಲಿ ಮಗ್ನರಾಗುತ್ತಾರೆ. ವಿಜ್ಞಾನವನ್ನು ಸಂಯೋಜಿತ ಜ್ಞಾನಶಿಸ್ತಾಗಿ ಕಲಿಯುತ್ತಾರೆ.

- ಪ್ರಾಥಮಿಕ ಹಂತದಿಂದಲೂ ಉತ್ತಮವಾಗಿ ತಮ್ಮ ಕೈಗಳಿಂದ ಉಪಕರಣಗಳನ್ನು ಬಳಸಿಕೊಂಡು ಮಾದರಿಗಳ ನಿರ್ಮಾಣ ಮತ್ತು ತಾಂತ್ರಿಕ ಮಾದರಿಗಳನ್ನು ನಿರ್ಮಿಸಬಲ್ಲರು.
- ಪರಿಸರ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಹಾಗೂ ಸಂತಾನೋತ್ಪತ್ತಿ ಮತ್ತು ಲೈಂಗಿಕ ಆರೋಗ್ಯದ ಬಗ್ಗೆ ಚಟುವಟಿಕೆಗಳ ಹಾಗೂ ವಿಶ್ಲೇಷಣೆಗಳ ಮೂಲಕವಾಗಿ ತಿಳಿದುಕೊಳ್ಳಬಲ್ಲರು.
- ಈ ಹಂತದಲ್ಲಿ ವಿಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಸೇರಿಸಿಕೊಂಡು ಪ್ರಾದೇಶಿಕವಾದ ಮಹತ್ವದ ಯೋಜನೆಗಳನ್ನು ಪಠ್ಯಕ್ರಮದ ಭಾಗವಾಗಿ ಈ ಹಂತದಲ್ಲಿ ಸೇರಿಸಿಕೊಳ್ಳುವುದು ಮುಖ್ಯ.

## ಹಿರಿಯ ಪ್ರೌಢಶಾಲಾ ಹಂತದಲ್ಲಿ ವಿಜ್ಞಾನದ ಶಿಕ್ಷಣ

ಹಿರಿಯ ಪ್ರೌಢಶಾಲಾ ಹಂತದಲ್ಲಿ,

- ವಿಜ್ಞಾನವನ್ನು ಒಂದು ಪ್ರತ್ಯೇಕ ಜ್ಞಾನಶಿಸ್ತಾಗಿ ಪರಿಚಯಿಸಬೇಕು.
- ಪ್ರಾಯೋಗಿಕ/ ತಾಂತ್ರಿಕವಾಗಿ ಸಮಸ್ಯೆಗಳ ಪರಿಹಾರವನ್ನು ಕಂಡುಕೊಳ್ಳಲು ಒತ್ತು ನೀಡಬೇಕು.

## ವಿಜ್ಞಾನವನ್ನು ಜ್ಞಾನಶಿಸ್ತಾಗಿ ಬೋಧಿಸುವಾಗ ಎದುರಾಗುವ ಸಮಸ್ಯೆಗಳು ಮತ್ತು ಸವಾಲುಗಳು

Position Paper of National Focus Group on Science ವಿಜ್ಞಾನ ಬೋಧನೆಯ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳನ್ನು ಈ ರೀತಿ ಕಂಡುಕೊಂಡಿದೆ.

- ಮೂಲ ಸೌಕರ್ಯಗಳ ಕೊರತೆ: ಸಂಪನ್ಮೂಲವಿರುವ ಕೊಠಡಿಗಳು, ಚಟುವಟಿಕಾ ಕೊಠಡಿಗಳು, ಪ್ರಯೋಗಾಲಯಗಳು, ಮಾದರಿಗಳಿಗೆ ಬೇಕಾದ ಸಲಕರಣೆಗಳು, ಆಟದ ಸಾಮಗ್ರಿಗಳು, ವಿಶ್ವಕೋಶಗಳು, ಅರ್ಥಕೋಶಗಳು, ಬಹು ಮಾಧ್ಯಮಗಳು, ಅಂತರ್ಜಾಲಗಳು ಮುಂತಾದವುಗಳ ಕೊರತೆ
- ಅತಿಯಾದ ಪಠ್ಯಭಾಗಗಳು: ವಿಜ್ಞಾನದ ಪಠ್ಯಕ್ರಮವನ್ನು ನಿರ್ಣಯ ಮಾಡುವಾಗ ಅತ್ಯಂತ ಮುಖ್ಯವಾಗಿ ತಿಳಿದುಕೊಳ್ಳಬೇಕಾದುದೇನೆಂದರೆ, ವಿಜ್ಞಾನದಲ್ಲಿ ಕೇವಲ ಮಾಹಿತಿಗೆ ಸಂಬಂಧಿಸಿದವುಗಳಿಗೆ ಹೆಚ್ಚು ಒತ್ತುನೀಡದೆ, ಅಭ್ಯಾಸ ಮಾಡಲು ಅಗತ್ಯವಾಗಿರುವ ವಿಜ್ಞಾನದ ವಿಷಯಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು.
- ಪಠ್ಯಪುಸ್ತಕಗಳ ಕೊರತೆ: ರಚನಾತ್ಮಕವಾದ ಮಾದರಿಯನ್ನು ಆಧರಿಸಿದ ಪಠ್ಯಪುಸ್ತಕಗಳ ಕೊರತೆಯಿದೆ.

- ಸಾಮಾಜಿಕ ಬದಲಾವಣೆಗೆ ಸಾಧನವಾಗಿ: ವಿಜ್ಞಾನವನ್ನು ಸಾಮಾಜಿಕ ಬದಲಾವಣೆಯ ಒಂದು ಸಾಧನವಾಗಿ ಬಳಸುವುದು ಅಗತ್ಯ. ಇದರಿಂದ ಆರ್ಥಿಕ ದರ್ಜೆ, ಲಿಂಗ, ಜಾತಿ, ಮತ್ತು ಧರ್ಮದ ಭಿನ್ನತೆಗಳನ್ನು ಕಡಿಮೆಮಾಡಲು ಸಾಧ್ಯ.
- ಇಂದಿನ ದಿನಗಳಲ್ಲಿ ವಿಜ್ಞಾನದ ಶಿಕ್ಷಣವು ಸಾಮರ್ಥ್ಯವನ್ನು ಬೆಳೆಸುವುದಾದರೂ ಹೊಸ ಆವಿಷ್ಕಾರಗಳನ್ನು ಹಾಗೂ ಸೃಜನಶೀಲತೆಯನ್ನು ಬೆಳೆಸುತ್ತಿಲ್ಲ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2

ವಿಜ್ಞಾನವನ್ನು ಬೋಧಿಸುವಾಗ ಗಮನಿಸಿಕೊಳ್ಳಬೇಕಾದ ಸಾಮರ್ಥ್ಯಗಳನ್ನು ಗುರುತಿಸಿ

1. ವೀಕ್ಷಣಾ ಸಾಮರ್ಥ್ಯ
2. ನಿಗಮನ ಸಾಮರ್ಥ್ಯ
3. ಅಭಿವ್ಯಕ್ತಿ ಸಾಮರ್ಥ್ಯ
4. ಪ್ರಯೋಗ ಮಾಡುವ ಸಾಮರ್ಥ್ಯ
5. ಅನುಕರಣಾ ಸಾಮರ್ಥ್ಯ
6. ತಾರ್ಕಿಕವಾಗಿ ಊಹಿಸುವ ಸಾಮರ್ಥ್ಯ
7. ಬಾಯಿಪಾಠ ಮಾಡುವ ಸಾಮರ್ಥ್ಯ

## 2.3.3.3. ಶಾಲಾ ಪಠ್ಯಕ್ರಮದಲ್ಲಿ ವಿಜ್ಞಾನದ ಸ್ಥಾನ ಮತ್ತು ವಿಜ್ಞಾನ ಪಠ್ಯಕ್ರಮದ ಸಂಯೋಜನೆ.

## ಶಾಲಾ ಪಠ್ಯಕ್ರಮದಲ್ಲಿ ವಿಜ್ಞಾನದ ಸ್ಥಾನ

ಮಾನವನ ಭವಿಷ್ಯವು ವಿಜ್ಞಾನದ ಪ್ರಗತಿಯ ಜತೆಗೆ ಜೋಡಣೆಯಾಗಿದೆ ಮತ್ತು ಉತ್ಪಾದಕ ಚಟುವಟಿಕೆಗಳು ಅದನ್ನು ಅವಲಂಬಿಸಿದೆ ಎಂದು ಹೇಳಲಾಗುತ್ತದೆ. ಆದುದರಿಂದ ವಿಜ್ಞಾನಕ್ಕೆ ಶಾಲಾ ಪಠ್ಯಕ್ರಮದಲ್ಲಿ ಗೌರವದ ಸ್ಥಾನವು ಲಭ್ಯವಾಗಿದೆ. ಜಗತ್ತಿನ ಎಲ್ಲಾ ಕಡೆಯಲ್ಲೂ ಇದೇ ಅಭಿಪ್ರಾಯವಿದೆ.

ಕೊಠಾರಿ ಆಯೋಗವು ಶಾಲಾ ಪಠ್ಯಕ್ರಮದ ಮೊದಲ ಹತ್ತು ವರ್ಷಗಳಲ್ಲಿ ವಿಜ್ಞಾನವನ್ನು ಕಡ್ಡಾಯವಾಗಿ ಒಳಪಡಿಸಲು ಶಿಫಾರಸುಮಾಡಿದೆ.

UNESCOದ ಅಂತರಾಷ್ಟ್ರೀಯ ಆಯೋಗವು ಈ ಕೆಳಗಿನಂತೆ ಶಿಫಾರಸು ಮಾಡುತ್ತದೆ.

"ವಿಜ್ಞಾನ ಮತ್ತು ತಂತ್ರಜ್ಞಾನಗಳು ಶೈಕ್ಷಣಿಕ ಕ್ಷೇತ್ರದ ಬಹು ಮುಖ್ಯ ಘಟಕಗಳಾಗಿರುತ್ತವೆ. ಅವುಗಳನ್ನು ಎಲ್ಲಾ ತರದ ಶಿಕ್ಷಣದ ಚಟುವಟಿಕೆಗಳಲ್ಲೂ ಮಕ್ಕಳಿಗಾಗಿ, ಯುವಕರಿಗಾಗಿ, ಹಿರಿಯರಿಗಾಗಿ ಸೇರಿಸಿಕೊಳ್ಳಬೇಕು. ಯಾಕೆಂದರೆ ಆ ಮೂಲಕವಾಗಿ ಅವರಿಗೆ ಸಾಮಾಜಿಕ ಶಕ್ತಿಗಳನ್ನು, ಪ್ರಾಕೃತಿಕ, ಉತ್ಪಾದಕಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಆ ಮೂಲಕವಾಗಿ ತನ್ನ ಮೇಲೆ, ತನ್ನ ಆಯ್ಕೆಯ ಮೇಲೆ, ಮತ್ತು ಚಟುವಟಿಕೆಕಳ ಮೇಲೆ ನಿಯಂತ್ರಣವನ್ನು ಸಾಧಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಂತಿಮವಾಗಿ, ಅವು ಮಾನವನಿಗೆ ಮನಸ್ಸನ್ನು ವಿಜ್ಞಾನದೆಡೆಗೆ ತಿರುಗಿಸಿ, ವಿಜ್ಞಾನದ ದಾಸನಾಗದೆ ವಿಜ್ಞಾನವನ್ನು ಉತ್ತೇಜಿಸಲು ಸಮರ್ಥನಾಗಿಸುತ್ತದೆ." ವಿಜ್ಞಾನಕ್ಕೆ ಪ್ರಕೃತಿಯ ಜತೆಗೆ ಮತ್ತು ಮಾನವಿಕ ವಿಷಯಗಳ ಜತೆಗೆ ಇರುವ ಸಂಬಂಧದ ಬಗ್ಗೆ ಈ ಆಯೋಗದ ಚಿಂತನೆ ಇದೆ. "ನೈಸರ್ಗಿಕ ವಿಜ್ಞಾನಗಳು ಒಂದು ದಿನ ಮಾನವನ ವಿಜ್ಞಾನದಲ್ಲಿ ಸಮಯೋಜನೆಗೊಳ್ಳುತ್ತದೆ. ಹೇಗೆಂದರೆ ಮಾನವನು ನೈಸರ್ಗಿಕ ವಿಜ್ಞಾನದಲ್ಲಿ ಸಂಯೋಜನೆಗೊಂಡಂತೆ; ಹೀಗಾಗಿ ಮುಂದೊಂದು ದಿನ ಏಕಮಾತ್ರ ವಿಜ್ಞಾನ ಅಸ್ತಿತ್ವದಲ್ಲಿರುತ್ತದೆ."

ಹಿಂದಿನ ಕಾಲದಲ್ಲಿ ವಿಜ್ಞಾನವು ಶಾಲಾ ಪಠ್ಯಗಳಲ್ಲಿ ಸರಿಯಾದ ಸ್ಥಾನವನ್ನು ಪಡೆದುಕೊಳ್ಳಲು ಬಹಳಷ್ಟು ಪರಿಶ್ರಮ ಪಟ್ಟಿತ್ತು. ಒಂದು ಕಾಲದಲ್ಲಿ ವಿಜ್ಞಾನದ ಕಲಿಕೆಯನ್ನು ಕೆಳಮಟ್ಟದ್ದೆಂದು ಪರಿಗಣಿಸಲಾಗಿತ್ತು. ಬುದ್ಧಿವಂತ ವಿದ್ಯಾರ್ಥಿಗಳು ಕಲಾ ವಿಷಯ ಮತ್ತು ಗಣಿತವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ವಿಜ್ಞಾನದ ಹೊಸ ಚಿಂತನೆಗಳನ್ನು ಸಮಾಜವು ಒಮ್ಮೆಲೇ ಸ್ವೀಕರಿಸುತ್ತಿರಲಿಲ್ಲ. ಬದಲು ಸಂಶಯಾಸ್ಪದ ದೃಷ್ಟಿಯಿಂದ ನೋಡಲಾಗುತ್ತಿತ್ತು. ಅಂದಿನ ನಂಬಿಕೆಗಳಿಗೆ ಮತ್ತು ನಿಯಮಗಳಿಗೆ ವಿರುದ್ಧವಾದ ಯಾವುದೇ ಆವಿಷ್ಕಾರಗಳು ಖಂಡಿಸಲ್ಪಡುತ್ತಿತ್ತು.

ಇಂದು ವಿಜ್ಞಾನ ಕೆಲವರಿಗೆ ಮಾತ್ರ ಎಂಬಂತಿಲ್ಲ. ಇದು ಎಲ್ಲರಿಗೂ ಅಗತ್ಯವಾದ ವಿಷಯ. ಅದನ್ನು ಪಠ್ಯಕ್ರಮದಲ್ಲಿ ಸೇರಿಸುವ ಸಾಮಾನ್ಯ ಅಗತ್ಯಗಳಾದ ಬೌದ್ಧಿಕ, ಸಾಂಸ್ಕೃತಿಕ, ನೈತಿಕ, ಸೌಂದರ್ಯಾತ್ಮಕ, ಉಪಯುಕ್ತ ಮತ್ತು ವೃತ್ತಿಪರ ಮೌಲ್ಯಗಳನ್ನು ವಿಜ್ಞಾನವು ಸಾಧಿಸಿಕೊಡುತ್ತದೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ 2005ರಲ್ಲಿ ಹೀಗೆ ಹೇಳಲಾಗಿದೆ. "ಮಾನವರು ಈಗ ವೇಗವಾಗಿ ಬದಲಾಗುತ್ತಿರುವ ಜಗತ್ತನ್ನು ಎದುರಿಸುತ್ತಿದ್ದಾರೆ. ಮುಖ್ಯವಾಗಿ ಕೌಶಲ್ಯಗಳು ಆವಿಷ್ಕಾರಗಳು ಮತ್ತು ಕ್ರಿಯಾಶೀಲತೆಗಳು ಬದಲಾವಣೆಗಳಿಗೆ ಒಳಗಾಗುತ್ತಿವೆ, ಉತ್ತಮವಾದ ವಿಜ್ಞಾನ ಶಿಕ್ಷಣವು ಇದೆಲ್ಲವನ್ನೂ ದೃಷ್ಟಿಯಲ್ಲಿರಿಸಿಕೊಂಡು, ಮಗುವಿಗೆ ಯಾವ ರೀತಿಯ ವಿಜ್ಞಾನ ಶಿಕ್ಷಣ ಬೇಕೆಂದು ತಿಳಿದುಕೊಂಡು ಅದಕ್ಕನುಗುಣವಾದ ಮನಸ್ಸನ್ನು ರೂಪಿಸುವಂತೆ ಅಳವಡಿಸಬೇಕು".

## ವಿಜ್ಞಾನದ ಪಠ್ಯಕ್ರಮದ ಸಿಂಧುತ್ವವನ್ನು ಖಚಿತಪಡಿಸುವ ಮಾನದಂಡಗಳು

- ಸಂಜ್ಞಾನಾತ್ಮಕ ಸಿಂಧುತ್ವವು ವಿಷಯ, ಪ್ರಕ್ರಿಯೆ, ಭಾಷೆ ಮತ್ತು ಶಿಕ್ಷಣ ಶಾಸ್ತ್ರದ ಅಭ್ಯಾಸಗಳು ಮಗುವಿನ ನಿರ್ದಿಷ್ಟ ವಯಸ್ಸನ್ನು ಗಮನದಲ್ಲಿರಿಸಿ, ಮಗುವಿನ ಅರಿವಿಗೆ ತಲಪುವಂತಹದಾಗಿರಬೇಕೆಂದು ಬಯಸುತ್ತದೆ.
- ವಿಷಯ ಸಿಂಧುತ್ವವು ಪಠ್ಯಕ್ರಮವು ಗಮನಾರ್ಹ ಮತ್ತು ಸರಿಯಾದ ವೈಜ್ಞಾನಿಕ ಮಾಹಿತಿಗಳನ್ನು ಒಳಗೊಂಡಿರಬೇಕು ಎನ್ನುತ್ತದೆ. ವಿಷಯ ಪ್ರಸ್ತುತಿಯಲ್ಲಿ ಸರಳತೆಯು ಅವಶ್ಯಕವಾಗಿದ್ದು, ಪಠ್ಯಕ್ರಮವು ಕಲಿಯುವಾತನ ಅರಿವಿನ ಮಟ್ಟವನ್ನು ಸ್ವೀಕರಿಸಿ ರೂಪುಗೊಂಡಿರಬೇಕೆಂದು ಹೇಳುತ್ತದೆ.
- ಪ್ರಕ್ರಿಯೆ ಸಿಂಧುತ್ವವು, ಪಠ್ಯಕ್ರಮವು ಕಲಿಯುವಾತನನ್ನು ಮಗ್ನನಾಗುವಂತೆ ಮಾಡಿ, ಅವನಲ್ಲಿ ವಿಜ್ಞಾನದ ಬಗ್ಗೆ ಜ್ಞಾನವನ್ನು ಹುಟ್ಟಿಸಿ ಸಹಜವಾದ ಕುತೂಹಲ ಮತ್ತು ಕ್ರಿಯಾಶೀಲತೆಯು ಹುಟ್ಟುವಂತಿರಬೇಕು ಎನ್ನುತ್ತದೆ.
- ಚಾರಿತ್ರಿಕ ಸಿಂಧುತ್ವವು ವಿಜ್ಞಾನ ಪಠ್ಯಕ್ರಮವು ಕಾಲಕ್ರಮದಲ್ಲಿ ವಿಜ್ಞಾನದ ಪರಿಕಲ್ಪನೆ ಯಾವ ರೀತಿಯಲ್ಲಿ ಮೂಡಿಬಂದವೋ ಅದೇ ರೀತಿಯಲ್ಲಿ ತಿಳಿಸಬೇಕು ಎಂದು ಬಯಸುತ್ತದೆ.
- ಪರಿಸರ ಸಿಂಧುತ್ವವು ಪಠ್ಯಕ್ರಮವು ಕಲಿಯುವವನ ಪರಿಸರಕ್ಕನುಗುಣವಾಗಿರಬೇಕು, ಪ್ರಾದೇಶಿಕ ಅಥವಾ ಭೌಗೋಳಿಕ, ಯಾವುದೇ ಆಗಿರಲಿ ವಿಜ್ಞಾನ, ತಂತ್ರಜ್ಞಾನ, ಮತ್ತು ಸಮಾಜದ ನಡುವೆ ಸಂಪರ್ಕವೇರ್ಪಡಿಸಿ, ಅವರನ್ನು ಸಕ್ರಿಯಗೊಳಿಸಿ ಸಮಸ್ಯೆಗಳಿಗೆ ಪರಿಹಾರವನ್ನು ಕಾಣುವಂತೆ ಮಾಡಬೇಕೆನ್ನುತ್ತದೆ.
- ನೈತಿಕ ಸಿಂಧುತ್ವವು ಪಠ್ಯದಲ್ಲಿ ಪ್ರಾಮಾಣಿಕತೆ, ವಸ್ತುನಿಷ್ಠತೆ, ಸಹಕಾರ, ಪೂರ್ವಾಗ್ರಹಗಳು ಹಾಗೂ ಭಯದಿಂದ ವಿಮುಕ್ತಿ ಮತ್ತು ಕಲಿಯುವವನಲ್ಲಿ ಜೀವನಾಸಕ್ತಿಯನ್ನು ಹುಟ್ಟಿಸುವುದು ಮತ್ತು ಪರಿಸರ ಜಾಗೃತಿಯನ್ನು ಮೂಡಿಸುವುದು ಮುಂತಾದವುಗಳನ್ನು ಒಳಪಡಿಸಲೇ ಬೇಕೆನ್ನುತ್ತದೆ.

## ವಿಜ್ಞಾನದ ಪಠ್ಯಕ್ರಮ ಸಂಯೋಜನೆ

ಪ್ರತಿಯೊಂದು ಶಾಲೆಯ ಪ್ರಮುಖ ಉದ್ದೇಶವೇನೆಂದರೆ "ಮಗುವನ್ನು ಉತ್ತಮವಾದ ಪರಿಪೂರ್ಣ ಮಾನವನನ್ನಾಗಿಸಿ ಉತ್ತಮವಾದ ಜೀವನ ನಡೆಸುವಂತೆ ರೂಪಿಸುವುದಾಗಿದೆ." ಇದು ಮಗುವಿಗೆ ಉತ್ತಮವಾದ ಜೀವನ ನಡೆಸಲಿರುವ ಒಳ್ಳೆಯ ಮಾರ್ಗವಾಗಿದೆ. ಆದುದರಿಂದ ಶಾಲೆಗೆ ಹೋಗುವುದು ಮಾನವನ ಪ್ರಮುಖ ಚಟುವಟಿಕೆಯಾಗಿದೆ. ಶಾಲಾಶಿಕ್ಷಣದಲ್ಲಿ ಪಠ್ಯಕ್ರಮವು ಜ್ಞಾನವನ್ನು ಮತ್ತು ಕೌಶಲ್ಯವನ್ನು ಬೆಳೆಸಿಕೊಳ್ಳಲು ಉತ್ತಮವಾದ ಮಾರ್ಗವಾಗಿದೆ. ವಿಜ್ಞಾನ ಪಠ್ಯಕ್ರಮವನ್ನು ಸಂಯೋಜಿಸುವಲ್ಲಿ ಮುಖ್ಯವಾಗಿ ಎರಡು ಅಂಶಗಳಿವೆ. ಶಿಸ್ತುಬದ್ಧ ಉಪಕ್ರಮವು ಮತ್ತು ಸಮನ್ವಯ ಉಪಕ್ರಮ. ಈ ಎರಡನ್ನು ಕೆಳಗೆ ವಿವರಿಸಲಾಗಿದೆ.

## (a) ಶಿಸ್ತುಬದ್ಧ ಉಪಕ್ರಮ (Disciplinary Approach)

ಈ ವಿಧಾನವನ್ನು ವಿಷಯ ವಿಧಾನ ಅಥವಾ ಸಾಂಪ್ರದಾಯಿಕ ವಿಧಾನ ಎಂದೂ ಕರೆಯಲಾಗುತ್ತದೆ. ಇದರಲ್ಲಿ ಪ್ರತೀ ವಿಷಯವನ್ನೂ ಶಿಕ್ಷಕ ಪ್ರತ್ಯೇಕವಾಗಿ ಬೋಧಿಸುತ್ತಾನೆ. ಉದಾಹರಣೆಗೆ, ವಿಜ್ಞಾನವನ್ನು ಪ್ರತ್ಯೇಕವಾದ ಒಂದೊಂದು ವಿಭಾಗಗಳಾಗಿ, ಭೌತಶಾಸ್ತ್ರ, ಸಸ್ಯ ಶಾಸ್ತ್ರ, ಮತ್ತು ರಸಾಯನಶಾಸ್ತ್ರವೆಂದೂ ಭಾಷೆಯನ್ನು ಇತರ ವಿಷಯಗಳಿಗಿಂತ ಬೇರೆಯಾಗಿ ಒಂದು ಪ್ರತ್ಯೇಕ ವಿಷಯವಾಗಿಯೂ ಬೋಧಿಸಲಾಗುತ್ತದೆ. ಇಂಗ್ಲಿಷನ್ನು ಹಿಂದಿ, ಚರಿತ್ರೆ, ಭೂಗೋಳಶಾಸ್ತ್ರಗಳಿಗಿಂತ ಪ್ರತ್ಯೇಕವಾದ ಒಂದು ಭಾಷೆಯಾಗಿ ಬೋಧಿಸಲಾಗುತ್ತದೆ. ಹಾಗೇ ಆಯಾ ವಿಷಯಗಳಿಗೆ ಅವುಗಳದ್ದೇ ಆದ ಎಲ್ಲೆಗಳಿದ್ದು ಅವು ಇತರ ವಿಷಯಗಳಿಗಿಂತ ಭಿನ್ನವಾಗಿರುತ್ತವೆ. ಹೀಗೆ ಪ್ರತಿಯೊಂದು ವಿಷಯವನ್ನು ಪ್ರತ್ಯೇಕವಾಗಿ ಬೋಧಿಸುವ ವಿಧಾನವನ್ನು ಶಿಸ್ತುಬದ್ಧ ಉಪಕ್ರಮ ಎಂದು ಕರೆಯಲಾಗುತ್ತದೆ. ಈ ವಿಧಾನವು ಒಂದು ವಿಷಯವು ಹಲವಾರು ವಾಸ್ತವಗಳ, ವಿಧಾನಗಳ, ಸಿದ್ಧಾಂತಗಳ, ಗ್ರಹಿಕೆಗಳ ಮತ್ತು ಸಾಮಾಜೀಕರಣಗಳ ಆಧಾರದ ಮೇಲೆ ನಿಂತಿದೆ ಎಂಬ ಪೂರ್ವಕಲ್ಪನೆಯನ್ನು ಆಧರಿಸಿದೆ. ಈ ವಿಧಾನದಲ್ಲಿ ಪ್ರಕ್ರಿಯೆಗಿಂತಲೂ ಮುಖ್ಯವಾಗಿ ವಿಷಯದ ಕಡೆಗೆ ಮತ್ತು ಅದರಲ್ಲಿ ಒಳಗೊಂಡ ವಿಚಾರಗಳ ಕಡೆಗೆ ದೃಷ್ಟಿಯನ್ನು ಹರಿಸಲಾಗುತ್ತದೆ. ಭಾರತದಲ್ಲಿ ಈ ವಿಧಾನವು ಪ್ರೌಢಶಿಕ್ಷಣದ ಹಂತದಲ್ಲಿ ಬಹಳಷ್ಟು ಪ್ರಸಿದ್ಧಿಯನ್ನು ಪಡೆದಿದೆ. ವಿಭಿನ್ನ ವಿಷಯಗಳ ನಡುವಿನ ಸಂಬಂಧಗಳನ್ನು ವಿವರಿಸುವುದು ಶಿಕ್ಷಕನರ ಕರ್ತವ್ಯವಾಗಿದೆ.

### ಶಿಸ್ತುಬದ್ಧ ಉಪಕ್ರಮದ ಗುಣಲಕ್ಷಣಗಳು

a) ಆಳವಾದ ಪರಿಕಲ್ಪನಾ ಜ್ಞಾನ – ಎಲ್ಲಾ ವಿಷಯಗಳೂ ವಿವರವಾದ ಆಳವಾದ ಪರಿಕಲ್ಪನಾ ಜ್ಞಾನ ಅಗತ್ಯವಿರುತ್ತದೆ.

b) ವಿಷಯ ಕೇಂದ್ರಿತ ಬೋಧನೆ – ಜ್ಞಾನಶಿಸ್ತಿನ ಬೋಧನೆಯ ಪಠ್ಯಕ್ರಮವು ಹೆಚ್ಚಾಗಿ ವಿಷಯವನ್ನೇ ಆಧರಿಸಿದೆ.

c) ಜ್ಞಾನದ/ ಮಾಹಿತಿಯ ಮೂಲ– ಜ್ಞಾನಶಿಸ್ತಿನ ವಿಧಾನದಲ್ಲಿ ಶಿಕ್ಷಕನು ಜ್ಞಾನದ/ಮಾಹಿತಿಯ ಮೂಲವಾಗಿರುತ್ತಾನೆ.

d) ಪ್ರಮುಖ ಉದ್ದೇಶ– ಈ ವಿಧಾನದ ಪ್ರಮುಖ ಉದ್ದೇಶವು ಕಲಿಯುವವರನ್ನು ತಜ್ಞರನ್ನಾಗಿ, ವಿಜ್ಞಾನಿಗಳನ್ನಾಗಿ ಮಾಡುವುದೇ ಆಗಿದೆ.

e) ವಿಷಯದಲ್ಲಿ ಪೂರ್ಣಸ್ವಾಧೀನತೆ: ಕಲಿಯುವವನು ಕಲಿಯುವ ವಿಷಯದಲ್ಲಿ ಪೂರ್ಣಸ್ವಾಧೀನತೆ ಇರಬೇಕೆಂಬ ಅಪೇಕ್ಷೆ ಇರುತ್ತದೆ

f) ಈ ವಿಧಾನವು ಉಪನ್ಯಾಸ ವಿಧಾನಕ್ಕೆ ಪೂರಕವಾದದ್ದಾಗಿದೆ.

g) ಪಠ್ಯ ಪುಸ್ತಕವು ಪ್ರಮುಖ ಆಧಾರ– ಈ ವಿಧಾನವು ವೀಕ್ಷಣೆಗಳು, ಮೌಲ್ಯಗಳು, ಅಂತಿಮ ನಿರ್ಧಾರಗಳು ಮೊದಲಾದವುಗಳಿಗೆ ಅವಕಾಶವಿಲ್ಲದಂತೆ ಮಾಡಿ ಪಠ್ಯಪುಸ್ತಕವೇ ಅಂತಿಮ ಸತ್ಯ ಎಂಬಂತೆ ಮಾಡುತ್ತದೆ.

**ಶಿಸ್ತುಬದ್ಧ ಉಪಕ್ರಮದ ಗುಣಗಳು**

- ವಿಷಯದಲ್ಲಿ ಪ್ರಾವೀಣ್ಯತೆ: ಈ ಉಪಕ್ರಮವು ವಿಷಯದಲ್ಲಿನ ಪ್ರಾವೀಣ್ಯತೆಯನ್ನು ಬೆಳೆಸುತ್ತದೆ.
- ವಿಷಯದ ಬೆಳವಣಿಗೆ: ಶಿಸ್ತುಬದ್ಧ ಉಪಕ್ರಮವು ವಿಷಯದ ಬೆಳವಣಿಗೆಯನ್ನು ಹೆಚ್ಚಿಸುತ್ತದೆ.
- ಸಮಯದ ಉಳಿಕೆ: ಶಿಸ್ತುಬದ್ಧ ಉಪಕ್ರಮವು ವಿಷಯದ ಕಲಿಕೆಯ ಸಮಯವನ್ನು ಬಹಳಷ್ಟು ಉಳಿಸುತ್ತದೆ.
- ಪರಿಕಲ್ಪನಾತ್ಮಕವಾಗಿ ಅರಿತುಕೊಳ್ಳುವುದು: ಶಿಸ್ತುಬದ್ಧ ಉಪಕ್ರಮವು ವಿಜ್ಞಾನದ ಪಠ್ಯಕ್ರಮವನ್ನು ಸಂಯೋಜಿಸಿ, ಪರಿಕಲ್ಪನಾತ್ಮಕವಾಗಿ ವಿಷಯವನ್ನು ಅರಿತುಕೊಳ್ಳಲು ಅವಕಾಶ ಒದಗಿಸುತ್ತದೆ.
- ಸಿದ್ಧಾಂತಗಳನ್ನು ಬೆಳೆಸುವುದು: ಶಿಸ್ತುಬದ್ಧ ಉಪಕ್ರಮವು ಒಂದು ವಿಷಯ/ಶಿಸ್ತಿನ ಬಗ್ಗೆ ಸಿದ್ಧಾಂತಗಳನ್ನು ಬೆಳೆಸಲು ಸಹಾಯ ಮಾಡುತ್ತದೆ.
- ಉನ್ನತ ಮಟ್ಟದ ಚಿಂತನೆ: ಶಿಸ್ತುಬದ್ಧ ಉಪಕ್ರಮದಲ್ಲಿ ವಿಷಯವು ಸಿದ್ಧಾಂತಗಳನ್ನು ಸಂಗ್ರಹಿಸುವ ಉಗ್ರಾಣ. ಪರಿಕಲ್ಪನೆ, ಸಾಮಾಜೀಕರಣ ಮುಂತಾದವುಗಳಿಂದ ಉನ್ನತ ಮಟ್ಟದ ಚಿಂತನೆಯದಾಗಿರುತ್ತದೆ.

**ಮಿತಿಗಳು**

- ಕ್ರಿಯಾಶೀಲತೆಗೆ ಕನಿಷ್ಠ ಅವಕಾಶ: ಶಿಸ್ತುಬದ್ಧ ವಿಧಾನವು ವಿದ್ಯಾರ್ಥಿಗಳ ಕ್ರಿಯಾಶೀಲತೆಗೆ ಹೆಚ್ಚಿನ ಅವಕಾಶ ನೀಡುವುದಿಲ್ಲ.
- ಶಿಕ್ಷಣವನ್ನು ಮೊಟಕುಗೊಳಿಸುವುದು.: ನಿರ್ದಿಷ್ಟ ವಿಷಯದ/ಶಿಸ್ತಿನ ಆಸಕ್ತಿಯ ಕೊರತೆಯಿಂದ ಶಿಕ್ಷಣವನ್ನು ಮೊಟಕುಗೊಳಿಸುವ ಸಂದರ್ಭ ಹೆಚ್ಚಾಗುತ್ತದೆ.
- ಅನುಭವಿ ಶಿಕ್ಷಕರ ಅವಶ್ಯಕತೆ: ಶಿಸ್ತುಬದ್ಧ ವಿಧಾನದಲ್ಲಿ ಉನ್ನತ ಮಟ್ಟದ ಅನುಭವಿ ಶಿಕ್ಷಕರ ಅವಶ್ಯಕತೆಯಿದೆ.
- ಸಾಮಾಜೀಕರಣಕ್ಕೆ ಮತ್ತು ಕೌಶಲ್ಯಕ್ಕೆ ಕಡಿಮೆ ಅವಕಾಶ: ಸಾಮಾಜೀಕರಣಕ್ಕೆ ಮತ್ತು ಕೌಶಲಗಳ ಬೆಳವಣಿಗೆಗೆ ಇಲ್ಲಿ ಅವಕಾಶಗಳು ಕಡಿಮೆ.

## (b) ಸಮನ್ವಯ ಉಪಕ್ರಮ (Integrated Approach)

"ಸಾಂಪ್ರದಾಯಿಕ ವಿಷಯ ತಡೆಗಳ ಕಟ್ಟುಪಾಡುಗಳಿಲ್ಲದೆ, ಸಮನ್ವಯ ವಿಧಾನವು ಕಲಿಯುವವನಿಗೆ ಆಯ್ಕೆ ಮಾಡಿಕೊಂಡ ವಿಷಯವನ್ನು ಕುರಿತಂತೆ ಹೊಸ ಶೋಧನೆಗೆ, ವಿಷಯ ಸಂಗ್ರಹಣೆಗೆ, ಪ್ರಕ್ರಿಯೆಗೆ, ಉತ್ತಮೀಕರಣಕ್ಕೆ ತೆರೆದುಕೊಳ್ಳಲು, ಅವಕಾಶಮಾಡಿಕೊಡುತ್ತದೆ." ಪಠ್ಯಕ್ರಮದ ವಿವಿಧ ಕ್ಷೇತ್ರಗಳ ನಡುವಿನ ಅಂತರ್ ಸಂಬಂಧಗಳನ್ನು ಕಾಣಲು ಇದು ಅವಕಾಶಮಾಡಿಕೊಡುತ್ತದೆ. ಭಿನ್ನ ಪಠ್ಯಕ್ರಮ ಕ್ಷೇತ್ರಗಳ ಕಡೆಗೆ ಗಮನಹರಿಸುವುದರ ಬದಲಿಗೆ, ಸಮನ್ವಯ ಉಪಕ್ರಮವು ನಿರ್ದಿಷ್ಟ ತರಗತಿಯ ಮಕ್ಕಳಿಗೆ ಸೂಕ್ತವಾದ ಕೌಶಲಗಳನ್ನು ಬೆಳೆಸುವುದರ ಕಡೆಗೆ ಗಮನಕೊಡುತ್ತದೆ.

**ಉದಾಹರಣೆಗೆ :** ಪ್ರಾಥಮಿಕ ಶಾಲಾ ಹಂತದಲ್ಲಿನ ಪಠ್ಯಕ್ರಮ ಅಂದರೆ, 'ಸಾಮಾನ್ಯ ವಿಜ್ಞಾನ' ಪಠ್ಯಕ್ರಮವು ಸಮನ್ವಯ ಉಪಕ್ರಮಕ್ಕೆ ಉದಾಹರಣೆ.

ಕೆಳಗಿನ ರೀತಿಗಳಲ್ಲಿ ಸಮನ್ವಯವನ್ನು ಸಾಧಿಸಬಹುದು.

- ಅಡ್ಡಲಾದ ಜ್ಞಾನಶಿಸ್ತಿನ ಉಪಕ್ರಮ: ಈ ಉಪಕ್ರಮದಲ್ಲಿ ಒಂದು ನಿರ್ದಿಷ್ಟ ಜ್ಞಾನಶಿಸ್ತಿಗೆ ಸಂಬಂಧಿಸಿದ ಒಂದು ವಿಚಾರವನ್ನು ಮತ್ತೊಂದು ಜ್ಞಾನಶಿಸ್ತಿನ ದೃಷ್ಟಿಯಿಂದ ಗಮನಿಸಲಾಗುತ್ತದೆ.

- ಬಹು ಶಿಸ್ತೀಯ ಉಪಕ್ರಮ: ಈ ಉಪಕ್ರಮದಲ್ಲಿ ಒಂದು ನಿರ್ದಿಷ್ಟ ಜ್ಞಾನಶಿಸ್ತಿಗೆ ಸಂಬಂಧಿಸಿದ ಒಂದು ವಿಚಾರವನ್ನು, ವ್ಯವಸ್ಥಿತವಾಗಿ ವಿವಿಧ ಜ್ಞಾನಶಿಸ್ತುಗಳನ್ನು ಸಮನ್ವಯಿಸುವ ಪ್ರಯತ್ನಗಳಿಲ್ಲದೆ, ವಿಭಿನ್ನ ದೃಷ್ಟಿಕೋನಗಳಿಂದ ಪರೀಕ್ಷಿಸಲಾಗುವುದು.
- ಅಂತರ್ ಶಿಸ್ತೀಯ ವಿಧಾನ: ಈ ವಿಧಾನದಲ್ಲಿ ಬಹು ದೃಷ್ಟಿಕೋನಗಳ ಹಿನ್ನೆಲೆಯಿಂದ ಪರೀಕ್ಷಿಸುವುದರ ಮೂಲಕವಾಗಿ ಕ್ರಮಬದ್ಧವಾಗಿ, ಪರ್ಯಾಯ ದೃಷ್ಟಿಕೋನಗಳನ್ನು ಸಂಯೋಜಿಸಲು ಪ್ರಯತ್ನಿಸುವುದರೊಂದಿಗೆ ಸುಸಂಬದ್ಧವಾದ ಚೌಕಟ್ಟಿನೊಳಗೆ ಅವುಗಳನ್ನು ಇರಿಸಿ ವಿಶ್ಲೇಷಣೆ ಮಾಡಲಾಗುತ್ತದೆ.

ಸಮನ್ವಯ ಪಠ್ಯಕ್ರಮ ಉಪಕ್ರಮವು ವಿದ್ಯಾರ್ಥಿಗಳಲ್ಲಿ ಆಯ್ಕೆ ಮಾಡಿಕೊಂಡ ವಿಷಯಗಳ ಜೊತೆಗೆ ಇತರ ವಿಷಯಗಳ ಬಗ್ಗೆಯೂ ಹೆಚ್ಚಿನ ಜಾಗೃತಿಯನ್ನು ಮೂಡಿಸುವಲ್ಲಿ ಸಫಲವಾಗುತದೆ. ಕಲಿಕೆಗೆ ಬೇಕಾದ ಪರಿಸರ, ಶೈಕ್ಷಣಿಕ ಹಾಗೂ ಸಾಮಾಜಿಕ ಅಗತ್ಯಗಳ ಪೂರೈಕೆ, ಜ್ಞಾನಶಿಸ್ತುಗಳ ನಡುವಿನ ಎಲ್ಲೆಗಳಿಗೆ ಸಂಬಂಧಿಸಿದ ಸಮಸ್ಯೆಗಳ ನಿವಾರಣೆ, ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವಿನ ಸಂಬಂಧವನ್ನು ಗಾಢವಾಗಿಸುವುದು ಮುಂತಾದವು ಇದರಿಂದ ಸಾಧ್ಯವಾಗುತ್ತದೆ. ಸಮನ್ವಯ ಪಠ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ತಮ್ಮ ಬಗ್ಗೆ ಮತ್ತು ಶಾಲೆಯ ಬಗ್ಗೆ ಇತ್ಯಾತ್ಮಕವಾದ ವರ್ತನೆಯನ್ನು ಹೊಂದಿರುತ್ತಾರೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಅದೇ ರೀತಿಯಲ್ಲಿ ಶಿಕ್ಷಕರಿಗೂ ಜತೆಯಾಗಿ ಕೆಲಸ ಮಾಡುವ ಅವಕಾಶವು ದೊರಕುವಂತಾಗುತ್ತದೆ.

## ಸಮನ್ವಯ ಉಪಕ್ರಮದ ಗುಣಲಕ್ಷಣಗಳು

- ವಿಶಾಲ ವಿಷಯಗಳನ್ನೊಳಗೊಂಡ ಜ್ಞಾನ: ಸಮನ್ವಯ ಉಪಕ್ರಮವು ವಿಶಾಲ ವಿಷಯಗಳನ್ನೊಳಗೊಂಡ ಜ್ಞಾನವನ್ನು ಪಡೆದುಕೊಳ್ಳುವ ಅವಕಾಶವನ್ನು ಒದಗಿಸುತ್ತದೆ.
- ಶಿಶು ಕೇಂದ್ರಿತ ಬೋಧನೆ: ಸಂಯೋಜಿತ ವಿಧಾನವು ಶಿಶು ಕೇಂದ್ರಿತ ಬೋಧನೆಯನ್ನು ಉತ್ತೇಜಿಸುತ್ತದೆ.
- ವಿಷಯದ ಜೊತೆಗೆ ಕೌಶಲ್ಯಗಳ ಬೆಳವಣಿಗೆ: ಸಮನ್ವಯ ವಿಧಾನದ ಪಠ್ಯಕ್ರಮದ ಜೋಡಣೆಯು ವಿಷಯದ ಜತೆಗೆ ಕೌಶಲ್ಯಗಳನ್ನು ಬೆಳೆಸುತ್ತದೆ.
- ಶಿಕ್ಷಕರು ಮಧ್ಯವರ್ತಿಗಳಾಗಿ: ಶಿಕ್ಷಕರ ಪಾತ್ರವು ಇಲ್ಲಿ ಜ್ಞಾನ ಮತ್ತು ಮಗುವಿನ ಮಧ್ಯೆ ಮಧ್ಯವರ್ತಿಯಂತಿರುತ್ತದೆ.
- ಆಧುನಿಕ ವಿಧಾನಗಳನ್ನು ಬಳಸುವುದು: ಸಮನ್ವಯ ಉಪಕ್ರಮವು ಬೋಧನೆ ಮತ್ತು ಕಲಿಕೆಯಲ್ಲಿ ಆಧುನಿಕ ವಿಧಾನಗಳನ್ನು ಅನ್ವಯಿಸುತ್ತದೆ.
- ನಮ್ಯತೆ – ಜ್ಞಾನಶಿಸ್ತುಗಳಲ್ಲಿ ಯಾವುದೂ ಕಠಿಣವಲ್ಲ. ಸಮನ್ವಯ ಉಪಕ್ರಮವು ಎಲ್ಲ ಜ್ಞಾನಶಿಸ್ತುಗಳಿಗೂ ಹೊಂದಿಕೊಳ್ಳುತ್ತದೆ.
- ಭವಿಷ್ಯದ ಪ್ರಜೆಗಳನ್ನು ತಯಾರುಮಾಡುತ್ತದೆ: ಸಮನ್ವಯ ಉಪಕ್ರಮದ ಪ್ರಮುಖ ಉದ್ದೇಶ ಭವಿಷ್ಯದ ಪ್ರಜೆಗಳನ್ನು ತಯಾರುಮಾಡುವುದು.
- ತೆರೆದುಕೊಳ್ಳುವಿಕೆ: ಈ ವಿಧಾನವು ನೂತನ ಆಲೋಚನೆಗೆ ಮತ್ತು ವಿಧಾನಗಳಿಗೆ ತೆರೆದುಕೊಳ್ಳುತ್ತದೆ.
- ಬಹು ಕಲಿಕಾ ಪರಿಸರಗಳು: ಈ ಉಪಕ್ರಮವು ಕಲಿಕೆಗೆ ತರಗತಿಗಳು, ಪ್ರಯೋಗಾಲಯಗಳು, ಹೊರಾಂಗಣಗಳು, ಗಣಕಯಂತ್ರಗಳು, ಅಂತರ್ಜಾಲ ಮುಂತಾದ ವಿವಿಧ ಪರಿಸರಗಳನ್ನು ಬಯಸುತ್ತದೆ.

### ಸಮನ್ವಯ ಉಪಕ್ರಮದ ಗುಣಗಳು

- ಈ ಮೂಲಕ ಪರಿಕಲ್ಪನೆಗಳನ್ನು ವಿವರವಾಗಿ ಅರ್ಥಮಾಡಿಕೊಳ್ಳುವ ಅವಕಾಶವಿದೆ.
- ಆಯ್ಕೆ ಆಧಾರಿತ ಜ್ಞಾನ ಶಿಸ್ತು/ ವಿಷಯ: ಸಂಯೋಜಿತ ವಿಧಾನದಲ್ಲಿ ವಿದ್ಯಾರ್ಥಿಗಳಿಗೆ ಅವರವರಿಗೆ ಇಷ್ಟವಾದ ಆಧಾರಿತ ಜ್ಞಾನ ಶಿಸ್ತು/ ವಿಷಯಗಳ ಆಯ್ಕೆಮಾಡಿಕೊಳ್ಳಲು ಸಾಧ್ಯವಾಗುತ್ತದೆ.
- ಸೃಜನಶೀಲತೆ: ಈ ವಿಧಾನವು ಕಲಿಯುವವರಲ್ಲಿ ಸೃಜನಶೀಲತೆಯನ್ನು ಬೆಳೆಸುತ್ತದೆ.
- ಆಧುನಿಕ ವಿಧಾನಗಳನ್ನು ಬಳಸಿಕೊಳ್ಳುವುದು: ಈ ವಿಧಾನವು ಆಧುನಿಕ ವಿಧಾನಗಳನ್ನು ಬಳಸಿಕೊಳ್ಳುತ್ತದೆ. ಈ ವಿಧಾನವು ಆಧುನಿಕ ವಿಧಾನಗಳಾದ, ಸಹಕಾರಿ ಕಲಿಕೆ, ಒಟ್ಟು ಕಲಿಕೆ ಮುಂತಾದವುಗಳನ್ನು ಬೋಧನೆಯಲ್ಲಿ ಬಳಸುತ್ತದೆ.
- ಸ್ವ ಪರಿಕಲ್ಪನೆ ಮತ್ತು ಸಾಮಾಜೀಕರಣವನ್ನು ಬೆಳೆಸಿಕೊಳ್ಳುವುದು: ಸಂಯೋಜಿತ ವಿಧಾನವು ಸ್ವ ಪರಿಕಲ್ಪನೆ ಮತ್ತು ಸಾಮಾಜೀಕರಣವನ್ನು ಬೆಳೆಸಿಕೊಳ್ಳಲು ಸಹಯಕವಾಗುತ್ತದೆ.
- ವಾಸ್ತವಿಕ ಅನ್ವಯ: ಈ ಉಪಕ್ರಮದಲ್ಲಿ ವಾಸ್ತವಿಕ ಅನ್ವಯಗಳಿಗೆ ಅವಕಾಶವಿದೆ.

### ಸಮನ್ವಯ ಉಪಕ್ರಮದ ಮಿತಿಗಳು

- **ಸಮಯದ ಬಳಕೆ:** ಸಮನ್ವಯ ಉಪಕ್ರಮದಲ್ಲಿ ಸಮಯವನ್ನು ಸಮರ್ಪಕವಾಗಿ ಬಳಸುವುದೇ ಪ್ರಮುಖ ವಿಷಯವಾಗಿದೆ. ಇದರಲ್ಲಿ ವಿಶ್ಲೇಷಣೆಯನ್ನು ವಿವಿಧ ಶಿಸ್ತುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಲಾಗುತ್ತದೆ.
- **ಉತ್ತಮ ಸಜ್ಜೀಕರಣ ಮತ್ತು ಅನುಭವಿ ಶಿಕ್ಷಕ:** ಸಮನ್ವಯ ಉಪಕ್ರಮದಲ್ಲಿ ಉತ್ತಮ ಸಜ್ಜೀಕರಣ ಮತ್ತು ಅನುಭವಿ ಶಿಕ್ಷಕರಿದ್ದು ಆಧುನಿಕ ವಿಧಾನದಲ್ಲಿ ಶಿಕ್ಷಣ ನೀಡಲು ಯಾರು ಸಮರ್ಥರು ಎಂಬುದು ಗಣನೆಗೆ ಬರುತ್ತದೆ.
- **ಸಂದಿಗ್ಧತೆಯನ್ನು ನಿರ್ಮಾಣ:** ಈ ಉಪಕ್ರಮವನ್ನು ಜಾಗ್ರತೆಯಿಂದ ಬಳಸದಿದ್ದರೆ ಮಗು ವಿವಿಧ ಶಿಸ್ತುಗಳ ಬಗ್ಗೆ ಸಂದಿಗ್ಧತೆಗೆ ಒಳಗಾಗಬಹುದು.
- **ವಿವಿಧ ಜ್ಞಾನ ಶಿಸ್ತುಗಳ ಸರಿಯಾದ ಆಯ್ಕೆ ಮತ್ತು ಸಂಯೋಜನೆ:** ಸಂಯೋಜಿತ ವಿಧಾನವು ಪರಿಣತಿ ಮತ್ತು ವಿಷಯವನ್ನು ಆಯ್ಕೆ ಮಾಡುವ ಸಾಮರ್ಥ್ಯವನ್ನು ಬಯಸುತ್ತದೆ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –3

ಪಠ್ಯಕ್ರಮದಲ್ಲಿ ವಿಜ್ಞಾನ ಶಿಸ್ತಿನ ವಿಷಯಗಳನ್ನು ಸಂಘಟಿಸುವ ಉಪಕ್ರಮಗಳನ್ನು ವಿವರಿಸಿ.

## 2.4.4. ಸಾರಾಂಶಿಸೋಣ

- ನೈಸರ್ಗಿಕ ವಿಜ್ಞಾನವು ನಮ್ಮ ಸುತ್ತಲೂ ಇರುವ ವಿಶ್ವ ಮತ್ತು ಜಗತ್ತು ಎಂದರೇನು ಎನ್ನುವುದನ್ನು ಶೋಧಿಸುತ್ತದೆ. ನಮ್ಮ ಸುತ್ತಮುತ್ತಲಿನ ಪ್ರಪಂಚವನ್ನು ಅರಿಯುವ ಅದು ಹೇಗೆ ಕಾರ್ಯವೆಸಗುತ್ತದೆ ಎಂದು ತಿಳಿದುಕೊಳ್ಳುವದರಲ್ಲಿಯೇ ಲೀನವಾಗಿರುವ ಶಿಸ್ತು ಇದು.
- ನೈಸರ್ಗಿಕ ವಿಜ್ಞಾನವನ್ನು ಮುಖ್ಯವಾಗಿ ಎರಡು ತೆರನಾಗಿ ವಿಭಜಿಸಬಹುದು; ಜೀವ ವಿಜ್ಞಾನ ಮತ್ತು ಭೌತಿಕ ವಿಜ್ಞಾನ.
- ಆರೋಗ್ಯ ರಕ್ಷಣೆ ಮತ್ತು ಇತರ ಮಹತ್ವದ ಅಂಶಗಳಿಗೆ ಸಂಬಂಧಿಸಿದಂತೆ ವಿಜ್ಞಾನದ ಅಧ್ಯಯನ ಇಂದು ಪ್ರಮುಖ ಅಗತ್ಯವಾಗಿದೆ.
- ವಿಜ್ಞಾನವನ್ನು ಬೋಧಿಸುವಲ್ಲಿ ಹಲವಾರು ಸವಾಲುಗಳು ಎದುರಾಗುತ್ತವೆ.

- ಶಾಲೆಯ ವಿವಿಧ ಹಂತಗಳಲ್ಲಿ ವಿಜ್ಞಾನ ಬೋಧನೆಯ ಉದ್ದೇಶಗಳು ಭಿನ್ನವಾಗಿರುತ್ತವೆ.
- ವಿಜ್ಞಾನದ ವಿಷಯಗಳನ್ನು ಪಠ್ಯಕ್ರಮದಲ್ಲಿ ಸಂಘಟಿಸುವಾಗ ಶಿಸ್ತುಬದ್ಧ ಉಪಕ್ರಮ ಮತ್ತು ಸಮನ್ವಯ ಉಪಕ್ರಮ ಎಂಬ ಎರಡು ಉಪಕ್ರಮಗಳನ್ನು ಬಳಸಬಹುದು. ಇದರಲ್ಲಿ ಸಮನ್ವಯ ಉಪಕ್ರಮಕ್ಕೆ ಶಾಲಾ ಹಂತದಲ್ಲಿ ಹೆಚ್ಚಿನ ಉಪಯೋಗಗಳಿವೆ.

## 2.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

1. ಜೀವ ವಿಜ್ಞಾನ ಮತ್ತು ಭೌತಿಕ ವಿಜ್ಞಾನ.
2. ಜೀವಶಾಸ್ತ್ರ
3. ಭೌತಿಕ ವಿಜ್ಞಾನ
4. ರಸಾಯನ ಶಾಸ್ತ್ರ

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2

1,2,3,4,6,

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –3

ಸ್ವ ಕಲಿಕಾ ಸಾಮಗ್ರಿ ಭಾಗ 2.4.3 ಗಮನಿಸಿ.

## 2.5.6. ಘಟಕಾಂತ್ಯ ಅಭ್ಯಾಸಗಳು

1. ನೈಸರ್ಗಿಕ ವಿಜ್ಞಾನದ ಶಾಖೆಗಳನ್ನು ಮತ್ತು ಅದರ ಪ್ರಾಮುಖ್ಯತೆಯನ್ನು ವಿವರಿಸಿರಿ.
2. ನೈಸರ್ಗಿಕ ವಿಜ್ಞಾನದ ವಿಷಯಗಳನ್ನು ಪಠ್ಯಕ್ರಮದಲ್ಲಿ ಸಂಘಟಿಸಲು ಪ್ರಮುಖ ಉಪಕ್ರಮಗಳನ್ನು ವಿವರಿಸಿರಿ.

## 2.4.7. ಪರಾಮರ್ಶನ ಸೂಚಿ

1. https://en.wikipedia.org/wiki/Natural_science
2. https://en.wikipedia.org/wiki/Outline_of_natural_science
3. https://www.merriam-webster.com/dictionary/natural%20science
4. https://www.topuniversities.com/courses/natural-sciences/guide
5. https://www.topuniversities.com/university-rankings/university-subject-rankings/2019/natural-sciences
6. https://www.quora.com/What-is-natural-science
7. https://www.basicknowledge101.com/pdf/km/natural%20scienceOutline.pdf
8. https://www.basicknowledge101.com/pdf/km/natural%20scienceOutline.pdf

*************

# ಬ್ಲಾಕ್ 2 : ಜ್ಞಾನಶಿಸ್ತುಗಳ ವರ್ಗೀಕರಣ ಮತ್ತು ಜ್ಞಾನಶಿಸ್ತುವ್ಯಾಪಿ ಬೋಧನೆ

## ಘಟಕ 5 : ಗಣಿತ ಮತ್ತು ಪಠ್ಯಕ್ರಮ

**ಘಟಕದ ರಚನೆ**


2.5.1. ಕಲಿಕೆಯ ಉದ್ದೇಶಗಳು

2.5.2. ಪೀಠಿಕೆ

2.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.5.3.1. ಗಣಿತದ ಅವಶ್ಯಕತೆಗಳು ಮತ್ತು ಪ್ರಾಮುಖ್ಯತೆಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

2.5.3.2. ಗಣಿತ ಮತ್ತು ಶಾಲಾ ಪಠ್ಯಕ್ರಮ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

2.5.4. ಸಾರಾಂಶಿಸೋಣ

2.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1–2

2.5.6. ಘಟಕಾಂತ್ಯ ಅಭ್ಯಾಸಗಳು

2.5.7. ಪರಾಮರ್ಶನ ಸೂಚಿ


## 2.1.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಗಣಿತದ ಪಾಮುಖ್ಯತೆ ಮತ್ತು ಶಾಲಾ ಪಠ್ಯಗಳಲ್ಲಿ ಅಗತ್ಯತೆಗಳ ಬಗ್ಗೆ ವಿವರಿಸುವರು;
- ಗಣಿತದ ಮೌಲ್ಯ ಹಾಗೂ ಗಣಿತದ ಪಠ್ಯಕ್ರಮಗಳ ಬಗ್ಗೆ ಸಮರ್ಥನೆ ನೀಡುವರು;
- ಸಾಮಾಜಿಕ, ಗಣಿತಾತ್ಮಕ, ಮತ್ತು ಪ್ರಾಯೋಗಿಕವಾಗಿ ಗಣಿತ ಪಠ್ಯಕ್ರಮವನ್ನು ವಿವರಿಸುವರು;
- ಶಾಲಾ ಪಠ್ಯದಲ್ಲಿ ಗಣಿತದ ಪಠ್ಯಕ್ರಮದ ಸ್ಥಾನವೇನು ಎಂಬುದನ್ನು ಗುರುತಿಸುವರು;
- ಶಾಲಾ ಕಲಿಕೆಯ ವಿವಿಧ ಹಂತಗಳಲ್ಲಿ ಗಣಿತವನ್ನು ಬೋಧಿಸುವ ಗುರಿ ಹಾಗೂ ಉದ್ದೇಶಗಳನ್ನು ಗುರುತಿಸುವರು;
- ಶಾಲಾ ಗಣಿತ ಪಠ್ಯಕ್ರಮದ ಗಣಿತದ ಬೆಳವಣಿಗೆಯ ಮೂಲತತ್ವಗಳನ್ನು ವ್ಯಕ್ತಪಡಿಸುವರು; ಮತ್ತು
- ಶಾಲಾ ಗಣಿತ ಪಠ್ಯಕ್ರಮದ ಇತ್ತೀಚೆಗಿನ ಪ್ರವೃತ್ತಿಗಳ ಬೆಳವಣಿಗೆಗಳನ್ನು ವಿವರಿಸಬಲ್ಲರು.

## 2.5.2. ಪೀಠಿಕೆ

ಶಾಲಾ ಪಠ್ಯಕ್ರಮಗಳಲ್ಲಿ ಗಣಿತವನ್ನು ಒಂದು ವಿಷಯವಾಗಿ ಅಳವಡಿಸಿಕೊಳ್ಳುವುದರ ಪ್ರಾಮುಖ್ಯತೆ ಮತ್ತು ಅಗತ್ಯದ ಬಗ್ಗೆ ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಹಲವಾರು ಶತಮಾನಗಳಿಂದಲೇ ಮಾನವನ ಬುದ್ಧಿಮತ್ತೆಯ ಕೇಂದ್ರಗಳಲ್ಲೊಂದಾಗಿ ಗಣಿತವನ್ನು ಪರಿಗಣಿಸಲಾಗಿದೆ. ಆರಂಭದಿಂದಲೇ ಗಣಿತವು ಒಂದು ಜೀವಂತ ಮತ್ತು ಬೆಳೆಯುತ್ತಿರುವ ಬೌದ್ಧಿಕ ಅನ್ವೇಷಣೆಯಾಗಿ ಕಂಡುಬಂದಿದೆ. ಇದರ ಬೇರುಗಳನ್ನು ದೈನಂದಿನ ಚಟುವಟಿಕೆಗಳಲ್ಲೂ ಮುಂದುವರಿದ ತಾಂತ್ರಿಕ ಬೆಳವಣಿಗೆಗಳಲ್ಲೂ ಕಾಣಬಹುದು. ಇದು ಸುಂದರವಾಗಿ ಕಾಣುವ ಸಂಕೀರ್ಣ ಹಾಗೂ ಸೂಕ್ಷ್ಮ ರಚನೆಗಳನ್ನು ಒಳಗೊಂಡಿದೆ. ಇದು ಮನಸ್ಸನ್ನು ಹೊಸ ರೀತಿಯ ಕಲ್ಪನೆಯೆಡೆಗೆ ತೆರೆದು, ಸವಾಲುಗಳಿಂದ ಕೂಡಿದ ಆಲೋಚನೆಗಳನ್ನು ಬೆಳೆಸಿಕೊಳ್ಳಲು ಅವಕಾಶ ಒದಗಿಸಿಕೊಡುತ್ತದೆ. ಗಣಿತದ ಯಾವುದಾದರೂ ಜಟಿಲವಾದ ಸಮಸ್ಯೆಯೊಂದನ್ನು ಬಗೆಹರಿಸುವಂತಹ ಸಂದರ್ಭದಲ್ಲಿ ಒಂದು ರೀತಿಯ ಮಾನಸಿಕ ಸಂತೋಷ ಪ್ರಾಪ್ತವಾಗುತ್ತದೆ. ಅದೇ ವೇಳೆಯಲ್ಲಿ ಗಣಿತವು ಎಲ್ಲಾ ವಿಜ್ಞಾನಗಳಿಗಿಂತಲೂ ಹೆಸರಾಂತ ಕಾಲ್ಪನಿಕ ವಿಜ್ಞಾನವಾಗಿದೆ. ಗಣಿತವನ್ನು 'ಸರ್ವ ವಿಜ್ಞಾನಗಳ ತಾಯಿ' ಎಂದು ಪರಿಗಣಿಸಲಾಗಿದೆ. ಅದು ಮಾನವರ ಬುದ್ಧಿಮತ್ತೆಯ ಮೂಲಕವಾಗಿ, ವಸ್ತುಗಳ ನಡುವೆ ಸಂಬಂಧಗಳನ್ನು ಜೋಡಿಸಿ ಅದು ಪ್ರತ್ಯಕ್ಷಗೊಳ್ಳುವಂತೆ ಮಾಡುತ್ತದೆ.

'ಗಣಿತ' ಎನ್ನುವುದನ್ನು ಎರಡು ವಿವಿಧ ಮತ್ತು ವಿಶಿಷ್ಟ ರೀತಿಯಲ್ಲಿ ಪ್ರಯೋಗಿಸಲಾಗುತ್ತದೆ. ಒಂದನೆಯದಾಗಿ; ಪ್ರಮಾಣ, ಸ್ಥಳ, ಆದೇಶ ಮುಂತಾದವುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸುವ ವಿಧಾನವಾಗಿ ಬಳಸಲ್ಪಡುತ್ತದೆ. ಎರಡನೆಯದಾಗಿ; ಈ ವೇಳೆಗಾಗಲೇ ಕಂಡುಕೊಂಡಂತಹ ಸತ್ಯಗಳನ್ನು ಸಿದ್ಧಾಂತಗಳ ಸಾಮಾನ್ಯೀಕರಣಗಳ ಮೂಲಕ ಕಂಡುಕೊಳ್ಳಲು ಬಳಸಲ್ಪಡುತ್ತದೆ. ಹೆಚ್ಚಿನ ಅಧ್ಯಾಪಕರು ಇದನ್ನು ವಿಜ್ಞಾನ, ವಾಣಿಜ್ಯ ಮತ್ತು ಉದ್ಯಮಗಳ ಒಂದು ಉಪಕರಣವೆಂದು ಭಾವಿಸಿದ್ದಾರೆಯೇ ವಿನಃ, ಅದರ ನಿಜವಾದ ಪ್ರಕೃತಿಯು ಒಂದೇ ತರ್ಕದ ಮೂಲಕವಾಗಿ ಆಲೋಚಿಸಿ, ಹಲವು ಶಾಖೆಗಳನ್ನು ಒಳಗೊಂಡು ಹಲವು ವಿಷಯಗಳಿಗೆ ಜೋಡಿಸಲ್ಪಟ್ಟು, ರಚನೆಯನ್ನು ಸಾಬೀತುಗೊಳಿಸುವುದರಲ್ಲಿ ಬಳಕೆಯಾಗುತ್ತದೆ ಎಂಬುದನ್ನು ಇನ್ನೂ ಕಂಡುಕೊಳ್ಳಲು ಸಮರ್ಥರಾಗಿಲ್ಲ. ಶಿಕ್ಷಕರ ಮನಸ್ಸಿನಲ್ಲಿ ಸಾಮಾನ್ಯವಾಗಿ ಏಳುವಂತಹ ಹಲವಾರು ಪ್ರಶ್ನೆಗಳಿಗೆ ಪರಿಹಾರಗಳನ್ನು ಕಾಣಬೇಕಿದೆ. ಗಣಿತವನ್ನು ಯಾಕಾಗಿ ಬೋಧಿಸಬೇಕು? ಗಣಿತವನ್ನು ಬೋಧಿಸುವ ಮತ್ತು ಗಣಿತದ ಬಗ್ಗೆ ಆಲೋಚಿಸುವ ನೂತನ ವಿಧಾನಗಳು ಯಾವುವು? ಈ ಘಟಕವು, ಶಾಲೆಯಲ್ಲಿ ಗಣಿತವನ್ನು ಒಂದು ವಿಷಯವಾಗಿ ಶಿಕ್ಷಕರು ಯಾಕೆ ಬೋಧಿಸಬೇಕು? ಮತ್ತು ಅದರ ಅಗತ್ಯವೇನು? ಎಂಬುದನ್ನು ತಿಳಿಸುತ್ತದೆ. ಈ ಕುರಿತ ಅಂಶಗಳನ್ನು ಈ ಘಟಕದಲ್ಲಿ ವಿಚಾರಮಾಡೋಣ.

## 2.5.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 2.5.3.1. ಶಾಲಾ ಪಠ್ಯಕ್ರಮದಲ್ಲಿ ಗಣಿತದ ಅಗತ್ಯ ಮತ್ತು ಪ್ರಾಮುಖ್ಯತೆ

ನಾವು ಗಣಿತವನ್ನು ಯಾಕೆ ಕಲಿತುಕೊಳ್ಳಬೇಕು? ಯಾಕಾಗಿ ಅಷ್ಟೊಂದು ಫಾರ್ಮುಲಾಗಳನ್ನು, ಸಿದ್ಧಾಂತಗಳನ್ನು, ನೆನಪಿನಲ್ಲಿಟ್ಟುಕೊಳ್ಳಬೇಕು? ನಮ್ಮ ಮುಂದಿನ ಜೀವನಕ್ಕೆ ಈ ಮಾಹಿತಿಗಳಿಂದ ಆಗುವ ಪ್ರಯೋಜನಗಳೇನು? ನನ್ನ ಜೀವನದಲ್ಲಿ ಇದರ ಪ್ರಾಮುಖ್ಯತೆಯೇನು? ಗಣಿತದ ಬಗ್ಗೆ ಆಸಕ್ತಿ ಇಲ್ಲದವರು ಸಾಮಾನ್ಯವಾಗಿ ಕೇಳುವ ಪ್ರಶ್ನೆಗಳು ಇವು. ಶಿಕ್ಷಕರಾದ ನಮಗೆ ವಿದ್ಯಾರ್ಥಿಗಳಲ್ಲಿ ಗಣಿತದ ಬಗ್ಗೆ ಆಸಕ್ತಿ ಮೂಡಿಸಲು ಹೇಗೆ ಸಾಧ್ಯ?

'ನಾವು ಯಾಕೆ ಗಣಿತವನ್ನು ಕಲಿಯಬೇಕು' ಎನ್ನುವುದು ನಿಜವಾದ ಒಂದು ಪ್ರಶ್ನೆ. ಶಿಕ್ಷಕರಾಗಿ ನಾವು ಗಣಿತವನ್ನು ತಿಳಿದುಕೊಳ್ಳುವುದೂ ಅದರ ಪರಿಕಲ್ಪನೆಯ ಪ್ರಾಮುಖ್ಯತೆಯನ್ನು ಅರಿತುಕೊಂಡು ಉಳಿದ ವಿಷಯಗಳ ಜತೆಗೆ ಅದಕ್ಕೆ ವಿಶಿಷ್ಟವಾದ ಸ್ಥಾನವನ್ನು ಕಲ್ಪಿಸಿಕೊಡುವುದೂ ಬಹಳ ಮುಖ್ಯ. ನಮ್ಮ ಪಠ್ಯಕ್ರಮವನ್ನು ರೂಪಿಸುವವರು ಗಣಿತವನ್ನು ಇತರ ವಿಷಯಗಳ ಜತೆಗೆ ಒಂದು ಪ್ರಮುಖ ವಿಷಯವಾಗಿ ಅಧ್ಯಯನಕ್ಕೆ ಇರಿಸಿದ್ದಾರೆ. ಶಾಲೆಯ ಒಟ್ಟು ಪಠ್ಯಕ್ರಮದಲ್ಲಿ ಗಣಿತದ ವಿಶಿಷ್ಟತೆಯೇನು ಎಂಬುದನ್ನು ನಾವು ತಿಳಿಯಬೇಕಿದೆ.

ಈ ಕೆಳಗಿನ ಅಂಶಗಳು ಪಠ್ಯಕ್ರಮದಲ್ಲಿ ಗಣಿತದ ಪ್ರಾಮುಖ್ಯತೆಗಳನ್ನು ಸ್ಪಷ್ಟಪಡಿಸುತ್ತವೆ.

## ಸಾಮಾಜಿಕ ಅಂಶಗಳು

- ನಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ ಹಲವಾರು ಪ್ರಕ್ರಿಯೆಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಸಂಖ್ಯೆಗಳ ಹಾಗೂ ಸಂಖ್ಯೆಗಳ ಮೂಲಕವಾದ ಪಾಂಡಿತ್ಯದ ಅಗತ್ಯವಿದೆ. ವಾರ್ತಾ ಪತ್ರಿಕೆಗಳಲ್ಲಿರುವ ಹಲವಾರು ಸಂಗತಿಗಳನ್ನು ಮನವರಿಕೆ ಮಾಡಿಕೊಳ್ಳಲು ಒಂದಿಷ್ಟು ಗಣಿತದ ಅಂಕೆಸಂಖ್ಯೆಗಳ ಅಗತ್ಯವಿದೆ. ಅವುಗಳಲ್ಲಿ ಕೆಲವು ಶೇಕಡಾ, ರಿಯಾಯಿತಿ, ಲಾಭಾಂಶ, ಸರಕುಪಟ್ಟಿ, ಸಗಟು ಮತ್ತು ಚಿಲ್ಲರೆ, ಲಾಭ ಮತ್ತು ನಷ್ಟ, ತೆರಿಗೆ ಇತ್ಯಾದಿ., ನಾಗರಿಕತೆಯು ಹೆಚ್ಚೆಚ್ಚು ಸಂಕೀರ್ಣಗೊಂಡ ಹಾಗೆ ಹಲವಾರು ಪದಗಳು ಮಾಧ್ಯಮಗಳ ಹಾಗೂ ಗಣಕಯಂತ್ರಗಳ ಮೂಲಕವಾಗಿ ಸೇರ್ಪಡೆಗೊಳ್ಳುತ್ತವೆ.
- ನಮ್ಮ ದೈನಂದಿನ ಜೀವನದಲ್ಲಿ ಗಣಿತದ ಕೂಡು, ಕಳೆ, ಗುಣಿಸು, ಭಾಗಿಸು ಮುಂತಾದ ಕಾರ್ಯಗಳು ನಡೆಯುತ್ತಲೇ ಇರುತ್ತವೆ. ಬಡವ–ಬಲ್ಲಿದ ಎನ್ನದೆ ಎಲ್ಲರೂ ಗಣಿತವನ್ನು ಉಪಯೋಗಿಸಲೇ ಬೇಕಾಗುತ್ತದೆ.
- ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾದರೆ, ಸಾಕಷ್ಟು ಸಾಮರ್ಥ್ಯ ಮತ್ತು ಪರಿಣಾಮಾತ್ಮಕವಾದ ಸಂಬಂಧಗಳನ್ನು ತಿಳಿದಿರಬೇಕಾಗುತ್ತದೆ. ಸಮಸ್ಯೆಗಳನ್ನು ಮನವರಿಕೆ ಮಾಡಿಕೊಳ್ಳಲು, ಅವುಗಳನ್ನು ಸರಿಯಾದ ರೀತಿಯಲ್ಲಿ ರೂಪುಗೊಳಿಸಲು ಮತ್ತು ಅವುಗಳನ್ನು ನಿರ್ದಿಷ್ಟವಾಗಿ ಪರಿಹರಿಸಲು ಕ್ರಮಬದ್ಧವಾದ ಆಲೋಚನೆಗಳು ಬೇಕು.ಇದಕ್ಕೆ ಗಣಿತದ ಜ್ಞಾನವೂ ಬೇಕು.
- ಹಲವು ಸಂಸ್ಥೆಗಳಿಗೆ, ಮತ್ತು ಅವುಗಳ ಆಡಳಿತಕ್ಕೆ ಸಂಬಂಧಿಸಿದ ಸಮಸ್ಯೆಗಳ ನಿವಾರಣೆಗೆ ಒಂದು ಲೆಕ್ಕಾಚಾರ ಕೇಂದ್ರಿತ ನೋಟವು ಅಗತ್ಯ. ಓರ್ವ ಅರ್ಥಶಾಸ್ತ್ರಜ್ಞನ, ವಾಸ್ತುಶಿಲ್ಪಿಯ, ಓರ್ವ ಅಭಿಯಂತರನ, ವಿಜ್ಞಾನಿಯ ಅರಿವಿನೊಂದಿಗೆ ಗಣಿತದ ಅರಿವು ಕೂಡಾ ಅವರವರ ಕೆಲಸವನ್ನು ಸುಗಮಗೊಳಿಸಲು ಸಹಾಯಕವಾಗುತ್ತದೆ.
- ಹಲವಾರು ವೃತ್ತಿಗಳಿಗೆ ಗಣಿತದ ಸಾಮರ್ಥ್ಯದ ಅಗತ್ಯವಿದೆ.
- ಒಂದು ಮಗು ಹಲವಾರು ಕ್ಷೇತ್ರಗಳಲ್ಲಿ ಗಣಿತದ ಪಾತ್ರವೇನು ಎನ್ನುವುದನ್ನು ಗೌರವದಿಂದ ತಿಳಿದುಕೊಳ್ಳಬೇಕು. ಒಂದು ದೇಶದ ಪ್ರಗತಿ ಹಾಗೂ ಸಮೃದ್ಧಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವವು ಹೇಗೆ ಗುರುತಿಸಲ್ಪಟ್ಟಿದೆಯೋ ಅಂತೆಯೇ ಗಣಿತದ ಕೊಡುಗೆಯನ್ನೂ ಅಷ್ಟೇ ಗೌರವದಿಂದ ಕಾಣಬೇಕು.
- ಭೌತಿಕವಾಗಿ ಬೇರೆ ಬೇರೆಯಾದ ಜಗತ್ತಿನ ದೇಶಗಳನ್ನು ಒಂದುಗೂಡಿಸುವಲ್ಲಿ ಗಣಿತವು ಬಹು ಮುಖ್ಯ ಪಾತ್ರವನ್ನು ವಹಿಸಿದೆ.
- ಗಣಿತವು ಮಾನವರಿಗೆ ಪ್ರಕೃತಿಯ ರಹಸ್ಯಗಳನ್ನು ಕಂಡುಹಿಡಿದು ಅರಿವಿನ ಕೊರತೆಯಿಂದ ಒಳಗಾಗುವ ಮೂಢನಂಬಿಕೆಗಳಿಂದ ಹೊರಬರಲು ಸಹಾಯ ಮಾಡಿದೆ.

## ಗಣಿತಾತ್ಮಕ ಅಂಶಗಳು

- ಗಣಿತವು ನಮಗೆ ಒಂದು ಸಂದರ್ಭವನ್ನು ಹೇಗೆ ವಿಶ್ಲೇಷಣೆ ಮಾಡಬಹುದು ಎನ್ನುವುದನ್ನು ಕಲಿಸುತ್ತದೆ. ಒಂದು ತೀರ್ಮಾನಕ್ಕೆ ಹೇಗೆ ಬರಬಹುದು, ಸಂಬಂಧಗಳನ್ನು ಹೇಗೆ ಗ್ರಹಿಸಬಹುದು, ಮನಸ್ಸನ್ನು ಹೇಗೆ ಕೇಂದ್ರೀಕರಿಸಬಹುದು, ನಮ್ಮ ಕಾರ್ಯಾಭ್ಯಾಸಗಳಲ್ಲಿ ನಿರ್ದಿಷ್ಟತೆಯನ್ನೂ ಕ್ರಮಬದ್ಧತೆಯನ್ನೂ ಹೇಗೆ ಅಳವಡಿಸಿಕೊಳ್ಳಬಹುದು, ಎನ್ನುವುದನ್ನು ಕಲಿಸುತ್ತದೆ.

- ಗಣಿತವು ಅಗತ್ಯವಾದ ಗಣನೆಗಳನ್ನು ನಿರ್ದಿಷ್ಟವಾಗಿ ಮತ್ತು ಸಮಂಜಸವಾದ ವೇಗದಲ್ಲಿ ನಡೆಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಮಾತ್ರವಲ್ಲದೆ, ಮಾಪನ ಪ್ರಕ್ರಿಯೆ ಮತ್ತು ಕೌಶಲ್ಯಗಳನ್ನು ಅರ್ಥವಿಸಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಿ ನಿಖರತೆಯನ್ನು ಕಂಡುಕೊಳ್ಳುವಲ್ಲಿ ಸಹಾಯಕವಾಗುತ್ತದೆ.

ಗಣಿತವು ಕೆಳಗೆ ಸೂಚಿಸಿರುವ ಇತರ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ.

- ನಂಬಲರ್ಹ ಅಂದಾಜುಗಳನ್ನು ಸಾಧಾರಣವಾದ ರೀತಿಯಲ್ಲಿ ಸರಿಯಾಗಿ ನೀಡಲು,
- ಫಾರ್ಮುಲಾಗಳನ್ನು ರೂಪಿಸಲು ಮತ್ತು ಬಳಸಲು, ಹೋಲಿಕೆಗಳನ್ನು ಮಾಡಲು ಬೇಕಾದ ಕ್ರಮಗಳನ್ನು ಮತ್ತು ವಿಧಾನಗಳನ್ನು ರೂಪಿಸಲು,
- ಚಿತ್ರಗಳ ಮೂಲಕವಾಗಿ ವಿನ್ಯಾಸಗಳನ್ನು ಮತ್ತು ಸ್ಥಳಗಳ ಸಂಬಂಧಗಳನ್ನು ಪ್ರತಿನಿಧಿಸಲು ಮತ್ತು ಅಂಕಿ ಸಂಖ್ಯೆಗಳನ್ನು ಕ್ರಮಪ್ರಕಾರವಾಗಿ ಜೋಡಿಸಿ, ಪಟ್ಟಿಯ ರೂಪದಲ್ಲಿ ಅಥವಾ ಗ್ರಾಫ್ ಮುಖಾಂತರ ಮಾಹಿತಿಗಳನ್ನು ನೀಡಲು ಸಹಾಯಕವಾಗುತ್ತದೆ.

## ಗಣಿತದ ಬಳಕೆ

ಗಣಿತದ ಇತಿಹಾಸವು ನಾಗರಿಕತೆಯ ಬೆಳವಣಿಗೆ ಮತ್ತು ಸಂಸ್ಕೃತಿಯ ಕಥೆಯಾಗಿದೆ. "ಗಣಿತವು ನಾಗರಿಕತೆಯ ಕನ್ನಡಿ". ಈಜಿಪ್ಶಿಯನ್ ಮತ್ತು ಬ್ಯಾಬಿಲೋನಿಯನ್ ನಾಗರಿಕತೆಗಳು ಗಣಿತಕ್ಕೆ ಅನ್ಯಾದೃಶವಾದ ಸ್ಥಾನವನ್ನು ನೀಡಿವೆ. ಅವರು ಗಣಿತವನ್ನು ದೈನಂದಿನ ಜೀವನವನ್ನು ಚೆನ್ನಾಗಿ ನಡೆಸಲು ಕಲಿಯಲೇಬೇಕಾದ ಅನಿವಾರ್ಯ ವಿಷಯ ಎಂದು ಪರಿಗಣಿಸಿದ್ದರು. ಆರಂಭಿಕ ಹಂತದಲ್ಲಿ ಅಂಕಗಣಿತ ಮತ್ತು ಬೀಜಗಣಿತಗಳು ವಾಣಿಜ್ಯ ಮತ್ತು ಕೃಷಿಕ್ಷೇತ್ರಗಳ ಸಮಸ್ಯೆಗಳ ಪರಿಹಾರಗಳಿಗಾಗಿ ಬಳಕೆಯಾಗುತ್ತಿದ್ದವು. ಅವರು ಸಾಮಾನ್ಯವಾಗಿ ಇದನ್ನು ಹಣದ ವಿನಿಮಯಗಳಿಗಾಗಿ, ಸರಳ ಹಾಗೂ ಚಕ್ರಬಡ್ಡಿ, ಕ್ಷೇತ್ರಗಳ ವಿಸ್ತಾರಗಳನ್ನು ನಿರ್ಧರಿಸಲು ಇತ್ಯಾದಿಗಳಿಗೆ ಬಳಸುತ್ತಿದ್ದರು. ಪ್ರಾಚೀನ ಕಾಲದಲ್ಲಿ ಗಣಿತ ಎನ್ನುವ ವಿಷಯದ ಬಳಕೆ ಶಿಸ್ತಿನ ಮೌಲ್ಯವಾಗಿ ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದುಕೊಂಡಿತ್ತು. ಗಣಿತದ ಕಲಿಕೆಯಿಂದ ಬೌದ್ಧಿಕ ಶಕ್ತಿ ಮತ್ತು ಸಾಮಾನ್ಯ ಜ್ಞಾನವು ಹೆಚ್ಚುತ್ತದೆ ಎಂಬ ನಂಬಿಕೆ ಇತ್ತು.

ಒಂದು ದೇಶದ ಸಂಸ್ಕೃತಿ ಮತ್ತು ನಾಗರಿಕತೆ ಅದು ಪಡೆದುಕೊಂಡಿರುವ ಗಣಿತದ ಜ್ಞಾನದ ಆಧಾರದಲ್ಲಿ ಅಳೆಯಲ್ಪಡುತ್ತಿತ್ತು. ಸಂಸ್ಕೃತಿಯ ಸಂರಕ್ಷಣೆ, ಪ್ರಚಾರ, ಮತ್ತು ಪ್ರಸರಣಗಳಲ್ಲಿ ಗಣಿತದ ಸ್ಥಾನವು ಹಿರಿದಾದುದು.

ವಿವಿಧ ಸಾಂಸ್ಕೃತಿಕ ಕಲೆಗಳಾದ ಕಾವ್ಯ, ವರ್ಣಚಿತ್ರ, ಚಿತ್ರಕಲೆ ಮತ್ತು ಶಿಲ್ಪಕಲೆ ಮುಂತಾದವುಗಳಲ್ಲೂ ಗಣಿತದ ಜ್ಞಾನದ ಅವಶ್ಯಕತೆಯಿದೆ. ಗಣಿತಕ್ಕೆ ಸೌಂದರ್ಯಮೀಮಾಂಸೆ ಮತ್ತು ಸಂತೋಷದ ಮೌಲ್ಯವಿದೆ. ಎಲ್ಲಾ ಕಲೆ ಮತ್ತು ಸೌಂದರ್ಯದ ಕೆಲಸಗಳಿಗೆ ಅಡಿಪಾಯವಾಗಿ ಗಣಿತದ ಪರಿಕಲ್ಪನೆಗಳಾದ ಸಮ್ಮಿತಿ, ಆದೇಶ, ಸಮಾನತೆ, ರೂಪ ಮತ್ತು ಗಾತ್ರಗಳು ಇವೆ. ಎಲ್ಲಾ ಕಾವ್ಯ ಮತ್ತು ಸಂಗೀತಗಳು ಗಣಿತವನ್ನು ಬಳಸುತ್ತವೆ. ಮನೋರಂಜನಾತ್ಮಕ ಅಥವಾ ಸವಾಲಿನ ರಸಪ್ರಶ್ನೆ, ಒಗಟು, ಮತ್ತು ಇಂದ್ರಜಾಲದ ಚೌಕಗಳಿಗೂ ಗಣಿತವೇ ಬಳಸಲ್ಪಡುತ್ತದೆ. ಆದುದರಿಂದ ಗಣಿತವನ್ನು ನಮ್ಮ ಶಾಲೆಗಳಲ್ಲಿ ಬೋಧಿಸುವುದು ಅನಿವಾರ್ಯವಾಗಿದೆ.

## ವರ್ತಮಾನದಲ್ಲಿ ಶಾಲಾ ಪಠ್ಯಕ್ರಮದಲ್ಲಿ ಗಣಿತದ ಸ್ಥಾನ

ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನ ಪ್ರಕಾರ (ಓಅಈ, 2005), ಮಗುವಿನ ಆಲೋಚನಾ ಪ್ರಕ್ರಿಯೆಯನ್ನು ಗಣಿತಾತ್ಮಕವಾಗಿ ಮಾಡುವುದೇ ಶಾಲೆಗಳಲ್ಲಿ ಗಣಿತ ಶಿಕ್ಷಣದ ಮೂಲ ಗುರಿ. ಮೂಲತಃ ಮಕ್ಕಳು ಪ್ರತಿಯೊಂದನ್ನೂ ಗಣಿತಾತ್ಮಕ (ಲೆಕ್ಕಾಚಾರ ಹಾಕಿ) ವಾಗಿಯೇ ಕಲಿತುಕೊಳ್ಳಬೇಕು ಎಂಬುದನ್ನು ಇದು ಹೇಳುತ್ತದೆ. ಮುಂದೆ ಓಅಈ ಈ ರೀತಿಯಲ್ಲಿ ಚರ್ಚೆ ಮಾಡುತ್ತದೆ. ಗಣಿತದ ನಿಜವಾದ ದರ್ಶನವನ್ನು ತಿಳಿದುಕೊಳ್ಳಬೇಕಿದ್ದರೆ, ಶಾಲಾ ಗಣಿತವು ಈ ಗುರಿಗಳನ್ನು ಗಣಿತದ ಬೋಧನೆಯಲ್ಲಿ ಸಾಧಿಸಲು ಪ್ರಯತ್ನಿಸಬೇಕು.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ–1

ಸೂಕ್ತವಾದ ಉತ್ತರಕ್ಕೆ '✓' ಗುರುತನ್ನು ಹಾಕಿ.

ನಾವು ಯಾಕೆ ಗಣಿತವನ್ನು ಅಭ್ಯಸಿಸಬೇಕೆಂದರೆ____________

a) ನಮ್ಮ ದೈನಂದಿನ ಚಟುವಟಿಕೆಗಳು ಸಂಖ್ಯೆಗಳ ಮೇಲೆ ಹಿಡಿತವನ್ನು ಬಯಸುತ್ತದೆ ಮತ್ತು ಬಹಳಷ್ಟು ಪ್ರಕ್ರಿಯೆಗಳು ಸಂಖ್ಯೆಗಳನ್ನು ಆಧರಿಸಿರುತ್ತವೆ.

b) ಸಮಾಜದಲ್ಲಿ ಸ್ಥಾನವನ್ನು ಪಡೆದುಕೊಳ್ಳಲು

c) ವಾರ್ತಾಪತ್ರಿಕೆಗಳಲ್ಲಿನ ಹೆಚ್ಚಿನ ವಿಷಯಗಳನ್ನು ಓದಿ ಅರ್ಥಮಾಡಿಕೊಳ್ಳಲು ಒಂದಿಷ್ಟು ಗಣಿತದ ಲೆಕ್ಕಾಚಾರಗಳ ಅಗತ್ಯವಿದೆ.

d) ನಮ್ಮ ಮಕ್ಕಳಿಗೆ ಕಲಿಸಲು

e) ಗಣಿತವು ವಿವಿಧ ಕ್ಷೇತ್ರಗಳಲ್ಲಿ ಎಂತಹ ಪಾತ್ರವನ್ನು ವಹಿಸಿದೆ ಎಂಬುದನ್ನು ತಿಳಿದುಕೊಳ್ಳಲು

f) ನಮ್ಮ ಬಗ್ಗೆ ನಾವೇ ಹೆಮ್ಮೆ ಪಟ್ಟುಕೊಳ್ಳಲು.

g) ಅಭಿವೃದ್ಧಿಗಳ ಕಾರ್ಯದಲ್ಲಿ ಗಣಿತದ ಪಾತ್ರವನ್ನು ಅರಿತುಕೊಳ್ಳಲು.

h) ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳಲು

## 2.5.3.2. ಗಣಿತ ಮತ್ತು ಶಾಲಾ ಪಠ್ಯಕ್ರಮ

## ಗಣಿತದ ಪಠ್ಯಕ್ರಮದ ಗುರಿ ಮತ್ತು ಉದ್ದೇಶಗಳು

- **ಸಂಕೀರ್ಣ ಗುರಿ:** ಅಗತ್ಯವಾದ ಸಾಮರ್ಥ್ಯಗಳು, ಅದರಲ್ಲೂ ಸಂಖ್ಯಾಶಾಸ್ತ್ರಕ್ಕೆ ಸಂಬಂಧಿಸಿದ – ಸಂಖ್ಯೆಗಳು, ಸಂಖ್ಯೆಗಳ ಕಾರ್ಯಾಚರಣೆಗಳು, ಮಾಪನಗಳು, ದಶಾಂಶ ಮತ್ತು ಶತಾಂಶಗಳನ್ನು ಅರಿಯಲು.
- **ವಿಶಾಲ ಗುರಿ:** ಮಗುವು ಗಣಿತಾತ್ಮಕವಾಗಿ ಮತ್ತು ತರ್ಕಬದ್ಧವಾಗಿ ಆಲೋಚಿಸಲು, ಊಹೆಗಳನ್ನು ಬೆನ್ನಟ್ಟಿ ಹೋಗಲು, ತಾರ್ಕಿಕವಾದ ಅಂತಿಮ ನಿರ್ಧಾರಕ್ಕೆ ಬರಲು, ಅಮೂರ್ತತೆಗಳನ್ನು ಅರ್ಥಮಾಡಿಕೊಳ್ಳಲು.

ಶಾಲಾ ಗಣಿತದ ಪಠ್ಯಕ್ರಮವು ಮಕ್ಕಳಿಗೆ ಸಂತೋಷದಿಂದ ಕಲಿಯಲು ಸಹಾಯಕವಾಗಬೇಕು. ಈ ನೋಟವನ್ನು ಹೇಗೆ ಕಾರ್ಯರೂಪಗೊಳಿಸಬಹುದು? ಈ ಕೆಳಗಿನ ಉದ್ದೇಶಗಳು ಗಣಿತದ ಪಠ್ಯಕ್ರಮದ ನೋಟವನ್ನು ಅರಿತುಕೊಳ್ಳಲು ಸಹಾಯಕವಾಗುತ್ತವೆ:

- ಮೂಲ ಗಣಿತದಲ್ಲಿ ಪ್ರಾವೀಣ್ಯತೆಯನ್ನು ಪಡೆದುಕೊಳ್ಳಲು;
- ಗಣಿತದ ಮೂಲ ಪರಿಕಲ್ಪನೆಯನ್ನು ಅರಿಯಲು;
- ಆಲೋಚಿಸುವ, ತರ್ಕಬದ್ಧವಾಗಿ ಚಿಂತಿಸುವ, ತಾರ್ಕಿಕವಾಗಿ ಸ್ಪಷ್ಟತೆಯನ್ನು ಕಂಡುಕೊಳ್ಳಲು ಬೇಕಾದ ಸ್ವಭಾವವನ್ನು ಬೆಳೆಸಲು;
- ದೃಢವಾಗಿ ಗಣಿತವನ್ನು ಗಣಿತ ಕ್ಷೇತ್ರದಲ್ಲಿ ಮಾತ್ರವಲ್ಲದೆ ಉಳಿದೆಡೆಗಳಲ್ಲಿಯೂ ಪ್ರಯೋಗಿಸುವ ಸಾಮರ್ಥ್ಯ ಪಡೆದುಕೊಳ್ಳಲು;

- ಆತ್ಮವಿಶ್ವಾಸವನ್ನು ಪಡೆದುಕೊಂಡು ಬುದ್ಧಿವಂತರನ್ನಾಗಿಸಿ, ಸ್ವತಂತ್ರವಾಗಿ ವ್ಯಾಖ್ಯಾನಮಾಡುವ ಸಾಮರ್ಥ್ಯವನ್ನು ಪಡೆದುಕೊಳ್ಳಲು; ಮತ್ತು
- ಗಣಿತದ ಶಕ್ತಿಯನ್ನು ಮತ್ತು ಸೌಂದರ್ಯವನ್ನು ವಿಜ್ಞಾನ, ಸಮಾಜ ವಿಜ್ಞಾನ, ಮಾನವಿಕ, ಕಲೆ ಮುಂತಾದವುಗಳಲ್ಲಿ ಅಳವಡಿಸಿಕೊಳ್ಳಲು.

## ಗಣಿತವನ್ನು ಪಠ್ಯಕ್ರಮದಲ್ಲಿ ನಿರೂಪಿಸುವ ತತ್ವಗಳು

- ಮಗು ಶಾಲಾ ಚಟುವಟಿಕೆ, ಮನೆ ಮತ್ತು ಸಮಾಜದಿಂದ ಔಪಚಾರಿಕ ಮತ್ತು ಅನೌಪಚಾರಿಕವಾಗಿ ಪಡೆದುಕೊಳ್ಳುವ ಎಲ್ಲಾ ಅನುಭವಗಳ ಮೊತ್ತವೇ ಪಠ್ಯಕ್ರಮ;
- ಪಠ್ಯಕ್ರಮವನ್ನು ರೂಪಿಸುವಾಗ ಮೂಲ ಘಟಕವು ಪೂರ್ವ ನಿರ್ಧಾರಿತ ಉದ್ದೇಶಗಳನ್ನು ಒಳಗೊಂಡಿರುತ್ತದೆ. ಪಠ್ಯಕ್ರಮದ ಈ ಉದ್ದೇಶಗಳನ್ನು ಸಾಧಿಸಲು ವಿದ್ಯಾರ್ಥಿಗಳಿಗೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಾದುದು ಮುಂದಿನ ಅಂಶ;
- ಈ ಚಟುವಟಿಕೆಗಳನ್ನು ಸಂಘಟಿಸಲು ಶಿಕ್ಷಕನು ಬಳಸುವ ಬೋಧನಾ ಉಪಕ್ರಮವು ಮಗುವು ಪರಿಕಲ್ಪನೆಗಳನ್ನು ಕಲಿಯಲು ಸಾಧ್ಯವಾಗುತ್ತದೆಯೇ ಇಲ್ಲವೇ ಎಂಬುದನ್ನು ನಿರ್ಧರಿಸುತ್ತದೆ;
- ಗಣಿತದ ಪಠ್ಯಕ್ರಮವನ್ನು ರೂಪಿಸುವ ಸಂದರ್ಭದಲ್ಲಿ ಅಳವಡಿಸಿಕೊಳ್ಳಬೇಕಾದ ವಿಷಯಗಳು ಮಕ್ಕಳು ದೈನಂದಿನ ಬದುಕಿನಲ್ಲಿ ಯಶಸ್ವಿಯಾಗಲು ಅನುವಾಗುವಂತಿರಬೇಕು;
- ಗಣಿತದ ಮೂಲ ಪಠ್ಯಕ್ರಮವನ್ನು ರೂಪಿಸುವಾಗ ಮಗುವಿನ ಆಸಕ್ತಿ, ಅಗತ್ಯಗಳು ಮತ್ತು ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳಬೇಕು;
- ಪಠ್ಯದಲ್ಲಿ ಅಳವಡಿಸಿಕೊಂಡ ವಿಷಯ ಮತ್ತು ವಿವಿಧ ಚಟುವಟಿಕೆಗಳು ಮಗುವಿಗೆ ಸಮಾಜವನ್ನು ಮತ್ತು ನಾಗರಿಕ ಜವಾಬ್ದಾರಿಗಳನ್ನು ತಿಳಿದುಕೊಳ್ಳಲು ಸಹಾಯಕವಾಗಬೇಕು;
- ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಳ್ಳುವುದು ಬಹಳ ಮುಖ್ಯವಾದ ವಿಷಯ. ಪಠ್ಯಕ್ರಮವನ್ನು ರೂಪಿಸುವಾಗ, ಜಾಗರೂಕತೆಯಿಂದ ಇದರ ಕಡೆಗೆ ಗಮನ ನೀಡಬೇಕು;
- ವಿವಿಧ ತೆರನಾದ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಅವರಿಗೆಲ್ಲರಿಗೂ ಸ್ವಯಂ ವ್ಯಕ್ತಪಡಿಸಿಕೊಳ್ಳಲು ಮತ್ತು ಬೆಳೆಯಲು ಅವಕಾಶ ಇರುವಂತೆ ಪಠ್ಯಕ್ರಮ ರೂಪುಗೊಳ್ಳಬೇಕು;
- ಗಣಿತಕ್ಷೇತ್ರದ ಇತ್ತೀಚೆಗಿನ ಎಲ್ಲಾ ಬೆಳವಣಿಗೆ ಮತ್ತು ಕಲ್ಪನೆಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಬೇಕು.

## ಇಂದಿನ ಶಾಲಾ ಪಠ್ಯಕ್ರಮದಲ್ಲಿ ಗಣಿತ.

'ಅನುಕ್ರಮ'ವಾದ ಪಠ್ಯಕ್ರಮವನ್ನು ಗಣಿತದಲ್ಲಿ ಹಲವಾರು ವರ್ಷಗಳಿಂದ ಅನುಸರಿಸಿಕೊಂಡು ಬರಲಾಗುತ್ತಿದೆ. ಅನುಕ್ರಮ ಎಂದರೆ ವಿಷಯಗಳನ್ನು ತಾರ್ಕಿಕವಾದ ರೀತಿಯಲ್ಲಿ ಪ್ರಸ್ತುತಪಡಿಸುವುದು, ಮಗು ಕಲಿಕೆಯಲ್ಲಿ ಮುಂದುವರಿದಂತೆ ಸಂಕೀರ್ಣತೆಯನ್ನು ಹೆಚ್ಚಿಸುವುದು, ತಾರ್ಕಿಕವಾಗಿ( ಸ್ಥಳೀಯ ವಿಷಯಗಳಿಂದ ಜಾಗತಿಕ ವಿಷಯಗಳೆಡೆಗೆ), ಮನಶ್ಶಾಸ್ತ್ರೀಯವಾಗಿ ವಿಷಯ ನಿರೂಪಣೆ(ತತ್ ಕ್ಷಣದ ಆಸಕ್ತಿಯಿಂದ ದೂರದ ಆಸಕ್ತಿಯೆಡೆಗೆ), ಅಮೂರ್ತತೆಯಿಂದ ಮೂರ್ತತೆಯೆಡೆಗೆ ಸಾಗುವುದು.

## ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಮಟ್ಟದಲ್ಲಿ ಗಣಿತದ ಶಿಕ್ಷಣ

ಅತ್ಯಂತ ಕೆಳ ತರಗತಿಗಳಲ್ಲಿ,

- ವಾಸ್ತವಿಕ ವಿಷಯಗಳಿಂದ ಕೂಡಿದ ಚಟುವಟಿಕೆಗಳ ಮೂಲಕ ಮಗುವಿಗೆ ದೈನಂದಿನ ಜೀವನವನ್ನು ಗಣಿತಾತ್ಮಕವಾದ ರೀತಿಯಿಂದ ನೋಡಿ, ತಾರ್ಕಿಕವಾಗಿ ಹೊಂದಿಸಿಕೊಳ್ಳಲು ಸಾಧ್ಯವಾಗುತ್ತದೆ.
- ಸಹಜ ಸಂಖ್ಯೆಗಳ ಜತೆಗಿನ ಕಾರ್ಯಾಚರಣೆಯು ಗಣಿತದ ಪಠ್ಯಕ್ರಮದಲ್ಲಿ ಬಹು ಪ್ರಮುಖ ಪಾತ್ರವನ್ನು ವಹಿಸುತ್ತದೆ.
- ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಲಾಗುವ ಕೂಡಿಸುವ ಕ್ರಮಾವಳಿಗಳು, ಕಳೆಯುವ, ಗುಣಿಸುವ, ಮತ್ತು ಭಾಗಿಸುವ ಕ್ರಮಗಳು ಪ್ರಧಾನವಾದ ಪಾತ್ರಗಳನ್ನು ವಹಿಸುತ್ತವೆ. ಇದು ಸಂಖ್ಯೆಗಳ ಕುರಿತಾದ ಅರಿವನ್ನು ಬೆಳೆಸುತ್ತವೆ. ಮತ್ತು ಅಂದಾಜಿನ ಮೂಲಕ ಸರಿಯಾಗಿ ಗಣನೆ ಮಾಡುವ ಕೌಶಲ್ಯವನ್ನು ಬೆಳೆಸುತ್ತದೆ.
- ಗಣಿತದ ಲೆಕ್ಕಗಳನ್ನು ಸನ್ನಿವೇಶಾತ್ಮಕವಾಗಿ ನಿರೂಪಿಸಬೇಕು. ಇದನ್ನು ಭಾಷಾ ಬೆಳವಣಿಗೆ ಹಾಗೂ ಸಾಂಕೇತಿಕ ಸಂಕೇತಗಳ ಮೂಲಕವಾಗಿ ಆರಂಭಿಸಿ, ಉನ್ನತ ಮಟ್ಟದ ಕೂಡಿಸುವ ಕ್ರಮಾವಳಿಗಳ ಮೂಲಕವಾಗಿ ಮುಂದುವರಿಸಬೇಕು.
- ಒಮ್ಮೆಗೆ ಒಂದೇ ಆಯಾಮವನ್ನು ಸರಳ ಹೋಲಿಕೆಗಳು ಮತ್ತು ವರ್ಗೀಕರಣಗಳ ಮೂಲಕ ಬೋಧಿಸುವುದು, ಆಕೃತಿಗಳ ಮತ್ತು ಸಮ್ಮಿತಿಗಳ ಗುರುತಿಸುವಿಕೆ ಇವು ಈ ಹಂತದಲ್ಲಿ ಪರಿಗಣಿಸಬೇಕಾದ ಸಮರ್ಪಕ ಕೌಶಲಗಳಾಗಿರುತ್ತವೆ. ಮೊದಲೇ ನಿಯೋಜಿತವಾದ ಕ್ರಮವನ್ನು ಮೀರಿ, ಮಕ್ಕಳನ್ನು ಅವರವರ ಭಾಷೆಯ ಮೂಲಕ ಚಿಂತನೆಗಳನ್ನು ಮತ್ತು ಅಭಿಪ್ರಾಯಗಳನ್ನು ಹೇಳಲು ಪ್ರೋತ್ಸಾಹಿಸುವುದು ಈ ಹಂತದಲ್ಲಿ ಬಹಳಷ್ಟು ಪ್ರಮುಖವಾಗಿದೆ.
- ಗಣಿತಾತ್ಮಕವಾದ ಸಂಖ್ಯೆಗಳಿಗೆ ಸಂಬಂಧಿಸಿದ ಆಟಗಳು, ಒಗಟುಗಳು ಮತ್ತು ಕಥೆಗಳು ಮಕ್ಕಳಿಗೆ ಗಣಿತದಲ್ಲಿ ತೊಡಗಿಕೊಳ್ಳಲು ಮತ್ತು ದೈನಂದಿನ ಜೀವನದಲ್ಲಿ ಗಣಿತವನ್ನು ಅಳವಡಿಸಿಕೊಳ್ಳಲು ಸಹಾಯಕವಾಗುತ್ತವೆ.

## ಹಿರಿಯ ಪ್ರಾಥಮಿಕ ಹಂತದಲ್ಲಿ ಗಣಿತದ ಶಿಕ್ಷಣ

ಹಿರಿಯ ಪ್ರಾಥಮಿಕ ಹಂತದಲ್ಲಿ ವಿದ್ಯಾರ್ಥಿಗಳು ಶಕ್ತಿಯುತವಾಗಿ ವಿಷಯಗಳನ್ನು ಬೇರ್ಪಡಿಸಲು ಶಕ್ತರಾಗಿರುತ್ತಾರೆ.

- ವಿದ್ಯಾರ್ಥಿಗಳು, ಬೀಜಗಣಿತದ ಸಂಕೇತಗಳನ್ನು ಮತ್ತು ಅದನ್ನು ಸಮಸ್ಯೆಗಳ ಪರಿಹಾರಕ್ಕೆ ಬಳಸಿಕೊಳ್ಳಲು ಕಲಿಯುತ್ತಾರೆ. ಕ್ರಮಬದ್ಧವಾಗಿ ಸ್ಥಳ ಹಾಗೂ ಗಾತ್ರಗಳನ್ನು ಅಳೆಯುವುದನ್ನು ಅವರು ಕಲಿಯುತ್ತಾರೆ.
- ದತ್ತಾಂಶಗಳನ್ನು ನಿರ್ವಹಿಸುವುದು, ಅದರ ಪ್ರಾತಿನಿಧ್ಯವನ್ನು ವ್ಯಾಖ್ಯಾನಿಸುವುದು ಬಹು ಮುಖ್ಯವಾದ ಭಾಗವಾಗಿದ್ದು, ಸಾಮಾನ್ಯವಾಗಿ ಮಾಹಿತಿಗಳ ಜತೆಗೆ ಅದನ್ನು ನಿರ್ವಹಿಸುವ ಸಾಮರ್ಥ್ಯ, ಜೀವನ ಕೌಶಲ್ಯಗಳಲ್ಲಿ ಅತೀ ಪ್ರಮುಖ.
- ಈ ಹಂತದಲ್ಲಿ ಕಲಿಕೆಯು ವಿದ್ಯಾರ್ಥಿಗಳಿಗೆ ಸಾಮಾನ್ಯ ಜ್ಞಾನವನ್ನು ಹೆಚ್ಚಿಸುವ ಹಾಗೂ ತಮ್ಮ ಕಣ್ಣುಗಳಲ್ಲೇ ಅದನ್ನು ಕಟ್ಟಿಕೊಂಡು ನೋಡುವ ಒಳ್ಳೆಯ ಅವಕಾಶಗಳನ್ನು ಒದಗಿಸುತ್ತದೆ.

## ಪ್ರೌಢಶಾಲೆಗಳಲ್ಲಿ ಗಣಿತದ ಬೋಧನೆ

ಹಂತದಲ್ಲಿ ಗಣಿತವನ್ನು ವಿದ್ಯಾರ್ಥಿಗಳು ಗಣಿತದ ರಚನೆಯನ್ನು ಒಂದು ಶಿಸ್ತಿನ ರೂಪದಲ್ಲಿ ಕುರಿತು ಕಲಿಯಲು ಆರಂಭಿಸುತ್ತಾರೆ.

- ಅವರು ಗಣಿತದ ಸಂವಹನ ಹಾಗೂ ಗುಣಲಕ್ಷಣಗಳ ಬಗ್ಗೆ ಸರಿಯಾಗಿ ತಿಳಿಯುತ್ತಾರೆ. ಜಾಗರೂಕತೆಯಿಂದ ಅದರ ನಿಯಮಗಳು ಮತ್ತು ಪರಿಕಲ್ಪನೆಗಳನ್ನು ಸೂತ್ರೀಕರಿಸುತ್ತಾರೆ. ಅವರಿಗೆ ತಿಳಿದಿರುವ ಚಿಹ್ನೆಗಳನ್ನು ಪ್ರತಿನಿಧಿಸಲು, ಪ್ರತಿಪಾದನೆಗಳನ್ನು ಮತ್ತು ಅದನ್ನು ಸಮರ್ಥಿಸಲು ಬೇಕಾದ ಪುರಾವೆಗಳನ್ನು ತಿಳಿಯುತ್ತಾರೆ..
- ಒಳಗೊಳ್ಳಬೇಕಾದ ವಿಷಯಗಳು – ಪರಿಕಲ್ಪನೆ ಐಖ ಮತ್ತು ಖ ಸಂಖ್ಯೆಗಳು ಮತ್ತು ಅವುಗಳ ಲೆಕ್ಕಾಚಾರ (Concept of IR and R numbers and their operations), ಘಾತೀಯಸಂಖ್ಯೆಗಳು (Exponential numbers) ಚತುರ್ಭುಜ ಸಮೀಕರಣಗಳು, (Quadratic equations), ಏಕಕಾಲಿಕ ಸಮೀಕರಣಗಳು (Simultaneous equations), ವೃತ್ತದ ಅಂಶಗಳಿಗೆ ಸಂಬಂಧಿಸಿದ ಪ್ರಮೇಯಗಳು/ಚತುರ್ಭುಜಗಳು (Theorems on elements of a circle / quadrilaterals), ಕ್ಷೇತ್ರಗಣಿತ(ಅಳತೆ) (Mensuration), ಲಘುಗಣಕಗಳು (Logarithms) ತ್ರಿಕೋನಮಿತಿ (Trignometry) ಇತ್ಯಾದಿ.,
- ಈ ಹಂತದಲ್ಲಿ ವಿದ್ಯಾರ್ಥಿಗಳು ಸಮಸ್ಯೆಗಳನ್ನು ಪರಿಹರಿಸಲು ತಾವು ಕಲಿತ ಹಲವಾರು ವಿಧಾನಗಳನ್ನು ಮತ್ತು ಕೌಶಲ್ಯಗಳನ್ನು ಬಳಸುತ್ತಾರೆ.
- ಗಣಿತಾತ್ಮಕ ಮಾದರಿಗಳ ನಿರ್ಮಾಣ, ದತ್ತಾಂಶಗಳ ವಿಶ್ಲೇಷಣೆ, ಕಲಿಸಿದ ವ್ಯಾಖ್ಯಾನಗಳು ಎಲ್ಲವೂ ಒಟ್ಟುಗೂಡಿ ಈ ಹಂತದಲ್ಲಿ ಉನ್ನತಮಟ್ಟದ ಗಣಿತದ ಕಲಿಕೆಯು ಸಾಧ್ಯವಾಗುತ್ತದೆ.

## ಹಿರಿಯ ಪ್ರೌಢ ಶಾಲೆಗಳಲ್ಲಿ ಗಣಿತದ ಶಿಕ್ಷಣ

- ಹಿರಿಯ ಪ್ರೌಢಶಾಲೆಗಳಲ್ಲಿ ಗಣಿತದ ಪಠ್ಯಕ್ರಮಗಳ ಉದ್ದೇಶವು ವಿದ್ಯಾರ್ಥಿಗಳಿಗೆ ಗಣಿತದ ವಿವಿಧ ಮತ್ತು ವಿಸ್ತಾರವಾದ ಬಳಕೆಯನ್ನು ಪರಿಚಯ ಮಾಡಿಸುವುದು ಮತ್ತು ಅದನ್ನು ಮೂಲ ಉಪಕರಣಗಳ ಮೂಲಕ ಸಜ್ಜುಗೊಳಿಸುವ ಬಳಸಿಕೊಳ್ಳುವ ವಿಧಾನಗಳನ್ನು ತಿಳಿಸುವುದಾಗಿದೆ.

## ಪಠ್ಯಕ್ರಮ

ಅನುಕ್ರಮ (Sequences) / ಸರಣಿ (Series), ಅಂಕಗಣಿತ (Aritmetic) / ರೇಖಾಗಣಿತ (geometric) ಬೆಳವಣಿಗೆ, ಕಲನಶಾಸ್ತ್ರ (Calculus) ಉನ್ನತ ಬೀಜಗಣಿತ (Higher algebra), ಸಂಯೋಜಕ ಜ್ಯಾಮಿತಿ (Co-ordinate geometry), ಕೋನಿಕ್ಸ್2ಡಿ ಜ್ಯಾಮಿತಿ (Conics (2d Geometry), ತ್ರಿಕೋನಮಿತಿ (Trignometry) ಇತ್ಯಾದಿ.,

## ಗಣಿತದ ಶಿಸ್ತನ್ನು ಬೋಧಿಸುವಾಗ ಎದುರಾಗುವ ಸಮಸ್ಯೆಗಳು ಮತ್ತು ಸವಾಲುಗಳು

Position Paper of National Focus Group on Mathematic ಗಣಿತದ ಬೋಧನೆಯಲ್ಲಿನ ಕೆಲವು ಸಮಸ್ಯೆಗಳನ್ನು ಈ ರೀತಿಯಲ್ಲಿ ಗುರುತಿಸಿದೆ.

- ಹೆಚ್ಚಿನ ಮಕ್ಕಳಲ್ಲಿ ಗಣಿತವೆಂದರೆ ಒಂದು ತೆರನಾದ ಭಯವಿರುತ್ತದೆ.
- ಪಠ್ಯಕ್ರಮವು ಕೆಲವೇ ಕೆಲವು ಪ್ರತಿಭಾನ್ವಿತರಿಗೂ ಭಾಗಿಗಳಾಗದ ಹೆಚ್ಚಿನವರಿಗೂ ಒಂದೇ ಸಂದರ್ಭದಲ್ಲಿ ಆಶಾಭಂಗವನ್ನುಂಟುಮಾಡುತ್ತದೆ.

- ಮೌಲ್ಯಮಾಪನದಲ್ಲಿನ ಕಚ್ಚಾ ವಿಧಾನಗಳು ಗಣಿತವನ್ನು ಯಾಂತ್ರಿಕ ಗ್ರಹಿಕೆಯಾಗಿ ಗಣಿಸುತ್ತದೆ.
- ಗಣಿತದ ಶಿಕ್ಷಕನ ಅಸಮರ್ಪಕ ತಯಾರಿಯು ಗಣಿತದ ಬೋಧನೆಯ ಮೇಲೆ ಪರಿಣಾಮ ಬೀರುತ್ತದೆ, ವಿಭಾಗೀಕರಣ: ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ಮಧ್ಯೆ ಕ್ರಮಬದ್ಧವಾದ ಸಂವಹನದ
- ಕೊರತೆಯಿದೆ. ಆದರೆ ಇದು ಪ್ರೌಢ ಮತ್ತು ಕಾಲೇಜು ಮಟ್ಟಗಳಲ್ಲಿ ಕಾಣುವುದಿಲ್ಲ.
- ಕ್ರಮಬದ್ಧವಾದ ಸಮಸ್ಯೆಗಳು ಸನ್ನಿವೇಶಗಳನ್ನು ಇನ್ನಷ್ಟು ಬಿಗಡಾಯಿಸುತ್ತವೆ. ಸಾಮಾಜಿಕ ತಾರತಮ್ಯಗಳು ಕೂಡಾ ಕೆಲವೊಮ್ಮೆ ಗಣಿತದ ಕಲಿಕೆಯ ಮೇಲೂ ಪ್ರಭಾವ ಬೀರುತ್ತವೆ. ಅದರಲ್ಲೂ ಲಿಂಗ ತಾರತಮ್ಯವು ಗಂಡುಮಕ್ಕಳು ಗಣಿತದಲ್ಲಿ ಹೆಣ್ಣುಮಕ್ಕಳಿಗಿಂತ ಪ್ರವೀಣರು ಎಂದು ನಿರ್ಧರಿಸಿಬಿಡುತ್ತದೆ.

## ಆರೋಗ್ಯವನ್ನು ಬೆಳೆಸುವಲ್ಲಿ ಮತ್ತು ಸುಸ್ಥಿರವಾಗಿರಿಸುವಲ್ಲಿ ಗಣಿತದ ಪಾತ್ರ.

- ಗಣಿತದ ಮಾದರಿಗಳನ್ನು ಪರಿಸರದ ಬದಲಾವಣೆಗಳನ್ನು ಗ್ರಹಿಸಲು ಉಪಯೋಗಿಸಲಾಗುತ್ತದೆ. ಸಂಖ್ಯಾಶಾಸ್ತ್ರವು ಸರಕಾರಕ್ಕೆ ಆರೋಗ್ಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಬೇಕಾದ ಮೌಲಿಕವಾದ ದತ್ತಾಂಶವನ್ನು ನೀಡುತ್ತದೆ.
- ರೋಗಗಳ ಅಪಾಯಗಳನ್ನು ಅಂದಾಜು ಮಾಡಲು ಗಣಿತವನ್ನು ಬಳಸಲಾಗುತ್ತದೆ,

## ಗಣಿತ ಮಾದರಿಗಳು ಈ ಕೆಳಗಿನ ಕ್ಷೇತ್ರಗಳಲ್ಲಿ ಮುಖ್ಯವಾಗುತ್ತವೆ.

- ಫ್ಲೂವಿಗಾಗಿ ಏಕಾಏಕಿತಯಾರಿ ನಡೆಸಲು
- ಸಾಂಕ್ರಾಮಿಕ ರೋಗದ ಮೇಲೆ ಮಾದರಿಗಳ ಪ್ರಭಾವ
- ಭವಿಷ್ಯದ ಆರೋಗ್ಯದ ಬೇಡಿಕೆಗಳನ್ನು ಊಹಿಸಲು
- ಕೆಲವು ಲೆಕ್ಕಾಚಾರದ ಮಾದರಿಗಳು ಜೀನ್‌ಗಳ ಅಭಿವ್ಯಕ್ತಿಗಳ ದತ್ತಾಂಶಗಳು ರೋಗಗಳನ್ನು ಕಂಡುಹಿಡಿಯಲು ಸಹಾಯಮಾಡುತ್ತವೆ.

## ಗಣಿತದ ಪಠ್ಯಕ್ರಮದಲ್ಲಿ ಬದಲಾವಣೆಗಳನ್ನು ತರುವ ಅಂಶಗಳು

ಶಿಕ್ಷಣತಜ್ಞರು ಶಾಲಾ ಗಣಿತದಲ್ಲಿ ಕಳೆದ ಎರಡು ಮೂರು ದಶಕಗಳಿಂದ ಉಂಟಾದ ಬದಲಾವಣೆಗಳ ಬಗ್ಗೆ ತಿಳಿದುಕೊಂಡಿದ್ದಾರೆ. ಈ ಬದಲಾವಣೆಗಳು ಒಳಗೊಂಡ ವಿಷಯ, ವಿಧಾನ, ಮತ್ತು ಗಣಿತದ ಬೋಧನೆ ಕ್ರಾಂತಿಯನ್ನೇ ಉಂಟುಮಾಡಿದೆ.

## ಬದಲಾವಣೆಗಳಿಗೆ ಕಾರಣಗಳು

- ಗಣಿತದ ಜ್ಞಾನದಲ್ಲಿನ ಶೀಘ್ರವಾದ ಪ್ರಗತಿಯಿಂದಾಗಿ ಪ್ರಬುದ್ಧ ಜನರಲ್ಲಿ ಅದಕ್ಕೆ ಬಹಳಷ್ಟು ಬೇಡಿಕೆ ಇದೆ.
- ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಮತ್ತು ಪ್ರಾಥಮಿಕ ಹಂತದಿಂದ ಪ್ರೌಢಶಾಲೆಗೆ ಪರಿಣಾಮಕಾರಿಯಾದ ಅಭಿವ್ಯಕ್ತಿಯ ಅಗತ್ಯತೆ.
- ಸಾಂಪ್ರದಾಯಿಕ ಗಣಿತವು ಕೇವಲ ಗಣನಾತ್ಮಕವಾದ ಕೌಶಲ್ಯಗಳಿಗೆ ಮಾತ್ರ ಮುಖ್ಯವಾಗಿ ಒತ್ತು ನೀಡುತ್ತದೆ. ಸಾಂಪ್ರದಾಯಿಕವಾಗಿ ಗಣಿತವನ್ನು ಅಂಕಗಣಿತ, ಬೀಜಗಣಿತ, ಜ್ಯಾಮಿತಿ ಎಂದು ವಿಭಜಿಸಲಾಗುತ್ತದೆ. ಕೆಲವು ಆಕರ್ಷಕ ಮತ್ತು ಕುತೂಹಲಕಾರಕವಾದ ಅಂಶಗಳು ಗಣಿತದಲ್ಲಿ ಕಾಣೆಯಾಗುತ್ತಿದೆ.

- ಗಣಿತದ ರಚನೆಯ ಬಗ್ಗೆ ಹಾಗೂ ಗಣಿತದ ಪ್ರಕ್ರಿಯೆಗಳಿಗಾಗಿ, ಅದರ ಭಾಷೆ ಮತ್ತು ಅದನ್ನು ಸಾಬೀತುಗೊಳಿಸುವ ವಿಧಾನಗಳಿಗೆ ಬೇಕಾದ ತಿಳಿವಳಿಕೆಯನ್ನು ಮೂಡಿಸಬೇಕಾಗಿದೆ.
- ಗಣಿತವನ್ನು ವಿವಿಧ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಹೇಗೆ ಉಪಯೋಗಿಸಿಕೊಳ್ಳಬಹುದೆಂದು ಕಲಿಯಬೇಕಾಗಿದೆ. (ತಂತ್ರಜ್ಞಾನ ಮತ್ತು ಸಹಾಯಗಳು)

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

1. ಹಿರಿಯ ಪ್ರೌಢಶಾಲಾ ಮಟ್ಟದಲ್ಲಿ ಗಣಿತದ ಗುರಿ ____________

   a) ಗಣಿತದ ಅಳವಡಿಕೆಯಲ್ಲಿ ಹೆಚ್ಚಿನ ವೈವಿಧ್ಯತೆಗಳನ್ನು ತರುವುದು

   b) ವಿವಿಧ ತೆರನಾದ ಗಣಿತದ ವೈವಿಧ್ಯತೆಗಳನ್ನು ಒದಗಿಸುವುದು

   c) ವಿವಿಧ ತೆರನಾದ ಗಣಿತದ ಮೌಲ್ಯಮಾಪನಗಳನ್ನು ಒದಗಿಸುವುದು

   d) ಮೇಲೆ ಹೇಳಿದ ಯಾವುದೂ ಅಲ್ಲ.

2. ಈಗಿರುವ ಗಣಿತದ ಜ್ಞಾನಗಳಲ್ಲಿ ಬದಲಾವಣೆಗಳನ್ನು ತಂದು ಹೊಸ ಅನುಭವಗಳನ್ನು ಆ ಸ್ಥಾನದಲ್ಲಿ ತುಂಬುವ ಸಾಮೀಪ್ಯವೆಂದರೆ ಎಂದರೆ ____________

   a) ನಿರ್ಮಾಣದ ಸಾಮೀಪ್ಯ

   b) ಕಲಿಯುವವನನ್ನು ಕೇಂದ್ರೀಕರಿಸಿದ ಸಾಮೀಪ್ಯ

   c) ಸ್ವಭಾವ ಕೇಂದ್ರಿತ ಸಾಮೀಪ್ಯ

   d) ಮೇಲೆ ಹೇಳಿದ ಯಾವುದೂ ಅಲ್ಲ.

3. ಗಣಿತದ ಮಾದರಿಗಳನ್ನು ಬಳಸುವುದು ____________

   a) ಪರಿಸರದಲ್ಲಾಗುವ ಬದಲಾವಣೆಗಳ ಬಗ್ಗೆ ಮೊದಲೇ ತಿಳಿಯಲು

   b) ಸಂಪ್ರದಾಯವಾದಿ ಬದಲಾವಣೆಗಳನ್ನು ಮೊದಲೇ ತಿಳಿಯಲು.

   c) ಮರುಬಳಕೆಯ ಬದಲಾವಣೆಗಳನ್ನು ತಿಳಿದುಕೊಳ್ಳಲು

   d) ಮೇಲೆ ಹೇಳಿದ ಯಾವುದೂ ಅಲ್ಲ.

## 2.5.4. ಸಾರಾಂಶಿಸೋಣ

- ಗಣಿತದ ಕಲಿಕೆಯು ವ್ಯಕ್ತಿಯ ದೈನಂದಿನ ಜೀವನಕ್ಕೆ ಸಹಾಯಕ
- ಗಣಿತವನ್ನು ಅದರ ವ್ಯಾಪಕತೆಯ ಹಿನ್ನೆಲೆಯಿಂದ ಶಾಲಾ ಪಠ್ಯಕ್ರಮದಲ್ಲಿ ಪ್ರಧಾನ ವಿಷಯವಾಗಿ ಸ್ವೀಕರಿಸಬೇಕು.
- ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನ (2005) ಪ್ರಕಾರ ಮಗುವಿನ ಗಣಿತಾತ್ಮಕ ಮನಸ್ಸು ಶಾಲೆಯ ಪ್ರಮುಖ ನೋಟವಾಗಿರಬೇಕು
- ಶಾಲೆಗಳಲ್ಲಿ ಗಣಿತದ ಬೋಧನೆಯ ಕಿರಿದಾದ ಗುರಿ ಅಗತ್ಯವಾದ ಸಾಮರ್ಥ್ಯವನ್ನು ಬೆಳೆಸುವುದು, ಅದರಲ್ಲೂ ಮುಖ್ಯವಾಗಿ ಸಂಖ್ಯೆಗಳಿಗೆ ಸಂಬಂಧಿಸಿದಂತೆ, ಅದರ ಕಾರ್ಯಾಚರಣೆಗಳು, ಮಾಪನಗಳು, ದಶಾಂಶಗಳು ಮತ್ತು ಶತಾಂಶಗಳು.
- ಮಗುವಿನ ಸಾಮಾನ್ಯವಾದ ಮತ್ತು ಗಣಿತಾತ್ಮಕವಾದ ಚಿಂತನಾ ಸಾಮರ್ಥ್ಯವನ್ನು ಹೆಚ್ಚಿಸುವುದು ಗಣಿತದ ಗುರಿ.

- ಗಣಿತದ ಮುನ್ನೋಟವನ್ನು ಸಾಕಾತ್ಕರಿಸಲು ಪಠ್ಯಕ್ರಮವು ಪ್ರಮಾಣಾತ್ಮಕ ಹಾಗೂ ಸ್ವೀಕರಿಸಲಾಗುವ ವಿಷಯಗಳ ಆಧಾರಗಳ ಮೇಲೆ ಕಟ್ಟಿರಬೇಕು.
- ಗಣಿತದ ಪಠ್ಯಕ್ರಮವನ್ನು ರೂಪಿಸುವ ಸಂದರ್ಭದಲ್ಲಿ ಪಠ್ಯಕ್ರಮದ ಬೆಳವಣಿಗೆಗಳ ಕುರಿತಾದ ಮೂಲ ತತ್ವಗಳನ್ನು ಗಮನದಲ್ಲಿ ಇರಿಸಿಕೊಳ್ಳಬೇಕು.
- ಪಠ್ಯಕ್ರಮವನ್ನು ರೂಪಿಸುವ ಸಂದರ್ಭದಲ್ಲಿ ಪಠ್ಯಕ್ರಮ ಕಾಳಜಿಗಳಾದ ಶಿಕ್ಷಕರ ತಯಾರಿ, ಶಿಕ್ಷಣ ಶಾಸ್ತ್ರದಲ್ಲಿ ಗಣಿತದ ಸಾಮೀಪ್ಯಗಳು, ಗಣಿತ ಬೋಧನಾ ಉಪಕ್ರಮಗಳು, ವಿದ್ಯಾರ್ಥಿಗಳ ಮೌಲ್ಯಮಾಪನ ಇತ್ಯಾದಿಗಳ ಬಗ್ಗೆ ಕಾಳಜಿ ಇರಬೇಕು.
- ಮಕ್ಕಳ ಶಾಲಾ ಶಿಕ್ಷಣದ ಹಂತಗಳಿಗನುಗುಣವಾಗಿ, ಗಣಿತದ ಪಠ್ಯಕ್ರಮದಲ್ಲಿ ಸಮರ್ಪಕವಾದ ವಿಷಯಗಳನ್ನು ಒಳಪಡಿಸಬೇಕು.
- ವಿಷಯ ಕೇಂದ್ರಿತವಾದ ಪಠ್ಯಕ್ರಮದ ಬದಲಿಗೆ ಚಟುವಟಿಕಾ ಕೇಂದ್ರಿತವಾದ ಪಠ್ಯಕ್ರಮವನ್ನು ಅಳವಡಿಸಿಕೊಂಡು ಅದರ ಪ್ರಯೋಜನವನ್ನು ಪಡೆಯಬೇಕು.

## 2.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

a,c,e,g,h - '✓'

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2

1–b, 2–b, 3–b

## 2.5.6. ಘಟಕಾಂತ್ಯ ಅಭ್ಯಾಸಗಳು

1. ಶಾಲಾ ಮಟ್ಟದಲ್ಲಿ ಗಣಿತ ಬೋಧನೆಯ ಅಗತ್ಯ, ಉದ್ದೇಶ ಮತ್ತು ಉಪಕ್ರಮಗಳನ್ನು ವಿವರಿಸಿ.

## 2.2.7. ಪರಾಮರ್ಶನ ಸೂಚಿ


1 http://www.ncert.nic.in/rightside/links/focus_group.html

2 http://www.ncert.nic.in/new_ncert/ncert/rightside/links/pdf/focus_group/math.pdf

3 http://www.ncert.nic.in/html/pdf/ncf_qna.pdf

4 http://www.unep.org/documents.multilingual/default.asp? DocumentID=52 &ArticleID=85&l=en

5 Marsh. C.J (2009) 4th Education Key Concepts for Understanding Curriculum Routledge Publications

6 NCERT, (1988), Guidelines and Syllabi for Secondary Stage (Class IX, X), New Delhi: NCERT.

7 New Trends in Integrated Science Teaching, Vol.1, UNESCO.1969-70.

8 Chambers Paul (2010). Teaching Mathematics- Developing as a Reflective Secondary Teacher, Sage South Asia Ed, New Delhi

9 Hansen Alice and Vaukins Diane (2012). Primary Mathematics across the Curriculum, Sage Publication India Pvt-Ltd, New Delhi

10 National Council of Teachers of Mathematics (2000). Principles and Standards for school Mathematics. Reston V A, NCTM

11 NCERT( 2019). Textbooks for Classes IX and X, NCERT, New Delhi

12 NCERT (2005). National Curriculum Framework, 2005, NCERT, New Delhi

13 NCERT (2005). Position Paper National Focus Group on Teaching of Mathematics, NCERT, New Delhi

14 NCERT (2012). Pedagogy of Mathematics, Textbook for Two Year B.Ed Course, NCERT, New Delhi

**********

# ಬ್ಲಾಕ್ 2 : ಜ್ಞಾನಶಿಸ್ತುಗಳ ವರ್ಗೀಕರಣ ಮತ್ತು ಜ್ಞಾನಶಿಸ್ತುವ್ಯಾಪಿ ಬೋಧನೆ

## ಘಟಕ 6 : ಸಾಮಾಜಿಕ ನ್ಯಾಯ ಮತ್ತು ಶಾಲಾ ವಿಷಯಗಳು

### ಘಟಕದ ರಚನೆ


2.6.1. ಕಲಿಕೆಯ ಉದ್ದೇಶಗಳು

2.6.2. ಪೀಠಿಕೆ

2.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.6.3.1. ಸಾಮಾಜಿಕ ನ್ಯಾಯದ ಪರಿಕಲ್ಪನೆ ಮತ್ತು ಶಾಲೆಯಲ್ಲಿ ಸಾಮಾಜಿಕ ನ್ಯಾಯದ ಸಂಸ್ಕೃತಿ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

2.6.3.2. ಶಾಲಾ ವಿಷಯಗಳು ಮತ್ತು ಸಾಮಾಜಿಕ ನ್ಯಾಯ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

2.6.4. ಸಾರಾಂಶಿಸೋಣ

2.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

2.6.6. ಘಟಕಾಂತ್ಯ ಅಭ್ಯಾಸಗಳು

2.6.7. ಪರಾಮರ್ಶನ ಸೂಚಿ


### 2.6.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಸಾಮಾಜಿಕ ನ್ಯಾಯದ ಅರ್ಥವನ್ನು ವಿವರಿಸುವರು;
- ಸಾಮಾಜಿಕ ನ್ಯಾಯದ ಮನೋಭಾವವನ್ನು ಬೆಳೆಸಲು ಶಾಲೆಯಲ್ಲಿರಬೇಕಾದ ಪರಿಸರವನ್ನು ಕುರಿತು ವಿವರಿಸುವರು; ಮತ್ತು
- ವಿವಿಧ ವಿಷಯಗಳನ್ನು ಬೋಧಿಸುವಾಗ ಸಾಮಾಜಿಕ ನ್ಯಾಯದ ಮನೋಭಾವವನ್ನು ಹೇಗೆ ಬೆಳೆಸಬಹುದು ಎಂಬುದನ್ನು ವಿವರಿಸುವರು.

### 2.6.2. ಪೀಠಿಕೆ

ಶಾಲೆಗಳು ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆಯಲು ಸಹಾಯಮಾಡುವುದಕ್ಕಿಂತ ಉನ್ನತವಾದ ಗುರಿಗಳನ್ನು ರೂಪಿಸಿಕೊಂಡಿರುತ್ತವೆ ಎಂಬ ವಿಷಯ ನಮಗೆ ತಿಳಿದಿದೆ. ಈ ಗುರಿಗಳು ಪ್ರಮುಖವಾಗಿ ಅಪೇಕ್ಷಣೀಯವಾದ ಮೌಲ್ಯಗಳನ್ನು ಮತ್ತು ಮನೋಭಾವಗಳನ್ನು ಬೆಳೆಸಿ, ಮಕ್ಕಳ ವ್ಯಕ್ತಿತ್ವವನ್ನು ರೂಪಿಸಿ ಆ ಮೂಲಕ ಒಟ್ಟು ಸಮಾಜಕ್ಕೆ ಒಳಿತಾಗುವಂತೆ ಮಾಡುವುದಕ್ಕೆ ಸಂಬಂಧಿಸಿದುದಾಗಿದೆ. ಇಂತಹ ಮೌಲ್ಯಗಳಲ್ಲಿ ಸಾಮಾಜಿಕ ನ್ಯಾಯವೂ ಒಂದು. ಸಾಮಾಜಿಕ ನ್ಯಾಯವು ನಿಜವಾದ ಅರ್ಥದಲ್ಲಿ ಪ್ರಜಾಪ್ರಭುತ್ವದ

ಪೌರರನ್ನು ರೂಪಿಸಲು ಸಹಾಯಮಾಡುತ್ತದೆ. ಅಲ್ಲದೆ ಆ ಮೂಲಕ ಪ್ರಜಾಪ್ರಭುತ್ವ ಸಮಾಜಕ್ಕೆ ತಮ್ಮ ಕಾಣಿಕೆಯನ್ನು ಕೊಡುವಂತೆ ಪ್ರೇರೇಪಿಸುತ್ತದೆ. ಹಾಗಾಗಿ, ಈ ಘಟಕದಲ್ಲಿ ಸಾಮಾಜಿಕ ನ್ಯಾಯ ಎಂದರೇನು, ಒಟ್ಟು ಶಾಲಾ ಪರಿಸರದಲ್ಲಿ ಹಾಗೂ ವಿವಿಧ ವಿಷಯಗಳ ಮೂಲಕ ಈ ಸಾಮಾಜಿಕ ನ್ಯಾಯದ ಮನೋಭಾವವನ್ನು ಮಕ್ಕಳಲ್ಲಿ ಹೇಗೆ ಬೆಳೆಸಬಹುದು ಎಂಬುದನ್ನು ವಿಚಾರಮಾಡೋಣ.

## 2.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 2.6.3.1. ಸಾಮಾಜಿಕ ನ್ಯಾಯದ ಪರಿಕಲ್ಪನೆ ಮತ್ತು ಶಾಲೆಯಲ್ಲಿ ಸಾಮಾಜಿಕ ನ್ಯಾಯದ ಸಂಸ್ಕೃತಿ

ಸಮಾಜದಲ್ಲಿ ಸಾಮಾಜಿಕ ನ್ಯಾಯವನ್ನು ಸ್ಥಾಪಿಸಬೇಕಾದರೆ ಅದು ಶಾಲೆಯಲ್ಲಿ, ತರಗತಿಗಳಲ್ಲಿ ಮೊದಲುಗೊಳ್ಳಬೇಕು. ಈ ಕಾರಣದಿಂದಾಗಿ ಸಾಮಾಜಿಕ ನ್ಯಾಯವನ್ನು ಕುರಿತ ಶಿಕ್ಷಣವು ಒಟ್ಟು ಶಾಲಾ ಚಟುವಟಿಕೆಯ ಅನಿವಾರ್ಯ ಭಾಗವಾಗಬೇಕು. ಇದು ಎಲ್ಲ ಮಕ್ಕಳಿಗೂ ಸಮಾನವಾದ ಮತ್ತು ಗುಣಮಟ್ಟದ ಶಿಕ್ಷಣವನ್ನು ನೀಡುವುದಕ್ಕೆ ಸಂಬಂಧಿಸಿದುದು. ಇದು ಒಂದು ರೀತಿಯಲ್ಲಿ ಪ್ರಕ್ರಿಯೆಯೂ ಹೌದು; ಗುರಿಯೂ ಹೌದು. ಜನರು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವ ನಿಟ್ಟಿನಲ್ಲಿ ಸಮಾಜದಲ್ಲಿ ಎಲ್ಲರ ಸಮಭಾವದ ಸಮಭಾಗದ ಭಾಗವಹಿಕೆ ಇರುವಂತೆ ಮಾಡುವುದೇ  ಸಾಮಾಜಿಕ ನ್ಯಾಯದ ಗುರಿ.

ಸಾಮಾಜಿಕ ನ್ಯಾಯವು ಸಮಾಜದ ಕಾಣ್ಕೆಯನ್ನು ಪ್ರತಿಬಿಂಬಿಸುತ್ತದೆ. ಇದರ ಪ್ರಕಾರ ಸಮಾಜದ ಸಂಪನ್ಮೂಲಗಳು ಎಲ್ಲರಿಗೂ ಸಮನಾಗಿ ಹಂಚಿಕೆಯಾಗಬೇಕು. ಮತ್ತು ಅದು ಭೌತಿಕವಾಗಿ ಮತ್ತು ಮನೋವೈಜ್ಞಾನಿಕವಾಗಿ ಸುಭದ್ರವಾಗಿರಬೇಕು. ಈ ರೀತಿಯ ಸಮುದಾಯದಲ್ಲಿ ಜನರೂ ಸ್ವಯಂ ನಿರ್ಧಾರವುಳ್ಳವರೂ ಪರಸ್ಪರಾವಲಂಬಿಗಳೂ ಆಗಿರುತ್ತಾರೆ.

ಶಾಲೆಗಳು ಸಾಮಾಜಿಕ ಬದಲಾವಣೆಗಳನ್ನು ಮನಗಾಣಿಸುವ ರಂಗಸ್ಥಳ. ಇದು ಹೊಸ ವಿಚಾರಗಳನ್ನು ಹುಟ್ಟುಹಾಕಲು ಮತ್ತು ಬೆಳೆಸಲು ಸೂಕ್ತ ಸ್ಥಳ ಎಂಬುದು ಐತಿಹಾಸಿಕವಾಗಿ ತಿಳಿದು ಬಂದಿದೆ. ಶೈಕ್ಷಣಿಕ ವಿಷಯಗಳ ಜೊತೆಜೊತೆಯಲ್ಲೇ ಮಕ್ಕಳಲ್ಲಿ ವಿಮರ್ಶಾತ್ಮಕ ಚಿಂತನೆ, ಸಹಬಾಳ್ವೆ, ಪ್ರತಿಫಲಿತ ಚಿಂತನೆ ಮುಂತಾದ ಬದುಕಿನ ಮಹತ್ವದ ಮೌಲ್ಯಗಳನ್ನು ಬೆಳೆಸುವುದೂ ಶಾಲೆಯ ಜವಾಬ್ದಾರಿಯಾಗಿರುತ್ತದೆ. ಈ ಎಲ್ಲದರ ಫಲವಾಗಿ ರೂಪುಗೊಳ್ಳುವುದೇ ಸಾಮಾಜಿಕ ನ್ಯಾಯ.

ಸಾಮಾಜಿಕ ನ್ಯಾಯ ಎಂಬುದು ಹಠಾತ್ತಾಗಿ ಹುಟ್ಟಿಕೊಳ್ಳುವ ಅಂಶವಲ್ಲ. ಒಂದು ನಿರ್ದಿಷ್ಟ ರೀತಿಯ ಬೋಧನೆಯಿಂದ ಬೆಳೆಯುವಂತಹುದೂ ಅಲ್ಲ. ಈ ಮೌಲ್ಯವನ್ನು ರೂಢಿಸಿಕೊಳ್ಳುವದರಲ್ಲಿ ಗಮನವುಳ್ಳವರು ತಮ್ಮನ್ನೂ ಇತರರನ್ನೂ ಕುರಿತ ವಿಮರ್ಶಾತ್ಮಕ ವಿಶ್ಲೇಷಣೆಯನ್ನು ಮಾಡುತ್ತಲೇ ಅವರ ಮತ್ತು ಅವರ ಸುತ್ತಮುತ್ತಲಿನವರ ವ್ಯವಹಾರದಲ್ಲಿ ಕಾಣಬರುವ ಅಸಮಾನತೆ,  ಭೇದಭಾವವನ್ನು ಗುರುತಿಸುತ್ತಲೇ ಅವುಗಳಿಗೆ ಪರಿಹಾರವನ್ನೂ ಹುಡುಕುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿರುತ್ತಾರೆ. ಸಾಮಾಜಿಕ ನ್ಯಾಯವು ಯಾವುದೇ ರೀತಿಯ ಜಾತಿ, ಲಿಂಗ, ಧರ್ಮ, ವರಮಾನ ಅಥವಾ ಅಸಾಮರ್ಥ್ಯಗಳ ಗಣನೆ ಇಲ್ಲದೆ ಎಲ್ಲರಿಗೂ ಸಮಾಜದ ಸಂಪನ್ಮೂಲಗಳ ಹಂಚಿಕೆ ಮತ್ತು ಸಮಾನ ಸೇವೆ ಹಾಗೂ ಗೌರವಗಳು ಸಿಗುವ ಸಮುದಾಯವನ್ನು ಸೃಷ್ಟಿಸುವಲ್ಲಿ ಸಫಲವಾಗುತ್ತದೆ. ಈ ಅಂಶಗಳ ಕುರಿತ ಮಾತುಕತೆ ಅಥವಾ ಚರ್ಚೆಗೆ ಮಕ್ಕಳನ್ನು ಒಳಪಡಿಸುವುದರಿಂದ ಅವರು ತಮ್ಮ ಕಾಳಜಿಗಳನ್ನು ವ್ಯಕ್ತಪಡಿಸುವುದು ಮಾತ್ರವಲ್ಲದೆ ತಮ್ಮ ಬದುಕಿನಲ್ಲಿ ತಮ್ಮ ಸುತ್ತಮುತ್ತ ಕಾಣಬರುವ ನ್ಯಾಯಯುತವಲ್ಲದ ಸನ್ನಿವೇಶಗಳನ್ನು ಗುರುತಿಸಲು ಮತ್ತು ಅವುಗಳನ್ನು ಸರಿಪಡಿಸುವಲ್ಲಿ ತಮ್ಮ ಜವಾಬ್ದಾರಿ ಇದೆ ಎಂಬುದನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ.

- ನಿರ್ಧಾರ ತೆಗೆದುಕೊಳ್ಳುವವರು ಯಾರು? ಯಾರನ್ನು ಗಮನಕ್ಕೆ ತೆಗೆದುಕೊಂಡಿಲ್ಲ?
- ಲಾಭ ಪಡೆಯುವವರು ವ್ಯವಸ್ಥೆಯಲ್ಲಿರುವ ಅಸಮಾನತೆಯನ್ನು ಕಂಡುಕೊಳ್ಳುವಲ್ಲಿ ಅಧ್ಯಾಪಕರು ಕೆಳಗಿನ ಪ್ರಶ್ನೆಗಳನ್ನು ಕೇಳಿಕೊಳ್ಳಲು ಮಕ್ಕಳನ್ನು ಪ್ರಚೋದಿಸಬೇಕು.

- ಯಾರು? ನೋವನುಭವಿಸುವವರು ಯಾರು?
- ಒಂದು ನಿರ್ದಿಷ್ಟ ಆಚರಣೆ ನ್ಯಾಯಯುತವಾಗಿದೆಯೇ? ಹಾಗಿಲ್ಲದಿದ್ದರೆ ಏಕೆ? ಅದನ್ನು ಸರಿಪಡಿಸುವುದು ಹೇಗೆ? ಅದಕ್ಕೆ ಯಾವ ಪರ್ಯಾಯಗಳು ಪರಿಣಾಮಕಾರಿ?

ಇಂತಹ ಪ್ರಶ್ನೆಗಳ ಮೂಲಕ ಮಕ್ಕಳು ಸೂಕ್ಷ್ಮ ಮತ್ತು ಸ್ಥೂಲ ಸನ್ನಿವೇಶಗಳಲ್ಲಿ ಸಾಮಾಜಿಕ ನ್ಯಾಯದ ಅಸ್ತಿತ್ವವನ್ನು ಗುರುತಿಸಬಹುದು.

ಇಂದಿನ ಶಿಕ್ಷಣ ವ್ಯವಸ್ಥೆಯನ್ನು ಗಮನಿಸಿದ ತಜ್ಞರು 'ತರಗತಿಗಳ ಕುರಿತು ಮರುಚಿಂತನೆ' ಮಾಡಬೇಕಾದ ಅಗತ್ಯ ಇಂದು ಅನಿವಾರ್ಯವಾಗಿದೆ ಎಂದು ಸೂಚಿಸಿದ್ದಾರೆ. ಏಕೆಂದರೆ ವೈಯಕ್ತಿಕವಾದ ಸಾಮಾಜಿಕವಾದ ಸನ್ನಿವೇಶಗಳನ್ನು 'ನ್ಯಾಯಯುತ'ವಾದ ರೀತಿಯಲ್ಲಿ ಗಮನಿಸಿ ವರ್ತಿಸಲು ಅಗತ್ಯವಾದ ಸಾಮರ್ಥ್ಯಗಳನ್ನು ಶಾಲೆಗಳು ಇಂದು ಬೆಳೆಸುತ್ತಿಲ್ಲ. ಶಾಲೆಗಳೇ ಈ ಜವಾಬ್ದಾರಿಯನ್ನು ವಹಿಸದಿದ್ದರೆ ಇನ್ನಾರು ವಹಿಸುವರು? ಶಾಲೆಗಳು ಮಾತ್ರ ಸಮುದಾಯವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಲು ಅಗತ್ಯವಾದ ಕೌಶಲಗಳನ್ನು ಮತ್ತು ಸಾಮರ್ಥ್ಯಗಳನ್ನು ಬೆಳೆಸುವಲ್ಲಿ ಸಮರ್ಥವಾಗಿರುತ್ತವೆ.

ಮಕ್ಕಳಲ್ಲಿ ಸಾಮಾಜಿಕ ನ್ಯಾಯವನ್ನು ಬೆಳೆಸುವುದಾದರೆ ಶಾಲೆಗಳಲ್ಲಿ ನಿರ್ದಿಷ್ಟ ರೀತಿಯ ಪರಿಸರ ರೂಪುಗೊಳ್ಳಬೇಕಾಗುತ್ತದೆ. ಕೆಳಗಿನ ಅಭ್ಯಾಸಗಳು ಈ ಪರಿಸರವನ್ನು ಸೃಷ್ಟಿಸುವಲ್ಲಿ ಸಹಕಾರಿಯಾಗುತ್ತವೆ:

- ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅನುಭವಗಳನ್ನು, ನಂಬಿಕೆಗಳನ್ನು, ಅಭಿಪ್ರಾಯಗಳನ್ನು ಮತ್ತು ಸಲಹೆಗಳನ್ನು ಸಲೀಸಾಗಿ ವ್ಯಕ್ತಪಡಿಸಲು ಸುಗಮವಾಗಿರುವ ಮತ್ತು ಪ್ರೋತ್ಸಾಹಕವಾದ ಪರಿಸರವನ್ನು ಸೃಷ್ಟಿಸಬೇಕು;
- ತರಗತಿಗಳು ಆತ್ಮಸಾಕ್ಷಿಯ ಮೇಲೆ ನಡೆದುಕೊಳ್ಳುವ ವ್ಯಕ್ತಿಗಳ ತಾಣವಾಗಬೇಕು. ಆತ್ಮಸಾಕ್ಷಿಯ ಮೇಲೆ ವ್ಯವಹರಿಸುವ ಸಮುದಾಯ ಇದರಿಂದಾಗಿ ತಾನೇ ತಾನಾಗಿ ರೂಪುಗೊಳ್ಳುತ್ತದೆ. ಈ ಸಮುದಾಯವು ಒಂದು ನಿರ್ದಿಷ್ಟ ನೀತಿಸಂಹಿತೆಯ ಆಧಾರದ ಮೇಲೆ ನಡೆದುಕೊಳ್ಳುತ್ತದೆ. ಈ ನೀತಿಸಂಹಿತೆಗೆ ಸಾಮಾಜಿಕ ನ್ಯಾಯವೇ ಮಾನದಂಡವಾಗಬೇಕು. ಇದು ತರಗತಿ ವರ್ತನೆಗಳಲ್ಲೂ ನ್ಯಾಯಪರತೆಯನ್ನು ಪೋಷಿಸುತ್ತದೆ; ಮಕ್ಕಳಲ್ಲಿ ರಚನಾತ್ಮಕವಾದ ಚರ್ಚೆ, ಸಂವಾದಗಳನ್ನು ಏರ್ಪಡಿಸಬೇಕು. ಭಿನ್ನಾಭಿಪ್ರಾಯಗಳನ್ನು ಪರಸ್ಪರ ಗೌರವಿಸುವ ಮನಸ್ಥಿತಿಯನ್ನು ಪ್ರೋತ್ಸಾಹಿಸಬೇಕು. ಅಂತಹವರನ್ನು ಮಾದರಿಯಾಗಿ ತೋರಿಸಬೇಕು. ಭಿನ್ನಾಭಿಪ್ರಾಯಗಳು ವಿಚಾರಗಳಿಗೆ ಸಂಬಂಧಿಸಿದುದೇ ವಿನಾ ವ್ಯಕ್ತಿಗೆ ಸಂಬಂಧಿಸಿದುದಲ್ಲ ಎಂಬ ಕಠಿಣ ಗ್ರಾಹಿಯಾದ ಸತ್ಯವನ್ನು ಅನಾವರಣಗೊಳಿಸಬೇಕು;
- ಯಾವ ರೀತಿಯ ಪ್ರಶ್ನೆಗಳು ಮತ್ತು ಉತ್ತರಗಳು, ಒಟ್ಟಿನಲ್ಲಿ ಮಾತುಗಳು, ಪರಸ್ಪರ ಗೌರವಿಸುವ ಭಾವವನ್ನು ಹುಟ್ಟಿಸುತ್ತವೆ, ಯಾವ ಮಾತುಗಳು ಅಡ್ಡಿ ತರುತ್ತವೆ ಎಂಬುದನ್ನು ಪ್ರಾತ್ಯಕ್ಷಿಕೆಯೊಂದಿಗೆ ಮನದಟ್ಟುಮಾಡಬೇಕು. (ಉದಾಹರಣೆಗೆ, 'ನೀವು ಹೇಳುವುದು ಸರಿ ಆದರೆ.' ಎಂಬುದಕ್ಕೂ 'ಹಾಗಲ್ಲ, ಇದು ಹೀಗೆ' ಎಂದು ಹೇಳುವುದಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಿ). 'ನಾನು ಹೇಳುತ್ತಿರುವ ಮಾತುಗಳನ್ನು ಕುರಿತು ಆಲೋಚಿಸಿ', 'ನನಗೆ ಹೀಗೂ ಅಲೋಚಿಸಬಹುದೇನೋ ಎನಿಸುತ್ತದೆ' ಇತ್ಯಾದಿ ಮಾತುಗಳು ಚರ್ಚೆಯನ್ನು ಧನಾತ್ಮಕವಾಗಿ ಪೋಷಿಸುತ್ತವೆ.
- ವಿದ್ಯಾರ್ಥಿಗಳು ಒಬ್ಬರನ್ನೊಬ್ಬರು ಪ್ರತಿಸ್ಪರ್ಧಿಗಳಾಗಿ ನೋಡುವ ಬದಲಿಗೆ ಸಹಪಾಠಿಗಳಾಗಿ ನೋಡಲು ಪ್ರೋತ್ಸಾಹಿಸಬೇಕು. ಅವರು ತಮ್ಮ ಸಹಪಾಠಿಗಳನ್ನು ಶೈಕ್ಷಣಿಕ ಸಹೋದರರಂತೆ, ಸಹೋದರಿಯರಂತೆ ಕಾಣಬೇಕು.
- ಪ್ರತಿಯೊಬ್ಬ ವಿದ್ಯಾರ್ಥಿ/ವಿದ್ಯಾರ್ಥಿನಿಯ ಜೊತೆಗೂ ಮಾತಾಡಬೇಕು. ಪ್ರತಿಯೊಬ್ಬರು ಹೇಳಿದದನ್ನೂ ಕೇಳಬೇಕು, ಗೌರವಿಸಬೇಕು.

- ಭಿನ್ನ ಸಂಸ್ಕೃತಿಯಿಂದ ಬಂದ ಮಕ್ಕಳ ಅರಿವನ್ನು ತರಗತಿಯನ್ನು ಶ್ರೀಮಂತಗೊಳಿಸಲು ಒಂದು ಸಂಪನ್ಮೂಲದಂತೆ ಬಳಸಬೇಕು. ಇದು ಸಂಸ್ಕೃತಿಯನ್ನು ಕುರಿತಂತೆ ಸಮಗ್ರವಾದ ಅರಿವು ಕಟ್ಟಿಕೊಳ್ಳಲು ಸಹಾಯಕವಾಗುವುದಲ್ಲದೆ, ಆಯಾ ಸಂಸ್ಕೃತಿಯ ಮಕ್ಕಳಿಗೆ ಅವರ ಸಂಸ್ಕೃತಿಯನ್ನು ಕುರಿತಂತೆ ಅಭಿಮಾನ ಹುಟ್ಟಿಕೊಳ್ಳುತ್ತದೆ. ಅದನ್ನು ಉಳಿಸಿಕೊಳ್ಳುವ ಕಾಳಜಿ ಮೂಡುತ್ತದೆ. ಆತ್ಮವಿಶ್ವಾಸ, ಆತ್ಮಗೌರವ ಹೆಚ್ಚುತ್ತದೆ.
- ಬೋಧನಾ ಸಾಮಗ್ರಿಗಳ ವಿಷಯವನ್ನು, ಅಂದರೆ ಪಠ್ಯಪುಸ್ತಕಗಳು, ಪೂರಕ ಪುಸ್ತಕಗಳು ಇವುಗಳಲ್ಲಿನ ವಿಷಯಗಳನ್ನು ಸಿದ್ಧ ಮಾಹಿತಿಗಳಾಗಿ ಬಳಸದೆ ಅವುಗಳನ್ನು ವಿಮರ್ಶೆಗೆ, ಚರ್ಚೆಗೆ ಒಳಪಡಿಸಬೇಕು. ಒಂದು ರೀತಿಯಲ್ಲಿ ಮಕ್ಕಳು ಆ ಅಂಶಗಳನ್ನು ಮೌಲ್ಯೀಕರಿಸಿಕೊಳ್ಳಲು ಸಹಾಯಮಾಡಬೇಕು. ಬಹಳಷ್ಟು ಸಲ ಅಧ್ಯಾಪಕರು ಕೆಲವು ವಿಷಯಗಳನ್ನು ಸಮಗ್ರವಾಗಿ ವಿಶ್ಲೇಷಿಸುವುದಿಲ್ಲ. ಉದಾಹರಣೆಗೆ, ಭಾರತೀಯ ಸಮಾಜದಲ್ಲಿ 'ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವಿಭಾಗಗಳಿದ್ದವು' ಎಂಬಲ್ಲಿಗೇ ಪಾಠ ನಿಂತುಹೋಗುತ್ತದೆ. ಅದರ ಸಾಧಕ ಬಾಧಕಗಳೇನು, ಅವು ಮುಂದೆ ನಮ್ಮ ಸಮಾಜಕ್ಕೆ ಒಡ್ಡಿದ ಸವಾಲುಗಳಾವುವು  ಈ ಕುರಿತ ಆಲೋಚನೆಗೆ ಅವರನ್ನು ಹಚ್ಚಬೇಕು.
- ಸ್ವ ಪ್ರತಿಫಲನಕ್ಕೆ ಅವಕಾಶ ನೀಡಬೇಕು. 'ನೀವು ಈ ಸನ್ನಿವೇಶದಲ್ಲಿ ಹೇಗೆ ನಡೆದುಕೊಂಡಿರುವಿರಿ?' 'ನೀವು ಇಂತಹ ಸನ್ನಿವೇಶದಲ್ಲಿ ಹೇಗೆ ನಡೆದುಕೊಳ್ಳುವಿರಿ?' ಇತ್ಯಾದಿ ಪ್ರಶ್ನೆಗಳು ಮಕ್ಕಳ ಸ್ವ ಪರಿಶೀಲನೆಗೆ ಸಹಾಯಮಾಡುತ್ತವೆ.
- ಸಮೂಹ ಮಾಧ್ಯಮಗಳಲ್ಲಿ ಬರುವ ವಿಚಾರಗಳನ್ನು ಗಮನಿಸಲು, ವಿಶ್ಲೇಷಿಸಲು, ವಿಚಾರಮಾಡಲು ಮಕ್ಕಳನ್ನು ಪ್ರೋತ್ಸಾಹಿಸಬೇಕು. ಸಮುದಾಯದಲ್ಲಿನ ಭೇದಭಾವಗಳನ್ನು ಅವು ಎಷ್ಟರಮಟ್ಟಿಗೆ ಬಿತ್ತರಿಸುತ್ತಿವೆ, ಯಾರ ಪರವಾಗಿವೆ? ಪಕ್ಷಪಾತ ರಹಿತವಾದ ಮನೋಭಾವ ಯಾವ ಮಾಧ್ಯಮದಲ್ಲಿ ಕಾಣಬರುತ್ತದೆ ಇತ್ಯಾದಿ ಚಿಂತನೆಗೆ ಪ್ರೇರೇಪಿಸಬೇಕು.

ಒಟ್ಟಿನಲ್ಲಿ ಸಾಮಾಜಿಕ ನ್ಯಾಯದ ಅರಿವು, ಮನೋಭಾವ, ಅದನ್ನು ನಡೆಸಿಕೊಂಡು ಹೋಗುವ ಸಾಮರ್ಥ್ಯ ಇವು ನೆಟ್ಟ ಪ್ರಯತ್ನದಿಂದ, ಜಾಗರೂಕ ವರ್ತನಾ ಅನ್ವಯಗಳಿಂದ, ಸತತ ಗಮನದಿಂದ ಸಾಧ್ಯವಾಗುವಂತಹುದು. ಜೊತೆಗೆ ಶಾಲೆಯ ಎಲ್ಲ ಸಿಬ್ಬಂದಿಗಳ ಸಹಕಾರ ಇದಕ್ಕೆ ಅತಿ ಅಗತ್ಯ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

1. ನಿಮ್ಮ ಶಾಲೆಯಲ್ಲಿ ಸಾಮಾಜಿಕ ನ್ಯಾಯದ ಪರಿಸರವನ್ನು ಹರಡುವಲ್ಲಿ ನೀವೆಷ್ಟು ಸಫಲರಾಗಿರುವಿರಿ ಎಂದು ತಿಳಿಯಲು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.
2. ಕಲಿಕಾ ಸಮುದಾಯವಾಗಿ ಸಾಮಾಜಿಕ ನ್ಯಾಯವನ್ನು ಉದ್ದೇಶಿಸಿ ಬೆಳೆಸಲು ನಿಮ್ಮ ಶಾಲೆಯಲ್ಲಿ ರೂಪಿಸಿಕೊಂಡಿರುವ ಕ್ರಮಗಳೇನು?
3. ಸಾಮಾಜಿಕ ನ್ಯಾಯದ ವಿಚಾರಗಳನ್ನು ಬೆಳೆಸಲು ನೀವು ತರಗತಿಗಳಲ್ಲಿ ಕೈಗೊಂಡಿರುವ ಕ್ರಮಗಳಾವುವು?
4. ನಿಮ್ಮ ಶಾಲೆಯಲ್ಲಿ ಸಾಮಾಜಿಕ ನ್ಯಾಯದ ಮನೋಭಾವವನ್ನು ಬೆಳೆಸಲು ನೀವು ಮತ್ತೇನು ಮಾಡಬಹುದು?

## 2.6.3.2. ಶಾಲಾ ವಿಷಯಗಳು ಮತ್ತು ಸಾಮಾಜಿಕ ನ್ಯಾಯ

ನೀವು ನಿಮ್ಮ ಶಾಲೆಗಳಲ್ಲಿ ಒಂದು ಅಥವಾ ಎರಡು ವಿಷಯಗಳನ್ನು ಕಲಿಸುತ್ತಿದ್ದೀರಿ. ನಿಮಗೆ ಈಗಾಗಲೇ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಅರಿವಾಗಿದೆ. ನಿಮ್ಮ ವಿದ್ಯಾರ್ಥಿ/ ವಿದ್ಯಾರ್ಥಿನಿಯರಲ್ಲಿ ಸಾಮಾಜಿಕ ನ್ಯಾಯದ ಕಳಕಳಿಯನ್ನು ಬೆಳೆಸಲು ಪೂರಕವಾದ ವಿಷಯಗಳನ್ನು ಪಟ್ಟಿಮಾಡಿ.

ಕೆಳಗೆ ಕೆಲವು ವಿಷಯಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸಾಮಾಜಿಕ ನ್ಯಾಯದ ಮನೋಭಾವವನ್ನು ಬೆಳೆಸಲು ಅವಕಾಶವಿರುವ ವಿಷಯಗಳನ್ನು ಗುರುತಿಸಿ

- ಪ್ರಜಾಪ್ರಭುತ್ವದ ವಿಧಗಳು
- ಅಕ್ಬರನ ರಾಜ್ಯಭಾರಕ್ರಮ
- ಆಮ್ಲದ ಗುಣಗಳು
- ನೀರಿನ ಸಂಪನ್ಮೂಲಗಳು
- ಭಾರತದ ಸಾಮಾಜಿಕ ಸವಾಲುಗಳು
- ಅನುಪಾತ
- ಸರಳಬಡ್ಡಿ
- ಚಕ್ರಬಡ್ಡಿ

ಶಾಲೆಗಳಲ್ಲಿ ಬೋಧಿಸುವ ಅನೇಕ ವಿಷಯಗಳ ಮೂಲಕ ಜನಸಂಖ್ಯೆ, ಲಿಂಗತ್ವ ವಿಚಾರಗಳು ಇತ್ಯಾದಿ ವಿಷಯಗಳನ್ನು ಕುರಿತ ಸಂವೇದನೆಯನ್ನು ಬೆಳೆಸಬಹುದು. ಅಂತೆಯೇ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು, ಅದರ ಮೌಲ್ಯವನ್ನು ಮತ್ತು ಅಭ್ಯಾಸವನ್ನು ಪರಿಣಾಮಕಾರಿಯಾಗಿ ಬೆಳೆಸಲು ಈ ಶಾಲಾ ವಿಷಯಗಳಿಂದ ಸಾಧ್ಯವಾಗುತ್ತದೆ. ಇಂತಹ ವಿಷಯಗಳ ಚರ್ಚೆಯಿಂದ ವಿಷಯಗಳ ಕಲಿಕೆ ಆಸಕ್ತಿಯುತವಾಗುವುದು ಮಾತ್ರವಲ್ಲದೆ, ಕಲಿಕೆ ಹೆಚ್ಚು ಅರ್ಥಪೂರ್ಣವೂ ಬದುಕಿಗೆ ಹತ್ತಿರವೆಂದೆನಿಸುವಂತಹುದೂ ಆಗುತ್ತದೆ.

ಇಂತಹ ವಿಷಯಗಳನ್ನು 'ಇಲ್ಲಿ' 'ಹೀಗೆ' ಬೋಧಿಸಬೇಕು ಎಂಬ ಸೂಚನೆ ಯಾವ ಪಠ್ಯದಲ್ಲೂ ಇರುವುದಿಲ್ಲ. ಇದು ಪ್ರತಿ ಅಧ್ಯಾಪಕನೂ ಸಮಾಜದ ಕುರಿತಾದ, ಮಕ್ಕಳ ಕುರಿತಾದ ಕಾಳಜಿಯಿಂದ ಸ್ವಯಂ ಪ್ರೇರಿತನಾಗಿ ಕಲಿಸಬೇಕಾದ ವಿಷಯ. ಇದಕ್ಕೆ ಅಧ್ಯಾಪಕರು ಒಂದು ಮಟ್ಟದ ಪರಿಣತಿಯನ್ನೂ ಬೆಳೆಸಿಕೊಳ್ಳಬೇಕಾಗುತ್ತದೆ. ಹೆಚ್ಚು ಹೆಚ್ಚು ಅಧ್ಯಯನ, ವಿಚಾರವಂತಿಕೆ, ಧನಾತ್ಮಕ ಆಲೋಚನೆ ಇವುಗಳಲ್ಲಿ ಅಧ್ಯಾಪಕ ನೆಲೆಗೊಳ್ಳಬೇಕಾಗುತ್ತದೆ. ಒಂದು ವ್ಯವಸ್ಥಿತವಾದ, ಸೃಜನಶೀಲವಾದ ಯೋಜನೆ ಧನಾತ್ಮಕವಾದ ಸಾಮಾಜಿಕ ನ್ಯಾಯದ ಮನೋಭಾವವನ್ನು ಮೂಡಿಸುವುದರಲ್ಲಿ ಸಂದೇಹವಿಲ್ಲ.

ಈಗಾಗಲೇ ಹೇಳಿದಂತೆ ಶಾಲೆಗಳು ತಮ್ಮ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯವನ್ನು ಬಿಂಬಿಸುವ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಶಾಲೆಯ ನಿಯಮಗಳು, ಅಭ್ಯಾಸಗಳು ಮತ್ತು ರೂಢಿಗಳು ಸಾಮಾಜಿಕ ನ್ಯಾಯತತ್ವದ ಮೇಲೆಯೇ ರೂಪುಗೊಳ್ಳಬೇಕು. ಮಕ್ಕಳು ಶಾಲೆಯ ಒಳಗೆ ಸಾಮಾಜಿಕ ನ್ಯಾಯವನ್ನು ಕಂಡುಕೊಂಡರೆ ಅದನ್ನು ಹೊರಗಿನ ಸಮಾಜಕ್ಕೆ ಕೊಂಡೊಯ್ಯುತ್ತಾರೆ.

ಶಾಲಾ ವಿಷಯಗಳನ್ನು ಬೋಧಿಸುವಾಗಲೂ ಸನ್ನಿವೇಶ ಒದಗಿಬಂದಾಗಲೆಲ್ಲಾ ಸಾಮಾಜಿಕ ನ್ಯಾಯವನ್ನು ರೂಢಿಸಿಕೊಂಡ ಮನಸ್ಸನ್ನು ಬೆಳೆಸಲು ಪ್ರಯತ್ನಿಸಬೇಕು. ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ಭಾಷೆ ಈ ಎಲ್ಲ ವಿಷಯಗಳಲ್ಲೂ ಸಾಮಾಜಿಕ ನ್ಯಾಯವನ್ನು ಬೆಳೆಸಬಹುದಾದ ಹಲವಾರು ಸನ್ನಿವೇಶಗಳು ಸಹಜವಾಗಿಯೇ

ಮೂಡುತ್ತವೆ. ಅವುಗಳನ್ನು ಧನಾತ್ಮಕವಾಗಿ ಬಳಸಿಕೊಳ್ಳಬೇಕು. ಉದಾಹರಣೆಗೆ, ಗಣಿತ ಪಾಠದಲ್ಲಿ ಅನುಪಾತ, ಸರಳಬಡ್ಡಿ, ಚಕ್ರಬಡ್ಡಿ ಇತ್ಯಾದಿ ವಿಷಯಗಳನ್ನು ವಿಸ್ತೃತ ಸನ್ನಿವೇಶಗಳಲ್ಲಿ ವಿವೇಚಿಸಲು ಅವಕಾಶಕೊಡಬೇಕು. ಸಾಮಾನ್ಯವಾಗಿ ಪುರುಷರಿಗೆ ಹೆಚ್ಚು ಕೂಲಿ ಮತ್ತು ಮಹಿಳೆಯರಿಗೆ ಕಡಿಮೆ ಕೂಲಿ ಕೊಡುವ ಸನ್ನಿವೇಶವನ್ನು ಅನುಪಾತವನ್ನು ಕಂಡುಹಿಡಿಯಲು ಕೊಡುವುದುಂಟು. ಅಂತಹ ಸನ್ನಿವೇಶಗಳಲ್ಲಿ ಮಕ್ಕಳು ಲೆಕ್ಕ ಮಾಡಿ ಮುಗಿಸಿದ ನಂತರ ಸ್ವಲ್ಪ ಮುಂದುವರಿಸಿ, ಮಕ್ಕಳೊಂದಿಗೆ ಚರ್ಚಿಸಿ, ಸೂಕ್ತ ನಿಗಮನಗಳನ್ನು ಕಂಡುಕೊಂಡು ಆ ಮೂಲಕ ಸಾಮಾಜಿಕ ನ್ಯಾಯವನ್ನು ಕುರಿತ ಆಲೋಚನೆಗೆ ಅವಕಾಶ ಕೊಡಬಹುದು. ಸಾಮಾಜಿಕ ನ್ಯಾಯದ ಮನೋಭಾವವನ್ನು ಬೆಳೆಸಲು ಅನುವು ಮಾಡಿಕೊಡುವ ಕೆಲವು ಸನ್ನಿವೇಶಗಳನ್ನು ಕೆಳಗೆ ಕೊಡಲಾಗಿದೆ. ಅವುಗಳನ್ನು ಸೂಕ್ಷ್ಮವಾಗಿ ಗಮನಿಸಿ, ಅವುಗಳ ಮೂಲಕ ಸಾಮಾಜಿಕ ನ್ಯಾಯದ ಮನೋಭಾವವನ್ನು ಬೆಳೆಸಲು ಪಾಠಯೋಜನೆಯನ್ನು ತಯಾರಿಸಿ.

**ಗಣಿತ**

| **ವಿಷಯ** | **ಸಮಸ್ಯೆ** | **ವಿಷಯ(ಗಣಿತ) ದೃಷ್ಟಿಯಿಂದ ಚರ್ಚೆ** | **ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಚರ್ಚೆ** |
|---|---|---|---|
| ಚಕ್ರಬಡ್ಡಿ | ಜಮೀನ್ದಾರನೊಬ್ಬನು ರೈತನಿಗೆ ಶೇ 20ರ ಚಕ್ರಬಡ್ಡಿದರದಲ್ಲಿ ಸಾಲಕೊಟ್ಟನು. ಮೂರು ವರ್ಷಗಳ ನಂತರ ರೈತನು ಹಿಂತಿರುಗಿಸಬೇಕಾದ ಒಟ್ಟು ಹಣವೆಷ್ಟು? | ಚಕ್ರಬಡ್ಡಿಯನ್ನು ಕಂಡುಹಿಡಿಯುವುದು ಹೇಗೆ ಎಂಬುದರ ಕುರಿತಾದ ಚರ್ಚೆ | ಶೇ 20ರ ಚಕ್ರಬಡ್ಡಿ ದರದಲ್ಲಿ ಸಾಲಕೊಡುವುದು ಎಷ್ಟು ನ್ಯಾಯಯುತವಾದುದು? ನಮ್ಮ ಸಮುದಾಯದಲ್ಲಿ ಹೀಗೆ ಆಗುತ್ತಿದೆಯೇ? ಅದರ ಪರಿಣಾಮಗಳೇನು? |
| ಅನುಪಾತ | ಒಂದು ತೋಟದಲ್ಲಿ ಒಂದು ದಿನಕ್ಕೆ ಪುರುಷರಿಗೆ ರೂ 350 ಮತ್ತು ಮಹಿಳೆಯರಿಗೆ ರೂ 200 ಕೊಡಲಾಗುತ್ತದೆ. ತೋಟದಲ್ಲಿ 5 ಪುರುಷರು 4 ಮಹಿಳೆಯರು ಕೆಲಸಮಾಡಿದರೆ 3 ದಿನಗಳಿಗೆ ಸಿಗುವ ಒಟ್ಟು ಹಣ ಎಷ್ಟು? | ಪುರುಷರು ಮತ್ತು ಮಹಿಳೆಯರ ಕೂಲಿಯ ಅನುಪಾತವನ್ನು ಕಂಡುಹಿಡಿಯುವ ವಿಧಾನವನ್ನು ಕುರಿತ ಚರ್ಚೆ | ನಮ್ಮ ಸಮಾಜದಲ್ಲಿ ಈ ರೀತಿಯ ತಾರತಮ್ಯ ಕಾಣಿಸುತ್ತದೆಯೇ? ಅದರ ಕುರಿತು ನಿಮ್ಮ ಅಭಿಪ್ರಾಯವೇನು? |

**ವಿಜ್ಞಾನ**

| ವಿಷಯ | ಚಟುವಟಿಕೆ | ವಿಷಯ(ವಿಜ್ಞಾನ) ದೃಷ್ಟಿಯಿಂದ ಚರ್ಚೆ | ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಚರ್ಚೆ |
|---|---|---|---|
| | ಸಮತೂಕ ಆಹಾರ ಎಂದರೇನು ಎಂಬುದರ ಕುರಿತು ಮಾಹಿತಿ ಸಂಗ್ರಹಿಸಿ. | ಸಮತೂಕ ಆಹಾರ ಅರ್ಥ ಮತ್ತು ಘಟಕಗಳ ಕುರಿತ ಚರ್ಚೆ | ನಮ್ಮ ಸಮಾಜದಲ್ಲಿ ಎಷ್ಟು ಜನರಿಗೆ ಸಮತೂಕ ಆಹಾರ ಸೇವಿಸಲು ಸಾಧ್ಯವಿದೆ? ಇದಕ್ಕೆ ಕಾರಣಗಳೇನು? ಅದನ್ನು ಪರಿಹರಿಸುವುದು ಹೇಗೆ? |
| ಕಲಬೆರಕೆ | ಕಲಬೆರಕೆಯ ಅರ್ಥವನ್ನೂ ಭಾರತದಲ್ಲಿ ಇದರ ಸ್ಥಿತಿ ಮತ್ತು ಪರಿಣಾಮಗಳನ್ನು ಕುರಿತ ಮಾಹಿತಿ ಸಂಗ್ರಹಿಸಿ | ಕಲಬೆರಕೆಯ ಅರ್ಥ ಮತ್ತು ಕಾರಣಗಳನ್ನು ಕುರಿತ ಚರ್ಚೆ | ಕಲಬೆರಕೆಯ ಪ್ರಭಾವ ನಗರಗಳಿಗಿಂತ ಗ್ರಾಮೀಣ ಜನರ ಮೇಲೆ ಹೆಚ್ಚು. ಏಕೆ? |

**ಸಮಾಜ ವಿಜ್ಞಾನ**

| ವಿಷಯ | ಚಟುವಟಿಕೆ | ವಿಷಯ(ಸಮಾಜ ವಿಜ್ಞಾನ) ದೃಷ್ಟಿಯಿಂದ ಚರ್ಚೆ | ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಚರ್ಚೆ |
|---|---|---|---|
| ಅನಕ್ಷರತೆ | ಅನಕ್ಷರತೆಯ ಅರ್ಥ, ಕಾರಣಗಳನ್ನು ಸಂಗ್ರಹಿಸಿ, ಇಂದಿನ ಭಾರತದಲ್ಲಿ ಅನಕ್ಷರತೆಯ ಪ್ರಮಾಣವನ್ನು ಕುರಿತ ಮಾಹಿತಿ ಸಂಗ್ರಹಿಸಿ, ಅದಕ್ಕೆ ಕಾರಣಗಳನ್ನು ಆಲೋಚಿಸಿ | ಇಂದಿನ ಭಾರತದಲ್ಲಿ ಅನಕ್ಷರತೆಯ ಪ್ರಮಾಣವನ್ನು ಅದಕ್ಕೆ ಕಾರಣಗಳನ್ನು ಕುರಿತ ಚರ್ಚೆ | ಅನಕ್ಷರಸ್ಥರಲ್ಲಿ ಬಡವರ ಪ್ರಮಾಣವೇ ಹೆಚ್ಚು. ಏಕೆ?ಅದಕ್ಕೆ ಕಾರಣಗಳೇನು? |
| ವರದಕ್ಷಿಣೆ | ವರದಕ್ಷಿಣೆ ಎಂದರೇನು? ಇದಕ್ಕೆ ಕಾರಣಗಳೇನು? | ವರದಕ್ಷಿಣೆಗೆ ಕಾರಣಗಳನ್ನು ಕುರಿತ ಚರ್ಚೆ | ಕರ್ನಾಟಕದಲ್ಲಿ ವರದಕ್ಷಿಣೆಯ ಪ್ರಮಾಣ ಎಷ್ಟು?ಇದರ ಪರಿಣಾಮಗಳೇನು? ಇದು ಎಷ್ಟರಮಟ್ಟಿಗೆ ಸರಿ? ಇದನ್ನು ಹೋಗಲಾಡಿಸುವುದು ಹೇಗೆ? |

## ಭಾಷೆ

ಸಾಮಾಜಿಕ ನ್ಯಾಯದ ಮನೋಭಾವದ ಬೆಳವಣಿಗೆಗೆ ಭಾಷಾ ಬೋಧನೆಯಲ್ಲಿ ಹೆಚ್ಚಿನ ಅವಕಾಶಗಳಿವೆ. ರಸಪ್ರಶ್ನೆ ಕಾರ್ಯಕ್ರಮ, ಪ್ರಬಂಧ ಬರೆಯುವುದು, ಕತೆಯ ವಿಶ್ಲೇಷಣೆ, ಗಾದೆಗಳ ವಿಶ್ಲೇಷಣೆ, ಚರ್ಚೆ ಇತ್ಯಾದಿ ಅನೇಕ ಚಟುವಟಿಕೆಗಳ ಮೂಲಕ ಪ್ರಸ್ತುತ ಗುರಿಯನ್ನು ತಲುಪಲು ಸಾಧ್ಯವಾಗುತ್ತದೆ.

ಎಲ್ಲ ವಿಷಯಗಳಲ್ಲಿ ಎಲ್ಲ ಪಾಠಗಳ ಮೂಲಕ ಸಾಮಾಜಿಕ ನ್ಯಾಯವನ್ನು ಕುರಿತ ಗುರಿಗಳನ್ನು ಸಾಧಿಸಲಾಗದು. ಕೃತಕವಾದ ರೀತಿಗಳಲ್ಲಿ ಇದಕ್ಕೆ ಪ್ರಯತ್ನ ಮಾಡಲು ಬಾರದು. ಅವು ಗುರಿಸಾಧನೆಗೆ ನೆರವಾಗಲಾರವು. ಸಹಜವೂ ಸೃಜನಶೀಲವೂ ಆದ ಕಾಳಜಿಯುಕ್ತ ಪ್ರಯತ್ನಗಳಿಂದ ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ಗುರಿಗಳನ್ನು ಸಾಧಿಸಲು ಸಾಧ್ಯವಾಗುತ್ತದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2

ನಿಮ್ಮ ಆಯ್ಕೆಯ ಒಂದು ವಿಷಯದ ಮೂಲಕ ಸಾಮಾಜಿಕ ನ್ಯಾಯದ ಮನೋಭಾವವನ್ನು ಬೆಳೆಸಲು ಒಂದು ಪಾಠಯೋಜನೆಯನ್ನು ತಯಾರಿಸಿ

## 2.6.4. ಸಾರಾಂಶಿಸೋಣ

- ಸಮಾಜದಲ್ಲಿ ಸಾಮಾಜಿಕ ನ್ಯಾಯವನ್ನು ಸ್ಥಾಪಿಸಬೇಕಾದರೆ ಅದು ಶಾಲೆಯಲ್ಲಿ, ತರಗತಿಗಳಲ್ಲಿ ಮೊದಲುಗೊಳ್ಳಬೇಕು. ಈ ಕಾರಣದಿಂದಾಗಿ ಸಾಮಾಜಿಕ ನ್ಯಾಯವನ್ನು ಕುರಿತ ಶಿಕ್ಷಣವು ಒಟ್ಟು ಶಾಲಾ ಚಟುವಟಿಕೆಯ ಅನಿವಾರ್ಯ ಭಾಗವಾಗಬೇಕು.
- ಶಾಲಾ ಸನ್ನಿವೇಶದಲ್ಲಿ ಸಾಮಾಜಿಕ ನ್ಯಾಯವನ್ನು ಎರಡು ಹಂತಗಳಲ್ಲಿ ಗಮನಿಸಬೇಕು. ಒಂದು, ಶಾಲಾ ವಾತಾವರಣದಲ್ಲಿ ಶಾಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಅನ್ಯೋನ್ಯ ಕ್ರಿಯೆಗಳಲ್ಲಿ ಈ ಮೌಲ್ಯವು ಸಾಕ್ಷಾತ್ಕಾರಗೊಳ್ಳಬೇಕು. ಎರಡನೆಯದಾಗಿ, ವಿದ್ಯಾರ್ಥಿಗಳು ಅವರು ಬದುಕುವ ಸಮಾಜದಲ್ಲಿ ಅದನ್ನು ಅನ್ವಯಿಸಿ ಬದುಕುವ ಸಾಮರ್ಥ್ಯವನ್ನು ಮನೋಭಾವವನ್ನೂ ಬೆಳೆಸಬೇಕು.
- ಶಾಲಾ ಸನ್ನಿವೇಶದಲ್ಲಿ ಸಾಮಾಜಿಕ ನ್ಯಾಯವನ್ನು ಎರಡು ಹಂತಗಳಲ್ಲಿ ಗಮನಿಸಬೇಕು. ಒಂದು, ಶಾಲಾ ವಾತಾವರಣದಲ್ಲಿ ಶಾಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಅನ್ಯೋನ್ಯ ಕ್ರಿಯೆಗಳಲ್ಲಿ ಈ ಮೌಲ್ಯವು ಸಾಕ್ಷಾತ್ಕಾರಗೊಳ್ಳಬೇಕು. ಎರಡನೆಯದಾಗಿ, ವಿದ್ಯಾರ್ಥಿಗಳು ಅವರು ಬದುಕುವ ಸಮಾಜದಲ್ಲಿ ಅದನ್ನು ಅನ್ವಯಿಸಿ ಬದುಕುವ ಸಾಮರ್ಥ್ಯವನ್ನು ಮನೋಭಾವವನ್ನೂ ಬೆಳೆಸಬೇಕು.
- ಸಾಮಾಜಿಕ ನ್ಯಾಯ ಎಂಬುದು ಹಠಾತ್ತಾಗಿ ಹುಟ್ಟಿಕೊಳ್ಳುವ ಅಂಶವಲ್ಲ. ಒಂದು ನಿರ್ದಿಷ್ಟ ರೀತಿಯ ಬೋಧನೆಯಿಂದ ಬೆಳೆಯುವಂತಹುದೂ ಅಲ್ಲ. ಈ ಮೌಲ್ಯವನ್ನು ರೂಢಿಸಿಕೊಳ್ಳುವದರಲ್ಲಿ ಗಮನವುಳ್ಳವರು ತಮ್ಮನ್ನೂ ಇತರರನ್ನೂ ಕುರಿತ ವಿಮರ್ಶಾತ್ಮಕ ವಿಶ್ಲೇಷಣೆಯನ್ನು ಮಾಡುತ್ತಲೇ ಅವರ ಮತ್ತು ಅವರ ಸುತ್ತಮುತ್ತಲಿನವರ ವ್ಯವಹಾರದಲ್ಲಿ ಕಾಣಬರುವ ಅಸಮಾನತೆ, ಭೇದಭಾವವನ್ನು ಗುರುತಿಸುತ್ತಲೇ ಅವುಗಳಿಗೆ ಪರಿಹಾರವನ್ನೂ ಹುಡುಕುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿರುತ್ತಾರೆ.
- ಮಕ್ಕಳ ಅಭಿವ್ಯಕ್ತಿಯನ್ನು ಪ್ರೋತ್ಸಾಹಿಸುವ, ಆತ್ಮಸಾಕ್ಷಿಯ ಮೇಲೆ ಕಾರ್ಯವೆಸಗುವ, ಪರಸ್ಪರ ಗೌರವಿಸುವ, ಇತರರು ಸ್ಪರ್ಧಿಗಳಲ್ಲದೆ ಸಹಪಾಠಿಗಳೆಂಬ ಮನೋಭಾವವನ್ನು ಬೆಳೆಸುವ, ಸ್ವ ವಿಮರ್ಶೆಗೆ ಅವಕಾಶಮಾಡಿಕೊಡುವ ತರಗತಿಗಳು ಸಾಮಾಜಿಕ ನ್ಯಾಯದ ಮನೋಭಾವವನ್ನು ಬೆಳೆಸಲು ಸಹಕಾರಿಯಾಗುತ್ತವೆ.

- ಶಾಲೆಯಲ್ಲಿ ಬೋಧಿಸುವ ವಿಷಯಗಳಲ್ಲಿ ಸಾಮಾಜಿಕ ನ್ಯಾಯವನ್ನು ಬೆಳೆಸಲು ಅವಕಾಶವಿರುವ ಪಾಠಗಳನ್ನು ಆಯ್ಕೆಮಾಡಿಕೊಂಡು ಸೃಜನಶೀಲವಾದ ರೀತಿಯಲ್ಲಿ ಯೋಜಿಸಿ ಬೋಧಿಸುವುದರಿಂದ ಅಪೇಕ್ಷಣೀಯ ಮನೋಭಾವವನ್ನು ಬೆಳೆಸಬಹುದು.

## 2.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

ನೀವು ದಾಖಲಿಸಿರುವ ಅಂಶಗಳನ್ನು ಗಮನಿಸಿಕೊಂಡು ಈ ನಿಟ್ಟಿನಲ್ಲಿ ಹೆಚ್ಚು ಪರಿಣಾಮಕಾರಿಯಾದ ಕಾರ್ಯಗಳನ್ನು ಮಾಡಿರಿ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2

ನೀವು ತಯಾರಿಸಿದ ಯೋಜನೆಗನುಗುಣವಾಗಿ ಬೋಧಿಸಿ, ನಿಮ್ಮ ಅನುಭವಗಳನ್ನು ದಾಖಲಿಸಿ, ನಿಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಿ.

## 2.6.6. ಘಟಕಾಂತ್ಯ ಅಭ್ಯಾಸಗಳು

ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಸ್ಪಷ್ಟೀಕರಿಸಿ ಮತ್ತು ಶಾಲಾ ವಿಷಯಗಳ ಮೂಲಕ ಈ ಮೌಲ್ಯವನ್ನು ಹೇಗೆ ಬೆಳೆಸಬಹುದು ಎಂಬುದನ್ನು ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸಿ.

## 2.6.7. ಪರಾಮರ್ಶನ ಸೂಚಿ


1. https://www.edutopia.org/blog/social-justice-whole-school-approach-jeanine-harmon
2. https://rrr.edu.au/unit/module-1/topic-3/social-justice/
3. https://education.cu-portland.edu/blog/classroom-resources/teaching-social-justice/


**********